ಬುಧವಾರ, ಏಪ್ರಿಲ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 111 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಮೊಬೈಲ್‌ಗಳು ಮಾಲ್‌ವೇರ್ ದಾಳಿಗೆ ತುತ್ತಾಗುವ ಪ್ರಕರಣಗಳು ದೇಶದಲ್ಲಿ ಈಚೆಗೆ ಗಣನೀಯವಾಗಿ ಹೆಚ್ಚುತ್ತಿವೆ. ಹೀಗಾಗಿ ಅದರ ರಕ್ಷಣೆಗೆ ಇನ್ನೂ ಹೆಚ್ಚಿನ ಗಮನ ನೀಡುವ ಅಗತ್ಯ ಎದುರಾಗಿದೆ.

ರೋಗ ಉಲ್ಬಣಿಸಿದರಷ್ಟೇ ಆಸ್ಪತ್ರೆಗೆ ದಾಖಲು 9

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಿಡಿಲು ಬಡಿದು ಮಕ್ಕಳಿಗೆ ಗಾಯ

ಜನಾಂಗಗಳ ಕಣ್ಣು ತೆರೆಸಿದ ನಾಯಕ 7

ಕರಾವಳಿ ಸೇರಿ ವಿವಿಧೆಡೆ ಮಳೆ 4

ಸೆನ್ಸೆಕ್ಸ್	ನಿಫ್ಟಿ	₹/$
47,706	14,296	74.88

ಶನಿವಾರ– ಭಾನುವಾರ ಎಲ್ಲ ಚಟುವಟಿಕೆ ಸ್ತಬ್ಧ • ಅನಗತ್ಯ ಓಡಾಟಕ್ಕೆ ನಿರ್ಬಂಧ

ರಾತ್ರಿ ಕರ್ಫ್ಯೂ: ವಾರಾಂತ್ಯ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯದಾದ್ಯಂತ ರಾತ್ರಿ 9 ಗಂಟೆಯಿಂದ ಮುಂಜಾನೆ 6 ಗಂಟೆಯವರೆಗೆ ಕರ್ಫ್ಯೂ ವಿಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದು ಬುಧವಾರದಿಂದ (ಏ.21) ಮೇ 4 ರ ವರೆಗೆ ಜಾರಿಯಲ್ಲಿ ಇರಲಿದೆ.

ಈ ಅವಧಿಯಲ್ಲಿ ವಾರಾಂತ್ಯದಲ್ಲಿ ಅಂದರೆ ಶನಿವಾರ ಮತ್ತು ಭಾನುವಾರಗಳಂದು ಇಡೀ ದಿನ ಕರ್ಫ್ಯೂ ಇರುತ್ತದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯಪಾಲ ವಜುಭಾಯಿ ವಾಲಾ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಎಲ್ಲ ಪಕ್ಷಗಳ ನಾಯಕರು, ತಾಂತ್ರಿಕ ಸಮಿತಿ ತಜ್ಞರು ಮತ್ತು ಸಚಿವರ ಜತೆ ಚರ್ಚಿಸಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ರಾತ್ರಿ ಕರ್ಫ್ಯೂ: ಪ್ರತಿ ದಿನ ರಾತ್ರಿ 9 ರಿಂದ ಮಾರನೆ ದಿನದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಇರುತ್ತದೆ. ಈ ಸಂದರ್ಭದಲ್ಲಿ ಎಲ್ಲ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ. ವಾರಾಂತ್ಯದಲ್ಲಿ ಶುಕ್ರವಾರ ರಾತ್ರಿ 9 ಗಂಟೆಯಿಂದ ಸೋಮವಾರ ಬೆಳಿಗ್ಗೆ 6 ರವರೆಗೆ ಕರ್ಫ್ಯೂ ಇರುತ್ತದೆ.

ಏನೆಲ್ಲ ಬಂದ್:

- ಶಾಲೆಗಳು, ಕಾಲೇಜುಗಳು, ಕೋಚಿಂಗ್ ಕೇಂದ್ರಗಳು. (ಆನ್‌ಲೈನ್, ದೂರಶಿಕ್ಷಣ ಮುಂದುವರೆಸಬಹುದು)
- ಸಿನಿಮಾ ಹಾಲ್‌ಗಳು, ಶಾಪಿಂಗ್ ಮಾಲ್, ಜಿಮ್ನಾಷಿಯಂ, ಯೋಗ ಕೇಂದ್ರಗಳು, ಸ್ಪಾ, ಕ್ರೀಡಾ ಕಾಂಪ್ಲೆಕ್ಸ್‌ಗಳು, ಸ್ಟೇಡಿಯಂ, ಈಜುಕೊಳ, ಮನರಂಜನಾ ಅಮ್ಯೂಸ್‌ಮೆಂಟ್ ಪಾರ್ಕ್, ಬಾರ್, ಆಡಿಟೋರಿಯಂಗಳು ಮತ್ತಿತರ ಸಮಾವೇಶದ ತಾಣಗಳು
- ಎಲ್ಲ ಸಾಮಾಜಿಕ, ರಾಜಕೀಯ, ಕ್ರೀಡಾ, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಸಮಾವೇಶಗಳು
- ಆಟದ ಮೈದಾನದಲ್ಲಿ ಯಾವುದೇ ಕ್ರೀಡಾ ಕೂಟಗಳು ಇದ್ದರೆ ಪ್ರೇಕ್ಷಕರಿಗೆ ಅವಕಾಶ ಇಲ್ಲ. ಆದರೆ, ಕ್ರೀಡಾಳುಗಳ ತರಬೇತಿಗೆ ಅವಕಾಶ ಇದೆ
- ಎಲ್ಲಾ ಧಾರ್ಮಿಕ ಸ್ಥಳಗಳು, ಪೂಜಾ, ಪ್ರಾರ್ಥನಾ ಮಂದಿರಗಳಿಗೆ ಭಕ್ತರಿಗೆ ಅವಕಾಶ ಇಲ್ಲ. ಆದರೆ, ಪೂಜಾ ಕೈಂಕರ್ಯ ನಡೆಸಲು ಅರ್ಚಕರಿಗೆ ಅವಕಾಶ ಇದೆ. ಆಯಾ ಧರ್ಮಗಳ ಧಾರ್ಮಿಕ ವಿಧಿ-ವಿಧಾನ ನಡೆಸಲು ಅವಕಾಶ ಇದೆ.

9ನೇ ಪುಟ ನೋಡಿ

ಸರ್ಕಾರ ತೆಗೆದುಕೊಳ್ಳುವ ಕಠಿಣ ನಿರ್ಧಾರಗಳು ಕಷ್ಟ ಎನಿಸಿದರೂ ಅನುಸರಿಸಿಕೊಂಡು ಹೋಗಬೇಕು. ಎಲ್ಲರೂ ಸಹಕರಿಸಬೇಕು

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿ

ರಾಜ್ಯಪಾಲರು ಸಭೆ ಕರೆದಿರುವುದು ಸಂವಿಧಾನ ಬಾಹಿರ, ತಾಂತ್ರಿಕ ಸಲಹಾ ಸಮಿತಿ ವರದಿಯನ್ನು ಚಾಚೂ ತಪ್ಪದೆ ಜಾರಿ ಮಾಡಿ

ಸಿದ್ದರಾಮಯ್ಯ
ವಿರೋಧಪಕ್ಷದ ನಾಯಕ, ವಿಧಾನಸಭೆ

ಲಾಕ್‌ಡೌನ್ ಹೇರಿಕೆ ತಪ್ಪಿಸಿ: ರಾಜ್ಯಗಳಿಗೆ ಮೋದಿ ಕರೆ



ನವದೆಹಲಿ (ಪಿಟಿಐ): ಲಾಕ್‌ಡೌನ್ ಹೇರಿಕೆಯನ್ನು ತಪ್ಪಿಸಬೇಕು. ಲಾಕ್‌ಡೌನ್ ಹೇರಿಕೆಯು ಕೊನೆಯ ಆಯ್ಕೆ ಆಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳಿಗೆ ಕರೆ ಕೊಟ್ಟಿದ್ದಾರೆ.

ದೇಶದಾದ್ಯಂತ ಕೋವಿಡ್ ಪ್ರಕರಣಗಳ ತೀವ್ರ ಹೆಚ್ಚಳ, ವೈದ್ಯಕೀಯ ಆಮ್ಲಜನಕ ಮತ್ತು ಕೋವಿಡ್ ತಡೆ ಲಸಿಕೆ ಕೊರತೆಯ ಹಿನ್ನೆಲೆಯಲ್ಲಿ ಅವರು ದೇಶವನ್ನು ಉದ್ದೇಶಿಸಿ ಮಂಗಳವಾರ ರಾತ್ರಿ 8.45ಕ್ಕೆ ಮಾತನಾಡಿದರು.

ಈಗ ದೇಶವು ಕೋವಿಡ್ ವಿರುದ್ಧ ದೊಡ್ಡ ಹೋರಾಟ ನಡೆಸುತ್ತಿದೆ. ಹಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಕೈಗೊಂಡ ನಿರ್ಧಾರಗಳಿಂದ ಪರಿಸ್ಥಿತಿ ಸುಧಾರಿಸಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಮೈಕ್ರೊ ಕಂಟೈನ್‌ಮೆಂಟ್ ವಲಯಗಳ ಮೂಲಕ ಕೋವಿಡ್ ಹರಡುವಿಕೆ ತಡೆ ಸಾಧ್ಯವಿದೆ. ನಾವೆಲ್ಲರೂ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಪಾಲಿಸಿದರೆ ಲಾಕ್‌ಡೌನ್‌ನ ಅಗತ್ಯವೇ ಇರುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಈಗಿನ ಪರಿಸ್ಥಿತಿ ಭಿನ್ನವಾಗಿದೆ. ಕಳೆದ ವರ್ಷ ನಮಗೆ ಕೋವಿಡ್ ಬಗ್ಗೆ ಹೆಚ್ಚಿನ ತಿಳಿವಳಿಕೆ ಇರಲಿಲ್ಲ. ಈಗ ಹಾಗಲ್ಲ; ಜತೆಗೆ, ಈಗ ಲಸಿಕೆ ಇದೆ. ಪಿಪಿಇ ಕಿಟ್ ಮತ್ತು ಇತರ ವೈದ್ಯಕೀಯ ಸಲಕರಣೆಗಳು ಲಭ್ಯ ಇವೆ ಎಂದು ಅವರು ಹೇಳಿದರು.

ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ತಲೆದೋರಿದೆ. ಅದೊಂದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಈ ಸವಾಲು ಎದುರಿಸಲು ಸಂಬಂಧಪಟ್ಟ ಎಲ್ಲರೂ ಜತೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ವಿವರಿಸಿದರು.

ಕೋವಿಡ್ ವಿರುದ್ಧದ ಹೋರಾಟದಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿರುವ ವೈದ್ಯರು, ಆರೋಗ್ಯ ಕಾರ್ಯಕರ್ತರು ಮತ್ತು ಔಷಧ ತಯಾರಿಕೆ ಕ್ಷೇತ್ರವನ್ನು ಅವರು ಶ್ಲಾಘಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

11,98,644	ಒಟ್ಟು ಸೋಂಕಿತರು (11,76,850 ನಿನ್ನೆಯ ವಿವರ)
1,59,158	ಸಕ್ರಿಯ ಪ್ರಕರಣಗಳು
10,25,821	ಗುಣಮುಖರಾದವರು
13,646	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	21,794
ಗುಣಮುಖ	4,571
ಸಾವು	149

751 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯಪಾಲರ ಸಭೆಗೆ ಈಶ್ವರಪ್ಪ ಅಚ್ಚರಿ

ರಾಜ್ಯದಲ್ಲಿ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿ ಇರುವಾಗ ರಾಜ್ಯಪಾಲರು ಕೋವಿಡ್ ವಿಚಾರ ಚರ್ಚಿಸಲು ಏಕೆ ಸಭೆ ಕರೆದಿದ್ದಾರೆ ಗೊತ್ತಿಲ್ಲ. ಆದರೆ, ಅವರ ನಡೆ ಹೊಸ ವ್ಯವಸ್ಥೆಗೆ ನಾಂದಿ ಹಾಡಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಶಿವಮೊಗ್ಗದಲ್ಲಿ ಹೇಳಿದರು.

‘ರಾಜ್ಯಪಾಲರು ಸಭೆ ಕರೆಯಬಾರದು ಎಂಬ ನಿಯಮ ಇಲ್ಲ. ರಾಜ್ಯದಲ್ಲಿ ಕೊರೊನಾ ಸೋಂಕು ಗಣನೀಯವಾಗಿ ಹೆಚ್ಚಾಗುತ್ತಿರುವ ಕಾರಣ ಜನರ ಸುರಕ್ಷತೆ ದೃಷ್ಟಿಯಿಂದ ರಾಜ್ಯಪಾಲರು ಸಭೆ ಕರೆದಿರಬಹುದು. ಅವರು ತೆಗೆದುಕೊಳ್ಳುವ ನಿರ್ಧಾರ ರಾಜ್ಯಕ್ಕೆ ಒಳಿತು ಮಾಡುತ್ತದೆ ಎಂಬ ನಂಬಿಕೆ ಇದೆ’ ಎಂದರು.

1ರಿಂದ 9: ಎಲ್ಲರೂ ಪಾಸ್

ಬಡ್ತಿ ಪ್ರಕ್ರಿಯೆ 30ರೊಳಗೆ ಮುಗಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ತೀವ್ರಗೊಂಡಿರುವುದರಿಂದ ಒಂದರಿಂದ ಒಂಬತ್ತನೇ ತರಗತಿವರೆಗಿನ ಎಲ್ಲ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ (ಮೌಲ್ಯಾಂಕನ) ನಡೆಸದೆ ಮುಂದಿನ ತರಗತಿಗೆ ಬಡ್ತಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈಗಾಗಲೇ ನಿಗದಿಪಡಿಸಿರುವಂತೆ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಜೂನ್ 21ರಿಂದ ಜುಲೈ 5ರವರೆಗೆ ನಡೆಯಲಿವೆ.

ಒಂದರಿಂದ ಐದನೇ ತರಗತಿ ಮತ್ತು ಆರರಿಂದ ಒಂಬತ್ತನೇ ತರಗತಿವರೆಗಿನ ಮೌಲ್ಯಾಂಕನ ಕುರಿತು ಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದೆ. ಮುಂದಿನ ತರಗತಿಗೆ ಬಡ್ತಿ ನೀಡುವ ಪ್ರಕ್ರಿಯೆಗಳನ್ನು ಇದೇ 30ರೊಳಗೆ ಪೂರ್ಣಗೊಳಿಸಬೇಕು ಎಂದೂ ನಿರ್ದೇಶನ ನೀಡಿದೆ.

‘ವಿದ್ಯಾರ್ಥಿಗಳನ್ನು ಉತ್ತೀರ್ಣ ಅಥವಾ ಅನುತ್ತೀರ್ಣ ಎಂದು ತೀರ್ಮಾನಿಸಲು ಶಾಲೆಗಳಲ್ಲಿ ಮೌಲ್ಯಾಂಕನ ನಡೆಸುವುದಿಲ್ಲ. ಬದಲಾಗಿ, ಕಲಿಕೆಯಲ್ಲಿನ ಕೊರತೆ ತಿಳಿದು ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿ ‘ಸೇತು ಬಂಧ’ (ಬ್ರಿಡ್ಜ್ ಕೋರ್ಸ್) ಮೂಲಕ ಕೊರತೆ ತುಂಬಲು ಶಾಲಾ ಯೋಜನೆ ತಯಾರಿಸುವ ಉದ್ದೇಶದಿಂದ ನಡೆಸಲಾಗುತ್ತದೆ’ ಎಂದು ಇಲಾಖೆ ಸ್ಪಷ್ಟಪಡಿಸಿದೆ.

1ರಿಂದ 9ನೇ ತರಗತಿಗಳ ವಿದ್ಯಾರ್ಥಿಗಳಿಗೆ ವಿದ್ಯಾಗಮ ಕಾರ್ಯಕ್ರಮದಲ್ಲಿ ನಿರ್ವಹಿಸಿದ ದಾಖಲೆಗಳು, ಸಂವಹನ ಆಧರಿಸಿ ಕೆಲವು ಶಾಲೆಯವರು ಆನ್‌ಲೈನ್ ಮೂಲಕ ತರಗತಿ ನಿರ್ವಹಿಸಿದ್ದಾರೆ. ಆ ವಿದ್ಯಾರ್ಥಿಗಳ ಕಲಿಕಾ ಪ್ರಗತಿ, ಮಕ್ಕಳಿಗೆ ನೀಡಿದ್ದ ಪ್ರಬಂಧ, ಗೃಹ ಕೆಲಸ ಇತರೆ ಚಟುವಟಿಕೆ ಆಧರಿಸಿದ ಕೃತಿ ಸಂಪುಟ, ಚೈಲ್ಡ್ ಪ್ರೊಫೈಲ್, ಇತರೆ ಲಭ್ಯ ದಾಖಲೆಗಳನ್ನು ಅವಲೋಕಿಸಿ, ಶಾಲಾ ಹಂತದಲ್ಲಿಯೇ ಸಿಸಿಇ (ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ) ನಿಯಮಗಳಂತೆ ವಿಶ್ಲೇಷಿಸಿ ಪ್ರಗತಿ ಪತ್ರದಲ್ಲಿ ದಾಖಲಿಸಲಾಗುತ್ತದೆ.

ಒಂದರಿಂದ ಐದನೇ ತರಗತಿವರೆಗೆ ಶಾಲಾ ಹಂತದಲ್ಲಿ ಪ್ರಗತಿ ವಿಶ್ಲೇಷಿಸಿ, ಮುಂದಿನ ತರಗತಿಗಳಿಗೆ ಬಡ್ತಿ ನೀಡಲಾಗುವುದು ಎಂದು ಮಾರ್ಗಸೂಚಿಯಲ್ಲಿದೆ.

9ನೇ ಪುಟ ನೋಡಿ

ಐಸಿಎಸ್‌ಇ 10ನೇ ಪರೀಕ್ಷೆ ರದ್ದು

ನವದೆಹಲಿ (ಪಿಟಿಐ): ಐಸಿಎಸ್‌ಇ 10ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ವಿದ್ಯಾರ್ಥಿಗಳು ನಂತರ ಪರೀಕ್ಷೆಗೆ ಹಾಜರಾಗಲು ನೀಡಿದ್ದ ಆಯ್ಕೆಯನ್ನೂ ಹಿಂಪಡೆಯಲಾಗಿದೆ ಎಂದು ಮಂಡಳಿಯ ಕಾರ್ಯದರ್ಶಿ ಜೆರಿ ಅರಾಥೂನ್ ಮಂಗಳವಾರ ತಿಳಿಸಿದ್ದಾರೆ. 12ನೇ ತರಗತಿ ಪರೀಕ್ಷೆಗಳ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಕಳೆದ ವಾರ ಮಂಡಳಿಯು ಮುಂದೂಡಿತ್ತು. ಸಾಂಕ್ರಾಮಿಕ ರೋಗದಿಂದಾಗಿ ಕಳೆದ ವರ್ಷವೂ ಪರೀಕ್ಷೆಗಳನ್ನು ರದ್ದುಪಡಿಸಲಾಗಿತ್ತು. ಆಂತರಿಕ ಮೌಲ್ಯಮಾಪನದ ಆಧಾರದ ಮೇಲೆ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲಾಗಿತ್ತು.

‘ನಾವು 10ನೇ ತರಗತಿ ಫಲಿತಾಂಶಗಳನ್ನು ಪ್ರಕಟಿಸಲು ನ್ಯಾಯಯುತ ಮತ್ತು ಪಕ್ಷಪಾತವಿಲ್ಲದ ಮಾನದಂಡವನ್ನು ರೂಪಿಸಲು ಬದ್ಧರಾಗಿದ್ದೇವೆ. ಮಾನದಂಡ ಮತ್ತು ಘೋಷಣೆಯ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು’ ಎಂದು ಜೆರಿ ಹೇಳಿದ್ದಾರೆ.

ಈಗಾಗಲೇ ಪ್ರಾರಂಭಿಸಿಲ್ಲದಿದ್ದರೆ, 11ನೇ ತರಗತಿಗೆ ಪ್ರವೇಶ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ಶಾಲೆಗಳಿಗೆ ಸೂಚಿಸಲಾಗಿದೆ. 11ನೇ ತರಗತಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ಬೇಗನೆ ಪ್ರಾರಂಭಿಸಲು ವೇಳಾಪಟ್ಟಿಯನ್ನು ಸಿದ್ಧಪಡಿಸಬೇಕು ಎಂದು ತಿಳಿಸಲಾಗಿದೆ.

ಕಳೆದ ವಾರ, ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿ, 12ನೇ ತರಗತಿ ಪರೀಕ್ಷೆಯನ್ನು ಮುಂದೂಡಿತ್ತು. ಹಲವಾರು ರಾಜ್ಯ ಮಂಡಳಿಗಳು ಸಹ ಪರೀಕ್ಷೆಗಳನ್ನು ಮುಂದೂಡುವ ಅಥವಾ ರದ್ದುಪಡಿಸುವ ಕ್ರಮ ತೆಗೆದುಕೊಂಡಿವೆ.

ಮೇ 1ರಿಂದ ಬೇಸಿಗೆ ರಜೆ

ರಾಜ್ಯ ಸರ್ಕಾರ ಪ್ರಾಥಮಿಕ ಶಾಲೆಗಳಿಗೆ ಮೇ 1ರಿಂದ ಜೂನ್ 14ರವರೆಗೆ ಬೇಸಿಗೆ ರಜೆ ಘೋಷಿಸಿದೆ. ಈ ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷ (2021-22) ಜೂನ್ 15ರಿಂದ ಆರಂಭವಾಗಲಿದೆ. ಪ್ರೌಢ ಶಾಲೆಗಳಿಗೆ (8 ಮತ್ತು 9ನೇ ತರಗತಿ) ಮೇ 1ರಿಂದ ಜುಲೈ 14ರವರೆಗೆ ಬೇಸಿಗೆ ರಜೆ ಘೋಷಿಸಲಾಗಿದೆ. ಆದರೆ, ಈ ಶಾಲೆಗಳ ಶಿಕ್ಷಕರಿಗೆ ಬೇಸಿಗೆ ರಜೆ ಜೂನ್ 15ರಿಂದ ಜುಲೈ 14ರವರೆಗೆ ಇರಲಿದೆ. ಈ ಶಾಲೆಗಳಿಗೆ ಶೈಕ್ಷಣಿಕ ವರ್ಷ ಜುಲೈ 15ರಿಂದ ಆರಂಭವಾಗಲಿದೆ. ಈ ವೇಳಾಪಟ್ಟಿ ತಾತ್ಕಾಲಿಕ ಎಂದು ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ.

ಯುಜಿಸಿ–ಎನ್‌ಇಟಿ ಮುಂದೂಡಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪಿಡುಗು ವ್ಯಾಪಕವಾಗುತ್ತಿರುವುದರಿಂದ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯನ್ನು (ಎನ್‌ಇಟಿ) ಮುಂದೂಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಮಂಗಳವಾರ ಘೋಷಿಸಿದ್ದಾರೆ.

ಮೇ 2ರಿಂದ 17ರ ವರೆಗೆ ಎನ್‌ಇಟಿ ನಿಗದಿಯಾಗಿತ್ತು.

ಎನ್‌ಇಟಿ ನಡೆಸುವ ಪರಿಷ್ಕೃತ ದಿನಾಂಕವನ್ನು ಪರೀಕ್ಷೆ ಆರಂಭಗೊಳ್ಳುವ 15 ದಿನಗಳ ಮೊದಲು ಪ್ರಕಟಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತನ್ನ ಆದೇಶದಲ್ಲಿ ತಿಳಿಸಿದೆ.

ನಾಗರಿಕರ ಮೂಲಭೂತ ಹಕ್ಕುಗಳ ಉಲ್ಲಂಘನೆ ಸಲ್ಲ

‘ಮುಷ್ಕರದ ಸಮಯ ಇದಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಉಲ್ಬಣ ಆಗಿರುವುದರಿಂದ ಸಾರಿಗೆ ನೌಕರರು ಮುಷ್ಕರ ನಡೆಸುವ ಸಮಯ ಇದಲ್ಲ. ಸಾರಿಗೆ ನೌಕರರು ತಮ್ಮ ಬೇಡಿಕೆಗಳನ್ನು ಕಾಯ್ದಿರಿಸಿಕೊಂಡು ಬಸ್ ಕಾರ್ಯಾಚರಣೆ ಆರಂಭಿಸುತ್ತಾರೆ’ ಎಂದು ಹೈಕೋರ್ಟ್ ಮಂಗಳವಾರ ವಿಶ್ವಾಸ ವ್ಯಕ್ತಪಡಿಸಿದೆ.

ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಸಾರಿಗೆ ಹಾಗೂ ಈಶಾನ್ಯ ಸಾರಿಗೆ ಸೇರಿ ಪ್ರತಿವಾದಿಗಳಿಗೆ ನೋಟಿಸ್ ನೀಡಲು ಆದೇಶಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ಗುರುವಾರ ಬೆಳಿಗ್ಗೆ 11.40ಕ್ಕೆ ನಿಗದಿ ಮಾಡಿದೆ.

ಸಾರಿಗೆ ನೌಕರರ ಮುಷ್ಕರದ ಸಂಬಂಧ ನ್ಯಾಯಾಲಯದ ಮಧ್ಯಸ್ಥಿಕೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಪೀಠ, ‘ಸಾರಿಗೆ ನೌಕರರ ಕೂಟದ ಬೇಡಿಕೆಗಳು ನ್ಯಾಯಸಮ್ಮತ ಎಂದುಕೊಂಡರೂ, ಕೋವಿಡ್ ಎರಡನೇ ಅಲೆ ಇರುವ ಕಾರಣ ಮುಷ್ಕರ ಮುಂದುವರಿಸುವ ಕಾಲ ಇದಲ್ಲ’ ಎಂದು ಅಭಿಪ್ರಾಯಪಟ್ಟಿತು.

‘ನೌಕರರ ಬೇಡಿಕೆ ನ್ಯಾಯಸಮ್ಮತವಾಗಿದೆ ಅಥವಾ ಇಲ್ಲ ಎಂಬುದು ಈಗ ವಿಷಯವಲ್ಲ. ಕೋವಿಡ್ ಉಲ್ಬಣಗೊಂಡಿರುವ ಸಂದರ್ಭದಲ್ಲಿ ಮುಷ್ಕರ ನಡೆಸುವುದು ನಾಗರಿಕರ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗುತ್ತದೆ. ಕೋವಿಡ್ ಲಸಿಕೆ ಪಡೆಯಲು ಲಸಿಕಾ ಕೇಂದ್ರಗಳಿಗೆ ತೆರಳಲು ಸಾಕಷ್ಟು ಮಂದಿಗೆ ಸಾರಿಗೆ ಸಂಸ್ಥೆ ಬಸ್‌ಗಳ ಅಗತ್ಯವಿದೆ’ ಎಂದು ಪೀಠ ಹೇಳಿತು.

‘ಈಗಾಗಲೇ ಒತ್ತಡದಲ್ಲಿರುವ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆ ತಪ್ಪಿಸಬೇಕಿದೆ. ಹೀಗಾಗಿ, ಬೇಡಿಕೆಗಳ ಈಡೇರಿಕೆ ವಿಷಯದಲ್ಲಿ ಯಾವುದೇ ರಾಜಿ ಇಲ್ಲದೆ ಮುಷ್ಕರ ವಾಪಸ್ ಪಡೆಯುವ ಭರವಸೆಯೊಂದಿಗೆ ನ್ಯಾಯಾಲಯದ ಮುಂದೆ ಕೂಟ ಬರಲಿದೆ’ ಎಂದು ಆಶಿಸಿತು.

‘ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕೆಂಬ ಕಾರ್ಯಸಾಧುವಲ್ಲದ ಬೇಡಿಕೆಯನ್ನು ನೌಕರರ ಕೂಟ ಮುಂದಿಟ್ಟಿದೆ. ಮುಷ್ಕರ ನಡೆಸುತ್ತಿರುವ ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ’ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ ತಿಳಿಸಿದರು.

ವಿಮಾನ ನಿಲ್ದಾಣಕ್ಕೆ ಮೆಟ್ರೊ: ಕೇಂದ್ರ ಒಪ್ಪಿಗೆ

ನವದೆಹಲಿ: ‘ನಮ್ಮ ಮೆಟ್ರೊ’ ರೈಲು ಯೋಜನೆಯ 2ಎ ಮತ್ತು 2ಬಿ ಹಂತಗಳ ಎತ್ತರಿಸಿದ ಮಾರ್ಗಗಳ ಕಾಮಗಾರಿಗೆ ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕೇಂದ್ರ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರವರೆಗಿನ 2ಎ ಹಂತ ಹಾಗೂ ಕೆ.ಆರ್.ಪುರದಿಂದ ಹೆಬ್ಬಾಳ ಮೂಲಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ 2ಬಿ ಹಂತಗಳಲ್ಲಿ ಒಟ್ಟು 58.19 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗ ನಿರ್ಮಾಣವಾಗಲಿದೆ. ಈ ಎರಡು ಹಂತಗಳ ಕಾಮಗಾರಿಗಳಿಗೆ ಒಟ್ಟು ₹ 14,788 ಕೋಟಿ ವೆಚ್ಚವಾಗಲಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮವು ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಗೆ ಕೇಂದ್ರದ ಪಾಲಿನ ಅನುದಾನ ಒದಗಿಸುವ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2021–22ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದರು. ಆದರೆ, ಈ ಯೋಜನೆಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಸಿಕ್ಕಿರಲಿಲ್ಲ.

ಈ ಯೋಜನೆಯ ಅನುಷ್ಠಾನದಿಂದ ಬೆಂಗಳೂರಿನ ಸಾರಿಗೆ ವ್ಯವಸ್ಥೆ ಸುಗಮಗೊಳ್ಳಲಿದ್ದು, ಸಾರ್ವಜನಿಕರ ಬಹು ದಿನಗಳ ಕನಸು ನನಸಾಗಲಿದೆ. ಹೆಚ್ಚುವರಿ ಸಾರಿಗೆ ಸೌಲಭ್ಯದೊಂದಿಗೆ ನಗರದ ಸಂಚಾರ ದಟ್ಟಣೆ ನೀಗಿಸಲು ನೆರವಾಗಲಿದೆ.

ಇನ್ನೊಂದು ಸುದ್ದಿ 5A

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೇಪಾಳದಲ್ಲಿರುವ ವಿಶ್ವದ 10ನೇ ಅತಿ ಎತ್ತರದ ಪರ್ವತ

ಮೌಂಟ್ ಅನ್ನಪೂರ್ಣ ಆರೋಹಣ ಮಾಡಿದ ಪ್ರಿಯಾಂಕಾ ಮೋಹಿತೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸಾತಾರದ ಪ್ರಿಯಾಂಕಾ ಮೋಹಿತೆ ಅವರು ವಿಶ್ವದ 10ನೇ ಅತಿ ಎತ್ತರದ ಪರ್ವತ ‘ಮೌಂಟ್ ಅನ್ನಪೂರ್ಣ‘ವನ್ನು ಆರೋಹಣ ಮಾಡಿದ್ದಾರೆ. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ 28 ವರ್ಷದ ಪ್ರಿಯಾಂಕಾ ಅವರ ಸಾಧನೆಯನ್ನು ಬಯೋಕಾನ್ ಲಿಮಿಟೆಡ್‌ನ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಪ್ರಿಯಾಂಕಾ ಅವರು ಬಯೋಕಾನ್‌ನ ಉದ್ಯೋಗಿಯಾಗಿದ್ದಾರೆ.

‘ನಮ್ಮ ಸಹೋದ್ಯೋಗಿ ಪ್ರಿಯಾಂಕಾ ಮೋಹಿತೆ ಅವರು ಅನ್ನಪೂರ್ಣ ಪರ್ವತವನ್ನು (8091 ಮೀಟರ್‌ಗಳು) ಏಪ್ರಿಲ್ 16ರಂದು ಆರೋಹಣ ಮಾಡಿದ್ದಾರೆ. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆ ಅವರು. ಈ ಕುರಿತು ನಮಗೆ ಹೆಮ್ಮೆಯಿದೆ‘ ಎಂದು ಕಿರಣ್ ಟ್ವೀಟ್ ಮಾಡಿದ್ದಾರೆ.

ಪ್ರಿಯಾಂಕಾ ಅವರು ಶಿಖರದ ಮೇಲೆ ರಾಷ್ಟ್ರಧ್ವಜ ಹಿಡಿದು ನಿಂತಿರುವ ಚಿತ್ರವನ್ನೂ ಅವರು ಹಂಚಿಕೊಂಡಿದ್ದಾರೆ. ನೇಪಾಳದಲ್ಲಿರುವ ‘ಅನ್ನಪೂರ್ಣ‘ವು ಆರೋಹಣಕ್ಕೆ ಕಷ್ಟಕರವಾದ ಪರ್ವತಗಳಲ್ಲಿ ಒಂದಾಗಿದೆ.

ಪ್ರಿಯಾಂಕಾ 2013ರಲ್ಲಿ ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್ (8,849 ಮೀ.), 2018ರಲ್ಲಿ ಲೋಟ್ಸೆ (8,516 ಮೀ.), ಮಕಾಲು (8,485 ಮೀ.) ಹಾಗೂ 2016ರಲ್ಲಿ ಕಿಲಿಮಂಜಾರೊ (5,895 ಮೀ.) ಪರ್ವತಗಳನ್ನೂ ಏರಿದ ಸಾಧನೆ ಮಾಡಿದ್ದಾರೆ. ಮಹಾರಾಷ್ಟ್ರ ಸರ್ಕಾರವು ಪ್ರಿಯಾಂಕಾ ಅವರ ಸಾಧನೆಗೆ 2017–18ರ ಸಾಲಿನ ಶಿವ ಛತ್ರಪತಿ ರಾಜ್ಯಪ್ರಶಸ್ತಿಯನ್ನು ನೀಡಿದೆ.

ಪ್ರಿಯಾಂಕಾ ಮೋಹಿತೆ –ಟ್ವಿಟರ್ ಚಿತ್ರ

ಒಳಪುಟಗಳಲ್ಲಿ

ಕೋವಿಡ್: 21,794 ಮಂದಿಗೆ ಸೋಂಕು, 149 ಮಂದಿ ಮರಣ 9

ಕೋವಿಡ್–19 ಲಸಿಕೆ: ಕಸ್ಟಮ್ಸ್ ಸುಂಕ ಕೈಬಿಡುವ ಸಾಧ್ಯತೆ 10

ಸಾರಿಗೆ ನಿಗಮಗಳ 1,937 ನೌಕರರ ಅಮಾನತು 10

ಅಮಿತ್ ಮಿಶ್ರಾ ಆಟಕ್ಕೆ ಒಲಿದ ಜಯ 11



ಕೋವಿಡ್: ವಲಸೆ ಕಾರ್ಮಿಕರಿಗಾಗಿ 20 ನಿಯಂತ್ರಣ ಕೊಠಡಿ ಸ್ಥಾಪನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಹರಡುವಿಕೆ ತಡೆಗಾಗಿ ವಿವಿಧ ರಾಜ್ಯಗಳು ಹೇರಿರುವ ನಿರ್ಬಂಧಗಳಿಂದ ವಲಸೆ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಥ ಕಾರ್ಮಿಕರ ನೆರವಿಗಾಗಿ 20 ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

ಇದೇ ಉದ್ದೇಶಕ್ಕಾಗಿ ಕಳೆದ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿತ್ತು. ಅವುಗಳ ಪೈಕಿ 20 ನಿಯಂತ್ರಣ ಕೊಠಡಿಗಳನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಪುನಶ್ಚೇತನಗೊಳಿಸಿದೆ ಎಂದು ಸಚಿವಾಲಯದ ಕಾರ್ಯದರ್ಶಿ ಅಪೂರ್ವಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿನ ಮುಖ್ಯ ಕಾರ್ಮಿಕ ಆಯುಕ್ತರ ಕಚೇರಿಗಳ ಸಮನ್ವಯದೊಂದಿಗೆ ಈ ಕೊಠಡಿಗಳು ಕಾರ್ಯ ನಿರ್ವಹಿಸಲಿವೆ. ತೊಂದರೆ ಎದುರಿಸುತ್ತಿರುವ ಕಾರ್ಮಿಕರು ಇಲಾಖೆಯ ಅಧಿಕಾರಿಗಳನ್ನು ಇ-ಮೇಲ್, ಮೊಬೈಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿ, ಪರಿಹಾರ ಪಡೆದುಕೊಳ್ಳಬಹುದು ಎಂದು ಹೇಳಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

PUBLIC NOTICE

The General Public is hereby informed that my client intends to Purchase the Schedule Property mentioned below from its Present owners **1) Smt. Pramalatha J bangera, 2) M Appiraj & M Muniraju both sons of Munishamappa, 3) M. Jayaram, 4) Ramakka bin Chinnarayappa 5) Nanjamma W/o Krishnappa 6) Akkaiamma W/o Kempaiah and 7) T.Muniyappa bin Thimmaiah** who claims that they are the absolute owner/s having right, title and interest in their respective Schedule Property and they claim that apart from them no other person/s or entity have any right, title and interest.

Any person/s having objection/s asserting claim, right, title or interest, charge, lien, can contact the undersigned within 15 days with all documentary proof. If no objections are received within the prescribed time, them my client shall proceed with to purchase the Schedule Property and enter into Sale Agreement as if no claims exist and if any exists they have been waived or abandoned. Objection/s received thereafter shall not be binding on my client.

Sl No	Owners Name	Details				Boundaries			
		Sy No.	Total Extent Ac-Gts	A-Kharab Ac-Gts	Net Extent Ac-Gts	East by	West by	North by	South by
1	Pramalatha J bangera W/o Janardhan Bangera	130/1	01-11.00	----	01-11.00	Sy.nos. 131/4, 131/5A, 131/5B, 131/5C	Sy.no.s. 130/2A 130/2B2	Sy.no.122 (Hill)	Nala
2	M Appiraj & M Muniraju S/o Lt Munishamappa	130/2A	00-23.00	00-01	00-22.00	Sy.no. 130/1	Sy.nos. 130/2B1, 130/2B2	Sy.no.122 (Hill)	Sy.no. 130/2B2
3	M Jayaram S/o Muniyappa	130/2B1	00-13.08	00-01	00-12.08	Sy.no. 130/2A	Sy.no. 130/3	Sy.no.122 (Hill)	Sy.no. 130/2B2
4	M Jayaram S/o Muniyappa	130/2B2	00-14.08	00-02	00-12.08	Sy.no. 130/1	Sy.no. 130/3	Sy.nos. 130/2B1 130/2A	Nala
5	T Muniyappa S/o Thimmaiah	130/3	00-37.00	00-04	00-33.00	Sy.nos. 130/2B1, 130/2B2	Sy.no. 130/4 & 129	Sy.no.122 (Hill)	Nala
6	Ramakka D/o Chennarayappa	130/4	00-30.00	----	00-30.00	Sy.no. 130/3	Sy.no.122 (Hill)	Sy.no.122 (Hill)	Sy.no. 129
7	Nanjamma W/o Krishnappa	131/4	00-21.00	----	00-21.00	Sy.no. 131/2	Sy.no. 130/1	Sy.no. 131/3	Sy.no. 131/5A
8	Akkaiamma W/o Kempaiah	131/5A	00-12.00	----	00-12.00	Sy.no. 131/2, 131/6	Sy.no. 130/1	Sy.no. 131/4	Sy.no. 131/5B
9	M Appiraj & M Muniraju S/o Lt Munishamappa	131/5B	00-12.00	----	00-12.00	Sy.no. 131/6	Sy.no. 130/1	Sy.no. 131/5A	Sy.no. 131/5C
10	M Jayaram S/o Muniyappa	131/6	01-00.00	----	01-00.00	Sy.no. 133, 132/3	Sy.nos. 131/5A , 131/5B, 131/5C	Sy.no. 131/1, 131/2	Nala
	Grand Total (A+B)		**06-14.00**	**00-08.00**	**06-06.00**				

Kavitha A.B. ,Advocate
2577, 4th Floor, 13th Cross, 26th Main, 1st sector, HSR layout,Bangalore 560102. Ph:- 9900546686.

ಎರಡನೇ ವರ್ಷದ ಚಿರಸ್ಮರಣೆ

ಡಾ|| ಎಸ್. ಆರ್. ನಾಗರಾಜ ರೆಡ್ಡಿ

ಛೇರ್ಮನ್: ಜೆ. ಆರ್. ಗ್ರೂಪ್ ಆಫ್ ಕಂಪನೀಸ್

ನೀವು ನಮ್ಮನ್ನು ಅಗಲಿ ಇಂದಿಗೆ ಎರಡು ವರ್ಷ ಕಳೆದರೂ
ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ಶ್ರೀ. ಎಸ್.ಆರ್ ವಿಶ್ವನಾಥ್
MLA, ಯಲಹಂಕ ವಿಧಾನಸಭಾ ಕ್ಷೇತ್ರ & ಅಧ್ಯಕ್ಷರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಶ್ರೀಮತಿ ವಾಣಿಶ್ರೀ ವಿಶ್ವನಾಥ್
ಮಾಜಿ ಅಧ್ಯಕ್ಷರು, ಬೆಂಗಳೂರು ಜಿಲ್ಲಾ ಪಂಚಾಯತಿ & ಟ್ರಸ್ಟಿ, ವಿಶ್ವವಾಣಿ ಫೌಂಡೇಶನ್ಸ್,
ಮತ್ತು ಕುಟುಂಬ ವರ್ಗದವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು (ಪೂರ್ವ) ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ,
ರೆಸಿಡೆನ್ಸಿ ರಸ್ತೆ, ಮೇಯೋಹಾಲ್, ಬೆಂಗಳೂರು–01

ಸಂಖ್ಯೆ: ವ.ಆ(ಪೂರ್ವ)/ಪಿ.ಆರ್/03/21–22 ದಿನಾಂಕ: 20.04.2021

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕರೋನಾ ವೈರಸ್‌ನ (ಕೋವಿಡ್–19) ನಿಯಂತ್ರಣಕ್ಕೆ ಅವಶ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ **ವಾಕ್–ಇನ್–ಪ್ರಕ್ರಿಯೆ** ಮೂಲಕ ಸೇವೆಯನ್ನು ಪಡೆಯಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಾಕ್–ಇನ್–ಪ್ರಕ್ರಿಯೆ

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ವೇತನ
1	ಎಂ.ಬಿ.ಬಿ.ಎಸ್. ವೈದ್ಯರು	• ಅಂಗೀಕೃತ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ ಎಂ.ಬಿ.ಬಿ.ಎಸ್. ಪದವಿ ಪಡೆದಿರಬೇಕು.	ರೂ. 60,000/– (ಹೆಚ್ಚುವರಿ ರೂ. 20,000/– ಕೋವಿಡ್ ಭತ್ಯೆ) = ರೂ. 80,000/–
2	ದಂತ ವೈದ್ಯರು	• ಅಂಗೀಕೃತ ಭಾರತೀಯ ದಂತ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ ಬಿ.ಡಿ.ಎಸ್. ಪದವಿ ಪಡೆದಿರಬೇಕು.	ರೂ. 45,000/– (ಹೆಚ್ಚುವರಿ ರೂ. 15,000/– ಕೋವಿಡ್ ಭತ್ಯೆ) = ರೂ. 60,000/–
3	ಆಯುಷ್ ವೈದ್ಯರು	• ಅಂಗೀಕೃತ ಭಾರತೀಯ ಆಯುರ್ವೇದ / ಯೂನಾನಿ / ಸಿದ್ಧ / ಹೋಮಿಯೋಪತಿ ಸಂಸ್ಥೆಯಿಂದ ಅನುಮೋದಿತ ಆಯುಷ್ ಪದವಿ ಪಡೆದಿರಬೇಕು.	ರೂ. 45,000/– (ಹೆಚ್ಚುವರಿ ರೂ. 15,000/– ಕೋವಿಡ್ ಭತ್ಯೆ) = ರೂ. 60,000/–
4	ಸ್ಟಾಫ್ ನರ್ಸ್	• ಅಂಗೀಕೃತ ಕರ್ನಾಟಕ ವಿಶ್ವವಿದ್ಯಾಲಯದಿಂದ ಜಿ.ಎನ್.ಎಂ. / ಡಿಪ್ಲೋಮಾ / ಬಿಎಸ್ಸಿ ನರ್ಸಿಂಗ್ ಕೋರ್ಸ್ ಹೊಂದಿರಬೇಕು ಹಾಗೂ ಕೆ.ಎನ್.ಸಿ. ಅಡಿಯಲ್ಲಿ ನೋಂದಾಯಿಸಲ್ಪಟ್ಟಿರಬೇಕು.	ರೂ. 20,000/– (ಹೆಚ್ಚುವರಿ ರೂ. 10,000/– ಕೋವಿಡ್ ಭತ್ಯೆ) = ರೂ. 30,000/–
5	ಲ್ಯಾಬ್ ಟೆಕ್ನಿಷಿಯನ್ / ಫಾರ್ಮಾಸಿಸ್ಟ್	• ಅಂಗೀಕೃತ ಪ್ಯಾರಾ ಮೆಡಿಕಲ್ ಬೋರ್ಡ್‌ನಿಂದ ಡಿಪ್ಲೋಮಾ ಇನ್ ಲ್ಯಾಬ್ ಟೆಕ್ನಿಷಿಯನ್ / ಬಿ. ಫಾರ್ಮಾ, ಡಿ. ಫಾರ್ಮಾ ಕೋರ್ಸ್ ಹೊಂದಿರಬೇಕು ಹಾಗೂ ಪ್ಯಾರಾಮೆಡಿಕಲ್ ಅಡಿಯಲ್ಲಿ ನೋಂದಾಯಿಸಲ್ಪಟ್ಟಿರಬೇಕು.	ರೂ. 15,000/– (ಹೆಚ್ಚುವರಿ ರೂ. 5,000/– ಕೋವಿಡ್ ಭತ್ಯೆ) = ರೂ. 20,000/–

ಅರ್ಹತೆ: (1) ವಯಸ್ಸು: ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 18 ಮೇಲ್ಪಟ್ಟಿರಬೇಕು ಹಾಗೂ 50 ವರ್ಷಗಳನ್ನು ಮೀರಿರಬಾರದು. (2) ಕನ್ನಡ ಭಾಷೆ ಮಾತನಾಡಲು, ಓದಲು, ಬರೆಯಲು ಬರಬೇಕು.

- ಎಂ.ಬಿ.ಬಿ.ಎಸ್. ವೈದ್ಯರು, ದಂತ ವೈದ್ಯರು, ಆಯುಷ್ ವೈದ್ಯರುಗಳ ವಾಕ್–ಇನ್–ಪ್ರಕ್ರಿಯೆಗೆ ಹಾಜರಾಗುವ ದಿನಾಂಕ: **22.04.2021**
- ಸ್ಟಾಫ್ ನರ್ಸ್, ಲ್ಯಾಬ್ ಟೆಕ್ನಿಷಿಯನ್ / ಫಾರ್ಮಾಸಿಸ್ಟ್ ವಾಕ್–ಇನ್–ಪ್ರಕ್ರಿಯೆಗೆ ಹಾಜರಾಗುವ ದಿನಾಂಕ: **23.04.2021**

ಸ್ಥಳ: ಮ್ಯೂಸಿಯಂ ಮೇಯೋಹಾಲ್, ಎಂ.ಜಿ. ರಸ್ತೆ, ಬೆಂಗಳೂರು–560001

ಸಮಯ: ಬೆಳಿಗ್ಗೆ 11:00 ರಿಂದ ಸಂಜೆ 4:00 ಗಂಟೆವರೆಗೆ.

ಆಸಕ್ತರು ಸಂಬಂಧಿಸಿದ ದಾಖಲೆಗಳೊಂದಿಗೆ ಈ ಮೇಲ್ಕಂಡ ಪಟ್ಟಿಯಲ್ಲಿ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್–ಇನ್–ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಮುಂದುವರೆದು ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ / ಕೋವಿಡ್ ಕೇರ್ ಕೇಂದ್ರಗಳಿಗೆ ನಿಯೋಜಿಸಲಾಗುವುದು. ಮೇಲ್ಕಂಡ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುವ / ಕಡಿತಗೊಳಿಸುವ ಅಧಿಕಾರವನ್ನು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಹೊಂದಿರುತ್ತಾರೆ. ಹೆಚ್ಚಿನ ವಿವರಗಳಿಗಾಗಿ **ದೂರವಾಣಿ ಸಂಖ್ಯೆ 080–22975852 ಹಾಗೂ ಇ–ಮೇಲ್: hoeastbbmp1@gmail.com** ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/–
ವಲಯ ಆಯುಕ್ತರು (ಪೂರ್ವ) ಹಾಗೂ ವಿಶೇಷ ಆಯುಕ್ತರು (ಯೋಜನೆ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತ ಸರ್ಕಾರ
ಅಣುಶಕ್ತಿ ಇಲಾಖೆ

ಅಣು ಖನಿಜಗಳ ಆವಿಷ್ಕಾರ ಮತ್ತು ಸಂಶೋಧನಾ ನಿರ್ದೇಶನಾಲಯ

ನಂ.1–10–153–156, ಎಎಂಡಿ ಕಾಂಪ್ಲೆಕ್ಸ್, ಬೇಗಂಪೇಟ್, ಹೈದರಾಬಾದ್–500016

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಎನ್ಐಟಿ ನಂ. ಎಎಂಡಿ/ಸಿಡಿ/ಆರ್‌ಎಂಆರ್‌ಇ–ಎಸ್‌ಆರ್/ಕೋರ್/2019–20/ಟಿ–(202) ದಿನಾಂಕ: 09.04.2021

ಭಾರತದ ರಾಷ್ಟ್ರಪತಿಗಳ ಪರವಾಗಿ, ನಿರ್ದೇಶಕರು (ಎಎಂಡಿ), ಬೇಗಂಪೇಟ್, ಹೈದರಾಬಾದ್ ಇವರು, ಕರ್ನಾಟಕದ ಭಾಗಗಳಲ್ಲಿನ ಕೆಳಕಂಡ ಒಂದು ಕಾಮಗಾರಿಗಾಗಿ ಅರ್ಹ ಕೋರ್ ಡ್ರಿಲ್ಲಿಂಗ್ ಕಂಟ್ರಾಕ್ಟರ್‌ಗಳಿಂದ ಎರಡು ಭಾಗಗಳಲ್ಲಿ (ತಾಂತ್ರಿಕ ಮತ್ತು ಹಣಕಾಸು) ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಐಟಂ ನಂ.	ಟೆಂಡರ್ ನಂ. ಮತ್ತು ಕಾಮಗಾರಿ ಸ್ವರೂಪ	ಕಾಮಗಾರಿಯ ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ)	ಭದ್ರತಾ ಠೇವಣಿ (ಭಾರತೀಯ ರೂ.ಗಳಲ್ಲಿ)	ಡೌನ್‌ಲೋಡ್‌ಗೆ ಲಭ್ಯವಿರುವ ಟೆಂಡರ್ ದಸ್ತಾವೇಜುಗಳ ಕೊನೆಯ ದಿನಾಂಕ ಮತ್ತು ಸಮಯ	ಆನ್‌ಲೈನ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ	ಭಾಗ 1 ತೆರೆಯುವ ದಿನಾಂಕ ಮತ್ತು ಸಮಯ	ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ
1.	ಎಎಂಡಿ/ಸಿಡಿ/ಆರ್‌ಎಂಆರ್‌ಇ–ಎಸ್‌ಆರ್/ಮರ್ಲಗಲ್ಲ/ಕೋರ್/2019–20/ಟಿ–202 ಕರ್ನಾಟಕದ ಮಂಡ್ಯ ಜಿಲ್ಲೆಯ ಮರ್ಲಗಲ್ಲ ಪ್ರದೇಶದಲ್ಲಿ 30 ರಿಂದ 200 ಮೀಟರ್ ವಿವಿಧ ಆಳಕ್ಕೆ ಬೋರ್‌ಹೋಲ್ ಸಮೇತ 10,000 ಮೀ. ಕೋರ್ ಡ್ರಿಲ್ಲಿಂಗ್.	303.20	ಶೂನ್ಯ*	04.05.2021 ರಂದು 15:00 ಗಂಟೆ	10.05.2021 ರಂದು 17:00 ಗಂಟೆ	11.05.2021 ರಂದು 15:00 ಗಂಟೆ	12 (ಹನ್ನೆರಡು)

*ಎಂಎಸ್‌ಇ ನೋಂದಾಯಿತ ಸಂಸ್ಥೆಗಳು ಸೇರಿದಂತೆ ಎಲ್ಲ ಬಿಡ್‌ದಾರರು ಭದ್ರತಾ ಠೇವಣಿ ಮೊತ್ತದ ಬದಲಾಗಿ ಬಿಡ್ ಸೆಕ್ಯೂರಿಟಿ ಡಿಕ್ಲರೇಶನ್ ಸಲ್ಲಿಸುವುದು, ಬಿಡ್ ಸೆಕ್ಯೂರಿಟಿ ಡಿಕ್ಲರೇಶನ್ ಇಲ್ಲವಾದಲ್ಲಿ, ಅಂತಹ ಬಿಡ್‌ನ್ನು ಪರಿಗಣಿಸಲಾಗುವುದಿಲ್ಲ. ಬಿಡ್‌ದಾರರು ತಮ್ಮ ಬಿಡ್ ಸೆಕ್ಯೂರಿಟಿ ಡಿಕ್ಲರೇಶನ್‌ನ್ನು ಟೆಂಡರ್ ಡಾಕ್ಯೂಮೆಂಟ್ ಸಮೇತ **www.tenderwizard.com/DAE** ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ. ವಿವರವಾದ ಎನ್ಐಟಿ ಪ್ರತಿಯು **www.amd.gov.in** ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿದ್ದು, ಕೇವಲ ವೀಕ್ಷಣೆಗೆ ಮಾತ್ರ ಲಭ್ಯವಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ: 040–27776342/27776335/27776387.

PUBLIC NOTICE

Public are informed that my client has purchased land bearing Survey No.41, measuring 01 Acre 09 Guntas, situated at Konappana Agrahara Village, Begur Hobli, Bangalore South Taluk, and bounded on the:

East by : Muneshwaraswamy Temple and Private Property;
West by : 40 Feet Road;
North by : Remaining portion of Survey No.41;
South by : Private Property;

from its previous owner Mr. K.S.Bhaskar, through the Sale Deed dated 05/11/2018, registered as Document No.6462/2018-19 of Book-I, stored in CD No.BMHD807, in the office of the Sub-Registrar, Bommanahalli (Jayanagara). The said Mr. K.S. Bhashar had undertaken to hand over all the original documents after registration and now he has represented that he has lost/misplaced all original documents pertaining to the aforesaid property and in this regard he has lodged a complaint with Crime Branch, Bangalore City Police, Bangalore. Public are hereby notified not to deal or carry out any transaction with anyone on the basis of the lost/missing documents. If anyone having knowledge or custody of the documents related to the Schedule Property may kindly inform to the undersigned in writing on the below mentioned address within 07 days from the date of publication of this notice to the undersigned.

Satya Narayana Reddy, Advocate,
SNR Law Chambers,
RK Grand, 313, 10th Main, 100 Feet Road,
1st Block, HRBR Layout,
Bangalore - 560 043.

ADVERTORIAL



ನೊಂದವರ, ದೀನ-ದಲಿತರ, ಬಡವರ ಆಶಾಕಿರಣ

ದಿ|| ಶ್ರೀ ಬಿ. ಬಸವಲಿಂಗಪ್ಪ ಅವರಿಗೆ

ಜನ್ಮದಿನದ ಶುಭಾಶಯಗಳು

ದಿ|| ಶ್ರೀ ಬಿ.ಬಸವಲಿಂಗಪ್ಪನವರು ವಿವಿಧ ಇಲಾಖಾ ಸಚಿವರಾಗಿ ಸಾಧಿಸಿದ ಹೆಜ್ಜೆ ಗುರುತುಗಳು...

- 1974–75ರಲ್ಲಿ ಕರ್ನಾಟಕ ರಾಜ್ಯ ನಗರಾಭಿವೃದ್ಧಿ ಸಚಿವರಾಗಿದ್ದಾಗ ಇಡೀ ಭಾರತದಲ್ಲಿ ಪ್ರಥಮ ಬಾರಿಗೆ "ಮಲ ಹೊರುವ ಪದ್ಧತಿ ನಿಷೇಧಿಸಿ ಸ್ವಚ್ಛ ಭಾರತದ ಪರಿಕಲ್ಪನೆಗೆ ನಾಂದಿ ಹಾಡಿದರು'.
- ದೇಶಕ್ಕೆ ಕೊಟ್ಟ ಈ ಕೊಡುಗೆಯಿಂದಾಗಿ ಬಿ. ಬಸವಲಿಂಗಪ್ಪ ಇವರನ್ನು ಸ್ವಚ್ಛ ಭಾರತದ ಪಿತಾಮಹ ಎಂದು ಕರೆಯಲಾಗುತ್ತಿದೆ.
- 05.03.1992ರಲ್ಲಿ 'ಪರಿಸರ ಮಾಲಿನ್ಯ ನಿಯಂತ್ರಣ ಕಾಯ್ದೆ'.
- 29.08.1978ರಲ್ಲಿ 'ಕರ್ನಾಟಕ ಭೂ–ಸುಧಾರಣೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಭೂಮಿ ಪರಭಾರೆ ನಿಷೇಧ'.
- 1990ರಲ್ಲಿ 'ಹುಲಿಗಳ ಸಂರಕ್ಷಣಾ ಕಾಯ್ದೆ'.
- ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯಲ್ಲಿ ಬಿ. ಬಸವಲಿಂಗಪ್ಪ ಅಧ್ಯಯನ ಕೇಂದ್ರ ಆರಂಭಿಸಿರುವುದು ಇವರ ಸಾರ್ಥಕ ಸೇವೆಯ ನಿರಂತರತೆಗೆ ಸಾಕ್ಷಿಯಾಗಿದೆ.

ಇಂತಹ ಮಹಾತ್ಮರು ಮತ್ತೊಮ್ಮೆ ಹುಟ್ಟಿ ಬರಲಿ...

ದಿ|| ಶ್ರೀ ಬಿ. ಬಸವಲಿಂಗಪ್ಪನವರು
(1924–1992)

ಬಿ. ಪ್ರಸನ್ನಕುಮಾರ್
ಮಾಜಿ ಶಾಸಕರು, ಪುಲಕೇಶಿನಗರ,
ಯಲಹಂಕ ವಿಧಾನಸಭಾ ಕ್ಷೇತ್ರ,
ಬೆಂಗಳೂರು.

ಪಿ. ವರುಣಕುಮಾರ್
ಮಾಜಿ ರಾಜ್ಯ ಉಪಾಧ್ಯಕ್ಷರು,
ಕೆ.ಪಿ.ವೈ.ಸಿ.ಸಿ.

ಶುಭಕೋರುವವರು

ಬಿ.ಪ್ರಸನ್ನಕುಮಾರ್, ಶ್ರೀಮತಿ ಸತ್ಯವತಿ ಮತ್ತು ದಿ|| ಪಿ.ಆರ್.ಮಣ್ಣೂರ್,
ಶ್ರೀಮತಿ ಜಯಪದ್ಮಾ ಮತ್ತು ಸಿ.ಕೆ.ಕಾಂಬ್ಳೆ, ಶ್ರೀಮತಿ ಶುಭಾ ಮತ್ತು ದಿ|| ಬಿ.ಶರತ್‌ಚಂದ್ರ,
ಶ್ರೀ ಚೈತನ್ಯ, ಶ್ರೀಮತಿ ಚಂದ್ರಿಕಾ ಮತ್ತು ಕೆ.ವಿ. ರುದ್ರಪ್ಪ

ಡಾ|| ಬಿ.ಆರ್.ಅಂಬೇಡ್ಕರ್ ಮಿಷನ್ ಟ್ರಸ್ಟ್, ರಾಗಿಗುಡ್ಡ, ಶಿವಮೊಗ್ಗ
ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್,
ಧಾರವಾಡ ಹಾಗೂ ಬಿ.ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ,
ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು–56.

ಮೇ 1 ರಿಂದ 18 ಕ್ಕಿಂತ ಹೆಚ್ಚು ವಯಸ್ಸಿನ ಎಲ್ಲರಿಗೂ ಕೊವಿಡ್–19 ಲಸಿಕೆ

ಕೊರೊನಾ ಪರಿಸ್ಥಿತಿಯಲ್ಲಿ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘದ ಅಭಯ

ಮೇಳ ಇಲ್ಲದಿದ್ದರೂ ರೈತರಿಗೆ ಮಾರುಕಟ್ಟೆ ವ್ಯವಸ್ಥೆ

• ಮನೋಹರ್ ಎಂ.

ಬೆಂಗಳೂರು: ಪ್ರತಿವರ್ಷದಂತೆ ಈ ಬಾರಿಯೂ ಮೇ ತಿಂಗಳಿನಲ್ಲಿ ಮಾವು–ಹಲಸು ಮೇಳ ಆಯೋಜನೆಗೆ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘ (ಹಾಪ್‌ಕಾಮ್ಸ್) ಒಲವು ತೋರಿದೆ. ಕೊರೊನಾ ಕಾರಣದಿಂದ ಮೇಳ ಸಾಧ್ಯವಾಗದಿದ್ದರೆ, ರೈತರಿಗೆ ಪರ್ಯಾಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದಾಗಿಯೂ ಸಂಸ್ಥೆ ಭರವಸೆ ನೀಡಿದೆ.

ಕೊರೊನಾ ಪರಿಸ್ಥಿತಿಯಿಂದ 'ಮಾವು ಮೇಳ' ಆಯೋಜನೆ ಕೈಬಿಟ್ಟಿರುವ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು (ಕೆಎಸ್‌ಎಂಡಿಎಂಸಿ) ಮಾವು ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಹಾಗೂ ಗ್ರಾಹಕರಿಗೆ ಮಾವು ತಲುಪಿಸುವ ಉದ್ದೇಶದಿಂದ ಅಂಚೆ ಇಲಾಖೆ ಮುಖಾಂತರ ಆನ್‌ಲೈನ್ ಮೂಲಕ ಮಾವು ಮಾರಾಟಕ್ಕೆ ಮುಂದಾಗಿದೆ.

ಹಾಪ್‌ಕಾಮ್ಸ್ ಕೂಡ ಪ್ರತಿವರ್ಷ ಮಾವು ಹಾಗೂ ಹಲಸಿನ ಮೇಳ ಆಯೋಜಿಸುತ್ತಿತ್ತು. ಕಳೆದ ವರ್ಷದ ಇದೇ ಅವಧಿಯಲ್ಲಿ ಲಾಕ್‌ಡೌನ್ ಇದ್ದಿದ್ದರಿಂದ ಮೇಳ ಆಯೋಜನೆ ಸಾಧ್ಯವಾಗಿರಲಿಲ್ಲ. ಇದರಿಂದ ಮಾವು ಬೆಳೆಗಾರರಿಗೆ ಸಮಸ್ಯೆಯಾಗಿತ್ತು. ಈ ಬಾರಿಯೂ ಕೊರೊನಾ ತೀವ್ರಗೊಂಡಿರುವುದರಿಂದ ಮಾವು ಬೆಳೆಗಾರರಿಗೆ ತೊಂದರೆಯಾಗದಂತೆ ಎಲ್ಲ ಮಳಿಗೆಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಹಾಪ್‌ಕಾಮ್ಸ್ ಯೋಜನೆ ರೂಪಿಸಿದೆ.

ಉಮೇಶ್ ಎಸ್ ಮಿರ್ಜಿ

'ವಾಡಿಕೆಯಂತೆ ಸಂಸ್ಥೆಯ ವತಿಯಿಂದ ಮಾವು ಹಾಗೂ ಹಲಸಿನ ಮೇಳ ನಡೆಸುವ ಉದ್ದೇಶ ಇದೆ. ಆದರೆ, ಕೊರೊನಾ ಸೋಂಕು ಪ್ರಮಾಣ ದಿನೇ ದಿನೇ ಹೆಚ್ಚುತ್ತಿರುವುದರಿಂದ ಮೇಳ ಆಯೋಜಿಸುವುದು ಅನುಮಾನ.

ಮಾವು–ಹಲಸು ಮೇಳ (ಸಾಂದರ್ಭಿಕ ಚಿತ್ರ)

ಮೇಳವನ್ನು ತೆರೆದ ಜಾಗದಲ್ಲಿ ಆಯೋಜಿಸಬೇಕು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಹೆಚ್ಚು ಜನ ಸೇರುವುದು ಅಪಾಯಕಾರಿ. ಎಲ್ಲ ಮಳಿಗೆಗಳಲ್ಲಿ ಸ್ಥಳೀಯವಾಗಿ ಮೇಳ ಆಯೋಜಿಸುವುದರಿಂದ ಗ್ರಾಹಕರ ಬಳಿಗೆ ಎಲ್ಲ ಬಗೆಯ ಮಾವು ಹಾಗೂ ಹಲಸು ತಲುಪುತ್ತದೆ. ಬೆಳೆಗಾರರಿಗೆ ಮಾರುಕಟ್ಟೆ ವಿಸ್ತರಿಸಿದಂತೆಯೂ ಆಗುತ್ತದೆ' ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ 'ಪ್ರಜಾವಾಣಿ'ಗೆ ವಿವರಿಸಿದರು.

'ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ಮಾವು ಇಳುವರಿ ಕಡಿಮೆಯಾಗುವ ಸಾಧ್ಯತೆ ಇದೆ. ಈ ಬಾರಿ ರಾಮನಗರ ಭಾಗದಿಂದ 60 ಟನ್ ಮಾವು ಬಂದಿದ್ದು, ಎಲ್ಲ ಮಾರಾಟ ಆಗಿದೆ. ಬೆಳೆಗಾರರಿಂದ ಗ್ರಾಹಕರಿಗೆ ನೇರವಾಗಿ ಆನ್‌ಲೈನ್ ಮೂಲಕ ಮಾವು ಹಾಗೂ ಹಲಸು ತಲುಪಿಸುವ ವ್ಯವಸ್ಥೆ ಕಲ್ಪಿಸಲು ಹಾಪ್‌ಕಾಮ್ಸ್ ಕೂಡ ಚಿಂತನೆ ನಡೆಸಿದೆ' ಎಂದೂ ಹೇಳಿದರು.

'ಮುಚ್ಚಿದ ಮಳಿಗೆ ತೆರೆಯೋಣ' ಅಭಿಯಾನ ಆರಂಭ

ಬೆಂಗಳೂರು ನಗರದಾದ್ಯಂತ ಕಳೆದ ವರ್ಷ 235 ಹಾಪ್‌ಕಾಮ್ಸ್ ಮಳಿಗೆಗಳು ಚಾಲ್ತಿಯಲ್ಲಿದ್ದವು. ಇವುಗಳ ಪೈಕಿ ಕೆಲವು ಕಾರಣಾಂತರಗಳಿಂದ ಮುಚ್ಚಲ್ಪಟ್ಟಿದ್ದು, ಅವುಗಳನ್ನು ಮತ್ತೆ ತೆರೆಯಬೇಕೆಂಬ ಉದ್ದೇಶದಿಂದ 'ಮುಚ್ಚಿದ ಮಳಿಗೆ ತೆರೆಯೋಣ' ಅಭಿಯಾನವನ್ನು ಸಂಸ್ಥೆ ಹಮ್ಮಿಕೊಂಡಿದೆ.

'ನಗರದಲ್ಲಿ ಪ್ರಸ್ತುತ 175 ಹಾಪ್‌ಕಾಮ್ಸ್ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ವಿವಿಧ ಕಾರಣಗಳಿಂದ 60 ಮಳಿಗೆಗಳ ಕಾರ್ಯಾಚರಣೆ ಸ್ಥಗಿತಗೊಂಡಿವೆ. ಇದಕ್ಕೆ ಪರೋಕ್ಷವಾಗಿ ಕೊರೊನಾ ಕಾರಣ ಇರಬಹುದು. ಕೆಲ ಮಳಿಗೆಗಳು ಗ್ರಾಹಕರ ಕೊರತೆಯಿಂದ ಮುಚ್ಚಲ್ಪಟ್ಟಿವೆ. ಈ ಎಲ್ಲ ಮಳಿಗೆಗಳನ್ನು ಮತ್ತೆ ತೆರೆಯಬೇಕೆಂಬ ಆಶಯದೊಂದಿಗೆ 'ಮುಚ್ಚಿದ ಮಳಿಗೆ ತೆರೆಯೋಣ' ಅಭಿಯಾನವನ್ನು ಏಪ್ರಿಲ್‌ನಿಂದ ಜೂನ್‌ವರೆಗೆ ಹಮ್ಮಿಕೊಂಡಿದ್ದೇವೆ. ಮಳಿಗೆಗಳನ್ನು ತೆರೆದು, ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ ಈ ಅಭಿಯಾನದಡಿ ಹಲವು ಕಾರ್ಯಗಳು ಪ್ರಗತಿಯಲ್ಲಿವೆ' ಎಂದು ಉಮೇಶ್ ಎಸ್.ಮಿರ್ಜಿ ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಆನ್‌ಲೈನ್ ಮೂಲಕ ಮಾವು ಮಾರಾಟ ಸಂಬಂಧ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿ) ಹಾಗೂ ಅಂಚೆ ಇಲಾಖೆ ನಡುವೆ ಒಪ್ಪಂದ: ಅತಿಥಿಗಳು–ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಕೆಎಸ್‌ಎಂಡಿಎಂಸಿ ಅಧ್ಯಕ್ಷ ಕೆ.ವಿ.ನಾಗರಾಜು, ಸ್ಥಳ–ನ್ಯಾಷನಲ್ ಸಾರ್ಟಿಂಗ್ ಹಬ್, ಸ್ಪೀಡ್‌ಪೋಸ್ಟ್, ಅಂಬೇಡ್ಕರ್ ವೀದಿ, ಬೆಳಿಗ್ಗೆ 11

ಬಿ.ಬಸವಲಿಂಗಪ್ಪ ಅವರ ಜನ್ಮದಿನ: ಉದ್ಘಾಟನೆ– ಸಮತಾ ಸೈನಿಕ ದಳ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ–ಸುಭಾಷ್ ಭರಣಿ, ಅತಿಥಿಗಳು–ದಾಸ್ ಪ್ರಕಾಶ್, ಭೀಮ್‌ಶಾ ಆರ್ಯ, ಆಯೋಜನೆ, ಸ್ಥಳ–ನಾಗಸೇನಾ ವಿದ್ಯಾಲಯ, ಸದಾಶಿವನಗರ,ಸಂಜೆ4

83ನೇ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ:

ಸಿದ್ ಶ್ರೀರಾಮ್

ಬೆಳಿಗ್ಗೆ 8ಕ್ಕೆ ಶ್ರೀರಾಮನವಮಿ ಅಂಗವಾಗಿ ವಿದ್ವಾನ್ ತಿರುಮಲ ಕುಲಕರ್ಣಿ ಅವರಿಂದ ಶ್ರೀಮದ್ ವಾಲ್ಮೀಕಿ ರಾಮಾಯಣ ಉಪನ್ಯಾಸ, ಸಂಜೆ 6ಕ್ಕೆ ಸಿದ್ ಶ್ರೀರಾಮ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಪಿಟೀಲು–ಎಚ್.ಎನ್.ಭಾಸ್ಕರ್, ಮೃದಂಗ–ಸತೀಶ್ ಕುಮಾರ್, ಆಯೋಜನೆ:ಶ್ರೀ ರಾಮಸೇವಾ ಮಂಡಳಿ, (ಆನ್‌ಲೈನ್ ಕಾರ್ಯಕ್ರಮ-live.ramanavami.org)

ಸಂಸ್ಕೃತಿ ಇಲಾಖೆ: ಆಸ್ತಿ ಸೃಜನೆ ಕೆಲಸಗಳಿಗೆ ಹಣ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ವರ್ಷದಲ್ಲಿ ಕೋವಿಡ್ ಕಾರಣದಿಂದ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಸಾಧ್ಯವಾಗಲಿಲ್ಲ. ಈ ಕಾರಣ ಇಲಾಖೆಯಲ್ಲಿನ ಹಣವನ್ನು ಆಸ್ತಿ ಸೃಜನೆ ಕೆಲಸಗಳಿಗೆ ಬಳಸಿಕೊಳ್ಳಬಹುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಕ್ರಿಯಾಯೋಜನೆ ಕುರಿತಂತೆ ಅಧಿಕಾರಿಗಳ ಜತೆಗೆ ಮಂಗಳವಾರ ಚರ್ಚೆ ನಡೆಸಿದರು.

'ಕನ್ನಡ ಭಾಷೆ ಮತ್ತು ಸಂಸ್ಕೃತಿ ಎರಡನ್ನೂ ಸಮತೋಲನದಿಂದ ಕಾಯ್ದುಕೊಳ್ಳುವ ಬಹುದೊಡ್ಡ ಜವಾಬ್ದಾರಿ ಇಲಾಖೆಯ ಮೇಲಿದೆ. ಹಾಗಾಗಿ, ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮತ್ತು ಸಂಸ್ಕೃತಿ ಆಚರಣೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಭಾಗ ಸೃಜಿಸಿ, ಅದನ್ನು ಸಮತೋಲನದಿಂದ ಬೆಳೆಸಬೇಕಿದೆ' ಎಂದರು.

'ರಂಗಮಂದಿರಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವಿಕೆ, ಹೊಸ ರಂಗಮಂದಿರಗಳ ನಿರ್ಮಾಣ, ಕಲಾಗ್ರಾಮ ಅಭಿವೃದ್ಧಿ ವೇಗವರ್ಧನೆ ಮುಂತಾದವುಗಳಿಗೆ ಹಣವನ್ನು ಬಳಸಿಕೊಳ್ಳಬೇಕು. ಕಟ್ಟಡ ಇಲ್ಲದ ರಂಗಾಯಣಗಳಿಗೆ ರಂಗಮಂದಿರಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಗಿರಿಜನ ಉಪಯೋಜನೆ ಕಾರ್ಯಕ್ರಮಗಳನ್ನು ಆಯೋಜಿಸಬಹುದು. ವೃತ್ತಿ ನಾಟಕ ಕಂಪನಿಗಳಲ್ಲಿ ಪೌರಾಣಿಕ ನಾಟಕಗಳನ್ನು ಹೆಚ್ಚಾಗಿ ಪ್ರದರ್ಶಿಸಲು ಕಂಪನಿ ಮಾಲೀಕರಿಗೆ ಸೂಚಿಸಬೇಕಿದೆ. ಇಲಾಖೆಯಿಂದ ಸ್ವಾತಂತ್ರ್ಯದ ಸುವರ್ಣಮಹೋತ್ಸವ ಕಾರ್ಯಕ್ರಮ ನಡೆಸಬೇಕು. ಈ ಸಂಬಂಧ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳನ್ನು ಗುರುತಿಸಿ, ಅವುಗಳನ್ನು ನಾಟಕಗಳನ್ನಾಗಿ ಬರೆಸಿ ಪ್ರದರ್ಶಿಸಬೇಕು' ಎಂದು ಹೇಳಿದರು.

ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ: ಮೇ 29ಕ್ಕೆ ಅಂತಿಮ ತೀರ್ಪು

ಉಡುಪಿ: ಭಾರಿ ಸುದ್ದಿಮಾಡಿದ್ದ ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ವಾದ ಪ್ರತಿವಾದಗಳು ಪೂರ್ಣಗೊಂಡಿದ್ದು, ಮೇ 29ಕ್ಕೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಪು ಪ್ರಕಟಿಸಲಿದೆ.

ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತಾರಾಮ್ ಶೆಟ್ಟಿ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದು, ಆರೋಪಿಗಳ ಪರ ವಕೀಲರು ಪ್ರತಿವಾದ ಮಂಡಿಸಿದ್ದಾರೆ. ಸುದೀರ್ಘ ಅವಧಿಯವರೆಗೂ ಪ್ರಕರಣದ ವಿಚಾರಣೆ ನಡೆಸಿದ್ದು, 78 ಸಾಕ್ಷಿಗಳ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ.

540 ಪುಟಗಳಷ್ಟು ಸಾಕ್ಷಿಗಳ ಹೇಳಿಕೆ ಇರುವುದರಿಂದ ಪರಿಶೀಲನೆಗೆ ಹೆಚ್ಚು ಸಮಯಾವಕಾಶ ಅಗತ್ಯವಿದ್ದು, ಮೇ 29ರಂದು ತೀರ್ಪು ಪ್ರಕಟಿಸುವುದಾಗಿ ನ್ಯಾಯಾಧೀಶರು ತಿಳಿಸಿದರು.

ಪ್ರಕರಣ: 2016ರ ಜುಲೈ 28ರಂದು ಉದ್ಯಮಿ ಭಾಸ್ಕರ್ ಶೆಟ್ಟಿ ಅವರನ್ನು ಭೀಕರವಾಗಿ ಕೊಲೆ ಮಾಡಲಾಗಿತ್ತು. ಪ್ರಕರಣದಲ್ಲಿ ಆರೋಪಿಗಳಾದ ಭಾಸ್ಕರ್ ಶೆಟ್ಟಿ ಅವರ ಪತ್ನಿ ರಾಜೇಶ್ವರಿ ಹಾಗೂ ಮತ್ತೊಬ್ಬ ಆರೋಪಿ ರಾಘವೇಂದ್ರಗೆ ಜಾಮೀನು ದೊರೆತಿದೆ. ಪುತ್ರ ನವನೀತ್ ಶೆಟ್ಟಿ, ನಂದಳಿಕೆಯ ನಿರಂಜನ್ ಭಟ್ ಜೈಲಿನಲ್ಲಿದ್ದಾರೆ.

'ಫ್ಲಿಪ್‌ಎಆರ್' ಸಂಸ್ಥೆಯಿಂದ ಪ್ರಯೋಗ

ಪೋಸ್ಟ್‌ಕಾರ್ಡ್ ಸ್ಕ್ಯಾನ್ ಮಾಡಿ ಪ್ರಾಣಿಗಳ ಬಗ್ಗೆ ತಿಳಿಯಿರಿ

• ಜಿ.ಶಿವಕುಮಾರ

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನ ಸ್ಥಾಪನೆಯಾಗಿದ್ದು ಯಾವಾಗ? ಉದ್ಯಾನದೊಳಗೆ ಏನೇನಿದೆ? ಅಲ್ಲಿರುವ ಹುಲಿ, ಚಿರತೆ, ಕರಡಿಯ ವೈಶಿಷ್ಟ್ಯಗಳೇನು? ಇವುಗಳನ್ನು ಅರಿತುಕೊಳ್ಳುವ ಕುತೂಹಲ ನಿಮ್ಮಲ್ಲಿದೆಯೇ? ಹಾಗಿದ್ದರೆ ಪೋಸ್ಟ್‌ಕಾರ್ಡ್‌ಗಳನ್ನು ಸ್ಕ್ಯಾನ್ ಮಾಡಿ!

ಉದ್ಯಾನ ಹಾಗೂ ಅದರಲ್ಲಿರುವ ಪ್ರಾಣಿಗಳ ವಿಶೇಷತೆಯನ್ನು ಪ್ರವಾಸಿಗರಿಗೆ ತಿಳಿಸುವ ಸಲುವಾಗಿ 'ಫ್ಲಿಪ್‌ಎಆರ್' ಸಂಸ್ಥೆ ವಿನೂತನ ಪೋಸ್ಟ್‌ಕಾರ್ಡ್‌ಗಳನ್ನು ಸಿದ್ಧಪಡಿಸಿದೆ.

'ಬನ್ನೇರುಘಟ್ಟ ಉದ್ಯಾನದ ಸಹಯೋಗದಲ್ಲಿ ನಾವು ಈ ಯೋಜನೆ ಕೈಗೆತ್ತಿಕೊಂಡಿದ್ದೆವು. ಉದ್ಯಾನದೊಳಗಿರುವ ಸದರ್ನ್ ಬರ್ಡ್ ವಿಂಗ್ ಚಿಟ್ಟೆ (ರಾಜ್ಯ ಚಿಟ್ಟೆ), ಜೇನುತುಪ್ಪ ಸವಿಯುವ ಕಪ್ಪು ಕರಡಿ, ಹುಲಿ, ಚಿರತೆ ಹಾಗೂ ಉದ್ಯಾನದ ನಕಾಶೆಯನ್ನೊಳಗೊಂಡ ಪೋಸ್ಟ್‌ಕಾರ್ಡ್‌ಗಳನ್ನು ತಯಾರಿಸಿದ್ದೇವೆ. ಉದ್ಯಾನದ ಆವರಣದಲ್ಲಿ ಇವು ದೊರೆಯುತ್ತವೆ. ನಾವು FlippAR Go ಎಂಬ ಆ್ಯಪ್

ಸದರ್ನ್ ಬರ್ಡ್ ವಿಂಗ್ ಚಿಟ್ಟೆಯ ಪೋಸ್ಟ್‌ಕಾರ್ಡ್

ವಿವೇಕ್ ಜೈನ್

ಅಭಿವೃದ್ಧಿಪಡಿಸಿದ್ದೇವೆ. ಅದು ಗೂಗಲ್ ಹಾಗೂ ಆ್ಯಪಲ್ ಪ್ಲೇ ಸ್ಟೋರ್‌ಗಳಲ್ಲಿ ಲಭ್ಯವಿದೆ. ಮೊದಲು ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಆ ಆ್ಯಪ್ ತೆರೆದ ಕೂಡಲೇ 'ಮ್ಯಾಜಿಕ್ ಐ ಬಟನ್' ಕಾಣುತ್ತದೆ. ಅದನ್ನು ಕ್ಲಿಕ್ಕಿಸಿ ನಂತರ ಕಾರ್ಡ್ ಸ್ಕ್ಯಾನ್ ಮಾಡಿದರೆ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಆ ಪ್ರಾಣಿಗಳ ಸಂಪೂರ್ಣ ಮಾಹಿತಿ ಸಿಗುತ್ತದೆ' ಎಂದು 'ಫ್ಲಿಪ್‌ಎಆರ್' ಸಂಸ್ಥೆಯ ಸಂಸ್ಥಾಪಕ ವಿವೇಕ್ ಮಹಾವೀರ್ ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮದು ಒಂಬತ್ತು ಜನರ ತಂಡ. ಇದಕ್ಕೂ ಮುನ್ನ ನಾವು ಹಂಪಿ, ಕಬ್ಬನ್ ಉದ್ಯಾನ, ಲಾಲ್‌ಬಾಗ್ ಸೇರಿದಂತೆ ಇತರ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ವಿಶೇಷ ಹಬ್ಬಗಳು ಹಾಗೂ ರೆಸ್ಟೋರೆಂಟ್‌ಗಳ ಕುರಿತಾದ ಪೋಸ್ಟ್‌ಕಾರ್ಡ್‌ಗಳನ್ನು ತಯಾರಿಸಿದ್ದೆವು. ಅವುಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಒಂದೇ ವರ್ಷದಲ್ಲಿ ಒಟ್ಟು 35 ದೇಶಗಳ ಜನರಿಗೆ ಇವು ತಲುಪಿವೆ. ಅಮೆಜಾನ್ ಹಾಗೂ ಬ್ಲಾಸಮ್ಸ್ ಪುಸ್ತಕ ಮಳಿಗೆಯಲ್ಲಿ ಈ ಕಾರ್ಡ್‌ಗಳು ಸಿಗುತ್ತವೆ. ಸದ್ಯದಲ್ಲೇ ನಾವು ವೆಬ್‌ಸೈಟ್‌ವೊಂದನ್ನು ಅನಾವರಣಗೊಳಿಸಲಿದ್ದೇವೆ. ಮತ್ತಷ್ಟು ಜನರನ್ನು ತಲುಪುವುದು, ಅವರಿಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಮಾಹಿತಿ ಒದಗಿಸುವುದು ಇದರ ಉದ್ದೇಶ' ಎಂದರು.

'ಕಾಡು ಮಲ್ಲೇಶ್ವರ ಸೇರಿದಂತೆ ಬೆಂಗಳೂರಿನ ಇತರ ಐತಿಹಾಸಿಕ ದೇವಾಲಯಗಳ ಕುರಿತು ಪೋಸ್ಟ್ ಕಾರ್ಡ್ ತಯಾರಿಸುವ ಯೋಜನೆಯೂ ಇದೆ' ಎಂದೂ ಹೇಳಿದರು.

BLDE (DEEMED TO BE UNIVERSITY)
Declared as Deemed to be University u/s 3 of UGC Act, 1956
The Constituent College
SHRI B. M. PATIL MEDICAL COLLEGE, HOSPITAL AND RESEARCH CENTRE
Smt. Bangaramma Sajjan Campus, B. M. Patil Road, (Sholapur Road), VIJAYAPURA - 586103, Karnataka, India
Ph: 08352-262770-Extn-2329,2330, www.bldedu.ac.in
APPLICATIONS ARE INVITED FOR THE POST OF
REGISTRAR
Applications along with necessary documents shall reach to the office of the undersigned on or before **29.04.2021**
For details log on to www.bldedu.ac.in. Sd/-
REGISTRAR

ಕರ್ನಾಟಕ ಗ್ರಾಮೀಣ ಬ್ಯಾಂಕ್
(ಭಾರತ ಸರ್ಕಾರದಿಂದ ಸ್ಥಾಪಿತ ಷೆಡ್ಯೂಲ್ಡ್ ಬ್ಯಾಂಕ್–ಪ್ರವರ್ತಕರು: ಕೆನರಾ ಬ್ಯಾಂಕ್)
ಪ್ರಧಾನ ಕಛೇರಿ: ಬಳ್ಳಾರಿ. ದೂರವಾಣಿ ಸಂ.: 08392–236428
ವಿಶ್ವಾಸದ ಪ್ರತೀಕ
ಅರ್ಜಿ ಆಹ್ವಾನ
ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರವರ್ತಿತ **"ಆರ್ಥಿಕ ಸಲಹಾ ಕೇಂದ್ರ"** 1) ಮಂಡ್ಯ ಜಿಲ್ಲೆಯ **ಕೆ.ಆರ್.ಪೇಟೆ** 2) **ಚಾಮರಾಜನಗರ** ಜಿಲ್ಲೆಯ **ಎಳಂದೂರು** 3) **ತುಮಕೂರು** ಜಿಲ್ಲೆಯ **ಚಿಕ್ಕನಾಯಕನಹಳ್ಳಿ** 4) **ಯಾದಗಿರಿ** 5) **ಕಲಬುರಗಿ** ಜಿಲ್ಲೆಯ **ಆಳಂದಾದಲ್ಲಿ** ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಹುದ್ದೆಯು ಗುತ್ತಿಗೆ ಆಧಾರಿತ ತಾತ್ಕಾಲಿಕವಾಗಿದ್ದು, ಅವಧಿ 3 ವರ್ಷಗಳದ್ದಾಗಿರುತ್ತದೆ. ಬ್ಯಾಂಕಿಂಗ್ ಜ್ಞಾನ, ಹಣಕಾಸಿನ ಸೇವೆಗಳ/ಸಾಮಾಜಿಕ ಭದ್ರತಾ ಯೋಜನೆಗಳ ತಿಳಿವಳಿಕೆಯುಳ್ಳ 62 ವರ್ಷದೊಳಗಿನ ಪದವೀಧರರು ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ವೇತನ ಮಾಹೆಯಾನ ರೂ. 17,100/– ಹಾಗೂ ಪ್ರಯಾಣ ಭತ್ಯೆ ರೂ. 3,000/– (ನಿಬಂಧನೆಗೊಳಪಟ್ಟು) ಹೆಚ್ಚಿನ ಮಾಹಿತಿ ಮತ್ತು ನಿಭಂದನೆಗಳಿಗೆ ಹಾಗೂ ಅರ್ಜಿ ನಮೂನೆಗಾಗಿ ಬ್ಯಾಂಕಿನ ವೆಬ್‌ಸೈಟ್: www.karnatakagraminbank.comಗೆ ಭೇಟಿಕೊಡಿ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.05.2021 ಸಹಿ/– ಮಹಾ ಪ್ರಭಂಧಕರು

ಕ್ರಿಕೆಟ್ ಬೆಟ್ಟಿಂಗ್; ಬುಕ್ಕಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಬುಕ್ಕಿ ಜುಸೆಬ್ ಯೂನಿಸ್ ಅಲಿಯಾಸ್ ಇಮ್ರಾನ್ (46) ಎಂಬಾತನನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಐಪಿಎಲ್ ಆರಂಭವಾದಾಗಿನಿಂದಲೇ ಆರೋಪಿ ಬೆಟ್ಟಿಂಗ್ ನಡೆಸುತ್ತಿದ್ದ. ಆತನಿಂದ ₹ 86 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೊಬೈಲ್ ಆ್ಯಪ್‌ಗಳ ಮೂಲಕ ಕ್ರಿಕೆಟ್ ಸ್ಕೋರ್ ಹಾಗೂ ಪಂದ್ಯಗಳ ಸರಾಸರಿ ನೋಡಿಕೊಂಡು ಸಹಚರರ ಮೂಲಕ ಆರೋಪಿ ಬೆಟ್ಟಿಂಗ್ ನಡೆಸುತ್ತಿದ್ದ. ಎಚ್‌ಆರ್‌ಬಿಆರ್ ಲೇಔಟ್ 2ನೇ ಹಂತದಲ್ಲಿರುವ ಉದ್ಯಾನ ಬಳಿ ಬಂದಿದ್ದ ಆರೋಪಿ, ಬೆಟ್ಟಿಂಗ್‌ಗೆ ಹಣ ಕಟ್ಟಿಸಿಕೊಳ್ಳುತ್ತಿದ್ದ. ಅದೇ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

₹ 2.50 ಲಕ್ಷ ಮೌಲ್ಯದ 'ಡ್ರಗ್ಸ್'; ಪೆಡ್ಲರ್ ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ಫ್ರೋಫನ್ ಚೇಕನ್ ಅಲಿಯಾಸ್ ಜೇಮ್ಸ್ (27) ಎಂಬಾತನನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ.

'ನೈಜೀರಿಯಾದ ಫ್ರೋಫನ್, ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ಜಯಂತಿನಗರದಲ್ಲಿ ನೆಲೆಸಿದ್ದ. ತನ್ನದೇ ಜಾಲ ರೂಪಿಸಿಕೊಂಡು ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಎಚ್‌ಬಿಆರ್ ಲೇಔಟ್‌ನ 5ನೇ ಹಂತದ ಅಂಬೇಡ್ಕರ್ ಮೈದಾನ ಬಳಿಯ ರಸ್ತೆಯಲ್ಲಿ ಆರೋಪಿ ಡ್ರಗ್ಸ್ ಮಾರಲು ಬಂದಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ. ₹ 2.64 ಲಕ್ಷ ಮೌಲ್ಯದ 10 ಗ್ರಾಂ ತೂಕದ ಕೊಕೇನ್ ಹಾಗೂ 1.5 ಗ್ರಾಂ ತೂಕದ ಹೆರಾಯಿನ್ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಹೆಚ್ಚಿದ್ದು, ಅದರ ಮಾರಾಟಗಾರರನ್ನು ಪತ್ತೆ ಮಾಡುತ್ತಿದ್ದೇವೆ. ಈ ಹಿಂದೆ ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ ಹಲವರನ್ನು ಬಂಧಿಸಲಾಗಿತ್ತು. ಡ್ರಗ್ಸ್ ವಿರುದ್ಧದ ಕಾರ್ಯಾಚರಣೆ ಮುಂದುವರಿಯಲಿದೆ' ಎಂದೂ ಹೇಳಿದರು.

ಮಾಲೀಕರ ವಿರುದ್ಧ ಕ್ರಮ

'ನೈಜೀರಿಯಾದಿಂದ ಬಂದಿದ್ದ ಆರೋಪಿಗೆ ಸ್ಥಳೀಯರೊಬ್ಬರು ಬಾಡಿಗೆ ಮನೆ ನೀಡಿದ್ದರು. ಆರೋಪಿ ವೀಸಾ ಅವಧಿ ಮುಗಿದರೂ ಮನೆ ಖಾಲಿ ಮಾಡಿಸಿರಲಿಲ್ಲ. ಆತನ ಬಗ್ಗೆ ಠಾಣೆಗೂ ಮಾಹಿತಿ ನೀಡಿರಲಿಲ್ಲ. ಹೀಗಾಗಿ, ಮನೆ ಮಾಲೀಕನ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಪೊಲೀಸರು ತಿಳಿಸಿದರು.

ಚನ್ನಸಂದ್ರ: ಪಾಲಿಟೆಕ್ನಿಕ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲೆಂದು ಪಾಲಿಟೆಕ್ನಿಕ್ ನಿರ್ಮಿಸಲಾಗಿದೆ ಎಂದು ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಮಹದೇವಪುರ ಕ್ಷೇತ್ರದ ಚನ್ನಸಂದ್ರದಲ್ಲಿ ನೂತನ ಪಾಲಿಟೆಕ್ನಿಕ್ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

'ಮಹದೇವಪುರ ಕ್ಷೇತ್ರ ಐಟಿಬಿಟಿಗೆ ಹೆಸರಾಗಿದ್ದರೂ ಕೂಡಾ ಹೆಚ್ಚಿನ ಗ್ರಾಮಾಂತರ ಪ್ರದೇಶಗಳನ್ನು ಹೊಂದಿವೆ. ಗ್ರಾಮೀಣದ ಭಾಗದ ವಿದ್ಯಾರ್ಥಿಗಳಿಗೆ ಒಂದು ಸುಸಜ್ಜಿತ ಕಾಲೇಜು ಇಲ್ಲದೆ ಪರದಾಡುವ ಸ್ಥಿತಿ ಇತ್ತು. 2009ರಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದ ವೇಳೆ ಅನುದಾನ ಬಿಡುಗಡೆ ಮಾಡಲಾಗಿತ್ತು. ಈಗ ಕಾಮಗಾರಿ ಪೂರ್ಣಗೊಂಡಿದೆ' ಎಂದು ಹೇಳಿದರು.

ಅರವಿಂದ ಲಿಂಬಾವಳಿ ಪಾಲಿಟೆಕ್ನಿಕ್ ಉದ್ಘಾಟಿಸಿದರು. ಬಿಜೆಪಿ ಕ್ಷೇತ್ರಾಧ್ಯಕ್ಷ ಮನೋಹರ್ ರೆಡ್ಡಿ, ನಟರಾಜ್, ಮುಖಂಡರಾದ ಜಯಚಂದ್ರಾರೆಡ್ಡಿ, ಚನ್ನಸಂದ್ರ ಚಂದ್ರಶೇಖರ್, ಮಧು, ರಾಜೇಶ್ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

Business Offers

Finance

NRI'S INVESTMENT And Finance Available OnLow Interest Against Properties,Land& Buildings,Sites, Flats (Also)Assist For Yojana Loans Call:7411265189

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Mathikere

NEW 2 BHK Furnished 1235 Sqft@Rs 7200/Sqft Muthyalnagar Negotiable. Contact 9686973320.

Sites

Hosur Road

APPROX. ONE Acre Industrial Land for Sale. Papers upto date. Ideal for Pharma as well. Brokers Excuse. Contact: 9620938350/ 9342825263.

Jakkur

SITE FOR SALE- TELECOM LAYOUT: 40x60 site West Facing 7,600/- p.sft. Genuine Buyers- 8197971761/ 9916006002

Nagarabhavi

SALE NAGARABHAVI 9th block, Hanumagiri 30X40 BDA House West Facing. Kumar: 9901552147 (Brokers Excuse)

RENTAL PROPERTIES

Accommodation Available

Commercial

Commercial Accommodation, 3 Floors, GF+2, 1400 Square Feet Each+ Mezanine. Strong Room 300 Square Feet, 100 Square Feet Atm, Adequate Power Supply, 2 Wheeler Parking, In 5th Cross ,Malleswaram. Suitable For Banks, Offices, Showrooms Etc. For Immediate Occupation. Owner Contact: 9945282653

Accommodation Wanted

Commercial

KERALA_BASED Wooden_Furniture and_Mattress Manufacturing Company_looking for_10000_sft showroom_space_in Bangalore_for Retail_and wholesale business_without_rent and_Security_Deposit_ only_on_attractive Profit_sharing basis_Furniture showroom_owners are_also_welcome. Call:9895229966

JOB OPPORTUNITIES

Teachers/ Professors

JINDAL PUBLIC SCHOOL REQUIRES
Teachers for Pre-Primary, Primary & High School for all subjects. We also need **Band Master & Dance Teacher** with requisite qualification and at least 5 years experience. Please send your CV along with present & expected salary to: Head Master. Jindal Public School, 16th km, Tumur Road, Bengaluru 560073
Email:hm@jindalpublicschool.com

SIDDAGANGA SREE SHIVAKUMARA SWAMIJI VIDYA-PEETHA TRUST, #1, 1st Stage, 2nd Phase, Chandra Layout, Bengaluru-560072. Phone: 080-23397600 E-Mail:sskvptrust.2001@gmail.com............ INVITES APPLICATION for I.SSK PU COLLEGE: 1.PRINCIPAL-1st Class in M.Sc /M.Com,B.Ed/ M.Ed.(Ph.D preferred) with 15-20 Years exp. 2.Lecturer in Biology- M.Sc, B.Ed/M.Ed, 3.Lecturer in Business Studies & Accountancy- M.Com,B.Ed/M.Ed, 4.Lecturer in Hindi- MA, B.Ed/M.Ed, 5.Physical Instructor- B.P.Ed/M.P.Ed, 6.Librarian-B.Lib/ M.Lib Science. II.SIDDAGANGA PUBLIC SCHOOl, Vijayanagara, HEAD MISTRESS- Master Degree with B.Ed/M.Ed with 10 Years Exp. as Head Mistress/Assistant Head Mistress. III.SIDDAGANGA PUBLIC SCHOOL, Chandra Layout/Vijayanagara. 1.Nursery Teacher- Any Degree with NTT/ MTT Trained, 2.Mathematics Teacher- M.Sc,B.Ed, 3.Science Teacher- M.Sc,B.Ed, 4.Social- Science Teacher- M.A,B.Ed, 5.English- Teacher-M.A,B.Ed, 6.EVS Teacher- B.Sc,B.Ed, 7.Hindi- Teacher-M.A, B.Ed, 8.Computer Teacher/ ICT Co-ordinator- BCA/MCA/BE, 9.Drawing Teacher- BFA/MFA, 10.Kannada Teacher-B.A/M.A,B.Ed, 11.Maintenance Asst- Any degree with exp.to look after Vehicles, Computers, Electrical gadgets etc. WALK-IN-INTERVIEW through offline/online date will be intimated. Interested Candidates may send their resume, Service & Salary certificates and Testimonials to the ... E-mail:sskvptrust.2001@gmail.com/ personally submit the above details to Trust office on or before 26th April 2021 between 9.00 am to 4.00 pm.

WANTED NTT Trained Teachers and Admin for reputed School near Devanahalli. SSVP International School. 9008888876

SRI K.K EDUCATION CENTRE
KADABAGERE, BANGALORE
APPLICATIONS REQUIRED FOR THE POST OF FACULTIES 2021-22
TEACHING STAFF
1. KINDERGARTEN – NTT training with good communication skills
2. PRIMARY TEACHERS
* Requirement- English, Hindi, Kannada, Mathematics
* Qualifications - Graduate with B.Ed, D.Ed
3. HIGHER PRIMARY AND SECONDARY
* Requirement - Science, English & Social
* Qualification -Graduate with B.Ed / M.Ed
4. INFORMATION TECHNOLOGY/ COMPUTER - B.Sc., / M.Sc., (comp)/ B C A / MCA
5. PHYSICAL EDUCATION INSTRUCTORS
NON-TEACHING STAFF
6. OFFICE ASSISTANT & RECEPTIONIST
* Having excellent communication skills, Be comfortable with the use of technology
Contact no: 7406666583
E-Mail: srikkec@gmail.com

BADARIKASHRAMA VIDYASHALA
A Spacious and modern Equipped CBSE School in the rural area of Madihalli, Turuvekere Tq, Tumkur Dist.
Required Faculties for Nursery to High school:
Qualification: NTT, BA/B.Ed (Eng/ SS), BSc/ B.Ed (Maths, Phy/ Chem-Bio) with Post-graduation. Counsellor (Post-graduation in Psychology) PET (BPEd) Spoken English is required.
Please send resume by 24th April 2021.
Food and accommodation is available at the request of candidate
E-mail: badarik1986@gmail.com
Ph.No: 9880194991 / 9741246418

Accounts & Finance

ACCOUNTS/ AUDIT WANTED – 1st CLASS B.COM / M.COM'S WITH 3-5 YEARS EXPERIENCE IN TALLY AND FILING OF GST RETURNS. MAIL YOUR RESUME TO headoffice@acharya.co. MOBILE NO: 7353155433

WANTED GRADUATES 0-5 years experience for outsourced activity in Malleshwaram. Age below 30. Contact: 9900263509

WANTED IMMEDIATELY Accountant.CA Firm. Location-Domlur. Send resume to caocmllp@gmail.com.

WANTED ACCOUNT ASST. (Male) Tally & GST work, Salary: Negotiable. Email: starsilks@gmail.com

Engg/ Production Technical

WEB DEVELOPER Required who has Knowledge about Digital Marketing Based on Monthly Salary or Freelancers For Tiles Showroom Build-Mart at Yeshwanthpura:- 9740992204 info@buildmart.co.in

General

ENVIRONMENT LABORATORY at Mahalaxmi Layout, Bangalore- 560086. 1) Chemists (Males) B.Sc./ M.Sc,- Freshers preferred. 2) Chemical Lab Assistants/ STP, ETP, RO Operators/ Helpers (Males): Freshers, ITI, PUC Sc, SSLC, 8th Std. Pass/ Fail. Both above Local candidates around Bangalore. Send Bio-data/ Resume to E-mail: drrpdambal@gmail.com/ pollutechaids1985@gmail.com Ph: 080 29550488

CONNECT

ಬೇಸಿಗೆ ಮಾರಾಟ
ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
@
ಎಸ್.ಕೆ.ಆರ್. ಕನ್ವೆಂಷನ್ ಸೆಂಟರ್
ಮಾಗಡಿ ಮುಖ್ಯರಸ್ತೆ, ಕಾಮತ್ ಬಡಾವಣೆ, ಚಿಕ್ಕಗೊಲ್ಲರಹಟ್ಟಿ, ಎಂಬಸ್ಸಿ ಪಬ್ಲಿಕ್ ಸ್ಕೂಲ್ ಹತ್ತಿರ, ಬೆಂಗಳೂರು-560 091.
ಮೊ. : 7904413982
ದಿನಾಂಕ : 22,23,24,25 & 26 ನೇ ಏಪ್ರಿಲ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ಮಾಸ್ಕ್ ಕಡ್ಡಾಯ,
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ

REQUIRED OFFICE Assistant (MALE) Qualification: 12th PassAge: 30-45 years Timings: 8.30am to 7.00pm Basic English & Computer Knowledge required Contact: 9535910010

CAMPAIGN/OFFICE/ sales Managers Field officers Graduates/Freshers/ students reqd with 2 Wheeler WhatsApp 8618341813

Marketing & Sales

SALES EXECUTIVE REQUIRED FMCG Product. Cover South Bengaluru. Good Salary + incentive + D.A. weekly 5 days work. One year experience in sales field. Females (above 30 years) also eligible. WhatsApp 9972067333 /080 22243063

MASTER FIREPLACES requires a BDM to develop the growing fireplace market in Coorg and Wayand areas. Attractive retainer and comission package. www.masterfireplaces.in Resume sales@masterfireplaces.in

SALES EXECUTIVE (M/F) Required For A Leading Retail Tiles Showroom Buildmart Near ISKCON Temple Behind Ravindu Toyota, Yeshwanthpur. 9448992214 info@buildmart.co.in

Multiple Vacancy

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS- 7676760299/ 7676760399

WANTED
REPUTED MANUFACTURERS OF SHEET METAL PRESSED COMPONENTS NEAR TIN FACTORY
REQUIRE SMART AND DYNAMIC
1. GENERAL MANAGER - PRODUCTION SHOULD TAKE INDEPENDENT CHARGE OF PLANNING AND CONTROL
2. TOOL ROOM MANAGER EXPERIENCE IN TOOL DESIGNING AND MANUFACTURING
3. MANAGER - FINANCE GRADUATE WITH TALLY KNOWLEDGE
4. PRODUCTION AND QUALITY SUPERVISORS DME / B.E.
5. STORES INCHARGE
Minimum Experience
1 , 2 & 3 - 8 to 10 Years | 4 & 5 - 6 Years
ATTRACTIVE SALARY OFFERED
Contact: 080 - 28510188
Send your resumes to: ahp@ahppl.com

Receptionist/ Secretary

WANTED IMMEDIATELY Receptionist for Ayurvedic Clinic. Location-Indiranagar. Send Resume to ROBINM379@GMAIL.COM. Mob-8147567650.

Wanted

Full Time Home Tutor Wanted
My kids Need a Tutor
Looking for someone to help them advance with good English Grammer
Qualifications: Excellent communication skills, International Language, Expertise in variety of disciplines, Passion for helping others learn & succeed
Location: Nagarbhavi 2nd Stage, Bangalore
Student grade level: UKG and 5th Std
Call: 9900100244

WANTED TURNER Grinder VMC Operator Near Vijayanagar Pipeline Bangalore-560040 Contact Venugopal: 9886001712 / 9483399000

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Quotations are invited from reputed Agencies for the supply of following items.
1. Digital Marketing to VIT
2. Supply and Installation of CCTV Cameras - For PU College
For more details vist: www.reddyjanasangha.org

BEAUTY & HEALTH

Beauty Parlour

UNIQUE SPA- (Kalyannagar) Provide Hygiene Body massage therapy. For relaxing/ refreshing Spa Services. Contact: 72593-69573

EDUCATIONAL

Admission

DIRECT FINAL Year: B.Ed/ LL.B/B.Tech/M.Tech/ Diploma/MBA/BBA/BCA/ B.Com. Govt,UGC Recognised, Join immediately. Asha Institute: Bangalore. 9448460103/ 7093438248

PERSONAL

Change of Name

I, NO.14291396A, Rank Ex-Naik(TS), Shivanna S/o Late Manchegowda R/a Kootagal, Ramanagara, Karnataka-562159 my wife name changed as PUSHPALATHA to PUSHPALATHA M.N vide affidavit dated:20.04.2021 before notary Gangaraju.B.N, Bangalore-32.

PURNIMA KUNDU, W/o 14832043A NK Barun Kundu, Vill- Sarasbedia, Ramgarh, Paschim Madinipur, WB, my name PURNIMA KUNDU to PURNIMA SAHU KUNDU Notary K.V. Mani, Bangalore.

14824976A HAV Bhim Kumar, 533 ASC BN, son name Service Record HIMANSU KUMAR MEHTA instead of HIMANSHU KUMAR MEHTA, Notary K.V. Mani, Bangalore.

DH DECCAN HERALD
ಪ್ರಜಾವಾಣಿ ಕ್ಲಾಸಿಫೈಡ್ಸ್
RECRUITMENT
BOOK YOUR JOB AD IN DECCAN HERALD ALL KARNATAKA + PRAJAVANI BENGALURU ON WEDNESDAY + SUNDAY
@1530/-*
FOR 15 WORDS
condition apply*
For More Details Contact:
9880856233 | 9731810277
9901641752 | 9845114560 | 9886213331
080- 45557163 | 45557164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

42 ಮಂದಿಗೆ ಸೋಂಕು: ಗ್ರಾಮ ಸೀಲ್‌ಡೌನ್

ಕೋಲಾರ: ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದಲ್ಲಿ 42 ಮಂದಿಗೆ ಕೊರೊನಾ ಸೋಂಕು ಹರಡಿರುವುದು ಮಂಗಳವಾರ ದೃಢಪಟ್ಟಿದ್ದು, ಇಡೀ ಗ್ರಾಮವನ್ನು ಸೀಲ್‌ಡೌನ್ ಮಾಡಲಾಗಿದೆ.

ಬೆಂಗಳೂರಿನಲ್ಲಿದ್ದ ಲಕ್ಷ್ಮೀಸಾಗರದ ವಿದ್ಯಾರ್ಥಿಯೊಬ್ಬ ಅನಾರೋಗ್ಯದ ಕಾರಣ ಇತ್ತೀಚೆಗೆ ಗ್ರಾಮಕ್ಕೆ ಮರಳಿದ್ದ. ಪರೀಕ್ಷೆ ಮಾಡಿದಾಗ ಆತನಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಆತನ ಸಂಪರ್ಕಕ್ಕೆ ಬಂದ ಕುಟುಂಬ ಸದಸ್ಯರು ಹಾಗೂ ಗ್ರಾಮಸ್ಥರಿಗೆ ಸೋಂಕು ಹರಡಿದೆ.

ಗ್ರಾಮದ ಜನಸಂಖ್ಯೆ ಸುಮಾರು 700. ಈ ಪೈಕಿ 182 ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. 41 ಮಂದಿಗೆ ಸೋಂಕು ತಗುಲಿರುವ ಖಚಿತವಾಗಿದೆ. ಉಳಿದವರಿಗೂ ಪರೀಕ್ಷೆ ಮಾಡಲಾಗುತ್ತಿದ್ದು, ಸೋಂಕಿತರ ಸಂಖ್ಯೆ ಹೆಚ್ಚುವ ಸಾಧ್ಯತೆಯಿದೆ. ಇಡೀ ಗ್ರಾಮವನ್ನು ಕಂಟೈನ್‌ಮೆಂಟ್ ವಲಯವಾಗಿ ಘೋಷಿಸಿರುವ ಆರೋಗ್ಯ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿದ್ದಾರೆ.

ಗ್ರಾಮಸ್ಥರ ಸಂಚಾರ ನಿರ್ಬಂಧಿಸಿ ಬ್ಯಾರಿಕೇಡ್ ಹಾಕಲಾಗಿದೆ. ಸೋಂಕಿತರನ್ನು ಅವರ ಮನೆಗಳಲ್ಲೇ ಕ್ವಾರಂಟೈನ್ ಮಾಡಲಾಗಿದೆ.

ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ

ಬೆಂಗಳೂರು: ಬನಶಂಕರಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ದೀಪಿಕಾ (26) ಎಂಬುವರ ಮೃತದೇಹ ಮಂಗಳವಾರ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಅಜ್ಜಂಪುರದ ದೀಪಿಕಾ, ಬನಶಂಕರಿ ಠಾಣೆ ವ್ಯಾಪ್ತಿಯ ಕದಿರೇನಹಳ್ಳಿಯ ಜಯಕುಮಾರ್ ಅವರನ್ನು ಮದುವೆಯಾಗಿದ್ದರು. ಅವರಿಗೆ 4 ವರ್ಷದ ಮಗ ಇದ್ದ. 'ನನ್ನ ಸಾವಿಗೆ ಪತಿಯ ಕಿರುಕುಳವೇ ಕಾರಣ' ಎಂದು ಆರೋಪಿಸಿ ವಿಡಿಯೊ ಮಾಡಿಟ್ಟು ದೀಪಿಕಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಡಿಯೊ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿ ಕಿರುಕುಳದಿಂದ ಬೇಸತ್ತಿದ್ದ ದೀಪಿಕಾ, ಮಗನ ಜೊತೆ ಅಜ್ಜಂಪುರದಲ್ಲಿರುವ ತವರು ಮನೆಗೆ ಹೋಗಿದ್ದರು. ಆದರೆ, ಅನಾರೋಗ್ಯದಿಂದಾಗಿ ಮಗ ಮೃತಪಟ್ಟಿದ್ದ. ಅದರಿಂದ ದೀಪಿಕಾ ಮತ್ತಷ್ಟು ನೊಂದಿದ್ದರು.'

'ಪತಿ ವಿರುದ್ಧ ಅಜ್ಜಂಪುರ ಠಾಣೆಗೆ ದೀಪಿಕಾ ದೂರು ಕೊಟ್ಟಿದ್ದರು. ಅದಾದ ಕೆಲ ದಿನಗಳ ನಂತರ ಅಜ್ಜಂಪುರ ತೊರೆದಿದ್ದರು. ಮಗಳು ನಾಪತ್ತೆಯಾದ ಬಗ್ಗೆ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

'ತವರು ಮನೆಯಿಂದ ಪತಿಯ ಮನೆಗೆ ಬಂದಿದ್ದ ದೀಪಿಕಾ, ಕೊಠಡಿಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಮೊಬೈಲ್ ಸುಲಿಗೆ; ಆರೋಪಿ ಬಂಧನ

ಬೆಂಗಳೂರು: ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೊಬೈಲ್ ಸುಲಿಗೆ ಮಾಡಿದ್ದ ಆರೋಪಿ ಸೈಯದ್ ಇರ್ಫಾನ್ (20) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಜಗಜೀವನರಾಮ್ ನಗರದ ಇರ್ಫಾನ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 1.90 ಲಕ್ಷ ಮೌಲ್ಯದ 7 ಮೊಬೈಲ್‌ಗಳು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ, ತಮ್ಮ ಪತ್ನಿ ಜೊತೆಯಲ್ಲಿ ಏಪ್ರಿಲ್ 13ರಂದು ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದರು. ಅದೇ ಸಂದರ್ಭದಲ್ಲೇ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿ, ದೂರುದಾರರ ಪತ್ನಿಯ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.

'ನಗರದ ಹಲವೆಡೆ ದ್ವಿಚಕ್ರ ವಾಹನಗಳಲ್ಲಿ ಸುತ್ತಾಡುತ್ತಿದ್ದ ಆರೋಪಿ, ಸಾರ್ವಜನಿಕರ ಮೊಬೈಲ್ ಸುಲಿಗೆ ಮಾಡುತ್ತಿದ್ದ. ಹಲವು ಠಾಣೆ ವ್ಯಾಪ್ತಿಯಲ್ಲೂ ಆತ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ಪೊಲೀಸರು ಹೇಳಿದರು.

ನಿಧನ ವಾರ್ತೆ

ಎನ್.ಮುದ್ದಪ್ಪ

ಎನ್.ಮುದ್ದಪ್ಪ

ಬೆಂಗಳೂರು: ಶ್ರೀರಾಮಪುರದ ರಾಮಮೋಹನ ಪುರ ನಿವಾಸಿ ಹಾಗೂ ಶ್ರೀಲಕ್ಷ್ಮೀ ನರಸಿಂಹ ಮೋಟಾರ್ ಸರ್ವೀಸ್ ಸಂಸ್ಥೆಯ ಮಾಲೀಕ ಎನ್.ಮುದ್ದಪ್ಪ (85) ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ. ಹರಿಶ್ಚಂದ್ರ ಘಾಟ್‌ನಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭೋಜ್ಯನಾಯಕ್

ಭೋಜ್ಯನಾಯಕ್

ದೊಡ್ಡಬಳ್ಳಾಪುರ: ದೇವನಹಳ್ಳಿ 'ಪ್ರಜಾವಾಣಿ' ಅರೆ ಕಾಲಿಕ ವರದಿಗಾರ ವಡ್ಡನಹಳ್ಳಿ ಭೋಜ್ಯನಾಯಕ್ (55) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಒಬ್ಬ ಪುತ್ರಿ, ಇಬ್ಬರು ಪುತ್ರರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಶಿರಾ ತಾಲ್ಲೂಕಿನ ವಡ್ಡನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸಾವಿತ್ರಮ್ಮ

ಸಾವಿತ್ರಮ್ಮ

ಬೆಂಗಳೂರು: ಹಾಸ್ಯ ಲೇಖಕ ಎಂ.ಎಸ್. ನರಸಿಂಹ ಮೂರ್ತಿ ಅವರ ತಾಯಿ ಸಾವಿತ್ರಮ್ಮ (92) ಮಲ್ಲೇಶ್ವರದಲ್ಲಿ ನಿಧನರಾದರು.

ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಸುಮನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಲಕ್ಷ್ಮೀ



ಶ್ರೀಲಕ್ಷ್ಮೀ

ಬೆಂಗಳೂರು: ತ್ಯಾಗರಾಜ ನಗರದ ನಿವಾಸಿ ಶ್ರೀಲಕ್ಷ್ಮೀ (80) ಇತ್ತೀಚೆಗೆ ನಿಧನರಾದರು.

ಇವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಮೈಸೂರು ರಸ್ತೆಯ ಗುಡ್ಡದಹಳ್ಳಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪನಿರ್ದೇಶಕರ ಕಛೇರಿ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ: 206, 2ನೇ ಮಹಡಿ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು-562110, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ: ಮಮಅಇ/ಉನಿಬೆಂಗ್ರಾ/ಟೆ.ಪ್ರ/2021-22 ದಿನಾಂಕ: 20-04-2021

ಟೆಂಡರ್ ಪ್ರಕಟಣೆ

2021-22 ನೇ ಸಾಲಿಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ನೋಂದಾಯಿತ ಟೆಂಡರ್‌ದಾರರನ್ನು ಗುರುತಿಸಬೇಕಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆಯನ್ನು ಇ-ಪೋರ್ಟಲ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಅಥವಾ ಉಪ ನಿರ್ದೇಶಕರ ಕಛೇರಿ, ಕೊಠಡಿ ಸಂಖ್ಯೆ:206, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/28/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಸ್ತೆ ಮೇಲೆಯೇ ಹರಿದ ನೀರು • ಹಲವೆಡೆ ಕೆಲ ಹೊತ್ತು ವಿದ್ಯುತ್ ಸಂಪರ್ಕ ಕಡಿತ

ಜೋರು ಮಳೆಗೆ ತಂಪಾದ ನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಪ್ರದೇಶಗಳಲ್ಲಿ ಮಂಗಳವಾರ ಸಂಜೆ ಗಾಳಿ ಸಹಿತ ಜೋರು ಮಳೆ ಸುರಿಯಿತು.

ಕೆಲ ದಿನಗಳಿಂದ ನಗರದಲ್ಲಿ ಬಿಸಿಲು ಹೆಚ್ಚಿತ್ತು. ಆಗಾಗ ಮೋಡ ಕವಿದ ವಾತಾವರಣವೂ ಕಾಣಿಸಿಕೊಳ್ಳುತ್ತಿತ್ತು. ಮಂಗಳವಾರ ಸಂಜೆ 5ರ ನಂತರ ಜಿಟಿ ಜಿಟಿಯಾಗಿ ಮಳೆ ಆರಂಭವಾಯಿತು. ಗಂಟೆಯವರೆಗೆ ಮಳೆ ಅಬ್ಬರ ಜೋರಾಗಿ, ನಗರದಲ್ಲಿ ತಂಪಾಯಿತು.

ರಾಜಾಜಿನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರ ನಗರ, ಮಲ್ಲೇಶ್ವರ, ಕಾಮಾಕ್ಷಿಪಾಳ್ಯ, ಮೆಜೆಸ್ಟಿಕ್, ಗಾಂಧಿನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ವಿಲ್ಸನ್ ಗಾರ್ಡನ್, ಲಾಲ್‌ಬಾಗ್, ಕೋರಮಂಗಲ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಪ್ರಮಾಣ ಹೆಚ್ಚಿತ್ತು.

ಮೆಜೆಸ್ಟಿಕ್, ಬಸವೇಶ್ವರನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ರಸ್ತೆ ಮೇಲೆಯೇ ನೀರು ಹರಿಯಿತು. ಹಲವೆಡೆ ಕಾಮಗಾರಿಗಳು ನಡೆಯುತ್ತಿದ್ದು, ಆ ಸ್ಥಳದಲ್ಲಿ ನೀರು ಹರಿಯಿತು. ಇದರಿಂದಾಗಿ ಕಾಮಗಾರಿ ಮಣ್ಣು ರಸ್ತೆ ಮೇಲೆ ಹರಡಿಕೊಂಡಿತ್ತು.

ಬೆಂಗಳೂರು – ಮೈಸೂರು ರಸ್ತೆಯಲ್ಲಿ ಮಳೆಯಲ್ಲಿಯೇ ದಂಪತಿಯೊಬ್ಬರು ಕೊಡೆ ಹಿಡಿದುಕೊಂಡು ದ್ವಿಚಕ್ರ ವಾಹನದಲ್ಲಿ ಸಾಗಿದರು

ಪ್ರಜಾವಾಣಿ ಚಿತ್ರ : ಅನೂಪ್ ರಾಘ್. ಟಿ.

ಸಾರ್ವಜನಿಕರ ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಯಿತು.

ಕೆಲಸ ಮುಗಿಸಿ ಬಹುತೇಕರು ಸಂಜೆಯೇ ಮನೆಯತ್ತ ಹೊರಟಿದ್ದರು. ಅದೇ ಸಂದರ್ಭದಲ್ಲೇ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಮೆಜೆಸ್ಟಿಕ್, ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಕೆಲ ನಿಮಿಷ ವಾಹನಗಳ ದಟ್ಟಣೆ ಕಂಡುಬಂತು.

'ಕೆಲ ದಿನಗಳಿಂದ ಸಂಜೆ ಸಂದರ್ಭದಲ್ಲಿ ಮಳೆಯಾಗುವ ಲಕ್ಷಣಗಳು ಗೋಚರಿಸುತ್ತಿದ್ದವು. ಆದರೆ, ಮಳೆ ಆಗಿರಲಿಲ್ಲ. ಮಂಗಳವಾರ ಸಂಜೆ ಮಾತ್ರ ನಗರದ ಬಹುತೇಕ ಕಡೆ ಮಳೆ ಆಗಿದೆ. ರಸ್ತೆಯಲ್ಲಿ ನೀರು ನಿಂತಿದ್ದ ದೂರುಗಳು ಬಿಟ್ಟರೆ, ಬೇರೆ ಯಾವ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ನೀರು ನಿಂತ ಕಡೆ ಸಿಬ್ಬಂದಿ ತುರ್ತಾಗಿ ಕಾರ್ಯಾಚರಣೆ ನಡೆಸಿ ಸಮಸ್ಯೆ ಬಗೆಹರಿಸಿದ್ದಾರೆ. ಕೊರೊನಾ ಸೋಂಕಿತರ ಕರೆಗಳ ನಡುವೆಯೂ ಮಳೆ ಸಂಬಂಧಿತವಾಗಿ ಬಂದ ಕರೆಗಳನ್ನು ಸ್ವೀಕರಿಸಿ ಆಯಾ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ರವಾನಿಸಲಾಗಿದೆ' ಎಂದೂ ತಿಳಿಸಿದರು.

ವಿದ್ಯುತ್ ಸಂಪರ್ಕ ಕಡಿತ: ಮಳೆ ಜೊತೆಯಲ್ಲೇ ಗಾಳಿ ಜೋರಾಗಿ ಬೀಸಿತು. ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರನಗರ, ವಿಜಯನಗರ ಹಾಗೂ ಸುತ್ತಮುತ್ತ ಕೆಲ ಸ್ಥಳಗಳಲ್ಲಿ ಕೆಲ ಹೊತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು.

ನಗರದ ಕೆಲವೆಡೆ ವಿದ್ಯುತ್ ತಂತಿಗಳು ಒಂದಕ್ಕೊಂದು ತಾಗಿ ಸಂಪರ್ಕ ಕಡಿತವಾಗಿತ್ತು. ಬೆಸ್ಕಾಂ ಸಿಬ್ಬಂದಿ, ಮಳೆ ನಿಂತ ನಂತರ ದುರಸ್ತಿ ಕಾರ್ಯ ಕೈಗೊಂಡು ಯಥಾಪ್ರಕಾರ ವಿದ್ಯುತ್ ಸರಬರಾಜು ಮಾಡಿದರು.

ಗ್ರಾಮಸ್ಥರಿಂದ ಅಂಡರ್‌ಪಾಸ್ ಸ್ವಚ್ಛ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ದಾಸನಪುರ ಹೋಬಳಿಯ ಚಿಕ್ಕಬಿದರಕಲ್ಲು ಗ್ರಾಮದ ಅಂಡರ್‌ಪಾಸ್‌ನಲ್ಲಿ ಬಹುದಿನಗಳಿಂದ ರಾಶಿ ಬಿದ್ದಿದ್ದ ಕಸವನ್ನು ಗ್ರಾಮಸ್ಥರು ಸ್ವಯಂಪ್ರೇರಿತವಾಗಿ ಸೋಮವಾರ ಸ್ವಚ್ಛಗೊಳಿಸಿದರು.

'ಈ ಅಂಡರ್‌ಪಾಸ್‌ನಲ್ಲಿ ಪ್ರತಿದಿನ ಎರಡು ಸಾವಿರಕ್ಕೂ ಹೆಚ್ಚು ಜನ ಸಂಚರಿಸುತ್ತಾರೆ. ಕಸದ ದುರ್ವಾಸನೆಯಿಂದಾಗಿ ಜನ ಮೂಗು ಮುಚ್ಚಿ ಸಾಗುತ್ತಿದ್ದರು. ಇಲ್ಲಿನ ಕಸ ತೆರವು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದೆವು. ಆದರೂ, ಕ್ರಮ ಜರುಗಿಸಿಲ್ಲ. ಹಾಗಾಗಿ, ಗ್ರಾಮಸ್ಥರ ತಂಡ ಕಟ್ಟಿಕೊಂಡು ಕಸ ತೆರವು ಮಾಡಲು ಮುಂದಾದೆವು' ಎಂದು ತಂಡದ ನೇತೃತ್ವ ವಹಿಸಿದ್ದ ಚಿಕ್ಕಬಿದರಕಲ್ಲು ಗ್ರಾಮದ ಜಿ.ಪಿ.ನಾರಾಯಣಪ್ಪ ತಿಳಿಸಿದರು.

ಚಿಕ್ಕಬಿದರಕಲ್ಲು ಅಂಡರ್‌ಪಾಸ್‌ನಲ್ಲಿ ಚಿತ್ತಾರ ಬಿಡಿಸಿದ ವಿದ್ಯಾರ್ಥಿಗಳು

'ಪ್ರತಿ ಕೆಲಸವನ್ನು ಅವರು ಬಂದು ಮಾಡ್ತಾರೆ, ಇವರು ಬಂದು ಮಾಡ್ತಾರೆ ಎಂದು ಕಾಯುತ್ತಾ ಕುಳಿತರೆ, ಗ್ರಾಮದ ಸಮಸ್ಯೆಗಳು ಹಾಗೆಯೇ ಉಳಿಯುತ್ತವೆ. ಕಸದಿಂದ ಆರೋಗ್ಯ ಸಮಸ್ಯೆಗಳೂ ಕಾಡುತ್ತವೆ. ಜನರೂ ಕೈಜೋಡಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ವಿಜಯಲಕ್ಷ್ಮಿ ತಿಳಿಸಿದರು.

'ಸ್ವಚ್ಛಗೊಂಡ ಅಂಡರ್‌ಪಾಸ್‌ನಲ್ಲಿ ಚಿತ್ರಗಳನ್ನು ಬಿಡಿಸಲು ಸ್ನೇಹಿತರನ್ನು ಸೇರಿಸಿಕೊಂಡೆ. ಎಲ್ಲರೂ ಒಟ್ಟಾಗಿ ಚಿತ್ತಾರಗಳನ್ನು ಬಿಡಿಸಿದ್ದೇವೆ. ಈಗ ಇಲ್ಲಿ ಯಾರೂ ಕಸ ಹಾಕುತ್ತಿಲ್ಲ' ಎಂದು ಎಂಜಿನಿಯರಿಂಗ್ ವಿದ್ಯಾರ್ಥಿ ಚೇತನ್ ಸಂತಸ ವ್ಯಕ್ತಪಡಿಸಿದರು.

ವಿಮಾನ ನಿಲ್ದಾಣದಲ್ಲಿ ಮೂರು ಕೋವಿಡ್ ಲಸಿಕಾ ಕೇಂದ್ರ

ದೊಡ್ಡಬಳ್ಳಾಪುರ: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಲಾಗಿರುವ ಕೋವಿಡ್ ಲಸಿಕಾ ಕೇಂದ್ರಕ್ಕೆ ಮಂಗಳವಾರ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಭೇಟಿ ನೀಡಿ ಪರಿಶೀಲಿಸಿದರು.

ಭೇಟಿಯ ನಂತರ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಈ ಹಿಂದೆ ವಿಮಾನ ನಿಲ್ದಾಣದಲ್ಲಿ ತಾತ್ಕಾಲಿಕವಾಗಿ ತೆರೆಯಲಾದ ಕೋವಿಡ್ ಲಸಿಕಾ ಕೇಂದ್ರದಲ್ಲಿ 115 ಜನರಿಗೆ ಲಸಿಕೆಯನ್ನು ನೀಡಲಾಗಿದೆ. ಈ ಕೇಂದ್ರವನ್ನು ಸ್ಥಗಿತಗೊಳಿಸಿ ಮೂರು ಘಟಕ ಇರುವ ಹೊಸ ಕೋವಿಡ್ ಲಸಿಕಾ ಕೇಂದ್ರವನ್ನು ಪಾರ್ಕಿಂಗ್ ಸ್ಥಳದ ಬಳಿ ಸ್ಥಾಪಿಸಲಾಗಿದೆ ಎಂದರು.

ಹೊಸ ಕೇಂದ್ರದಲ್ಲಿ ಪ್ರತಿದಿನ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಲಸಿಕೆ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸಾರ್ವತ್ರಿಕ ತೇರ್ಗಡೆ: 'ಕ್ಯಾಮ್ಸ್' ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: '2020–21ನೇ ಸಾಲಿನಲ್ಲಿ 1ರಿಂದ 9ರವರೆಗಿನ ತರಗತಿಗಳಿಗೆ ದಾಖಲಾತಿ ಆಗದೇ ಇರುವ ವಿದ್ಯಾರ್ಥಿಗಳನ್ನೂ ಸಾರ್ವತ್ರಿಕವಾಗಿ ತೇರ್ಗಡೆ ಮಾಡುವುದರಿಂದ ಸರ್ಕಾರದ ತೀರ್ಮಾನಕ್ಕೆ ಕರ್ನಾಟಕ ಖಾಸಗಿ ಪ್ರಾಥಮಿಕ, ಪ್ರೌಢ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ವಿರೋಧ ವ್ಯಕ್ತಪಡಿಸಿದೆ.

ಅಲ್ಲದೆ, 6ರಿಂದ 9ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಸಂಕಲನಾತ್ಮಕ ಪರೀಕ್ಷೆಗೆ ಅವಕಾಶ ಮಾಡಿಕೊಡಬೇಕು ಎಂದೂ ಬೇಡಿಕೆ ಇಟ್ಟಿದೆ. ಈ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಪತ್ರ ಬರೆದಿದ್ದಾರೆ.

'2020–21ನೇ ಸಾಲಿನಲ್ಲಿ ಅನೇಕ ವಿದ್ಯಾರ್ಥಿಗಳು ಶಾಲೆಗಳಲ್ಲಿ ದಾಖಲಾತಿ ಮಾಡಿಕೊಳ್ಳದೆ ಹೊರಗೆ ಉಳಿದಿದ್ದಾರೆ. ಆ ಮೂಲಕ, ನಿರಂತರ ಕಲಿಕಾ ವ್ಯವಸ್ಥೆಯಲ್ಲಿ ಅವರು ಭಾಗಿ ಆಗಿಲ್ಲ. ಹಲವು ಪೋಷಕರು ತಮ್ಮ ಮಕ್ಕಳನ್ನು ಕೋವಿಡ್ ಕಾರಣದಿಂದ ಮನೆಯಲ್ಲೇ ಇರಿಸಿಕೊಂಡಿರುವ ಬಗ್ಗೆ ಲಿಖಿತವಾಗಿ ತಿಳಿಸಿದ್ದಾರೆ. ಅನೇಕರು ಶುಲ್ಕ ಕಟ್ಟಲು ಕಷ್ಟವಾಗುತ್ತದೆ ಎಂದು ಮಕ್ಕಳನ್ನು ದಾಖಲಾತಿ ಮಾಡಿಕೊಂಡಿಲ್ಲ. ಕೆಲವರು ನೇರ ತರಗತಿ ನಡೆಯುತ್ತಿಲ್ಲ ಎಂದು ಶುಲ್ಕ ಕಟ್ಟಿಲ್ಲ. ಸರ್ಕಾರ ಶೇ 30ರಷ್ಟು ಶುಲ್ಕ ವಿನಾಯಿತಿ ನೀಡಿದ್ದರೂ ಸಾರ್ವತ್ರಿಕವಾಗಿ ಪಾಸ್ ಮಾಡುತ್ತದೆ ಎಂಬ ಕಾರಣಕ್ಕೆ ಶುಲ್ಕ ಕಟ್ಟದವರೂ ಇದ್ದಾರೆ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ಆಯಾ ಶಾಲೆಗಳಲ್ಲಿ ಕನಿಷ್ಠ ಶುಲ್ಕ ಕಟ್ಟಿ ನಿರಂತರ ಶಿಕ್ಷಣದಲ್ಲಿ ಭಾಗವಹಿಸದ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಬಡ್ತಿ ನೀಡಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿರುವ ಅವರು, 'ಅಂಥ ಮಕ್ಕಳನ್ನು ಕಳೆದ ತರಗತಿಯಲ್ಲಿಯೇ ಅನಿವಾರ್ಯವಾಗಿ ಇರಿಸಬೇಕಾಗುತ್ತದೆ. ಮುಂದಿನ ತರಗತಿಗೆ ಕಡ್ಡಾಯ ಬಡ್ತಿ ಕಷ್ಟಸಾಧ್ಯ' ಎಂದಿದ್ದಾರೆ.

'ಸರ್ಕಾರ ತಮ್ಮ ಹಂತದಲ್ಲಿ ಈ ವಿದ್ಯಾರ್ಥಿಗಳಿಗೆ ಬಡ್ತಿ ನೀಡದೆ, ಸರ್ಕಾರ ಸೂಚಿಸಿದಂತೆ ಕನಿಷ್ಠ ಶುಲ್ಕ ಪಾವತಿಸಿದ ಮತ್ತು ಕನಿಷ್ಠ ಕಲಿಕೆಯಲ್ಲಿ ಭಾಗವಹಿಸಿದವರಿಗೆ ಆನ್‌ಲೈನ್ ಮೂಲಕ ಸಂಕಲನಾತ್ಮಕ ಪರೀಕ್ಷೆ ನಡೆಸಿ ಮುಂದಿನ ತರಗತಿಗೆ ಬಡ್ತಿ ನೀಡಲು ಅವಕಾಶ ನೀಡಬೇಕು' ಎಂದೂ ಒಕ್ಕೂಟ ಆಗ್ರಹಿಸಿದೆ.

'ಸರ್ಕಾರದ ತೀರ್ಮಾನ ಕಾನೂನುಬದ್ಧ'

'1ರಿಂದ 9ನೇ ತರಗತಿವರೆಗಿನ ಮಕ್ಕಳನ್ನು ಯಾವುದೇ ಆನ್‌ಲೈನ್, ಆಫ್‌ಲೈನ್ ಪರೀಕ್ಷೆ ಇಲ್ಲದೆ ಮೌಲ್ಯಾಂಕನದ ಮೂಲಕ ಮುಂದಿನ ತರಗತಿಗೆ ತೇರ್ಗಡೆ ಮಾಡುವ ಸರ್ಕಾರದ ತೀರ್ಮಾನ ಶಿಕ್ಷಣ ಹಕ್ಕು ಕಾಯ್ದೆಯ ಮೂಲ ಆಶಯಕ್ಕೆ ಪೂರಕವಾಗಿದೆ. ಈ ತೀರ್ಮಾನ ಕಾನೂನು ಬದ್ಧವಾಗಿದೆ' ಎಂದು ಅಭಿವೃದ್ಧಿ ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ ಹೇಳಿದ್ದಾರೆ.

'ಮುಂದಿನ ಶೈಕ್ಷಣಿಕ ವರ್ಷಕ್ಕೆ, ಕಲಿಕಾ ವಿಶ್ಲೇಷಣೆಗಳ ಆಧಾರದಲ್ಲಿ ಶಿಕ್ಷಣ ಇಲಾಖೆ ಕಾರ್ಯಯೋಜನೆಯೊಂದನ್ನು ತಯಾರಿಸಿ, ಶಿಕ್ಷಕರು ಮಾಡಿಕೊಳ್ಳಬೇಕಾದ ಸಿದ್ಧತೆ ಹಾಗು ವ್ಯವಸ್ಥೆಗಳನ್ನು ಆನ್‌ಲೈನ್ ಮತ್ತು ಇತರೆ ಸಾಮಾಜಿಕ ಜಾಲತಾಣಗಳ ಮೂಲಕ ರಜೆ ಅವಧಿಯಲ್ಲಿ ತರಬೇತಿ ನೀಡಿದರೆ ಶಾಲೆಗಳು ಆರಂಭವಾದ ತಕ್ಷಣ ಕಾರ್ಯಸನ್ನದ್ಧರಾಗಲು ಸಹಾಯವಾಗಲಿದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ನಿಧನ ವಾರ್ತೆ

ಪುಸ್ತಕ ವ್ಯಾಪಾರಿ ಶ್ರೀನಿವಾಸ್



ಬೆಂಗಳೂರು: ಪುಸ್ತಕ ವ್ಯಾಪಾರಿ ಶ್ರೀನಿವಾಸ್ (ಪುವ್ಯಾಶ್ರೀ) ಎಂದೇ ಖ್ಯಾತರಾಗಿದ್ದ ಸಿಪಿಐ ಪೂರ್ಣಾವಧಿ ಕಾರ್ಯಕರ್ತ ಯು.ಎಸ್. ಶ್ರೀನಿವಾಸ್ (88) ಮಂಗಳವಾರ ನಿಧನರಾದರು.

ಮೈಸೂರಿನ ದಿವಾನರಾಗಿದ್ದ ನಂಜುಂಡಯ್ಯ ಅವರ ಮೊಮ್ಮಗನಾದ ಶ್ರೀನಿವಾಸ್ ಅವಿವಾಹಿತರಾಗಿದ್ದರು. ಸಿಪಿಐ ಜತೆಗೆ ಜೀವನಪರ್ಯಂತ ಗುರುತಿಸಿಕೊಂಡಿದ್ದ ಅವರು, ದೇಶ, ವಿದೇಶಗಳ ಪ್ರಗತಿಪರ ಸಾಹಿತ್ಯ ಕೃತಿಗಳನ್ನು ಓದುಗರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದರು. ಈ ಕಾರಣದಿಂದಾಗಿಯೇ ಅವರು 'ಪುಸ್ತಕ ವ್ಯಾಪಾರಿ ಶ್ರೀನಿವಾಸ್' ಎಂದೇ ಪರಿಚಿತರಾಗಿದ್ದರು.

ಮಲ್ಲೇಶ್ವರದ ನಿವಾಸಿಯಾಗಿದ್ದ ಶ್ರೀನಿವಾಸ್, ಗಿರೀಶ್ ಕಾರ್ನಾಡ್ ಸೇರಿದಂತೆ ಕನ್ನಡದ ಹಲವು ಪ್ರಮುಖ ಸಾಹಿತಿಗಳ ನಿಕಟ ಒಡನಾಡಿಯಾಗಿದ್ದರು. ಮರಣಾನಂತರ ದೇಹವನ್ನು ವೈದ್ಯಕೀಯ ಸಂಶೋಧನೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ದಾನ ಮಾಡುವಂತೆ ಉಯಿಲು ಬರೆದಿದ್ದರು. ಅವರ ಇಚ್ಛೆಯಂತೆ ಕುಟುಂಬದವರು ಮೃತದೇಹವನ್ನು ನಿಮ್ಹಾನ್ಸ್‌ಗೆ ಹಸ್ತಾಂತರಿಸಿದರು.

ಗಾಳಿಯಿಂದ ಹರಡುವ ಸೋಂಕು ನಿಯಂತ್ರಿಸುವ 'ಝ್ಯೂಪ್‌ಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲರ್ಜಿ, ಕೆಮ್ಮು, ಉಸಿರಾಟದ ಸಮಸ್ಯೆ ಇರುವವರಿಗಾಗಿ ಬೆಂಗಳೂರಿನ ಪವರ್ ಫ್ಯಾಕ್ಟರ್ ಎಂಬ ಸಂಸ್ಥೆಯು ಗಾಳಿಯಿಂದ ಹರಡುವ ಸೋಂಕು ತಡೆಯುವ 'ಝ್ಯೂಪ್‌ಸಿ' ಎಂಬ ಉಪಕರಣವನ್ನು ಅಭಿವೃದ್ಧಿ ಪಡಿಸಿದೆ.

'ಸೋಂಕು ಗಾಳಿಯಿಂದಲೂ ಹರಡುತ್ತವೆ. ಅವುಗಳನ್ನು ನಿಯಂತ್ರಿಸುವ ಸಲುವಾಗಿ ಈ ಉಪಕರಣ ಅಭಿವೃದ್ಧಿಪಡಿಸಲಾಗಿದೆ. ಇದು, ನಕಾರಾತ್ಮಕ ಅಯಾನ್‌ಗಳನ್ನು ಹೊರಬಿಡುತ್ತದೆ. ಇದರಿಂದ ಸೋಂಕು ಹತ್ತಿರಕ್ಕೆ ಸುಳಿಯದು. ಈ ಸಣ್ಣದಾದ ಉಪಕರಣವನ್ನು ಕತ್ತಿನಲ್ಲಿ ಧರಿಸಬಹುದು' ಎಂದು ಪವರ್ ಫ್ಯಾಕ್ಟರ್ ಸಂಸ್ಥೆಯ ಸ್ಥಾಪಕ ಶ್ರೀರಾಮ್ ಮೊಕಾಶಿ ತಿಳಿಸಿದರು.

ಝ್ಯೂಪ್‌ಸಿ ಉಪಕರಣ

'ಧೂಳಿನ ಅಲರ್ಜಿ, ಅತಿಯಾದ ಕೆಮ್ಮು ಹಾಗೂ ಉಸಿರಾಟ ಸಮಸ್ಯೆ ಇರುವವರು ಈ ಉಪಕರಣ ಬಳಸಬಹುದು. ಇದನ್ನು ಕಳೆದ ಡಿಸೆಂಬರ್‌ನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಯಿತು. ದೇಶದಾದ್ಯಂತ ಈವರೆಗೆ 200ಕ್ಕೂ ಹೆಚ್ಚು ಮಂದಿ ಈ ಉಪಕರಣ ಖರೀದಿಸಿದ್ದು, ಉತ್ತಮ ಪ್ರತಿಕ್ರಿಯೆಗಳು ಬಂದಿವೆ. ಇದನ್ನು 20 ನಿಮಿಷದವರೆಗೆ ಚಾರ್ಜ್ ಮಾಡಿದರೆ 10 ಗಂಟೆ ಕೆಲಸ ಮಾಡುತ್ತದೆ. ಇದನ್ನು ಫ್ಲಿಪ್‌ಕಾರ್ಟ್ ಹಾಗೂ ಅಮೆಜಾನ್ ಮೂಲಕವೂ ಖರೀದಿಸಬಹುದು' ಎಂದು ಮಾಹಿತಿ ನೀಡಿದರು.

ಸಂಪರ್ಕ:6360062061

ಡಿ.ಜೆ.ಹಳ್ಳಿ ಘಟನೆ: 90 ಕ್ಲೇಮ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಜೆ.ಹಳ್ಳಿ ಹಿಂಸಾಚಾರಕ್ಕೆ ಸಂಬಂಧಿಸಿದಂತೆ 90 ಕ್ಲೇಮ್ ಅರ್ಜಿಗಳು ಬಂದಿವೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ತನಿಖೆ ಪ್ರಗತಿ ಕುರಿತ ವರದಿ ಸಲ್ಲಿಸುವಂತೆ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ನ್ಯಾಯಪೀಠ ನಿರ್ದೇಶನ ನೀಡಿತ್ತು.

ಡಿ.ಜಿ.ಹಳ್ಳಿ ಹಿಂಸಾಚಾರದಲ್ಲಿ 33 ಸರ್ಕಾರಿ ವಾಹನಗಳು, 109 ಖಾಸಗಿ ವಾಹನಗಳು ಸಂಪೂರ್ಣವಾಗಿ ಸುಟ್ಟು ನಾಶವಾಗಿದ್ದವು. 80ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದರು. ಸಾರ್ವಜನಿಕ ಆಸ್ತಿಪಾಸ್ತಿಗೂ ಹಾನಿಯಾಗಿತ್ತು.

ಆಟಿಕೆ ಮಾರಾಟ ಮಾಫಿಯಾ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: 'ನಗರದ 432 ಸ್ಥಳಗಳಲ್ಲಿ ಆಟಿಕೆ ಮಾರಾಟ ಮಾಡುವ 886 ಮಕ್ಕಳಿದ್ದು, ಭಿಕ್ಷಾಟನೆಗೆ ಅವರನ್ನು ಮಾಫಿಯಾ ತಳ್ಳುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ' ಎಂದು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ(ಕೆಎಸ್‌ಎಲ್‌ಎಸ್‌ಎ) ಹೈಕೋರ್ಟ್‌ಗೆ ವಿವರ ಸಲ್ಲಿಸಿದೆ.

ನಗರದಲ್ಲಿ ದುರ್ಬಲ ಮಕ್ಕಳ ಸಮೀಕ್ಷೆ ನಡೆಸಲು ಸ್ವಯಂ ಸೇವಕರು ಮತ್ತು ಅಧಿಕಾರಿಗಳ ತಂಡ ರಚಿಸುವಂತೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಕೆಎಸ್‌ಎಲ್‌ಎಸ್‌ಎಗೆ ನಿರ್ದೇಶನ ನೀಡಿತ್ತು.

ನಗರದಲ್ಲಿ ಆಟಿಕೆ ಮಾರಾಟ ಮಾಡಲು ಮಕ್ಕಳನ್ನು ಒತ್ತಾಯ ಪೂರ್ವಕವಾಗಿ ಇರಿಸಲಾಗಿದೆ. ಅವರಿಗೆ ಪುನರ್ವಸತಿ ಕಲ್ಪಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಲೆಟ್ಜ್‌ಕಿಟ್ ಫೌಂಡೇಷನ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು.

ಕಾನೂನು ಕಾಲೇಜು ವಿದ್ಯಾರ್ಥಿಗಳು, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಒಳಗೊಂಡ ತಂಡವನ್ನು ಕೆಎಸ್‌ಎಲ್‌ಎಸ್‌ಎ ರಚಿಸಿತ್ತು. 886 ಮಕ್ಕಳಲ್ಲಿ 720 ಮಕ್ಕಳ ಮಾಹಿತಿ ಸಂಗ್ರಹಿಸಲಾಗಿದೆ. ವಲಯವಾರು ಮಾಹಿತಿಯನ್ನು ಕೆಎಸ್‌ಎಲ್‌ಎಸ್‌ಎ ನೀಡಿದೆ. ಇವರಲ್ಲಿ 27 ಮಕ್ಕಳನ್ನು ಮಾಫಿಯಾ ಭಿಕ್ಷಾಟನೆಗೆ ದೂಡಿದೆ ಎಂದು ವರದಿ ಹೇಳಿದೆ.

ವಲಯ	ಹಾಟ್ ಸ್ಪಾಟ್‌ಗಳು	ಮಕ್ಕಳ ಸಂಖ್ಯೆ
ಬೆಂಗಳೂರು ಪೂರ್ವ	200	446
ಬೆಂಗಳೂರು ಪಶ್ಚಿಮ	52	78
ಬೆಂಗಳೂರು ದಕ್ಷಿಣ	42	84
ಬೊಮ್ಮನಹಳ್ಳಿ	18	62
ದಾಸರಹಳ್ಳಿ	15	14
ಮಹಾದೇವಪುರ	46	89
ಆರ್.ಆರ್.ನಗರ	32	54
ಯಲಹಂಕ	27	59

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ,

ನಂ.14, ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ,
ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104
ದೂರವಾಣಿ: 23300497–41159606 ಫ್ಯಾಕ್ಸ್: 23359600, Email: vjn@jscbl.com

ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು ಹಾಗೂ ಸಾಲಕ್ಕೆ ಜಾಮೀನು / ಅಡಮಾನುದಾರರು ನೀಡಿರುವವರ ಹೆಸರು ಮತ್ತು ವಿಳಾಸ

ಮೆ: ಶ್ರೀ ಸರ್ವಜ್ಞ ಎಜುಕೇಶನ್ ಸೊಸೈಟಿ. ಇದರ ಪರವಾಗಿ ಪ್ರತಿನಿಧಿಸುವ ಕಾರ್ಯದರ್ಶಿ ಶ್ರೀ ಮಹಾದೇವ್‌ಪ್ರಸಾದ್. ಬಿ.ಪಿ. S/o ಶ್ರೀ ಪರಮಶಿವಯ್ಯ. ಬಿ.ಎಸ್. ನಂ 7 & 8, 14ನೇ ಕ್ರಾಸ್, ಎಂ. ಸಿ. ಲೇಔಟ್ ವಿಜಯನಗರ, ಬೆಂಗಳೂರು–40 ಮತ್ತೊಂದು ವಿಳಾಸ ನಂ.1125/12, ಸರ್ವಿಸ್ ರಸ್ತೆ, ಹಂಪಿನಗರ (ಆರ್.ಪಿ.ಸಿ ಲೇಔಟ್), ಬೆಂಗಳೂರು–104 ಮತ್ತು **ಜಾಮೀನುದಾರರು / ಅಡಮಾನುದಾರರು** – ಲೇಟ್ ಶ್ರೀಮತಿ ಸರ್ವಮಂಗಳ W/o ಶ್ರೀ ಪರಮಶಿವಯ್ಯ. ಬಿ.ಎಸ್. ಮರಣ ಹೊಂದಿದಾಗಿನಿಂದ ಇವರ ಕಾನೂನು ಉತ್ತರಾಧಿಕಾರಿಗಳಾಗಿ ಪ್ರತಿನಿದಿಸಲ್ಪಟ್ಟ 1) ಶ್ರೀ ಪರಮಶಿವಯ್ಯ. ಬಿ.ಎಸ್. H/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 2) ಡಾ॥ ಬಿ.ಪಿ. ಮಧುಮತಿ D/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 3) ಡಾ॥ ಬಿ.ಪಿ. ರೇಣುಕಾಂಬ D/o ಲೇಟ್ ಶ್ರೀಮತಿ ಸರ್ವಮಂಗಳ, ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104. 4) ಶ್ರೀ ಮಹಾದೇವ್‌ಪ್ರಸಾದ್. ಬಿ.ಪಿ. S/o ಶ್ರೀ ಪರಮಶಿವಯ್ಯ. ಬಿ.ಎಸ್., ನಂ.29 (ಹಳೆ ನಂ.1149), 11ನೇ ಮುಖ್ಯರಸ್ತೆ, ಹಂಪಿನಗರ (ಅರ್.ಪಿ.ಸಿ.ಲೇಔಟ್), ಬೆಂಗಳೂರು–560 104.

ಸಾಲದ ಖಾತೆಗಳ ವಿವರ

BL–118 ಬಾಕಿ ಮೊತ್ತ 9,94,03,415/–(ರೂ. ಒಂಭತ್ತು ಕೋಟಿ ತೊಂಭತ್ತು ನಾಲ್ಕು ಲಕ್ಷದ ಮೂರು ಸಾವಿರದ ನಾಲ್ಕು ನೂರ ಹದಿನೈದು ಮಾತ್ರ) 17/04/2021ಕ್ಕೆ ಇದ್ದಂತೆ, ನಂತರದ ಬಡ್ಡಿ ಹಾಗೂ ಇತರೇ ವೆಚ್ಚಗಳು

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)
The Immovable House Property bearing New Municipal No.29(Old No.1149) PID No.34-112-29, 11th Main Road, Railway Line, Pipeline R.P.C Layout, Vijayanagara, PID No.34-112-29, Bangalore. Measuring East to West 90 feet North to south 60 feet in all measuring 5400 Sq. Ft. Bounded on: East By: Road, West By: Site No.1126, North By: Site No.1148, South By: Site No.1150	ದಿನಾಂಕ:12/05/2021, ಬುಧವಾರ, ಬೆಳಗ್ಗೆ 11.30 ಘಂಟೆಗೆ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ., ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104	ರೂ.10,17,57,000/–(ರೂ ಹತ್ತು ಕೋಟಿ ಹದಿನೇಳು ಲಕ್ಷದ ಐವತ್ತೇಳು ಸಾವಿರ ಮಾತ್ರ) ರೂ.1,01,75,700/– (ಮೀಸಲು ಬೆಲೆಯ ಶೇ.10) (ರೂ ಒಂದು ಕೋಟಿ ಒಂದು ಲಕ್ಷದ ಎಪ್ಪತ್ತೈದು ಸಾವಿರದ ಏಳುನೂರು ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 11/05/2021, 5:30 ಪಿ.ಎಂ. ಮುಂಚೆ ಪಾವತಿಸಿ ರಸೀದಿ ಪಡೆಯುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್‌ದಾರರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಎಲ್ಲರ ಸಮ್ಮುಖದಲ್ಲಿ ದಿನಾಂಕ:12/05/2021, ಬುಧವಾರ, 11.30 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಗಳನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್‌ದಾರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ಧೃಡೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ವಿಜಯಿಯಾದ ಬಿಡ್ಡುದಾರರು ತನ್ನ ಪರವಾಗಿ ನೊಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮನ್ಯ ಮುದ್ರಾಂಕ ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.
8. ಸದರಿ ಸ್ಥಿರಾಸ್ತಿಯ ಬಗ್ಗೆ ಬಾಕಿ ಇರುವ ಸ್ಥಿರಾಸ್ತಿ ತೆರಿಗೆ ಮತ್ತು ಇತರೆ ಖರ್ಚುಗಳಿಗೆ ಹಾಗೂ ಇತರೆ ಯಾವುದೇ ಸಾಲಗಳಿಗೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ. ಬಿಡ್ಡುದಾರರು ಇಚ್ಛಿಸಿದ ಆಧಾರದ ಮೇಲೆ ಮತ್ತು ಸೆಕ್ಯೂರಿಟೈಸೇಷನ್ ಅಧಿನಿಯಮ–2002 ರಲ್ಲಿ ನಿಗಧಿಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮಾರಾಟ ಮಾಡಲಾಗುತ್ತದೆ.
9. ಹರಾಜು ಮಾಡಲಿರುವ ಸ್ಥಿರಾಸ್ತಿಯನ್ನು ಬಿಡ್ಡುದಾರರು ಆಡಳಿತ ಕಛೇರಿಯಲ್ಲಿ ಅಧಿಕೃತ ಅಧಿಕಾರಿಯನ್ನು ದೂ.ಸಂ. 23300497, 41159606, ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಬಿಡ್ಡುದಾರರು ಆಸ್ತಿಯ ಬಗ್ಗೆ ವಿಚಾರಿಸುವ ಮತ್ತು ಆಸ್ತಿಯ ಮೇಲಿನ ಸಾಲದ ವಿವರಗಳನ್ನು ಪಡೆಯಲು ಸ್ವತಂತ್ರರಿರುತ್ತಾರೆ.
10. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
11. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.
12. ಡಿ.ಆರ್.ಟಿ/ಡಿ.ಆರ್.ಎ.ಟಿ/ಹೈಕೋರ್ಟ್ ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಗಳ ಅನ್ವಯ ಈ ಹರಾಜಿಗೆ ತಡೆಯಾಜ್ಞೆ ನೀಡಿದರೆ ಈ ಹರಾಜನ್ನು ಮುಂದೂಡಲಾಗುವುದು ಅಥವಾ ರದ್ದು ಮಾಡಲಾಗುವುದು, ಹರಾಜಿನ ಮುಂದೂಡಿಕೆ ಅಥವಾ ರದ್ದು ಆದಾಗ ಹರಾಜಿನಲ್ಲಿ ಭಾಗವಹಿಸುವವರು ಯಾವುದೇ ರೀತಿಯ ನಷ್ಟ ಪರಿಹಾರ ಅಥವಾ ಮೊತ್ತವನ್ನು ಪಡೆಯುವ ಹಕ್ಕು ಹೊಂದಿರುವುದಿಲ್ಲ.
13. ಪೂರ್ಣವಾಗಿ ಬಾಕಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಮೇಲೆ ತಿಳಿಸಿರುವ ದಿನಾಂಕದಂದು ಹರಾಜು ನಡೆಸುವ ಬಗ್ಗೆ ಸದರಿಯವರು (ಸಾಲಗಾರರು, ಜಾಮೀನುದಾರರು ಅಥವಾ ಈಡುದಾರರು) ಇದನ್ನು ನೋಟೀಸೆಂದು ಪರಿಗಣಿಸಬೇಕು.

ಬಿಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿ, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ನಂ 14 ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560 104. ದೂರವಾಣಿ: 23300497, 41159606 ಫ್ಯಾಕ್ಸ್: 23359600 Email: vjn@jscbl.com**

ಸ್ಥಳ : ಬೆಂಗಳೂರು
ದಿನಾಂಕ : 20–04–2021

ಸಹಿ/– ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟವ್ ಬ್ಯಾಂಕ್ ಲಿ,

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ.
URBAN DEVELOPMENT AUTHORITY KALABURAGI

ಕುಸನೂರ ವಸತಿ ಯೋಜನೆ – KUSNOOR RESIDENTIAL SCHEME

(ಕುಸನೂರ ಗ್ರಾಮದ ಸರ್ವೆ ಸಂಖ್ಯೆಗಳು / Kusnoor Village Survey No's 123 ಭಾಗ, 128/1, 128/2, 129, 130/1,130/2, 130/3, 131/1, 131/2, 131/3, 131/4, 131/5, 131/8, 131/10, 131/11 ಮತ್ತು 131/2)

ಸಂಖ್ಯೆ: ಕನಪ್ರಾ/ನಿ.ಹಂಚಿಕೆ/ಕುಸನೂರ/2020–21 ದಿನಾಂಕ: 07–04–2021

ಅಧಿಸೂಚನೆ

ಅರ್ಜಿಗಳನ್ನು ದಿನಾಂಕ 15–04–2021 ರಿಂದ 13–05–2021ರ ವರೆಗೆ ಪ್ರಾಧಿಕಾರದ ಕಛೇರಿಯ ಸಮಯದಲ್ಲಿ ವಿತರಿಸಲಾಗುವುದು

ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 15–05–2021ರ ವರೆಗೆ ಕಛೇರಿ ಸಮಯದಲ್ಲಿ ಪ್ರಾಧಿಕಾರದ ಕಛೇರಿಯಲ್ಲಿ ಸ್ವೀಕರಿಸಲಾಗುವುದು.

ಕುಸನೂರ ವಸತಿ ಯೋಜನೆ ನಿವೇಶನಗಳ ಹಂಚಿಕೆ

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರವು ಕಲಬುರಗಿಯಿಂದ ಶಹಾಬಾದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ನಂದೂರ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿಯ ಬಿಸ್ಕಿಟ್ ಕಾರ್ಖಾನೆ ಪಕ್ಕದ ರಸ್ತೆಗೆ ಸಂಪರ್ಕವಿರುವ ಕುಸನೂರ ವಸತಿ ಯೋಜನೆಯನ್ನು ಅಭಿವೃದ್ಧಿಗೊಳಿಸುತ್ತಿದ್ದು ಅದರಲ್ಲಿ ಉತ್ತಮ ರಸ್ತೆಗಳು, ದಾರಿ ದೀಪಗಳು, ಒಳ ಚರಂಡಿ ಸೌಲಭ್ಯಗಳು, ಕುಡಿಯುವ ನೀರು ಸರಬರಾಜು ಮತ್ತು ನಗರದ ಜನತೆಗೆ ಒಳ್ಳೆಯ ಸುಸಜ್ಜಿತ ಅಧಿಕೃತ ನಿವೇಶನಗಳನ್ನು ಒದಗಿಸುವ ಉದ್ದೇಶದಿಂದ ನಿವೇಶನ ಹಂಚಿಕೆಗಾಗಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

–: ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ವಿವರಗಳು :–

ಕ್ರ ಸಂ.	ಅಳತೆ ಮೀಟರಗಳಲ್ಲಿ	ನಿವೇಶನಗಳ ಸಂಖ್ಯೆ (ಅಂದಾಜು)	ನಿವೇಶನದ ಮೌಲ್ಯ	ನೊಂದಣಿ ಶುಲ್ಕ	ಅರ್ಜಿಯೊಂದಿಗೆ ಪ್ರಾರಂಭಿಕ ಠೇವಣಿ ಹಣ: ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಸೇರಿದವರು ಮಾಜಿ ಸೈನಿಕರು ಮೃತ ಸೈನಿಕರ ಕುಟುಂಬದ ಸದಸ್ಯರು ಮತ್ತು ಕೇಂದ್ರ ಸಶತ್ರ ಪಡೆಯ ಸದಸ್ಯರು, ಸ್ಥಳಾಂತರಿತ ರಕ್ಷಣಾ ಸಿಬ್ಬಂದಿ ಮತ್ತು ಸೇವೆ ಸಲ್ಲಿಸುತ್ತಿರುವಾಗ ಮೃತರಾದ ರಕ್ಷಣಾ ಸಿಬ್ಬಂದಿ ಪತಿ, ಪತ್ನಿಯರು ಠೇವಣಿ ಇಡಬೇಕಾದ ಹಣ ನಿವೇಶನ ಮೌಲ್ಯದ ಶೇ. 3% ರಷ್ಟು	ಅರ್ಜಿಯೊಂದಿಗೆ ಪ್ರಾರಂಭಿಕ ಠೇವಣಿ ಹಣ: ಇತರರಿಗೆ ನಿವೇಶನ ಮೌಲ್ಯದ ಶೇ. 10 ರಷ್ಟು	ಅರ್ಜಿ ಶುಲ್ಕ
1.	12x18 Mtr	139	13,50,000/-	1000/-	40,500/-	1,35,000/-	500/-
2.	9x15 Mtr	183	8,44,000/-	500/-	25,320/-	84,400/-	300/-
3.	9x12 Mtr	556	6,75,000/-	500/-	20,250/-	67,500/-	300/-
4.	6x9 Mtr ಆರ್ಥಿಕ ಹಿಂ. ವರ್ಗ	286	2,82,000/-	300/-	8,460/-	28,200/-	200/-
5.	6x9 Mtr ಪ.ಜಾ/ಪ.ಪಂ.	123	1,41,000/-	200/-	4,230/-	-	100/-

ನಿಯಮ ಮತ್ತು ನಿಬಂಧನೆಗಳ ಸಂಪೂರ್ಣ ಮಾಹಿತಿಯನ್ನು ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸಿ ಪಡೆಯಬೇಕು. ಪೂರ್ಣ ರೀತಿಯಲ್ಲಿ ಭರ್ತಿ ಮಾಡಿದಂತಹ ಅರ್ಜಿಗಳನ್ನು ಮೇಲೆ ತಿಳಿಸಲಾದ **ಇ.ಎಂ.ಡಿ. ಮೊತ್ತದ ಡಿ.ಡಿ.** ಇತರೆ ದಾಖಲೆಗಳೊಂಗೆ **ದಿನಾಂಕ: 15–05–2021ರ ವರೆಗೆ** ಕಛೇರಿ ಸಮಯದಲ್ಲಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/– (ಎಂ. ರಾಚಪ್ಪ) ಕೆ.ಎ.ಎಸ್. ಆಯುಕ್ತರು,
ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ.

ಸಹಿ/– (ದಯಾಘನ್ ಧಾರವಾಢಕರ್) ಅಧ್ಯಕ್ಷರು,
ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ.

ಎರಡನೇ ವರ್ಷದ ಚಿರಸ್ಮರಣೆ



ಡಾ॥ ಎಸ್. ಆರ್. ನಾಗರಾಜ ರೆಡ್ಡಿ
ಛೇರ್ಮನ್: ಜೆ. ಆರ್. ಗ್ರೂಪ್ ಆಫ್ ಕಂಪನೀಸ್

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾಯಿತು,
ನಿಮ್ಮ ಇರುವಿಕೆಯ ನೆನಪಿನ ನಿಶಬ್ದದ ಕಣ್ಣೀರಿನ ಹನಿಯಲ್ಲಿ, ನಿಮ್ಮ ಸ್ವರ್ಗೀಯ ನೆನಪು
ಸದಾ ವಸಂತ, ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ಸದಾ ಸ್ಮರಿಸುವ
ಧರ್ಮಪತ್ನಿ ಶ್ರೀಮತಿ ಕೆ. ಜೆ. ಯಶೋದ ಮತ್ತು ಮಕ್ಕಳು, ಶ್ರೀಮತಿ. ರತ್ನಮ್ಮ. ಕೆ,
ಡಾ॥ ಕೆ. ಜೆ. ಪುರುಷೋತ್ತಮ್, ಡಾ॥ ಕೆ. ಜೆ. ಚಂದ್ರಶೇಖರ್,
ಕುಟುಂಬದವರು, ಬಂಧುಗಳು ಮತ್ತು ಮಿತ್ರರು.

ನಿಧನ ವಾರ್ತೆ

ಮಾಜಿ ಶಾಸಕ ಜುಲ್ಫೇಕರ್ ಹಾಸ್ಮಿ

ಬೀದರ್: ಮಾಜಿ ಶಾಸಕ ಜುಲ್ಫೇಕರ್ ಹಾಸ್ಮಿ (57) ಮೂತ್ರಪಿಂಡ ವೈಫಲ್ಯದಿಂದ ಮಂಗಳವಾರ ಬೆಳಗಿನ ಜಾವ ಹೈದರಾಬಾದ್‌ನ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ತಾಲ್ಲೂಕಿನ ಅಷ್ಟೂರಿನ ಖಬರಸ್ತಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

1994ರಲ್ಲಿ ಬಿಎಸ್‌ಪಿಯಿಂದ ಬೀದರ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಬಸವರಾಜಪ್ಪ ಅಪ್ಪ



ಕಲಬುರ್ಗಿ: ಇಲ್ಲಿನ ಶರಣಬಸವೇಶ್ವರ ದಾಸೋಹ ಮಹಾಸಂಸ್ಥಾನದ ಪೀಠಾಧಿಪತಿಯಾಗಿದ್ದ ದಿ.ದೊಡ್ಡಪ್ಪ ಅಪ್ಪ ಅವರ ಎರಡನೇ ಪುತ್ರ ಬಸವರಾಜಪ್ಪ ಅಪ್ಪ (80) ಕ್ಯಾನ್ಸರ್‌ನಿಂದ ಮಂಗಳವಾರ ನಿಧನರಾದರು.

ಇದೇ 17ರಂದು ಅವರ ಪತ್ನಿ ನಳಿನಿದೇವಿ ನಿಧನರಾಗಿದ್ದರು.

ಇವರಿಗೆ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಗೌರವ ಅಧ್ಯಕ್ಷ ಲಿಂಗರಾಜ ಅಪ್ಪ ಸೇರಿದಂತೆ ಇಬ್ಬರು ಪುತ್ರರು, ಐವರು ಪುತ್ರಿಯರು ಇದ್ದಾರೆ.

ಬಸವರಾಜಪ್ಪ ಅವರು ಪ್ರಸ್ತುತ ಪೀಠಾಧಿಪತಿಯಾಗಿರುವ ಡಾ.ಶರಣಬಸವಪ್ಪ ಅಪ್ಪ ಅವರ ತಮ್ಮ.

ಕಲಬುರ್ಗಿಯ ಗೋದುತಾಯಿ ನಗರದ ಬಳಿ ಇರುವ ಅವರ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಿಡಿಲು ಬಡಿದು ಇಬ್ಬರು ಮಕ್ಕಳಿಗೆ ಗಾಯ

ಕರಾವಳಿ ಸೇರಿ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಿವಮೊಗ್ಗ, ಮಂಡ್ಯ, ಕೊಡಗು ಜಿಲ್ಲೆಯ ವಿವಿಧೆಡೆ ಗುಡುಗು ಸಹಿತ ಮಂಗಳವಾರ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಡಿಲು ಬಡಿದು ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ.

ಶಿವಮೊಗ್ಗ ತಾಲ್ಲೂಕು ಸೇರಿದಂತೆ ಜಿಲ್ಲೆಯ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗಿದೆ. ನಗರದ ಮಿಳಘಟ್ಟದ ಮೂರನೇ ತಿರುವಿನಲ್ಲಿ ಮನೆ ಮೇಲೆ ಗಾಳಿಗೆ ತೆಂಗಿನ ಮರವೊಂದು ಉರುಳಿ ಬಿದ್ದಿದೆ. ತೀರ್ಥಹಳ್ಳಿ, ಕೋಣಂದೂರು ಸುತ್ತಮುತ್ತಲೂ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಮತ್ತು ಚಿಕ್ಕಜಾಜೂರಿನಲ್ಲಿ ಮಂಗಳವಾರ ಸಂಜೆ ಸಾಧಾರಣ ಮಳೆಯಾಗಿದೆ. ಹೊಸದುರ್ಗ ತಾಲ್ಲೂಕಿನ ಕಸಬಾ ಹಾಗೂ ಮಾಡದಕೆರೆ ಹೋಬಳಿಯಲ್ಲಿ ಗುಡುಗು, ಬಿರುಗಾಳಿ ಸಹಿತ ಮಳೆಯಾಗಿದೆ.

ಮಳೆ ಸ್ವಲ್ಪ ಹೊತ್ತಿನಲ್ಲಿಯೇ ಕ್ಷೀಣಿಸಿತು. ಅನ್ನದಾತರಲ್ಲಿ ಬೇಸರ ಉಂಟಾಯಿತು. ಬಿರುಗಾಳಿಗೆ ಕೆಲವೆಡೆ ತೆಂಗು, ಅಡಿಕೆ, ಬಾಳೆ ತೋಟ ಹಾಗೂ ಕೋಳಿಫಾರಂ, ಮನೆಗಳಿಗೆ ಹಾನಿಯಾಗಿದೆ.

ಆಲಿಕಲ್ಲು ಮಳೆ: ದಾವಣಗೆರೆ ಜಿಲ್ಲೆಯ ನ್ಯಾಮತಿ ಪಟ್ಟಣದಲ್ಲಿ ಮಂಗಳವಾರ ಮಧ್ಯಾಹ್ನ ಅರ್ಧ ತಾಸು ಗುಡುಗು ಸಹಿತ ಮಳೆ ಸುರಿಯಿತು. ಪಕ್ಕದ ಆರುಂಡಿ, ಕಂಚಿಕೊಪ್ಪ ಭಾಗದಲ್ಲಿ ಆಲಿಕಲ್ಲು ಮಳೆ ಆಗಿದೆ. ಸವಳಂಗ, ಚೀಲೂರು, ಗೋವಿನಕೋವಿ, ಚಟ್ನಹಳ್ಳಿ, ಬೆಳಗುತ್ತಿ, ಮುಸ್ಸೆನಾಳ್ ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ.

ಕೊಡಗು ಜಿಲ್ಲೆಯ ಶನಿವಾರಸಂತೆ ಸುತ್ತಮುತ್ತ ತುಂತುರು ಮಳೆಯಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲವೆಡೆ ಸೋಮವಾರ ರಾತ್ರಿ ಗುಡುಗು ಮಿಂಚು ಸಹಿತ ಮಳೆಯಾಯಿತು.

ಸಿಡಿಲು ಬಡಿದು ಇಬ್ಬರಿಗೆ ಗಾಯ: ಕರಾವಳಿ ಭಾಗದಲ್ಲಿ ಮೋಡ ಕವಿದ ವಾತಾವರಣವಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯಲ್ಲಿ ಸಿಡಿಲು ಬಡಿದು ಇಬ್ಬರು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕೊಟ್ಟಿಗೆಹಾರ, ಬೀರೂರು, ತರೀಕೆರೆಯಲ್ಲಿ ಗುಡುಗು ಸಹಿತ ಮಳೆ ಸುರಿದಿದೆ. ಕೊಪ್ಪ, ಅಜ್ಜಂಪುರ, ಕಳಸ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ. ಒಂದು ವಾರದಿಂದ ಉತ್ತಮ ಮಳೆ ಆಗುತ್ತಿದ್ದು, ಕಾಫಿ, ಕಾಳು ಮೆಣಸು ಬೆಳೆಗಳಿಗೆ ನೀರಿನ ಕೊರತೆ ನೀಗಿದೆ. ವಾತಾವರಣವೂ ತಂಪಾಗಿದ್ದು, ಸೆಕೆಯಿಂದ ಬಳಲುತ್ತಿದ್ದ ಜನರು ನಿಟ್ಟುಸಿರು ಬಿಟ್ಟಿದ್ದಾರೆ.

ಐದು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆ

ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಏ.21 ಮತ್ತು 22ರಂದು ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಕರಾವಳಿ ಭಾಗದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದು ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್.ಪಾಟೀಲ ತಿಳಿಸಿದರು.

'ಕರಾವಳಿ ಜಿಲ್ಲೆಗಳಲ್ಲಿ ಏ.25ರವರೆಗೆ ಮಳೆಯಾಗುವ ನಿರೀಕ್ಷೆ ಇದೆ. ತುಮಕೂರು, ಮೈಸೂರು, ದಾವಣಗೆರೆ, ಚಿತ್ರದುರ್ಗ ಭಾಗದಲ್ಲಿ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ. ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಸಾಧಾರಣ ಮಳೆಯಾಗಲಿದೆ' ಎಂದು ಮಾಹಿತಿ ನೀಡಿದರು.

ಮಳೆ–ಎಲ್ಲಿ, ಎಷ್ಟು?: ಚಿಕ್ಕಬಳ್ಳಾಪುರ ಜಿಲ್ಲೆಯ ತೊಂಡೇಬಾವಿ ಹಾಗೂ ತುಮಕೂರು ಜಿಲ್ಲೆಯ ಶಿರಾದಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಕಲಬುರ್ಗಿಯಲ್ಲಿ 40.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ರಾಯಚೂರು 39, ಬೀದರ್, ವಿಜಯಪುರ 38, ಚಿಂತಾಮಣಿ, ದಾವಣಗೆರೆ, ಕೊಪ್ಪಳ 36, ಮೈಸೂರು, ಮಂಡ್ಯ, ಬೆಂಗಳೂರು 35 ಹಾಗೂ ಚಿಕ್ಕಮಗಳೂರಿನಲ್ಲಿ 18.6 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಮಂಗಳವಾರ ಸುರಿದ ಮಳೆಯಲ್ಲಿಯೇ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ವಾಹನ ಸವಾರರು ಸಾಗಿದರು –ಪ್ರಜಾವಾಣಿ ಚಿತ್ರ

ಮಂಗಳೂರು ಮಹಾನಗರ ಪಾಲಿಕೆ

DMA/2021-22/WORK INDENT No.115874 ದಿನಾಂಕ: 20.04.2021

ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು 2020–21ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಮತ್ತು 2017–18ನೇ ಸಾಲಿನ 14ನೇ ಹಣಕಾಸು ಅನುದಾನದ ಉಳಿಕೆ ಮೊತ್ತ ಅನುದಾನದಲ್ಲಿ ನಿರ್ವಹಿಸುವ ಬಗ್ಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 17.05.2021 ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ https://eproc.karnataka. gov.in ಹೆಚ್ಚಿನ ವಿವರವನ್ನು ಪಡೆಯಬಹುದು. **Pre Bid Meeting Date: 10.05.2021, Time: 16:00:00**

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂಪಾಯಿ
1	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುರತ್ಕಲ್ ನಲ್ಲಿರುವ ಸ್ಮಶಾನದ ಅಭಿವೃದ್ಧಿ ಕಾಮಗಾರಿ. (Indent No. 115874)	1,80,00,000.00

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಮಂಗಳೂರು

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ಪಿ.ಹೆಚ್.ಐ. ಕಟ್ಟಡ, ಎಸ್.ಜೆ.ಪಿ. ಪಾಲಿಟೆಕ್ನಿಕ್ ಎದುರು, ಕೆ. ಆರ್. ವೃತ್ತ, ಶೇಷಾದ್ರಿ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: md.ksmscl@gmail.com

No. HFW/KSMSCL/COVID/IFQ/02/2021-22 Date: 20-04-2021

ದರಪಟ್ಟಿ ಪ್ರಕಟಣೆ

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಆಕುಕ 51 ಎಫ್.ಪಿ.ಇ 2021, ಬೆಂಗಳೂರು ದಿನಾಂಕ: 17.04.2021. 2) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/COVID/IFQ/02/2021-22 , Dated: 20.04.2021. 3) ಸರ್ಕಾರಿ ಆದೇಶ ಸಂಖ್ಯೆ: ಆಕುಕ 199 ಎಫ್.ಪಿ.ಇ 2020, ಬೆಂಗಳೂರು ದಿನಾಂಕ: 01.10.2020. 4) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/Inj.Heparin/03/2021-22, Dated:20.04.2021. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ4(ಎ) ಅಡಿಯಲ್ಲಿ ಈ ಕೆಳಕಂಡ ಔಷಧಿಯನ್ನು ಖರೀದಿಸಿ ಪೂರೈಸಲು ದರಪಟ್ಟಿಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ. **1) Quotation for supply of Ivermectin Tablet. 2) Quotation for supply of Oseltamivir Capsule. 3) Quotation for supply of Salbutamol sulphate Syrup. 4) Quotation for supply of Cough Syrup Diphenhydramine hydrochlride. 5) Quotation for supply of Inj. Low molecular weight Heparin.** ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: http://www.kdlws.kar.nic.in/ ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ದಿನಾಂಕ: **20.04.2021 to 22.04.2021** ಮತ್ತು **20.04.2021 to 26.04.2021** ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು **Password Protected PDF** ನಲ್ಲಿ ಇ–ಮೇಲ್ ಐಡಿ **ksdlwscovid-19.procurement@gmail.com** ಗೆ ದಿನಾಂಕ: 22.04.2021&26.04.2021 ರವರೆಗೆ ಸಂಜೆ 5 ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.

ವಾಸಾಸಂಇ/ಬೆಂ.ನ./ಜಿಎ/203/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕಾರ್ಯಪಾಲಕ ಇಂಜಿನಿಯರರ ಕಛೇರಿ, ಮಂಡ್ಯ,
ದೂ: 08232–222363, ಇ–ಮೇಲ್: eerwsmdy@gmail.com

ಸಂಖ್ಯೆ: ಕಾ.ಇಂ:ಗ್ರಾಕುನೀ&ನೈವಿ:ಮಂ:SWMUTIPPER/2021–22/52 ದಿನಾಂಕ: 16.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2021–22
(ದ್ವಿ–ಲಕೋಟೆ ಪದ್ಧತಿ) (E-procurement Portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ.ವಿ. ಮಂಡ್ಯರವರಿಂದ ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಯೋಜನೆಯಡಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಾಗಿ ತ್ರಿ–ಚಕ್ರ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಉತ್ಪಾದಕರು/ವಿತರಕರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:24.04.2021 ಸಂಜೆ 5.30 ಗಂಟೆಗೆ,** ಪೂರ್ವಭಾವಿ ಸಭೆ **ದಿನಾಂಕ: 20.04.2021 ಬೆಳಿಗ್ಗೆ: 11.00 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.04.2021 ಸಂಜೆ: 05.35 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 29.04.2021 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: **08232–222363.**

ಸಹಿ/– ಕಾರ್ಯಪಾಲಕ ಇಂಜಿನಿಯರರು,
ಗ್ರಾ. ಕು.ನೀ. & ನೈ. ವಿಭಾಗ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/44/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಸಾರ್ವಜನಿಕ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ. 4, ಡಿ.ಎಸ್.ಇ.ಆರ್.ಟಿ. ಕಟ್ಟಡ, ಹೊಸಕೆರೆಹಳ್ಳಿ,100 ಅಡಿ ವರ್ತುಲ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085.
ದೂರವಾಣಿ : 080-26422238/45
ಇ-ಮೇಲ್ : mdktbs.tender@gmail.com
ವೆಬ್‌ಸೈಟ್ : http://www.ktbs.kar.nic.in

ಸಂಖ್ಯೆ:A6/KTBS/DTP-Tender-10/2020-21 ದಿನಾಂಕ:20.04.2021

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2021–22ನೇ ಸಾಲಿಗೆ 1 ರಿಂದ 12 ನೇ ತರಗತಿಗಳ ಅಂದಾಜು 600 ಪಠ್ಯ ಪುಸ್ತಕಗಳ ಒಳಪುಟ ಮತ್ತು ಹೊರಪುಟಗಳ ತಿದ್ದುಪಡಿ ಮಾಡಲು ಟೆಂಡರ್ ದಸ್ತಾವೇಜಿನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಸಂಸ್ಥೆಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 05.05.2021 ರಂದು ಸಂಜೆ 5.30** ರವರೆಗೂ ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://www.eproc.karnataka.gov.in
ಸಹಾಯವಾಣಿ: 080–46010000 080–22631200
ಇಲಾಖೆಯ ವೆಬ್‌ಸೈಟ್: http://www.ktbs.kar.nic.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಮೈಸೂರು ವಿಶ್ವವಿದ್ಯಾನಿಲಯ
(4.0, ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್–2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)
Estd. 1916
ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005 website: www.uni-mysore.ac.in

ಸಂಖ್ಯೆ: ವಿಕ್ಷೇಪಾ.7/1/27(ಎ)/2021–22 ದಿನಾಂಕ: 15–04–2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
https:www.eproc.karnataka.gov.in

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ನಿವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯಕವಾಗಿರುವ ಅಡುಗೆ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧ್ಯಾದೇಶ 2000. ಅಧ್ಯಾಯ–2ರ ಅಧಿನಿಯಮ 3(1)ರಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಲು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15–05–2021 ಸಂಜೆ 05:30 ಗಂಟೆವರೆಗೆ

ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತಿದೆ: (1) ಟೆಂಡರ್ ವಿವರ: ವಿಶ್ವವಿದ್ಯಾನಿಲಯುದ ವಿದ್ಯಾರ್ಥಿನಿಲಯುಗಳಲ್ಲಿನ ನಿವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯಕವಾಗಿರುವ ಅಡುಗೆ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಪಡೆಯುಲು (2) ಇಂಡೆಂಟ್ ಸಂಖ್ಯೆ: MU/DSW/HOSTELS/ COOKS/2021-22.

ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: **0821–2419318/386/429** ರಲ್ಲಿ ಅಥವಾ ವೆಬ್‌ಸೈಟ್: **https:www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಕುಲಸಚಿವರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/55/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು–ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–04:2021–22 ದಿನಾಂಕ: 17.04.2021

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ: ಇ–ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ: 8443 ಶೇವಣಿ ವಂತಿಕೆ: (1) Construction of Play Ground and other Development works for SC Colony in Hosadurga Town, Hosadurga Taluk (WI136545)/ Call-2. ಅಂದಾಜು ಮೊತ್ತ: ರೂ. 50.00 ಲಕ್ಷಗಳು.

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 30.04.2021 ಸಮಯ 17:30. (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 03.05.2021 ಸಮಯ 16:00. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 04.05.2021 ಸಮಯ 16:01. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 065: DIPR/CTA/MCA/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:ಜೆಸ್ಕಾಂ/ಮು.ಇ.(ವಿ)/ಅ.ಅ.ವಿ.(ತಾ.)/ಕಾ.ನಿ.ಅ.ವಿ.(ತಾ.)/ಸ.ಕಾ.ನಿ.ಅ.ವಿ–1(ತಾ)/ಸ.ಅ–1(ತಾ)/2021-22/2920
ದಿನಾಂಕ: 17–04–2021

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ ವಿವರ : **TP-018 /GK-WS /2021-22 /Hospet Rural Division:** "ಕಾ ಮತ್ತು ಪಾ ಗ್ರಾಮೀಣ ವಿಭಾಗ ಹೊಸಪೇಟ ನಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ", 2) ಕಾಮಗಾರಿ ಅಂದಾಜು ಮೊತ್ತ: **ರೂ. 1377 ಲಕ್ಷ,** 3) ಗುತ್ತಿಗೆದಾರರ ಅರ್ಹತೆ ವಿವರ : ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, 4) ಇ–ಪ್ರೊಕ್ಯೂರ್ಮೆಂಟ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ: 21.04.2021 after 10.30 Hrs, 5) ಕ್ವರಿಸ್ ಸಲ್ಲಿಸುವ ಅಂತಿಮ ದಿನಾಂಕ : 30.04.2021 up to 17.30 Hrs, 6) ಪ್ರೀ ಬಿಡ್ ಮಿಟಿಂಗ್ ದಿನಾಂಕ : 04.05.2021 at 11:00 Hrs, 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 24.05.2021 up to 17.30 Hrs, 8) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 26.05.2021 at 11:00 Hrs, 9) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ : 30.05.2021 at 14:00 Hrs, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಕಾರ್ಯನಿರ್ವಾಹಕ ಅಭಿಯಂತರರು(ವಿ), ತಾಂತ್ರಿಕ ಶಾಖೆ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359013, 11) ಅಂತರಜಾಲತಾಣದ ವಿಳಾಸ : www.e-proc.karnataka.gov.in

ಸಹಿ/– ಮುಖ್ಯ ಅಭಿಯಂತರರು (ವಿ),
(ಕಾರ್ಯಾಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/74/ಎಂ.ಸಿ&ಎ/2021–22

ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ **URJA MITRA APP** ಡೌನಲೋಡ್ ಮಾಡಿಕೊಳ್ಳಿ

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:–ಜೆಸ್ಕಾಂ/ಮು.ಇ.(ವಿ)/ಅ.ಅ.ವಿ.(ತಾ.)/ಕಾ.ನಿ.ಅ.ವಿ.(ತಾ.)/ಸ.ಕಾ.ನಿ.ಅ.ವಿ–1(ತಾ)/ಸ.ಅ–1(ತಾ)/2021–22/2924 ದಿ.:17–04–2021

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ ವಿವರ : **TP-014 /GK-WS /2021-22 /Klb-2 Division:** "ಕಾ ಮತ್ತು ಪಾ ವಿಭಾಗ ಕಲಬುರಗಿ–2 ರ, ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ", 2) ಕಾಮಗಾರಿ ಅಂದಾಜು ಮೊತ್ತ : **ರೂ. 712 ಲಕ್ಷ,** 3) ಗುತ್ತಿಗೆದಾರರ ಅರ್ಹತೆ ವಿವರ : ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, 4) ಇ–ಪ್ರೊಕ್ಯೂರ್ಮೆಂಟ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ : **21.04.2021 after 10.30 Hrs,** 5) ಕ್ವರಿಸ್ ಸಲ್ಲಿಸುವ ಅಂತಿಮ ದಿನಾಂಕ : **30.04.2021 up to 17.30 Hrs,** 6) ಪ್ರೀ ಬಿಡ್ ಮಿಟಿಂಗ್ ದಿನಾಂಕ : **04.05.2021 at 11:00 Hrs,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **24.05.2021 up to 17.30 Hrs,** 8) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ **26.05.2021 at 11:00 Hrs,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30.05.2021 at 14:00 Hrs,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಕಾರ್ಯನಿರ್ವಾಹಕ ಅಭಿಯಂತರರು(ವಿ), ತಾಂತ್ರಿಕ ಶಾಖೆ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359013, 11) ಅಂತರಜಾಲತಾಣದ ವಿಳಾಸ www.e-proc.karnataka.gov.in

ಸಹಿ/– ಮುಖ್ಯ ಅಭಿಯಂತರರು (ವಿ),
(ಕಾರ್ಯಾಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/70/ಎಂ.ಸಿ&ಎ/2021–22

ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ **URJA MITRA APP** ಡೌನಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಡಿ.ದೇವರಾಜ ಅರಸು ಭವನ, ಸ್ಟೇಡಿಯಂ ರಸ್ತೆ, ಚಿತ್ರದುರ್ಗ–577501.
ದೂರವಾಣಿ ಸಂಖ್ಯೆ: 08194–235034, ಫ್ಯಾಕ್ಸ್ ನಂ. 08194–235034 E-Mail: dobcmchitradurga@gmail.com

ಸಂ: ಡಿಬಿಸಿಡಿ/ಚಿತ್ರದುರ್ಗ/ಆಹಾರಟೆಂಡರ್/ಸಿಆರ್–2/2021–22 ದಿನಾಂಕ: 16.04.2021

ಇ–ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ/ಆಶ್ರಮ ಶಾಲೆಗಳಿಗೆ 2021–22 ಸಾಲಿನಲ್ಲಿ ಬೇಕಾಗುವ ಆಹಾರ ಮತ್ತು ಇತರೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಆಸಕ್ತ ಅರ್ಹ ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ತಾಲ್ಲೂಕುವಾರು ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ದಿನಾಂಕ: 16.04.2021 ರಂದು ಹೊರಡಿಸಿದ ತಿದ್ದುಪಡಿ ವಿವರಗಳನ್ನು ಓದಿಕೊಳ್ಳುವುದು.

ಕ್ರ. ಸಂ	ತಾಲ್ಲೂಕಿನ ಹೆಸರು	ಟೆಂಡರ್ ಇಟ್ಟಿರುವ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ
1	ಚಿತ್ರದುರ್ಗ	541.75	8.13	ದಿನಾಂಕ: 31.05.2021 ಸಂಜೆ 5.00 ಗಂಟೆ
2	ಚಳ್ಳಕೆರೆ	245.19	3.68	
3	ಹಿರಿಯೂರು	207.19	3.11	
4	ಹೊಳಲ್ಕೆರೆ	170.78	2.56	
5	ಹೊಸದುರ್ಗ	179.08	2.67	
6	ಮೊಳಕಾಲ್ಮೂರು	75.02	1.50	
	ಒಟ್ಟು	**1419.01**	**21.65**	

ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ **http://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ

ವಾಸಾಸಂಇ/ಚಿತ್ರದುರ್ಗ/ಶಿರಡಿ ಸಾಯಿ/60/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ

ನಂ. ಕಾ.ನಿ.ಅ/ಗ್ರಾ.ಕು.ನೀ & ನೈ/ಬೆಳಗಾವಿ/ಪಿಬಿ–2/ಕು.ನೀ.ಸ.ಯೋ/ಕೆಡಬ್ಲ್ಯು–4/ಟೆಂಡರ್–01/2021–22/100 ದಿನಾಂಕ: 19.04.2021

ಪ್ರೊಕ್ಯೂರ್‌ಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 01/2021–22

ಉಲ್ಲೇಖ: ನಂ. ಕಾ.ನಿ.ಅ/ಗ್ರಾ.ಕು.ನೀ & ನೈ/ಬೆಳಗಾವಿ/ಪಿಬಿ–2, 4/ಕು.ನೀ.ಸ.ಯೋ/ಕೆಡಬ್ಲ್ಯು–3/ಟೆಂಡರ್–81/2020–21/4159 ದಿನಾಂಕ: 10–12–2021.

ಮೇಲಿನ ಉಲ್ಲೇಖ (1)ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗೆಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ **ದಿನಾಂಕ: 27–04–2021 ರ ಬೆಳಿಗ್ಗೆ 11:30 ಗಂಟೆವರೆಗೆ.** 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ : 05–05–2021 ರ ಸಾಯಂಕಾಲ 17.30 ಗಂಟೆವರೆಗೆ. 3)** ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 07–05–2021 ರ ಮುಂಜಾನೆ 11:00 ಗಂಟೆ ನಂತರ.** 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ**

ಕ್ರ ಸಂ.	ಇಂಡೆಂಟ್ ನಂ.	ಟೆಂಡಗರಿಟ್ಟ ಮೊತ್ತ ಲಕ್ಷ. ರೂ.	ಇ.ಎಂ.ಡಿ ಹಣ ಲಕ್ಷ. ರೂ	ಅವಧಿ	ಗುತ್ತಿಗೆದಾರರ ಕನಿಷ್ಟ ದರ್ಜೆ
1	32257/Call-2	323.69	4.86	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
2	29468/Call-2	333.75	5.01	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
3	29466/Call-2	367.64	5.51	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
4	29470/Call-2	378.22	5.67	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
5	29474/Call-2	436.59	6.55	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
6	27620/Call-2	362.19	5.43	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
7	27631/Call-2	436.50	6.55	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
8	27667/Call-2	392.18	5.88	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
9	27793/Call-2	289.27	4.34	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
10	27789/Call-2	396.21	5.94	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು
11	27779/Call-2	341.78	5.13	120 ದಿನಗಳು	1ನೇ ದರ್ಜೆ ಮತ್ತು ಮೇಲ್ಪಟ್ಟು

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-Procuremet portal / www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ. & ನೈ. ವಿಭಾಗ, ಬೆಳಗಾವಿ

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ಸಂಖ್ಯೆ: ಕಮಪಾ/ಆಶಾ/ಎಸ್.ಡಬ್ಲ್ಯೂ.ಎಮ್/2020–21 ದಿನಾಂಕ: 19-04-2021

ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ –2ನೇ ಕರೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರ ಅಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಈ ಕೆಳಗೆ ನಮೂದಿಸಿದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಒದಗಿಸಲು ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ವಹಿಸಲು ಅರ್ಹ ಬಿಡ್‌ದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ. ಈ ಕೆಳಕಂಡ ಸೇವೆಗಳಿಗೆ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಪ್ರಕಾರ ಟೆಂಡರ್ ಕರೆಯಲಾಗಿದೆ.

1) ಕಾಮಗಾರಿ/ಸೇವೆಯ ವಿವರ: Providing the service of computer operators/data entry operators on outsource basis to Kalaburagi Mahanagara Palike for the year 2020-21. ಟೆಂಡರ್‌ಗಿಟ್ಟ ಮೊತ್ತ: ರೂ. 97.06 Lakhs. ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು: ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 03-05-2021 ಸಮಯ ಸಾಯಂಕಾಲ 4.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04-05-2021 ಸಮಯ ಸಾಯಂಕಾಲ 4.35 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06-05-2021 ಸಮಯ ಬೆಳಿಗ್ಗೆ 11.30 ಗಂಟೆಯವರೆಗೆ. 2) Labour charges for attending pothole filling in various location in Kalaburagi Mahanagar Palike, Kalaburagi city for the year 2020-21. ಟೆಂಡರ್‌ಗಿಟ್ಟ ಮೊತ್ತ: ರೂ. 11.80 Lakhs. ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು: ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 03-05-2021 ಸಮಯ ಸಾಯಂಕಾಲ 4.30 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06-05-2021 ಸಮಯ ಬೆಳಿಗ್ಗೆ 11.30 ಗಂಟೆಯವರೆಗೆ. 3) Request for proposal for operation and maintenance of public toilet near truck terminal ward no: 06 on pay & use basis of Kalaburagi Mahanagar Palike, for the year 2020-21). ಟೆಂಡರಗಿಟ್ಟ ಮೊತ್ತ: 36.00 Thousand ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು: ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 03-05-2021 ಸಮಯ ಸಾಯಂಕಾಲ 4.30 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 05-05-2021 ಸಮಯ ಬೆಳಿಗ್ಗೆ 11.30 ಗಂಟೆಯವರೆಗೆ. 4) Request for proposal for operation and maintenance of public tiolet beside district court ward No: 49 on pay & use basis of Kalaburagi Mahanagar Palike, for the year 2020-21), ಟೆಂಡರಗಿಟ್ಟ ಮೊತ್ತ: 36.00 Thousand, ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು: ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 03-05-2021 ಸಮಯ ಸಾಯಂಕಾಲ 4.30 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 05-05-2021 ಸಮಯ ಬೆಳಿಗ್ಗೆ 11.30 ಗಂಟೆಯವರೆಗೆ.

ಇಎಮ್‌ಡಿ ಕುರಿತು ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್ಮೆಂಟ್‌ನಲ್ಲಿ ಪಡೆಯಬಹುದು, ಹೆಚ್ಚಿನ ವಿವರಗಳಿಗಾಗಿ: ಪರಿಸರ ಅಭಿಯುಂತರರು ಕಲಬುರಗಿ ಮಹಾನಗರ ಪಾಲಿಕೆರವರನ್ನು ಸಂಪರ್ಕಿಸಬಹುದಾಗಿದೆ. ವೆಬ್‌ಸೈಟ್: **Eproc.Karnataka.gov.in**

ಸಹಿ/– ಉಪ ಆಯುಕ್ತರು (ಅಭಿವೃದ್ಧಿ)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/64/ಎಂ.ಸಿ&ಎ/2021–22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನಾ ವಿಭಾಗ, ಹೆಬ್ಬಾಳ

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಬೆ.ತೊ.ಯೋ/ವಿಭಾಗ/ಹೆಬ್ಬಾಳ/ಪಿ.ಬಿ–3/2021–22/25 ದಿನಾಂಕ:16–04–2021

ಅಲ್ಪಾವಧಿ ಟೆಂಡರ ಅಧಿಸೂಚನೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ).

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಬೆಣ್ಣೆತೊರಾ ಯೋಜನೆಯ ವಿಶೇಷ ನಿರ್ವಹಣೆ ಅಡಿಯಲ್ಲಿ ಬರುವ 1 ಕಾಮಗಾರಿಗೆ ಇ–ಪ್ರೋಕ್ಯೂರಮೆಂಟ್ ಮುಖಾಂತರ ಟೆಂಡರಗಳನ್ನು ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರ ಈ ಕೆಳಗಿನಂತಿವೆ.

1) Name of the work : Reconstruction of Pier and Causeway of Trough Aqueduct at 17.501Km of Left Bank Canal of Bennithora Project., 2) Indent No. : 31191, 3) Amount put to tender (In Rs.) : 8603789.33, 4) EMD (In Rs.) : 86100, 5) Class of Contractor : KPWD Civil : Class-I

ಕಾಮಗಾರಿಗಳಿಗೆ ಏಕಲಕೋಟೆ ಪದ್ದತಿಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಅಹ್ವಾನಿಸಲಾಗಿದ್ದು ಟೆಂಡರಗಳನ್ನು ಪಡೆಯುವ, ಸಲ್ಲಿಸುವ ಮತ್ತು ತೆರೆಯುವ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

Calendar of events

1) The bidder can access to the e-tender document in the website www.eproc.karnataka.gov.in. : **19-04-2021 to 26-04-2021 up to 17.00 Hrs,** 2) Last Date for submission of quarries if any is on or before : **26-04-2021 at 16.00 Hrs,** 3) Date of opening of technical bid Part-I in the office of Executive Engineer, KNNL, Bennithora Division No. 4, Hebbal: **27-04-2021 at 17.30 Hrs,** 4) The Date of opening of Financial Bid Part-II: **29-04-2021** or will be intimated to the qualified bidder after the approval of Technical Bid only, 5) Bidders shall submit documents in original to the Executive Engineer, KNNL, Bennithora Division No. 4, Hebbal in a sealed cover on or before : **27-04-2021 up to 16.30 Hrs IST**

ಗುತ್ತಿಗೆದಾರರು ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **www.eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಅಂಗೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿಮಾಡಿದವರಿಗೆ ಕಛೇರಿ ಸಮಯದಲ್ಲಿ ಮತ್ತು HP ಸಂಸ್ಥೆಯ ಸಹಾಯವಾಣಿ ದೂರವಾಣಿ ಸಂಖ್ಯೆ: 080–23010900/080–23010901 ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನೆ ವಿಭಾಗ, ಹೆಬ್ಬಾಳ.

ವಾ.ಸಾ.ಸಂ.ಇ/ಕಲಬುರಗಿ/77/ಎಂ.ಸಿ&ಎ/2021–22



ಆ್ಯಪ್: ಹೂಡಿಕೆಗಳ ಸೂಪರ್‌ಮಾರ್ಕೆಟ್..!

ವಿಜಯ್ ಜೋಷಿ

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಸಾರ್ಥಕ್ (ಹೆಸರು ಬದಲಾಯಿಸಲಾಗಿದೆ) ದುಡಿಮೆ ಆರಂಭಿಸಿ ಹತ್ತು ವರ್ಷಗಳು ಸಂದಿವೆ. ಆದರೆ, ಅವರು ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಆರಂಭಿಸಿದ್ದು ಮೂರ್ನಾಲ್ಕು ವರ್ಷಗಳ ಹಿಂದೆ. 'ನಾನು ದುಡಿಮೆ ಆರಂಭಿಸಿದ ತಕ್ಷಣ ಈಕ್ವಿಟಿ ಹೂಡಿಕೆ ಆರಂಭಿಸಿದ್ದರೆ, ಈ ವೇಳೆಗೆ ಇಂದಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು, ಇಂದಿಗಿಂತ ಹೆಚ್ಚು ಷೇರುಗಳನ್ನು ಹೊಂದಿರಬಹುದಿತ್ತು' ಎಂದು ಅವರು ಆಗಾಗ ಯೋಚಿಸುವುದಿದೆ. ಹೀಗೆ ಯೋಚಿಸುತ್ತ, ತಾವು ಹತ್ತು ವರ್ಷಗಳ ಹಿಂದೆಯೇ ಹೂಡಿಕೆ ಆರಂಭಿಸಲಿಲ್ಲವೇಕೆ ಎಂಬುದಕ್ಕೆ ಅವರು ಉತ್ತರ ಕಂಡುಕೊಂಡಿದ್ದಾರೆ.



'ನಾನು ಕೆಲಸ ಆರಂಭಿಸಿದ ದಿನಗಳಲ್ಲಿ ಈಗಿನಂತೆ ಹೂಡಿಕೆಗೆ ಸಂಬಂಧಿಸಿದ ಆ್ಯಪ್‌ಗಳು ಇರಲಿಲ್ಲ. ಈಕ್ವಿಟಿ ಹೂಡಿಕೆಗಳು ಈಗಿರುವಂತೆ ಸಂಪೂರ್ಣ ಡಿಜಿಟಲ್ ಆಗಿರಲಿಲ್ಲ. ಬಹುಶಃ ಈ ಕಾರಣದಿಂದಾಗಿಯೇ ನಾನು ಹೂಡಿಕೆ ಆರಂಭಿಸುವುದು ತಡವಾಯಿತು' ಎಂದು ಅವರು ಹೇಳುತ್ತಾರೆ. ಇವೇ ಮಾತುಗಳನ್ನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಮನು (ಹೆಸರು ಬದಲಾಯಿಸಲಾಗಿದೆ) ಅವರೂ ಹೇಳುತ್ತಾರೆ.

'ನಾನು ಈಕ್ವಿಟಿ ಯೋಜನೆಗಳನ್ನು ವ್ಯವಸ್ಥಿತವಾಗಿ ಹೂಡಿಕೆ ಮಾಡಲು ಆರಂಭಿಸಿ ಐದು ವರ್ಷಗಳು ಕಳೆದಿವೆ. ಅದಕ್ಕೂ ಮೊದಲು ನನ್ನ ಹೂಡಿಕೆಗಳು ಬ್ಯಾಂಕ್ ಎಫ್.ಡಿ., ಅಂಚೆ ಕಚೇರಿ ಆರ್.ಡಿ.ಗೆ ಸೀಮಿತವಾಗಿದ್ದವು. ಈಕ್ವಿಟಿ ಹೂಡಿಕೆ ಬೇಕು ಎಂದು ಅನಿಸುತ್ತಿದ್ದರೂ, ಹೂಡಿಕೆ ಶುರುಮಾಡುವುದು ಈಗಿನಷ್ಟು ಸುಲಭವಾಗಿರಲಿಲ್ಲ. ಬ್ಯಾಂಕ್‌ಗೆ ಅಥವಾ ಬ್ರೋಕರ್ ಬಳಿ ಹೋಗಿ ಹಲವು ದಾಖಲೆಗಳನ್ನು ಸಲ್ಲಿಸಿ, ಹತ್ತಾರು ಕಡೆ ಸಹಿ ಮಾಡಿ ಈಕ್ವಿಟಿ ಹೂಡಿಕೆ ಆರಂಭಿಸಬೇಕಿತ್ತು. ಈಗ ಸಂಪೂರ್ಣವಾಗಿ ಕಾಗದರಹಿತವಾಗಿ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಬಹುದು, ಡಿ-ಮ್ಯಾಟ್ ಖಾತೆ ತೆರೆಯಬಹುದು' ಎಂದು ಮನು ಹೇಳುತ್ತಾರೆ. ಐದು ವರ್ಷಗಳಿಂದ ಈಕ್ವಿಟಿ ಮ್ಯೂಚುವಲ್ ಫಂಡ್ ಮೂಲಕ ಷೇರುಗಳಲ್ಲಿ ಹೂಡಿಕೆ ಮಾಡಿದ ಮನು ಈಗ ಡಿ-ಮ್ಯಾಟ್ ಖಾತೆ ತೆರೆದು ತಾವೇ ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಸಾರ್ಥಕ್ ಮತ್ತು ಮನು ತಮ್ಮ ಅಷ್ಟೂ ಈಕ್ವಿಟಿ ಹೂಡಿಕೆ ನಿರ್ವಹಿಸುತ್ತಿರುವುದು ಸ್ಮಾರ್ಟ್‌ಫೋನ್ ಮೂಲಕ.

ಹೂಡಿಕೆ ಆರಂಭಿಸಬೇಕು ಎಂದಾದರೆ ಕಿಸೆಯಲ್ಲಿ ದೊಡ್ಡ ಮೊತ್ತ ಇರಬೇಕು ಎಂಬ ಕಾಲ ಕಳೆದುಹೋಗಿದೆ. ಹೊಸ ಕಾಲದ ಹಣಕಾಸು ತಂತ್ರಜ್ಞಾನ ಕಂಪನಿಗಳು ತಮ್ಮ ಆ್ಯಪ್‌ಗಳ ಮೂಲಕ ಕನಿಷ್ಠ ₹ 100ರಿಂದ ಈಕ್ವಿಟಿ ಹೂಡಿಕೆ ಆರಂಭಿಸುವ ಅವಕಾಶ ನೀಡುತ್ತಿವೆ. ಹೂಡಿಕೆದಾರ ಅಂದರೆ ಲಕ್ಷಾಂತರ ರೂಪಾಯಿ ಇರುವವ ಮಾತ್ರವೇ ಅಲ್ಲ; ನೂರಿನ್ನೂರು ರೂಪಾಯಿ ಇರುವವನೂ ಸಣ್ಣ ಹೂಡಿಕೆದಾರ ಎಂದು ಈ ಕಂಪನಿಗಳು ಹೇಳುತ್ತಿವೆ. ಇದು ಈಕ್ವಿಟಿ ಹೂಡಿಕೆ ಅವಕಾಶವನ್ನು ಎಲ್ಲರಿಗೂ ವಿಸ್ತರಿಸಿದೆ. 'ಪೇಟಿಎಂ ಮನಿ' ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವರುಣ್ ಶ್ರೀಧರ್ ಅವರನ್ನು ಹಾಸನದ ಸಮೀಪ ಭೇಟಿಯಾಗಿದ್ದ ಸಾಮಾನ್ಯ ವ್ಯಕ್ತಿಯೊಬ್ಬರು '₹ 100ರ ವ್ಯವಸ್ಥಿತ ಹೂಡಿಕೆ ಯೋಜನೆ ಮೂಲಕ ಈಕ್ವಿಟಿಯಲ್ಲಿ ಹಣ ತೊಡಗಿಸಿದ್ದೇನೆ' ಎಂದು ಹೇಳಿದ್ದರಂತೆ. ಹೂಡಿಕೆ ಅವಕಾಶ ಹೆಚ್ಚೆಚ್ಚು ಜನರಿಗೆ ಸಿಗುತ್ತಿರುವುದಕ್ಕೆ, ಅತ್ಯಂತ ಕಡಿಮೆ ಮೊತ್ತದಿಂದಲೂ ಹೂಡಿಕೆ ಆರಂಭಿಸುವ ಅನುಕೂಲಕರ ಸಂದರ್ಭ ನಿರ್ಮಾಣ ಆಗಿರುವುದಕ್ಕೆ ಕಾರಣ ಪೇಟಿಎಂ ಮನಿ, ಕೈಟ್, ಗ್ರೋವ್‌ನಂತಹ ಹೊಸ ಕಾಲದ ಹಣಕಾಸು ತಂತ್ರಜ್ಞಾನ ಕಂಪನಿಗಳು.

ಈ ಕಂಪನಿಗಳು ಹೂಡಿಕೆಯನ್ನು ಅತ್ಯಂತ ಸುಲಭವಾಗಿಸಿದ್ದರೂ, ಹೂಡಿಕೆ ಮಾಡುವಾಗ ಎಚ್ಚರಿಕೆ ಬೇಕೇಬೇಕು ಎಂದು ಹೇಳುತ್ತಾರೆ ಹಣಕಾಸು ತಜ್ಞರು. 'ಹೂಡಿಕೆ ಸೌಲಭ್ಯ ನೀಡುವ ಯಾವ ಆ್ಯಪ್ ಎಷ್ಟು ಶುಲ್ಕ ಪಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳಿ. ಬೇರೆ ಬೇರೆ ಆ್ಯಪ್‌ಗಳ ಯೂಸರ್ ಇಂಟರ್ಫೇಸ್ ಹೇಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ನಿಮಗೆ ಸುಲಭವೆನಿಸುವ ಆ್ಯಪ್ ಆಯ್ಕೆ ಮಾಡಿಕೊಳ್ಳಿ. ಹಣಕಾಸು ಉತ್ಪನ್ನಗಳನ್ನು ಎಲ್ಲ ಆಯಾಮಗಳಿಂದ ಅರ್ಥ ಮಾಡಿಕೊಂಡು ಹೂಡಿಕೆ ಮಾಡಿ' ಎಂದು ಹಣಕಾಸು ತಜ್ಞರೊಬ್ಬರು ಸಲಹೆ ನೀಡುತ್ತಾರೆ. 'ಕಂಪನಿಯೊಂದರ ವಹಿವಾಟಿನ ಸ್ವರೂಪ ನಿಮಗೆ ಅರ್ಥವಾಗದಿದ್ದರೆ ಆ ಕಂಪನಿಯ ಮೇಲೆ ಹೂಡಿಕೆ ಮಾಡಬೇಡಿ' ಎಂದು ಹೂಡಿಕೆದಾರ ವಾರನ್ ಬಫೆಟ್ ಹೇಳಿದ್ದರು. ಹಣಕಾಸು ತಂತ್ರಜ್ಞಾನ ಕಂಪನಿಗಳು, ಅವುಗಳ ಆ್ಯಪ್‌ಗಳು ಹೂಡಿಕೆಯನ್ನು ಸುಲಭಗೊಳಿಸಿದ್ದರೂ ಬಫೆಟ್ ಅವರ ಕಿವಿಮಾತು ಇಂದಿಗೂ ಅನುಕರಣೀಯ ಎಂಬುದನ್ನು ಮರೆಯುವಂತಿಲ್ಲ.

'ಈ ಆ್ಯಪ್‌ಗಳು ಹಣಕಾಸು ಉತ್ಪನ್ನಗಳ ಸೂಪರ್ ಮಾರ್ಕೆಟ್ ಇದ್ದಂತೆ. ಒಂದು ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡರೆ ಬಹುತೇಕ ಆಸ್ತಿ ನಿರ್ವಹಣಾ ಕಂಪನಿಗಳ ಮ್ಯೂಚುವಲ್ ಫಂಡ್‌ಗಳು, ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್), ಷೇರುಗಳು, ಡಿಜಿಟಲ್ ಚಿನ್ನ... ಹೀಗೆ ಬಗೆಬಗೆಯ ಹೂಡಿಕೆ ಆಯ್ಕೆಗಳು ಕಾಣಸಿಗುತ್ತವೆ. ಆ್ಯಪ್‌ಗಳು ಹೂಡಿಕೆಯನ್ನು ಡೆಮಾಕ್ರಟೈಸ್ (ಎಲ್ಲರಿಗೂ ಸಿಗುವಂತೆ) ಮಾಡುತ್ತಿವೆ' ಎಂದು ಹೇಳುತ್ತಾರೆ ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ. ಕಂಪನಿಯ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರಮೋದ್ ಬಿ.ಪಿ.

ಉತ್ತಮ ಕ್ಯಾಮೆರಾ, ಭರ್ಜರಿ ಬ್ಯಾಟರಿ
ಒಪ್ಪೋ ಎಫ್‌19

ವಿಮರ್ಶೆ

ಅವಿನಾಶ್ ಬಿ.

ಚೀನಾ ಮೂಲದ ಒಪ್ಪೋ ಸ್ಮಾರ್ಟ್ ಮೊಬೈಲ್ ತಯಾರಕ ಕಂಪನಿಯು ಎಫ್‌19 ಫೋನನ್ನು ತಿಂಗಳಾರಂಭದಲ್ಲಿ ಮಾರುಕಟ್ಟೆಗೆ ಬಿಡುಗಡೆಗೊಳಿಸಿದ್ದು, ಎರಡು ವಾರ ಬಳಸಿದ ಸಂದರ್ಭದಲ್ಲಿ ಕಾರ್ಯನಿರ್ವಹಣೆ ಹೇಗಿತ್ತೆಂಬ ಮಾಹಿತಿ ಇಲ್ಲಿದೆ.

5000 mAh ಬ್ಯಾಟರಿ ಇದ್ದರೂ ಸ್ಲೀಕ್ ಆಗಿ ಗಮನ ಸೆಳೆದಿರುವ ಫೋನ್, 175 ಗ್ರಾಂ. ತೂಕ ಹಾಗೂ 7.95 ಮಿಮೀ ದಪ್ಪ ಇದೆ. 6.43 ಇಂಚಿನ ಸ್ಕ್ರೀನ್‌ನಲ್ಲಿರುವ ಫಿಂಗರ್‌ಪ್ರಿಂಟ್ ಸ್ಕ್ಯಾನರ್‌ನ ಗ್ರಾಫಿಕ್ ವಿನ್ಯಾಸ ಆಕರ್ಷಕವಾಗಿದ್ದು, ವಿನ್ಯಾಸ ಬದಲಿಸುವ ಆಯ್ಕೆಯಿದೆ. AMOLED FHD + ಡಿಸ್‌ಪ್ಲೇ ಇದ್ದು, ಪಂಚ್ ಹೋಲ್ ವಿನ್ಯಾಸದ ಸೆಲ್ಫೀ ಕ್ಯಾಮೆರಾ ಇದೆ.

ಹಾರ್ಡ್‌ವೇರ್: ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 662 ಒಕ್ಟಾ ಕೋರ್ ಪ್ರೊಸೆಸಿಂಗ್ ಚಿಪ್ ಜೊತೆಗೆ 6 ಜಿಬಿ RAM ಹಾಗೂ 128 ಜಿಬಿ ಸ್ಟೋರೇಜ್ ಸಾಮರ್ಥ್ಯವಿದ್ದು, ವೇಗದ ಗೇಮ್ಸ್, 4ಕೆ ಸಾಮರ್ಥ್ಯದ ವಿಡಿಯೊ ಪ್ಲೇ ಆಗುವುದಕ್ಕೆ ಸಮಸ್ಯೆಯಾಗಲಿಲ್ಲ. ವೈಶಿಷ್ಟ್ಯ ಡ್ಯುಯಲ್ ಚಾನೆಲ್ ನೆಟ್‌ವರ್ಕ್ ವೈಶಿಷ್ಟ್ಯವಿದೆ. ಅಂದರೆ, ವೈಫೈ ಹಾಗೂ ಮೊಬೈಲ್ ಡೇಟಾ - ಯಾವುದಾದರೊಂದರ ಸಿಗ್ನಲ್ ಸಾಮರ್ಥ್ಯ ಕಡಿಮೆ ಇದ್ದಾಗ, ಎರಡೂ ಒಟ್ಟಾಗಿ ಕಾರ್ಯನಿರ್ವಹಿಸುತ್ತಾ, ಡೌನ್‌ಲೋಡ್ ವೇಗವನ್ನು ಹೆಚ್ಚಿಸುತ್ತದೆ.

ಬ್ಯಾಟರಿ: ಕೊರೊನಾ ದಿನಗಳಲ್ಲಿ ಮೊಬೈಲ್ ಫೋನ್ ಹೆಚ್ಚಿನ ಬಳಕೆಗೆ ಅನಿವಾರ್ಯವಿರುವಂತೆ, 5000 mAh ಚಾರ್ಜಿಂಗ್ ಸಾಮರ್ಥ್ಯದ ಬ್ಯಾಟರಿ ಇದೆ. 33W ಫ್ಲ್ಯಾಶ್ ಚಾರ್ಜರ್, ಯುಎಸ್‌ಬಿ ಟೈಪ್ ಸಿ ಪೋರ್ಟ್ ಮೂಲಕ ವೇಗವಾಗಿ ಚಾರ್ಜ್ ಆಗುತ್ತದೆ. ಆಪ್ಟಿಮೈಸ್ಡ್ ನೈಟ್ ಚಾರ್ಜಿಂಗ್ ವ್ಯವಸ್ಥೆಯು, ರಾತ್ರಿ ಚಾರ್ಜಿಂಗ್‌ಗೆ ಇಟ್ಟರೆ ಶೇ 80ರವರೆಗೆ ಮಾತ್ರವೇ ಚಾರ್ಜ್ ಆದ ಬಳಿಕ ಚಾರ್ಜಿಂಗ್ ನಿಲ್ಲುತ್ತದೆ. ನಂತರ, ಅಲಾರ್ಮ್‌ನ ಒಂದು ಗಂಟೆ ಮೊದಲು ಪುನಃ ಚಾರ್ಜಿಂಗ್ ತಾನಾಗಿ ಆರಂಭವಾಗುತ್ತದೆ. ಇದು ಬ್ಯಾಟರಿ ಬಾಳಿಕೆಗೆ ಅನುಕೂಲ.

ಕ್ಯಾಮೆರಾ: ಹಿಂಭಾಗದಲ್ಲಿ 48 ಮೆಗಾಪಿಕ್ಸೆಲ್ ಪ್ರಧಾನ ಸೆನ್ಸರ್, 2MP ಡೆಪ್ತ್ ಸೆನ್ಸರ್ ಹಾಗೂ 2MP ಮ್ಯಾಕ್ರೋ ಸೆನ್ಸರ್ ಇರುವ ಕ್ಯಾಮೆರಾ ಸೆಟಪ್ ಅತ್ಯುತ್ತಮವಾಗಿ ಫೋಟೊಗಳನ್ನು ಸೆರೆಹಿಡಿಯುತ್ತದೆ. ಆಟೊ-ಫೋಕಸ್ ವ್ಯವಸ್ಥೆ ಇದ್ದು, ಚಿತ್ರಗಳು ಸ್ಫುಟವಾಗಿ ಮೂಡಿಬಂದಿವೆ. ಮ್ಯಾಕ್ರೋ ಸೆನ್ಸರ್ ಮೂಲಕ ಅತ್ಯಂತ ಸಮೀಪದಿಂದ ತೆಗೆದ ಚಿತ್ರಗಳು ಸ್ಪಷ್ಟವಾಗಿ ಸೆರೆಯಾಗಿವೆ.

ಸುರಕ್ಷತೆ: ಆಂಡ್ರಾಯ್ಡ್ 11 ಆಧಾರಿತ ಕಲರ್ ಒಎಸ್ 11.1 ಮೂಲಕ ಇದು ಕಾರ್ಯಾಚರಿಸುತ್ತಿದ್ದು, ಪ್ರೈವೆಸಿಗೆ ಹೆಚ್ಚು ಒತ್ತು ನೀಡಲಾಗಿದೆ. ಆ್ಯಪ್‌ಗಳನ್ನು ಲಾಕ್ ಮಾಡುವ, ಖಾಸಗಿ ಫೋಲ್ಡರ್‌ಗಳನ್ನು ಗೌಪ್ಯವಾಗಿರಿಸುವ 'ಪ್ರೈವೇಟ್ ಸೇಫ್', ಮಕ್ಕಳಿಗೆ ಕೊಡುವಾಗ ಮೊಬೈಲ್ ಬಳಕೆ, ಆ್ಯಪ್ ನಿರ್ಬಂಧಿಸುವ 'ಕಿಡ್ ಸ್ಪೇಸ್' ವೈಶಿಷ್ಟ್ಯವಿದೆ.

ಪ್ರಿಸಂ ಬ್ಲ್ಯಾಕ್ (ಕಪ್ಪು) ಹೀಗೂ ಮಿಡ್‌ನೈಟ್ ಬ್ಲೂ (ನೀಲಿ) - ಹೀಗೆ ಎರಡು ಬಣ್ಣಗಳಲ್ಲಿ ಲಭ್ಯವಿರುವ ಎಫ್-19 ಬೆಲೆ ರೂ.18,999. 5ಜಿ ಬೆಂಬಲ ಈ ಮಾದರಿಯಲ್ಲಿಲ್ಲ.

ಮಾಲ್‌ವೇರ್‌ನಿಂದ ಮೊಬೈಲ್ ರಕ್ಷಿಸಿಕೊಳ್ಳಿ

ಮೊಬೈಲ್‌ಗಳು ಮಾಲ್‌ವೇರ್ ದಾಳಿಗೆ ತುತ್ತಾಗುವ ಪ್ರಕರಣಗಳು ದೇಶದಲ್ಲಿ ಈಚೆಗೆ ಗಣನೀಯವಾಗಿ ಹೆಚ್ಚುತ್ತಿವೆ. ಹೀಗಾಗಿ ಅದರ ರಕ್ಷಣೆಗೆ ಇನ್ನೂ ಹೆಚ್ಚಿನ ಗಮನ ನೀಡುವ ಅಗತ್ಯ ಎದುರಾಗಿದೆ.

ವಿಶ್ವನಾಥ ಎಸ್.

ಮೊಬೈಲ್ ಬಳಕೆ ಹೆಚ್ಚುತ್ತಿರುವಷ್ಟೇ ವೇಗವಾಗಿ ಅದು ಹಲವು ರೀತಿಯ ದಾಳಿಗಳಿಗೂ ಒಳಗಾಗುತ್ತಿದೆ. ಕಡಿಮೆ ಬೆಲೆಗೆ ಸ್ಮಾರ್ಟ್‌ಫೋನ್ ಮತ್ತು ಮೊಬೈಲ್ ಡೇಟಾ ಲಭ್ಯವಾಗುತ್ತಿರುವುದು ಈ ರೀತಿಯ ದಾಳಿಗಳಿಗೆ ಪ್ರಮುಖ ಕಾರಣ ಆಗಿವೆ. ಕಚೇರಿ ಕೆಲಸಕ್ಕೂ ಮೊಬೈಲ್ ಬಳಕೆ ಆಗುತ್ತಿರುವುದರಿಂದ ಸೈಬರ್ ಅಪರಾಧಿಗಳು ಮೊಬೈಲ್‌ನಲ್ಲಿ ಇರುವ ಮಾಹಿತಿಗಳನ್ನು ದೋಚಲು ಹಲವು ತಂತ್ರಗಳನ್ನು ಅನುಸರಿಸುತ್ತಲೇ ಇರುತ್ತಾರೆ.

2020ರ ಅಕ್ಟೋಬರ್‌ನಿಂದ 2021ರ ಮಾರ್ಚ್ ಅವಧಿಯಲ್ಲಿ ಭಾರತದಲ್ಲಿ ಮೊಬೈಲ್‌ಗಳು ಮಾಲ್‌ವೇರ್ ದಾಳಿಗೆ ತುತ್ತಾಗಿರುವ ಪ್ರಮಾಣ ಶೇ 845ರಷ್ಟು ಪ್ರಮಾಣದಲ್ಲಿ ಏರಿಕೆ ಆಗಿದೆ. 2020ರಲ್ಲಿ ಭಾರತದ ಶೇ 97ರಷ್ಟು ಸಂಘಸಂಸ್ಥೆಗಳು ಮೊಬೈಲ್‌ಗೆ ಸಂಬಂಧಿಸಿದ ದಾಳಿಗಳನ್ನು ಎದುರಿಸಿದ್ದರೆ ಜಾಗತಿಕವಾಗಿ ಶೇ 46ರಷ್ಟು ಸಂಘಸಂಸ್ಥೆಗಳು ಈ ತರಹದ ದಾಳಿಗೆ ಒಳಗಾಗಿವೆ. ಸೈಬರ್ ಸೆಕ್ಯುರಿಟಿ ಸಂಸ್ಥೆ ಚೆಕ್ ಪಾಯಿಂಟ್ ಟೆಕ್ನಾಲಜೀಸ್‌ನ 2021ರ ಮೊಬೈಲ್ ಸೆಕ್ಯುರಿಟಿ ವರದಿಯಲ್ಲಿ ಈ ಮಾಹಿತಿ ನೀಡಲಾಗಿದೆ.

'ಮೊಬೈಲ್‌ಗಳ ಮೇಲೆ ನಮ್ಮ ಹೆಚ್ಚುತ್ತಿರುವ ಅವಲಂಬನೆಯನ್ನು ಬಳಸಿಕೊಳ್ಳಲು ಸೈಬರ್ ಅಪರಾಧಿಗಳು ಹೊಸ ಹೊಸ ತಂತ್ರಗಳನ್ನು ಅನುಸರಿಸುತ್ತಿದ್ದಾರೆ. ಇಂದಿನ ಸುಧಾರಿತ ಸೈಬರ್ ಬೆದರಿಕೆಗಳಿಂದ ಮೊಬೈಲ್‌ಗಳನ್ನು ರಕ್ಷಿಸಿಕೊಳ್ಳಲು ಉದ್ಯಮಗಳು ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು ಮತ್ತು ಬಳಕೆದಾರರು ತಮ್ಮ ಅಪಾಯವನ್ನು ಕಡಿಮೆ ಮಾಡಲು ಅಧಿಕೃತ ಅಪ್ಲಿಕೇಶನ್ ಸ್ಟೋರ್‌ಗಳಲ್ಲಿ ಇರುವ ಅಪ್ಲಿಕೇಶನ್‌ಗಳನ್ನು ಮಾತ್ರವೇ ಬಳಸಬೇಕು' ಎಂದು ಚೆಕ್‌ಪಾಯಿಂಟ್ ಸಾಫ್ಟ್‌ವೇರ್‌ನ ಉಪಾಧ್ಯಕ್ಷ ನೀಟ್ಸನ್ ಜೀವ್ ಸಲಹೆ ನೀಡಿದ್ದಾರೆ.

ವಂಚಿಸಲು ಮಾಲ್‌ವೇರ್ ಅಲ್ಲದೆ, ಭಾರಿ ಮೊತ್ತದ ಬಹುಮಾನ, ಕ್ಯಾಷ್‌ಬ್ಯಾಕ್ ಹೆಸರಿನಲ್ಲಿ ಮೊಬೈಲ್‌ಗೆ ಟೆಕ್ಸ್ಟ್ ಮೆಸೇಜ್, ಇ-ಮೇಲ್ ಬರುತ್ತಲೇ ಇರುತ್ತವೆ. ಅಂತಹ ಮೆಸೇಜ್‌ಗಳಲ್ಲಿರುವ ಲಿಂಕ್ ಕ್ಲಿಕ್ ಮಾಡಿದರೆ, ಮೊಬೈಲ್‌ನಲ್ಲಿರುವ ಮಾಹಿತಿ ಸೋರಿಕೆ ಆಗುತ್ತದೆ. ಕ್ರೆಡಿಟ್/ಡೆಬಿಟ್ ಕಾರ್ಡ್ ಬದಲಿಸುವುದಾಗಿ ಬ್ಯಾಂಕ್ ಅಧಿಕಾರಿಯ ಸೋಗಿನಲ್ಲಿ ಕರೆ ಮಾಡುವುದಂತೂ ತೀರಾ ಸಹಜವಾಗಿಬಿಟ್ಟಿದೆ. ಇಂತಹ ಸಂದರ್ಭಗಳಲ್ಲಿ ಅಪರಿಚಿತ ಮೊಬೈಲ್ ನಂಬರ್, ಟೆಕ್ಸ್ಟ್ ಮೆಸೇಜ್, ಇ-ಮೇಲ್ ಬಂದಾಗ ನಾವು ಬಹಳ ಸಮಾಧಾನ ಮತ್ತು ವಿವೇಚನೆಯಿಂದ ಹೆಜ್ಜೆ ಇಡಬೇಕು. ನಷ್ಟವಾದ ಮೇಲೆ ಪಶ್ಚಾತಾಪ ಪಡುವ ಬದಲು ಮುನ್ನೆಚ್ಚರಿಕೆ ವಹಿಸುವುದೇ ಸೂಕ್ತ.

ಮಾಲ್‌ವೇರ್ ಹೇಗೆ ನುಸುಳುತ್ತದೆ?

- ಅನಧಿಕೃತ ಮೂಲಗಳಿಂದ ಆ್ಯಪ್ ಡೌನ್‌ಲೋಡ್
- ಮೊಬೈಲ್ ಸಾಫ್ಟ್‌ವೇರ್ ಕಾಲಕಾಲಕ್ಕೆ ಅಪ್‌ಡೇಟ್ ಮಾಡದೇ ಇರುವುದು
- ಅನುಮಾನಾಸ್ಪದ/ಅಪರಿಚಿತ ಇ-ಮೇಲ್ ತೆರೆಯುವುದರಿಂದ
- ಸುರಕ್ಷಿತವಲ್ಲದ ವೈಫೈ/ಯುಆರ್‌ಎಲ್ ಬಳಕೆ
- ಟೆಕ್ಸ್ಟ್ ಮೆಸೇಜ್/ವಾಯ್ಸ್ ಮೆಸೇಜ್ ಮೂಲಕ ವೈಯಕ್ತಿಕ ಮಾಹಿತಿ ಹಂಚಿಕೊಳ್ಳುವುದರಿಂದ

ಸುರಕ್ಷತೆ ಹೇಗೆ

ಮಾಲ್‌ವೇರ್‌ಗಳಿಂದ ಮೊಬೈಲ್ ಅನ್ನು ರಕ್ಷಿಸಿಕೊಳ್ಳಲು ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಒಳಿತು.

- ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ ಬಳಕೆ
- ಗೂಗಲ್ ಮತ್ತು ಆ್ಯಪಲ್‌ನ ಅಧಿಕೃತ ಪ್ಲೇ ಸ್ಟೋರ್‌ಗಳಿಂದಲೇ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡುವುದು
- ನಿಯಮಿತವಾಗಿ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಅಪ್‌ಡೇಟ್ ಮಾಡುವುದು
- ಕೆಲಸದ ಉದ್ದೇಶಕ್ಕೆ ಮೊಬೈಲ್ ಬಳಸುತ್ತಿದ್ದರೆ ಕಂಪನಿಯ ಇ-ಮೇಲ್‌ಗೆ ಟು ಫ್ಯಾಕ್ಟರ್ ಅಥೆಂಟಿಕೇಷನ್‌ನಂತಹ ಸುರಕ್ಷತೆಗೆ ಕ್ರಮಗಳನ್ನು ಅನುಸರಿಸುವಂತೆ ಉದ್ಯೋಗಿಗೆ ಸೂಚನೆ ನೀಡುವುದು ಸೂಕ್ತ
- ಸಾರ್ವಜನಿಕ ವೈಫೈ ಬಳಕೆಯನ್ನು ಆದಷ್ಟೂ ಕಡಿಮೆ ಮಾಡುವುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

NARAYANPUR INCIDENT
– Shashi Deshpande

ಇಂಗ್ಲಿಷ್ | ಎಸ್ಸೆಸ್ಸೆಲ್ಸಿ

The reason for the student's march

At the time of 'Quit India' Movement a teacher in a small town Narayanpur, a follower of Gandhi, had been arrested by the British police. So, the students decided to march up and to give the notice to the British officer.

The way of Marching

The student's march was very unusual. They marched as if the police didn't exist. They walked in complete silence. There were no slogans, no shouts, just the shuffle of feet, the dip of rain and low murmur from the watching crowd.

The reason for the unusual march

The student's leaders decided to march up silently because they did not want the police to arrest them. In contrast to that, the police thought that, the march would be violent and the students would protest. So that, the police could beat the students easily and arrest them. But, that didn't happen.

Babu and Manju's disappointment

Babu and Manju were bit disappointed by the way the students marched up. They thought that there must be slogans and shouts and they must protest against the police. But the march went up in complete silence without any slogans and protest.

The suspicion of the police

The police suspected that there might be Cyclostyling machine in Mohan's house and they are all making copies of Mahatma's speech.

Reason for Mr. Patil, the sub inspector comes to Mohan's house.

Mr. Patil, the police sub inspector, though he was serving for the British's he was the well wisher of Mohan's family. Actually, he was the friend of Mohan's father. To inform about the forthcoming search of cyclostyle machine and to help Mohan's family he came to his house.

About the mysterious parcel.

The mysterious parcel was brought to Mohan's house by Suman and another boy. In this parcel there was cyclostyle machine. Through which they wanted to make copies of Mahatma's speech.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಕೋಆರ್ಡಿನೇಟ್ ಜ್ಯಾಮೆಟ್ರಿ_ಡಿಸ್ಟನ್ಸ್ ಫಾರ್ಮುಲಾ ಅಂಡ್ ಸರ್ಕಮ್‌ಸೆಂಟರ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3uWXxJE

ನ್ಯೂಕ್ಲಿಯಿಕ್ ಆಮ್ಲಗಳು

ರಸಾಯನಶಾಸ್ತ್ರ | ದ್ವಿತೀಯ ಪಿಯುಸಿ

ಪ್ರತಿಯೊಂದು ಪೀಳಿಗೆಯ ಪ್ರತಿಯೊಂದು ಜಾತಿಯ ಪ್ರಾಣಿಯು ತನ್ನ ಪೂರ್ವಜರನ್ನು ಅನೇಕ ವಿಧಗಳಲ್ಲಿ ಹೋಲುತ್ತದೆ. ಅನುವಂಶೀಯತೆ ಎಂದು ಕರೆಯಲ್ಪಡುವ ಈ ಅಂತರ್ಗತ ಪಾತ್ರಗಳ ಪ್ರಸರಣಕ್ಕೆ ಒಂದು ಜೀವಕೋಶದಲ್ಲಿನ ಬೀಜಕಣ ಕಾರಣ ಎಂಬುದನ್ನು ಗಮನಿಸಲಾಗಿದೆ. ಈ ಅನುವಂಶೀಯತೆಗೆ ಕಾರಣವಾದ ಜೀವಕೋಶದ ಕೇಂದ್ರದಲ್ಲಿನ ಕಣಗಳನ್ನು ವರ್ಣತಂತುಗಳು ಎನ್ನಲಾಗುತ್ತದೆ ಮತ್ತು ಅವುಗಳು ಪ್ರೋಟೀನ್‌ಗಳು ಮತ್ತು ನ್ಯೂಕ್ಲಿಯಿಕ್ ಆಮ್ಲಗಳೆಂಬ ಇನ್ನೊಂದು ರೀತಿ ಜೈವಿಕ ಅಣುಗಳಿಂದ ಮಾಡಲ್ಪಟ್ಟಿದೆ. ಇವು ಮುಖ್ಯವಾಗಿ ಎರಡು ರೀತಿಯ ಡಿ ಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲಗಳು, ನ್ಯೂಕ್ಲಿಯೋಟೈಡ್‌ಗಳು, ದೀರ್ಘ ಸರಪಣಿಯ ಪಾಲಿಮರ್‌ಗಳಾಗಿವೆ. ಆದ್ದರಿಂದ ಅವುಗಳನ್ನು ಪಾಲಿನ್ಯೂಕ್ಲಿಯೋಟೂಡ್‌ಗಳು ಎಂದು ಕರೆಯಲಾಗುತ್ತದೆ.

ನ್ಯೂಕ್ಲಿಯಿಕ್ ಆಮ್ಲಗಳ ರಾಸಾಯನಿಕ ಸಂಯೋಜನೆ

ಡಿಎನ್‌ಎ (ಅಥವಾ ಆರ್‌ಎನ್‌ಎ) ಯ ಸಂಪೂರ್ಣ ಜಲವಿಭಜನೆಯು ಒಂದು ಪೆಂಟೋಸ್ ಶರ್ಕರ ಫಾಸ್ಪರಿಕ್ ಆಮ್ಲ ಮತ್ತು ಭಿನ್ನ ಚಕ್ರೀಯ ಸಂಯುಕ್ತಗಳಾದ ನೈಟ್ರೋಜನ್ ಪ್ರತ್ಯಾಮ್ಲಗಳನ್ನು ನೀಡುತ್ತವೆ. ಡಿಎನ್‌ಎ ಅಣುಗಳಲ್ಲಿ ಶರ್ಕರ ಭಾಗವು β ಡಿ ಆಕ್ಸಿರೈಬೋಸ್ ಆಗಿದ್ದು ಆದರೆ ಆರ್‌ಎನ್‌ಎದಲ್ಲಿ ಇದು β ಡಿ ರೈಬೋಸ್ ಆಗಿದೆ.

ನ್ಯೂಕ್ಲಿಯಿಕ್ ಆಮ್ಲಗಳು ದ್ವಿತೀಯಕ ರಚನೆಯನ್ನು ಕೂಡ ಹೊಂದಿವೆ. ಜೇಮ್ಸ್ ವಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಡಿಎನ್‌ಎಗೆ ದ್ವಿಸುರಳಿಯ ರಚನೆಯನ್ನು ನೀಡಿದರು. ಎರಡು ನ್ಯೂಕ್ಲಿಯಿಕ್ ಆಮ್ಲಗಳ ಸರಪಣಿಗಳು ಪರಸ್ಪರ ಸುತ್ತಿಕೊಳ್ಳುತ್ತವೆ ಮತ್ತು ಪ್ರತ್ಯಾಮ್ಲಗಳ ಜೊತೆಯ ನಡುವಿನ ಬಂಧನಗಳಿಂದ ಜೊತೆಯಾಗಿ ಹಿಡಿದುಕೊಳ್ಳುತ್ತವೆ. ಅಡಿನೈನ್ ಥೈಮಿನ್‌ನ ಜತೆ ಹೈಡ್ರೋಜನ್ ಬಂಧವನ್ನು ಮಾಡುತ್ತದೆ. ಆದರೆ ಸೈಟೋಸಿಸ್ ಗ್ವಾನೈನ್ ಜತೆ ಹೈಡ್ರೋಜನ್ ಬಂಧವನ್ನು ಮಾಡುತ್ತದೆ.

ಆರ್‌ಎನ್‌ಎ (RNA)ಯ ದ್ವಿತೀಯಕ ರಚನೆಯನ್ನು ಏಕ ತಂತು ಮಾತ್ರವಿರುವ ಹೆಲಿಕ್ಸ್‌ಗಳಿರುತ್ತವೆ. ಆರ್‌ಎನ್‌ಎ ಅಣುಗಳು ನಿರ್ವಹಿಸುತ್ತವೆ. ಆರ್‌ಎನ್‌ಎ ಅಣುಗಳು ಮೂರು ವಿಧಗಳಲ್ಲಿವೆ ಮತ್ತು ಅವು ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುತ್ತವೆ. ಅವುಗಳು ಮೆಸೆಂಜರ್ ಆರ್‌ಎನ್‌ಎ (m-RNA) ರೋಬೊಸೋಮಲ್ ಆರ್‌ಎನ್‌ಎ (r-RNA) ಮತ್ತು ಟ್ರಾನ್ಸ್‌ಫರ್ ಆರ್‌ಎನ್‌ಎ (t-RNA) ಎಂದು ಹೆಸರಿಸಲಾಗಿದೆ.



ಡಿಎನ್‌ಎಯು ನಾಲ್ಕು ಪ್ರತ್ಯಾಮ್ಲಗಳನ್ನು ಹೊಂದಿದೆ. ಅವೆಂದರೆ ಅಡನೈನ್ (A), ಗ್ವಾನೈನ್ (G), ಸೈಟೋಸಿಸ್ (C) ಮತ್ತು ಥೈಮಿನ್ (T) ಆರ್‌ಎನ್‌ಎ ಕೂಡ ನಾಲ್ಕು ಪ್ರತ್ಯಾಮ್ಲಗಳನ್ನು ಹೊಂದಿದೆ. ಮೊದಲಿನ ಮೂರು ಡಿಎನ್‌ಎದಂತೆಯೇ ಇದ್ದು, ನಾಲ್ಕನೇಯದು ಮಾತ್ರ ಯುರಾಸಿಲ್ (C) ಆಗಿದೆ.





ಶರ್ಕರದ 1 ನೇ ಸ್ಥಾನಕ್ಕೆ ಪ್ರತ್ಯಾಮ್ಲದ ಅಣು ಜೋಡಣೆಯಾದಾಗ ಉಂಟಾಗುವ ಘಟಕವನ್ನು ನ್ಯೂಕ್ಲಿಯೋಸೈಡ್ ಎನ್ನುತ್ತಾರೆ.

ಒಂದು ನ್ಯೂಕ್ಲಿಯಿಕ್ ಆಮ್ಲ ಸರಪಣಿಯಲ್ಲಿ ನ್ಯೂಕ್ಲಿಯೋಟೈಡ್‌ಗಳ ಅನುಕ್ರಮಣಿಕೆಯ ಬಗೆಗಿನ ಮಾಹಿತಿಯನ್ನು ಅದರ ಪ್ರಾಥಮಿಕ ರಚನೆ ಎನ್ನುತ್ತಾರೆ.



ನ್ಯೂಕ್ಲಿಯಿಕ್ ಆಮ್ಲಗಳ ಜೈವಿಕ ಕಾರ್ಯಗಳು

ಡಿಎನ್‌ಎಯು ಅನುವಂಶೀಯತೆಯು ರಾಸಾಯನಿಕ ಮೂಲವಾಗಿದೆ ಮತ್ತು ಅದನ್ನು ಅನುವಂಶೀಯ ಮಾಹಿತಿಯ ಕಣಜವೆಂದು ಪರಿಗಣಿಸಬಹುದು. ಮಿಲಿಯನ್‌ಗಟ್ಟಲೆ ವರ್ಷಗಳಿಂದಲೂ ಬೇರೆ ಬೇರೆ ವರ್ಗದ ಪ್ರಾಣಿಗಳ ಗುರುತುಗಳನ್ನು ನಿರ್ವಹಿಸುವುದರಲ್ಲಿ ಡಿಎನ್‌ಎಯು ವಿಶಿಷ್ಟವಾಗಿ ಕಾರಣವಾಗಿದೆ. ಜೀವಕೋಶಗಳ ವಿಭಜನೆಯಾಗುವಾಗ ಡಿಎನ್‌ಎಯು ತನ್ನದೇ ಪ್ರತಿರೂಪವನ್ನು ನಕಲು ಮಾಡುವ ಸಾಮರ್ಥ್ಯ ಹೊಂದಿದೆ ಮತ್ತು ತದ್ರೂಪಿ ಡಿಎನ್‌ಎ ತಂತುಗಳು ಮರಿ ಜೀವಕೋಶಗಳಿಗೆ ವರ್ಗಾವಣೆಯಾಗುತ್ತವೆ.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ರೇ ಆಪ್ಟಿಕ್ಸ್ & ಆಪ್ಟಿಕಲ್ ಇನ್‌ಸ್ಟ್ರುಮೆಂಟ್_ ಸಿಂಪಲ್ ಮೈಕ್ರೋಸ್ಕೋಪ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3dDIizD

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before
After
ಲೈಂಗಿಕ ರೋಗಗಳು
ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ
ನಿದ್ರಾ ಸ್ಖಲನ
ಶೀಘ್ರ ಸ್ಖಲನ
ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ
ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ
ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ನಮ್ಮ ಮೆಟ್ರೊ– ಕಾಯುವಿಕೆಗೆ ಕೊನೆಗೂ ಮುಕ್ತಿ • ಕೇಂದ್ರದಿಂದ ಹಸಿರು ನಿಶಾನೆ

ಉತ್ತರ– ಪೂರ್ವ– ದಕ್ಷಿಣ ಬೆಸೆಯುವ ಹಂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ 2ಎ ಮತ್ತು 2ಬಿ ಹಂತಗಳ ಮಾರ್ಗಗಳಿಗೆ ಕೇಂದ್ರ ಸರ್ಕಾರದಿಂದ ಕೊನೆಗೂ ಹಸಿರು ನಿಶಾನೆ ದೊರೆತಿದೆ. ಈ ಎರಡು ಹಂತಗಳಲ್ಲಿ ನಿರ್ಮಾಣವಾಗಲಿರುವ ಮಾರ್ಗಗಳು ನಗರದ ಉತ್ತರದ ತುತ್ತತುದಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೆಟ್ರೊನಿಲ್ದಾಣ, ಪೂರ್ವದ ಕೆ.ಆರ್.ಪುರ ಹಾಗೂ ದಕ್ಷಿಣದ ಸೆಂಟ್ರಲ್ ಸಿಲ್ಕ್ ಬೋರ್ಡ್ ನಿಲ್ದಾಣಗಳನ್ನು ಬೆಸೆಯಲಿವೆ.

ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರದವರೆಗಿನ 19.5 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗ 2ಎ ಹಂತದಲ್ಲಿ ಹಾಗೂ ಕೆ.ಆರ್.ಪುರದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ 38 ಕಿ.ಮೀ ಉದ್ದದ ಮಾರ್ಗ 2 ಬಿ ಹಂತದಲ್ಲಿ ನಿರ್ಮಾಣವಾಗಲಿದೆ. ನಗರದ ಪ್ರಮುಖ ತಾಣಗಳಿಂದ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ನೇರವಾಗಿ ಮೆಟ್ರೊ ಸಂಪರ್ಕ ಕಲ್ಪಿಸಲಿರುವ 2ಎ ಮತ್ತು 2 ಬಿ ಹಂತದ ಮಾರ್ಗಗಳು ನಗರದಲ್ಲಿ ಕ್ಷಿಪ್ರ ಸಾರಿಗೆ ಸೌಕರ್ಯವನ್ನು ಹೊಸ ಎತ್ತರಕ್ಕೆ ಒಯ್ಯಲಿವೆ. ಹೊರವರ್ತುಲ ರಸ್ತೆಯಲ್ಲಿ ಸದಾ ಸಮಸ್ಯೆ ತಂದೊಡ್ಡುವ ಸಂಚಾರ ದಟ್ಟಣೆಯ ಶಾಪಕ್ಕೆ ಮುಕ್ತಿ ನೀಡುವಲ್ಲೂ ಈ ಹೊಸ ಮೆಟ್ರೊ ಮಾರ್ಗಗಳು ನೆರವಾಗಲಿವೆ ಎಂದು ನಿರೀಕ್ಷಿಸಲಾಗಿದೆ.

ಈ ಎರಡೂ ಹಂತಗಳ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ಈ ಹಿಂದೆಯೇ ಅನುಮೋದನೆ ನೀಡಿತ್ತು. ಕಾಮಗಾರಿ ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನದಲ್ಲಿ ಸ್ವಲ್ಪ ಮೊತ್ತವನ್ನೂ ಬಿಡುಗಡೆ ಮಾಡಿದೆ. ಈ ಅನುದಾನ ಬಳಸಿ ಬಿಎಂಆರ್‌ಸಿಎಲ್ ಭೂಸ್ವಾಧೀನ ಹಾಗೂ ಅಗತ್ಯ ಮೂಲಸೌಕರ್ಯಗಳ ಸ್ಥಳಾಂತರ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

2ಎ ಹಂತವನ್ನು ಎರಡು ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದೆ. ಪ್ಯಾಕೇಜ್–1ರಡಿ ಸಿಲ್ಕ್ ಬೋರ್ಡ್ ಜಂಕ್ಷನ್ ನಿಲ್ದಾಣದಿಂದ ಕಾಡುಬೀಸನಹಳ್ಳಿವರೆಗಿನ ಆರು ನಿಲ್ದಾಣಗಳನ್ನು ಒಳಗೊಂಡ ಎತ್ತರಿಸಿದ ಮಾರ್ಗದ ಕಾಮಗಾರಿ ಕೈಗೆತ್ತಿಕೊಳ್ಳಲಿದೆ.

ಪ್ಯಾಕೇಜ್–2ರ ಅಡಿ ಕಾಡುಬೀಸನಹಳ್ಳಿಯಿಂದ ಕೆ.ಆರ್.ಪುರದವರೆಗಿನ ಏಳು ನಿಲ್ದಾಣಗಳನ್ನು ಒಳಗೊಂಡ ಎತ್ತರಿಸಿದ ಮಾರ್ಗದ ಕಾಮಗಾರಿ ಕೈಗೆತ್ತಿಕೊಳ್ಳಲಿದೆ. 2ಎ ಹಂತದ ಈ ಎರಡು ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆಯೂ ಬಹುತೇಕ ಮುಕ್ತಾಯದ ಹಂತದಲ್ಲಿದೆ.

2ಬಿ ಹಂತವನ್ನು ನಾಲ್ಕು ಪ್ಯಾಕೇಜ್‌ಗಳ ಮೂಲಕ ಅನುಷ್ಠಾನಗೊಳಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ. ಪ್ಯಾಕೇಜ್1ರಡಿ ಕೆ.ಆರ್.ಪುರದಿಂದ ಕೆಂಪಾಪುರದವರೆಗಿನ 8 ನಿಲ್ದಾಣಗಳನ್ನು ಒಳಗೊಂಡ ಮಾರ್ಗ, ಪ್ಯಾಕೇಜ್–2ರಲ್ಲಿ ಕೆಂಪಾಪುರದಿಂದ ಬಾಗಲೂರು ಕ್ರಾಸ್‌ವರೆಗಿನ ಐದು ನಿಲ್ದಾಣಗಳನ್ನು ಒಳಗೊಂಡ ಮಾರ್ಗ, ಪ್ಯಾಕೇಜ್–3ರಲ್ಲಿ ಬೆಟ್ಟಹಲಸೂರು ಹಾಗೂ ದೊಡ್ಡಜಾಲ ನಿಲ್ದಾಣಗಳನ್ನು ಒಳಗೊಂಡ ಮಾರ್ಗಗಳು ನಿರ್ಮಾಣವಾಗಲಿವೆ. ಪ್ಯಾಕೇಜ್–4ರಲ್ಲಿ ವಿಮಾನನಿಲ್ದಾಣದಲ್ಲಿ ನಿರ್ಮಾಣವಾಗುವ ಎರಡು ಮೆಟ್ರೊ ನಿಲ್ದಾಣಗಳು ಹಾಗೂ ಡಿಪೊ (ವಿಮಾನನಿಲ್ದಾಣ ಮತ್ತು ಬೈಯಪ್ಪನಹಳ್ಳಿ) ಕಾಮಗಾರಿಗಳನ್ನು ನಿಗಮ ಅನುಷ್ಠಾನಗೊಳಿಸಲಿದೆ. 2ಬಿ ಹಂತದ ಟೆಂಡರ್ ಪ್ರಕ್ರಿಯೆ ಆರಂಭಿಸುವುದಕ್ಕೂ ನಿಗಮ ಸಿದ್ಧತೆ ನಡೆಸಿದೆ.

‘ಈ ಎರಡು ಹಂತಗಳ ಕಾಮಗಾರಿಗಳಿಗೆ ಕೇಂದ್ರದ ಒಪ್ಪಿಗೆ ಸಿಕ್ಕಿರುವುದರಿಂದ ಟೆಂಡರ್ ಪ್ರಕ್ರಿಯೆಗಳನ್ನು ಶೀಘ್ರವೇ ಮುಗಿಸಿ ಕಾಮಗಾರಿಯನ್ನು ಚುರುಕುಗೊಳಿಸಲಿದ್ದೇವೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

2ಎ ಹಂತದ ಮಾರ್ಗವು ಸಿಲ್ಕ್‌ಬೋರ್ಡ್ ಜಂಕ್ಷನ್‌ನಲ್ಲಿ ಬೊಮ್ಮಸಂದ್ರ– ಆರ್.ವಿ.ರಸ್ತೆ ಮಾರ್ಗವನ್ನು ಸಂಪರ್ಕಿಸುತ್ತದೆ. ಕೆ.ಆರ್.ಪುರ–ವಿಮಾನನಿಲ್ದಾಣ ಮಾರ್ಗವು ನಾಗವಾರದಲ್ಲಿ ಗೊಟ್ಟಿಗೆರೆ– ನಾಗವಾರ ಮಾರ್ಗವನ್ನು ಸಂಪರ್ಕಿಸಲಿವೆ. ಹಾಗಾಗಿ ಈ ಹಂತಗಳ ಮಾರ್ಗಗಳು ನಗರದ ಪ್ರಮುಖ ಪ್ರದೇಶಗಳಿಂದ ವಿಮಾನನಿಲ್ದಾಣಕ್ಕೆ ನೇರವಾಗಿ ಮೆಟ್ರೊ ಸಂಪರ್ಕ ಕಲ್ಪಿಸುವಲ್ಲಿ ಮಹತ್ತರ ಪಾತ್ರ ವಹಿಸಲಿವೆ.

> **ಈ ಯೋಜನೆಯನ್ನು ಜಾರಿಗೊಳಿಸುವುದರಿಂದ ನಗರವು ವಿಶ್ವದರ್ಜೆಯ ಗುಣಮಟ್ಟದ ಸಾರಿಗೆ ಸೌಲಭ್ಯ ಹೊಂದಲಿದೆ.**
> **ರಾಕೇಶ್ ಸಿಂಗ್**, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್



ಬಂಡವಾಳ ಹೊಂದಿಸುವಿಕೆ ಹೇಗೆ?

ನಮ್ಮ ಮೆಟ್ರೊ 2ಎ ಮತ್ತು 2 ಬಿ ಹಂತದ ಕಾಮಗಾರಿಗಳಿಗೆ ಜೈಕಾ ₹ 2,380.83 ಕೋಟಿ (318 ಮಿಲಿಯನ್ ಅಮೆರಿಕನ್ ಡಾಲರ್) ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್ ₹ 3743.44 ಕೋಟಿ (500 ಮಿಲಿಯನ್ ಅಮೆರಿಕನ್ ಡಾಲರ್) ಸಾಲ ನೀಡಲು ಮುಂದೆ ಬಂದಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟು ವೆಚ್ಚದಲ್ಲಿ ತಲಾ ಶೇ 15ರಷ್ಟು ಪಾಲನ್ನು ಭರಿಸಲಿವೆ. ಭೂಸ್ವಾಧೀನದ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಲಿದೆ.

ವಿಮಾನನಿಲ್ದಾಣ ಸ್ವತ್ತುಗಳ ಮೌಲ್ಯದ ನಗದೀಕರಣ ರೂಪದಲ್ಲಿ ಕೆಐಎಎಲ್ ₹ 800 ಕೋಟಿ ನೆರವು ಒದಗಿಸಲಿದೆ. ಈ ಮಾರ್ಗವು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಕೇಂದ್ರಗಳನ್ನು ಬೆಸೆಯಲಿದೆ. ಹಾಗಾಗಿ ಕೆಲವು ನಿಲ್ದಾಣಗಳ ನಿರ್ಮಾಣಕ್ಕೆ ಕಾರ್ಪೊರೇಟ್ ಕಂಪನಿಗಳೂ ಹೂಡಿಕೆ ಮಾಡಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಆರೋಗ್ಯ ಕಾರ್ಯಕರ್ತರಿಗೆ ವಿಮಾ ಯೋಜನೆ ವಿಸ್ತರಣೆ

ನವದೆಹಲಿ: ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಸಾರ್ವಜನಿಕರಿಂದ ಬಂದ ಒತ್ತಡಕ್ಕೆ ಕೊನೆಗೂ ಮಣಿದಿರುವ ಕೇಂದ್ರ ಸರ್ಕಾರ ಆರೋಗ್ಯ ಕಾರ್ಯಕರ್ತರಿಗೆ ಜಾರಿಗೊಳಿಸಿದ್ದ ₹50 ಲಕ್ಷ ವಿಮಾ ಯೋಜನೆಯನ್ನು ಒಂದು ವರ್ಷ ವಿಸ್ತರಿಸಿದೆ.

ಕಳೆದ ವರ್ಷದ ಮಾರ್ಚ್ ತಿಂಗಳಿನಲ್ಲಿ ಪ್ರಕಟಿಸಿದ್ದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ ಸೌಲಭ್ಯದಡಿ ನೀಡುತ್ತಿದ್ದ ವಿಮೆ ಸೌಲಭ್ಯ ಇದೇ ಇದೇ 24ರಂದು ಮುಕ್ತಾಯವಾಗುತ್ತಿತ್ತು. ಕೋವಿಡ್ ಕಾರ್ಯಕರ್ತರ ಕುಟುಂಬಗಳಿಗೆ ಪ್ರತಿಕೂಲ ಸಂದರ್ಭದಲ್ಲಿ ಭದ್ರತೆ ಒದಗಿಸುವುದು ಇದರ ಗುರಿ. ಈ ಯೋಜನೆಯಡಿ 50 ಲಕ್ಷದ ವಿಮೆ ಭದ್ರತೆ ಒದಗಿಸಲಾಗಿತ್ತು.

ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ರಾಜು ಅವರು ಮಂಗಳವಾರ ಯೋಜನೆಯನ್ನು ಒಂದು ವರ್ಷ ಮುಂದುವರಿಸುವುದಾಗಿ ಘೋಷಿಸಿದ್ದಾರೆ. ಕೋವಿಡ್ ವಾರಿಯರ್ಸ್‌ಗಳಾದ ಆರೋಗ್ಯ ಕಾರ್ಯಕರ್ತರಿಗೆ ಜಾರಿಗೊಳಿಸಿದ್ದ ವಿಮೆ ಸೌಲಭ್ಯ ಹಿಂತೆಗೆದುಕೊಳ್ಳುವ ಕೇಂದ್ರದ ನಿಲುವನ್ನು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ತೀವ್ರವಾಗಿ ಖಂಡಿಸಿ ‘ ಸರ್ಕಾರಕ್ಕೆ ಕೃತಜ್ಞತೆಯಿಲ್ಲ’ ಎಂದಿದ್ದರು.

ಪೊಲೀಸ್ ಠಾಣೆಗೆ ಮುತ್ತಿಗೆ ಯತ್ನ: ಸಾರಿಗೆ ನೌಕರರ ಮೇಲೆ ಲಾಠಿ ಪ್ರಹಾರ

ಕೋಲಾರ: ಗ್ರಾಮಾಂತರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದ ಸಾರಿಗೆ ಸಿಬ್ಬಂದಿ ಮೇಲೆ ಪೊಲೀಸರು ಇಲ್ಲಿ ಮಂಗಳವಾರ ಲಾಠಿ ಪ್ರಹಾರ ನಡೆಸಿದ್ದಾರೆ. ಮುತ್ತಿಗೆ ಹಾಕಲು ಯತ್ನಿಸಿದ ಆರೋಪದ ಮೇಲೆ 31 ನೌಕರರನ್ನು ಬಂಧಿಸಲಾಗಿದೆ.

ಆರನೇ ವೇತನ ಆಯೋಗದ ಶಿಫಾರಸು ಜಾರಿಗೆ ಒತ್ತಾಯಿಸಿ 14 ದಿನಗಳಿಂದ ಮುಷ್ಕರ ನಡೆಸುತ್ತಿರುವ ಕೆಎಸ್‌ಆರ್‌ಟಿಸಿ ನೌಕರರು ಜಿಲ್ಲಾ ಕೇಂದ್ರದ ಕೆಎಸ್‌ಆರ್‌ಟಿಸಿ ಡಿಪೊ ಹಾಗೂ ಗಲ್‌ಪೇಟೆ ಪೊಲೀಸ್ ಠಾಣೆ ಎದುರು ಪ್ರತಿಭಟನೆ ಮಾಡಲು ಮುಂದಾದರು.

ಆದರೆ, ಕೋವಿಡ್ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಭೆ ಸಮಾರಂಭ ಹಾಗೂ ಪ್ರತಿಭಟನೆ ನಡೆಸದಂತೆ ಸರ್ಕಾರ ಆದೇಶ ಹೊರಡಿಸಿರುವ ಕಾರಣಕ್ಕೆ ಪೊಲೀಸರು ಸಾರಿಗೆ ನೌಕರರ ಪ್ರತಿಭಟನೆಗೆ ಅನುಮತಿ ನಿರಾಕರಿಸಿದರು. ಆದರೂ ಪ್ರತಿಭಟನೆಗೆ ಮುಂದಾದಾಗ ಸರ್ಕಾರದ ಆದೇಶ ಉಲ್ಲಂಘಿಸಿದ ಕಾರಣಕ್ಕೆ ಪೊಲೀಸರು ಕೆಲ ಸಾರಿಗೆ ನೌಕರರನ್ನು ವಶಕ್ಕೆ ತೆಗೆದುಕೊಂಡು ಕೋಲಾರ ಗ್ರಾಮಾಂತರ ಠಾಣೆಗೆ ಕರೆತಂದರು.

ಥಣಿಸಂದ್ರ ಹಳೇಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

‘ಸರ್ಕಾರದ ನಿರ್ಲಕ್ಷ್ಯ: ಸಾವು ನೋವು’

ಯಲಹಂಕ: ’ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಬರಲಿರುವ ಮುನ್ಸೂಚನೆಯಿದ್ದರೂ ಸರ್ಕಾರ ಕಳೆದ ಎರಡು ತಿಂಗಳಿಂದ ತನ್ನ ಜವಾಬ್ದಾರಿ ಮರೆತು ಸೋಂಕು ತಡೆಗಟ್ಟಲು ಅಗತ್ಯಕ್ರಮ ಕೈಗೊಳ್ಳದ ಪರಿಣಾಮ, ಇಂದು ಸಾವಿರಾರು ಜನರು ಸಾವುನೋವು ಅನುಭವಿಸುತ್ತಿದ್ದಾರೆ‘ ಎಂದು ಶಾಸಕ ಕೃಷ್ಣಬೈರೇಗೌಡ ಆರೋಪಿಸಿದರು.

ಥಣಿಸಂದ್ರ ಹಳೇಗ್ರಾಮದಲ್ಲಿ ₹15 ಲಕ್ಷ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಅಂಜನಾದ್ರಿ ಬಡಾವಣೆಯಲ್ಲಿ ₹2 ಕೋಟಿ ವೆಚ್ಚದಲ್ಲಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

’ಸರ್ಕಾರ ತನ್ನ ಜವಾಬ್ದಾರಿ ಮರೆತು ಚುನಾವಣೆಗಳು ಹಾಗೂ ಹಣಮಾಡುವುದರಲ್ಲಿ ತೊಡಗಿದೆ. ಎಲ್ಲ ಅನಾಹುತಗಳು ಸಂಭವಿಸಿದ ನಂತರ ಜವಾಬ್ದಾರಿಯಿಂದ ತಪ್ಪಿಕೊಳ್ಳಲು ನಾಮಕಾವಸ್ತೆಗೆ ಇತರೆ ಶಾಸಕರನ್ನು ಕರೆದು ಸಭೆ ನಡೆಸಿ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ‘ ಎಂದು ದೂರಿದರು.

ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಪಳನಿ ವೆಂಕಟೇಶ್, ಮಹೇಶ್ ಕುಮಾರ್, ಅರುಣ್ ಕುಮಾರ್, ಮೋಹನ್, ಮುನಿರಾಜು ಮತ್ತಿತರರು ಉಪಸ್ಥಿತರಿದ್ದರು.

ದಾನಿಗಳಿಗೆ ₹ 29 ಲಕ್ಷ ವಾಪಸ್

ಸರ್ಕಾರವೇ ಗ್ರಂಥಾಲಯ ನಿರ್ಮಿಸುವುದಾದರೆ ಸಾರ್ವಜನಿಕರ ಹಣ ಏಕೆ?

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಕಿಗೆ ಆಹುತಿಯಾಗಿದ್ದ ಸೈಯದ್ ಇಸಾಕ್ ಅವರ ಗ್ರಂಥಾಲಯವನ್ನು ಮರು ನಿರ್ಮಿಸಲೆಂದು ಸಂಗ್ರಹಿಸಿದ್ದ ₹ 29 ಲಕ್ಷ ಕ್ರೌಡ್ ಫಂಡಿಂಗ್ ಹಣವನ್ನು ದಾನಿಗಳಿಗೆ ವಾಪಸ್ ನೀಡಲು ಫಂಡ್ ರೈಸರ್ ಅಭಿಯಾನ ಆರಂಭಿಸಿದ್ದ ಫತೇನ್ ಮಿಸ್ಬಾ ನಿರ್ಧರಿಸಿದ್ದಾರೆ.

‘ಸರ್ಕಾರವೇ ಗ್ರಂಥಾಲಯವನ್ನು ಮರು ನಿರ್ಮಿಸಲು ಮುಂದೆ ಬಂದಿರುವಾಗ ಸಾರ್ವಜನಿಕರ ಹಣ ಏಕೆ ಬೇಕು’ ಎಂದು ದಾನಿಗಳು ಸೇರಿದಂತೆ ಹಲವರು ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದರು. ದಾನಿಗಳ ಅಭಿಪ್ರಾಯ ಸಂಗ್ರಹಿಸಿ ಈ ನಿರ್ಧಾರಕ್ಕೆ ಬಂದಿರುವುದಾಗಿ ಫತೇನ್ ಮಿಸ್ಬಾ ಟ್ವೀಟ್ ಮಾಡಿದ್ದಾರೆ.

ಇನ್ಫೊಸಿಸ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಇವರು, ಗ್ರಂಥಾಲಯ ಸುಟ್ಟು ಹೋದ ದಿನವೇ ‘ಕೆಟ್ಟೊ’ ವೆಬ್ ತಾಣದಲ್ಲಿ ಕ್ರೌಡ್ ಫಂಡಿಂಗ್ ಆರಂಭಿಸಿದ್ದರು. 1,800ಕ್ಕೂ ಅಧಿಕ ಮಂದಿ ಉದಾರವಾಗಿ ದೇಣಿಗೆ ನೀಡಿದ್ದರು. ಕೆಲವೇ ದಿನಗಳಲ್ಲಿ ₹ 29 ಲಕ್ಷ ಸಂಗ್ರಹವಾಗಿತ್ತು.

ಸುಟ್ಟು ಹೋದ ಗ್ರಂಥಾಲಯ

ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಗ್ರಂಥಾಲಯ ಇಲಾಖೆಯು ಮೇಯರ್ ನೇತೃತ್ವದ ಗ್ರಂಥಾಲಯ ಸಮಿತಿಗೆ ಗ್ರಂಥಾಲಯ ಮರು ನಿರ್ಮಿಸುವ ಹೊಣೆ ನೀಡಿದ್ದವು. ಜತೆಗೆ, ಪ್ರತ್ಯೇಕ ಬ್ಯಾಂಕ್ ಖಾತೆ ಸಂಖ್ಯೆ ನೀಡಿ, ‘ದಾನಿಗಳು ಇಲ್ಲಿಗೆ ಮಾತ್ರ ದೇಣಿಗೆ ನೀಡಬೇಕು. ಬೇರೆ ಯಾವುದೇ ವ್ಯಕ್ತಿಗೆ, ಸಂಘ ಸಂಸ್ಥೆಗಳಿಗೆ ಈ ಸಂಬಂಧ ದೇಣಿಗೆ ನೀಡಬಾರದು’ ಎಂದೂ ಸೂಚಿಸಲಾಗಿತ್ತು.

ಮುಖ್ಯಾಂಶಗಳು
- ದಾನಿಗಳ ಅಭಿಪ್ರಾಯ ಸಂಗ್ರಹಿಸಿ ತೀರ್ಮಾನ
- ದೇಣಿಗೆ ನೀಡಿದ್ದ 1,800ಕ್ಕೂ ಅಧಿಕ ಮಂದಿ
- ಹಣ ಸಂಗ್ರಹಿಸಲು ಪ್ರತ್ಯೇಕ ಬ್ಯಾಂಕ್ ಖಾತೆ ಆರಂಭಿಸಿರುವ ಆಡಳಿತ

ಸೈಯದ್

ಫತೇನ್ ಮಿಸ್ಬಾ

ಇದು ದಾನಿಗಳ ಕೋಪಕ್ಕೆ ಕಾರಣವಾಗಿತ್ತು. ‘ಸಾರ್ವಜನಿಕರ ಹಣದಲ್ಲಿ ಗ್ರಂಥಾಲಯ ನಿರ್ಮಿಸುವ ಮೂಲಕ ಎಲ್ಲ ಶ್ರೇಯವನ್ನು ಸರ್ಕಾರ ಪಡೆಯಲು ಹವಣಿಸುತ್ತಿದೆ’ ಎಂಬ ಆರೋಪವೂ ವ್ಯಕ್ತವಾಗಿತ್ತು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಫತೇನ್ ಮಿಸ್ಬಾ, ‘ಆರಂಭದಲ್ಲಿ ಸರ್ಕಾರವು ಗ್ರಂಥಾಲಯ ನಿರ್ಮಿಸಲು ಮುಂದಾಗಿರಲಿಲ್ಲ. ಹೀಗಾಗಿ, ಕ್ರೌಡ್ ಫಂಡಿಂಗ್ ಅಭಿಯಾನ ನಡೆಸಲಾಯಿತು. ಈಗ ದಾನಿಗಳ ಅಭಿಪ್ರಾಯ ಪಡೆದು ಅದರಂತೆ ನಡೆದುಕೊಂಡಿದ್ದೇನೆ’ ಎಂದರು.

ಬೇರೆ ಉದ್ದೇಶ ಇಲ್ಲ: ‘ನನ್ನ ಉದ್ದೇಶ ಕನ್ನಡ ಸಾರ್ವಜನಿಕ ಗ್ರಂಥಾಲಯ ನಿರ್ಮಾಣ ಮಾತ್ರ. ಬೇರೆ ಯಾವುದೇ ಉದ್ದೇಶ ಇಲ್ಲ. ಸಾರ್ವಜನಿಕರ ಅಭಿಪ್ರಾಯಕ್ಕೆ ಗೌರವ ಕೊಡುತ್ತೇನೆ’ ಎಂದು ಸೈಯದ್ ಇಸಾಕ್ ಪ್ರತಿಕ್ರಿಯಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ನೌಕರರ ಸಂಘ ಹಾಗೂ ಆಡಳಿತ ಮಂಡಳಿ ಸಹಯೋಗದಲ್ಲಿ ನಿಗಮದ ಅಧಿಕಾರಿಗಳು ಹಾಗೂ ನೌಕರರಿಗೆ ಮಂಗಳವಾರ ಕೋವಿಡ್ ಲಸಿಕೆ ನೀಡಲಾಯಿತು. ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್‌.ಮಂಜುಳಾ, ಆಡಳಿತ ನಿರ್ದೇಶಕ ಜಿ.ಎಂ. ಗಂಗಾಧರಸ್ವಾಮಿ, ಸಂಘದ ಅಧ್ಯಕ್ಷ ಟಿ.ಆರ್‌.ರಾಮಕೃಷ್ಣಯ್ಯ, ಕಾರ್ಯಾಧ್ಯಕ್ಷ ಎಚ್‌.ಆರ್‌.ಲಕ್ಷ್ಮಿಪತಿ, ಪ್ರಧಾನ ಕಾರ್ಯದರ್ಶಿ ಎಸ್‌.ಆರ್‌.ರಾಜಾನಾಯಕ್‌, ಬಲರಾಮ್‌, ಸೋಮಶೇಖರ್‌, ಕೆಪಿಟಿಸಿಎಲ್ ಕನ್ನಡ ಸಂಘದ ಕಾರ್ಯದರ್ಶಿ ಎ.ಆರ್‌. ಗೋವಿಂದಸ್ವಾಮಿ ಹಾಗೂ ಸಿಬ್ಬಂದಿ ಇದ್ದರು.

ರಾಮನವಮಿ: ಸಾಂಕೇತಿಕ ಪೂಜೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ನಿಯಂತ್ರಣಕ್ಕಾಗಿ ಸರ್ಕಾರ ಧಾರ್ಮಿಕ ಆಚರಣೆಗಳನ್ನು ನಿಷೇಧಿಸಿದ್ದು, ನಗರದಾದ್ಯಂತ ಅದ್ದೂರಿಯಾಗಿ ನಡೆಯುತ್ತಿದ್ದ ಶ್ರೀರಾಮ ನವಮಿ ಆಚರಣೆ ಸರಳವಾಗಿ ನೆರವೇರಲಿದೆ. ದೇವಸ್ಥಾನಗಳಿಗೆ ಭಕ್ತರಿಗೆ ಈ ಬಾರಿ ಪ್ರವೇಶ ಇರುವುದಿಲ್ಲ.

ದೇವಸ್ಥಾನಗಳಲ್ಲೂ ರಾಮನವಮಿ ಅಂಗವಾಗಿ ಯಾವುದೇ ವಿಜೃಂಭಣೆಯ ಪೂಜೆ, ವಿಶೇಷ ಅಲಂಕಾರ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸದಿರಲು ಆಡಳಿತ ಮಂಡಳಿಗಳು ನಿರ್ಧರಿಸಿದ್ದು, ಸಾಂಕೇತಿಕವಾಗಿ ಸರಳ ಪೂಜೆ ಸಲ್ಲಿಸಲು ಮುಂದಾಗಿವೆ.

ರಾಮನವಮಿ ದಿನದಂದು ರಾಮ, ಲಕ್ಷ್ಮಣ, ಸೀತೆ ಹಾಗೂ ಆಂಜನೇಯ ಮೂರ್ತಿಗಳಿಗೆ ತರಹೇವಾರಿ ಅಲಂಕಾರಗಳು, ಪಂಚಾಭಿಷೇಕ, ಹೋಮ, ಕಲ್ಯಾಣೋತ್ಸವ ಹಾಗೂ ಬೃಹತ್ ಮೆರವಣಿಗೆಗಳು ನಡೆಯುತ್ತಿದ್ದವು. ಶ್ರೀರಾಮ ಹಾಗೂ ಹನುಮಂತನ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ಸಲ್ಲುತ್ತಿದ್ದವು. ಆದರೆ, ಕೊರೊನಾ ನಿರ್ಬಂಧದಿಂದ ಯಾವುದೇ ಮೆರವಣಿಗೆಗಳು ಹಾಗೂ ಜನ ಗುಂಪು ಸೇರುವುದನ್ನು ನಿಷೇಧಿಸಿರುವುದರಿಂದ ಪ್ರಸಾದ ವಿತರಣೆಯೂ ಇರುವುದಿಲ್ಲ. ಭಕ್ತಾದಿಗಳು ಈ ರಾಮನವಮಿಯನ್ನು ಮನೆಗಳಲ್ಲೇ ಸರಳವಾಗಿ ಆಚರಿಸಲು ಮುಂದಾಗಿದ್ದಾರೆ.

ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಾಲಯ, ವಿದ್ಯಾಪೀಠ ವೃತ್ತ, ಗಿರಿನಗರ, ರಾಗಿಗುಡ್ಡ ಆಂಜನೇಯಸ್ವಾಮಿ ದೇವಸ್ಥಾನ, ಈಜಿಪುರ, ವೈಯಾಲಿಕಾವಲ್, ಹನುಮಂತನಗರದ ರಾಮಾಂಜನೇಯ ಸ್ವಾಮಿ ದೇವಸ್ಥಾನಗಳಲ್ಲಿ ಅಲ್ಲಿನ ಅರ್ಚಕರು ದೇವಾಲಯದ ಮಟ್ಟಿಗೆ ಪೂಜೆ ಮಾಡಲು ನಿರ್ಧರಿಸಿದ್ದಾರೆ.

‘ಕೊರೊನಾ ನಿರ್ಬಂಧ ಹೇರಿರುವುದರಿಂದ ದೇವಸ್ಥಾನದಲ್ಲಿ ಭಕ್ತರಿಗೆ ಅವಕಾಶ ಇರುವುದಿಲ್ಲ. ದೇವರಿಗೆ ಸರಳವಾಗಿ ಪೂಜೆ ಮಾತ್ರ ನಡೆಯಲಿದೆ’ ಎಂದು ಈಜಿಪುರ ಶ್ರೀರಾಮ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರೊಬ್ಬರು ತಿಳಿಸಿದರು.

ಮಾರುಕಟ್ಟೆಗಳಲ್ಲಿ ಖರೀದಿ ಭರಾಟೆ: ಈ ಬಾರಿ ಮನೆಗಳಲ್ಲೇ ರಾಮನವಮಿ ಆಚರಿಸಲು ಮುಂದಾಗಿರುವ ಜನರು ಹಬ್ಬದ ಖರೀದಿಗೆ ಮಾರುಕಟ್ಟೆಗಳಲ್ಲಿ ಮಂಗಳವಾರ ಸೇರಿದ್ದರು. ಹಬ್ಬಕ್ಕಾಗಿ ಹೂವು, ಹಣ್ಣು, ತರಕಾರಿ, ನಿಂಬೆಹಣ್ಣು, ಸೌತೆಕಾಯಿ, ಕರಬೂಜ ಖರೀದಿಯಲ್ಲಿ ತೊಡಗಿದ್ದರು. ‘ರಾಮನವಮಿಗೆ ಹೂವಿನ ದರಗಳು ಅಷ್ಟೇನೂ ಏರಿಕೆಯಾಗಿಲ್ಲ. ಸೇವಂತಿಗೆ ಪ್ರತಿ ಕೆ.ಜಿ.ಗೆ ₹80ರಿಂದ 120ರಂತೆ ಮಾರಾಟ ಆಗುತ್ತಿದೆ. ಗುಲಾಬಿ ₹100, ಮಲ್ಲಿಗೆ ₹200 ಹಾಗೂ ಕನಕಾಂಬರ ₹300ರಂತೆ ಮಾರಾಟವಾಗುತ್ತಿದೆ. ಮೆರವಣಿಗೆ, ಅಲಂಕಾರಗಳು ಇಲ್ಲದಿರುವುದರಿಂದ ಹೂವಿಗೆ ಬೇಡಿಕೆ ಇಲ್ಲ’ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವ್ಯಾಪಾರಿ ಕುಮಾರ್ ತಿಳಿಸಿದರು.

‘ಬಸ್‌ನಲ್ಲಿ ಸೀಟು ಸಿಗಲ್ಲ: ಮನೆಗೆ ಹೋಗುವುದು ಹೇಗೆ’

ಉಡುಪಿ: ಕೋವಿಡ್ ಮಾರ್ಗಸೂಚಿಗೆ ವಿರುದ್ಧವಾಗಿ ಬಸ್‌ಗಳಲ್ಲಿ ನಿಂತು ಪ್ರಯಾಣಿಸುತ್ತಿದ್ದವರನ್ನು ಕೆಳಗಿಳಿಸಿದ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರ ನಡೆಗೆ ವಿದ್ಯಾರ್ಥಿನಿಯೊಬ್ಬಳು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ವಿಡಿಯೊ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಉಡುಪಿಯಿಂದ ಸಿದ್ದಾಪುರಕ್ಕೆ ಪ್ರಯಾಣಿಸುತ್ತಿದ್ದ ವಿದ್ಯಾರ್ಥಿನಿ ಜಿಲ್ಲಾಡಳಿತ ವಿರುದ್ಧ ಆಕ್ರೋಶ ಹೊರಹಾಕಿದ್ದು, ‘ದೂರದ ಹಳ್ಳಿಯಿಂದ ಕಾಲೇಜಿಗೆ ಬಂದಿದ್ದು, ಊರಿಗೆ ತೆರಳಲು ಸರಿಯಾದ ಬಸ್‌ಗಳ ವ್ಯವಸ್ಥೆ ಇಲ್ಲ. ಅರ್ಧತಾಸಿಗೆ ಒಂದು ಬಸ್ ಬಂದರೂ, ಪ್ರಯಾಣಿಕರು ಹೆಚ್ಚಾಗಿರುವುದರಿಂದ ಸೀಟು ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹುಡುಗಿಯರು ಎಷ್ಟು ಹೊತ್ತು ನಿಲ್ದಾಣದಲ್ಲಿ ಕಾಯಬೇಕು ಎಂದು ವಿದ್ಯಾರ್ಥಿನಿ ಪ್ರಶ್ನಿಸಿದ್ದಾಳೆ.

ಜಿಲ್ಲಾಧಿಕಾರಿ ಏಕಾಏಕಿ ಬಸ್‌ನಿಂದ ಕೆಳಗಿಳಿಸಿ ಹೋದರು. ಎಲ್ಲ ಬಸ್‌ಗಳು ಪ್ರಯಾಣಿಕರಿಂದ ತುಂಬಿರುವಾಗ ಮನೆ ತಲುಪುವುದು ಹೇಗೆ? ತಡವಾಗಿ ಮನೆಗೆ ಹೋದರೆ ಪೋಷಕರು ಪ್ರಶ್ನಿಸುವುದಿಲ್ಲವೇ ಎಂದು ವಿದ್ಯಾರ್ಥಿನಿ ವಿಡಿಯೊದಲ್ಲಿ ಬೇಸರ ಹೊರಹಾಕಿದ್ದಾಳೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಜಿಲ್ಲಾಧಿಕಾರಿ ಜಿ.ಜಗದೀಶ್, ‘ಮಾರ್ಗಸೂಚಿ ಪ್ರಕಾರ ಬಸ್‌ಗಳಲ್ಲಿ ಆಸನಗಳ ಸಾಮರ್ಥ್ಯ ಮೀರಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಅವಕಾಶವಿಲ್ಲ. ಸೋಮವಾರ ಕೆಲವು ಬಸ್‌ಗಳಲ್ಲಿ ಅಂತರ ಪಾಲನೆ ಆಗದಿರುವುದು ಕಂಡು ಬಂದಿದ್ದರಿಂದ ನಿಂತು ಪ್ರಯಾಣಿಸುತ್ತಿದ್ದವರನ್ನು ಕೆಳಗಿಳಿಸಲಾಯಿತು. ನಂತರ ವಿದ್ಯಾರ್ಥಿಗಳಿಗೆ ಪರ್ಯಾಯ ಬಸ್ ವ್ಯವಸ್ಥೆ ಮಾಡಲಾಯಿತು’ ಎಂದರು.

‘ದೂರದ ಊರುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಬಸ್‌ಗಳ ಕೊರತೆ ಇದ್ದರೆ, ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು. ಆದರೆ, ನಿಗದಿಗಿಂತ ಹೆಚ್ಚು ಪ್ರಯಾಣಿಕರು ಸಂಚರಿಸಲು ಅವಕಾಶ ನೀಡುವುದಿಲ್ಲ’ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮೊಬೈಲ್ ಸುಲಿಗೆ: ‘ಬಡಾ– ಚೋಟಾ’ ಮಚ್ಚರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಕೊಲೆ ಬೆದರಿಕೆಯೊಡ್ಡಿ ಮೊಬೈಲ್ ಹಾಗೂ ದ್ವಿಚಕ್ರ ವಾಹನ ಸುಲಿಗೆ ಮಾಡುತ್ತಿದ್ದ ಆರೋಪದಡಿ ಮೂವರನ್ನು ವಿ.ವಿ.ಪುರ ಪೊಲೀಸರು ಬಂಧಿಸಿದ್ದಾರೆ.

‘ಪಾದರಾಯನಪುರ ನಿವಾಸಿ ಇಮ್ರಾನ್ ಖಾನ್ ಅಲಿಯಾಸ್ ಬಡಾ ಮಚ್ಚರ್ (24), ಇರ್ಫಾನ್ ಪಾಷಾ ಅಲಿಯಾಸ್ ಚೋಟಾ ಮಚ್ಚರ್ (19) ಹಾಗೂ ಓಕಳಿಪುರದ ರಾಜು ಸಿಂಗ್ (27) ಬಂಧಿತರು. ಅವರಿಂದ ₹ 8.20 ಲಕ್ಷ ಮೌಲ್ಯದ 70 ಮೊಬೈಲ್‌ಗಳು, 2 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿ.ವಿ. ಪುರ, ಚಾಮರಾಜಪೇಟೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮೊಬೈಲ್ ಸುಲಿಗೆ ಪ್ರಕರಣಗಳು ಹೆಚ್ಚಾಗಿದ್ದವು. ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು’ ಎಂದು ತಿಳಿಸಿದರು.

ಜಪ್ತಿ ಮಾಡಲಾದ ಮೊಬೈಲ್‌ಗಳು ಹಾಗೂ ದ್ವಿಚಕ್ರ ವಾಹನಗಳ ಜೊತೆ ಆರೋಪಿಗಳಾದ ಬಡಾ–ಚೋಟಾ ಮಚ್ಚರ್

‘ಜೆ.ಸಿ.ರಸ್ತೆಯಲ್ಲಿ ಕಾರುಗಳಿಗೆ ಸ್ಟಿಕ್ಕರ್ ಅಂಟಿಸುವ ಕೆಲಸ ಮಾಡಿಕೊಂಡಿದ್ದ ಬಡಾ ಮಚ್ಚರ್, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ. ಆತನ ವಿರುದ್ಧ ಚಂದ್ರಾ ಲೇಔಟ್ ಠಾಣೆಯಲ್ಲಿ ಈ ಹಿಂದೆಯೇ ಪ್ರಕರಣ ದಾಖಲಾಗಿತ್ತು. ಇನ್ನೊಬ್ಬ ಆರೋಪಿ ಚೋಟಾ ಮಚ್ಚರ್, ಮೆಜೆಸ್ಟಿಕ್ ಪಾದಚಾರಿ ಮಾರ್ಗದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಈತನ ವಿರುದ್ಧ ವಿ.ವಿ.ಪುರ, ಸಿದ್ದಾಪುರ ಹಾಗೂ ಚಂದ್ರಾ ಲೇಔಟ್ ಠಾಣೆಯಲ್ಲಿ ಸುಲಿಗೆ ಪ್ರಕರಣಗಳು ದಾಖಲಾಗಿದ್ದವು’ ಎಂದೂ ಪೊಲೀಸರು ಹೇಳಿದರು.

‘ಇಬ್ಬರೂ ಆರೋಪಿಗಳು ಒಟ್ಟಿಗೆ ಸೇರಿ ಮೊಬೈಲ್ ಹಾಗೂ ದ್ವಿಚಕ್ರ ವಾಹನಗಳನ್ನು ಸುಲಿಗೆ ಮಾಡಲಾರಂಭಿಸಿದ್ದರು. ಅವರ ಕೃತ್ಯದ ಬಗ್ಗೆ ಹಲವು ಸಾರ್ವಜನಿಕರು ದೂರು ನೀಡಿದ್ದರು’ ಎಂದೂ ತಿಳಿಸಿದರು.

ಮೊಬೈಲ್ ಮಳಿಗೆ ಇಟ್ಟುಕೊಂಡಿದ್ದ ಆರೋಪಿ: ‘ಪ್ರಕರಣದ ಆರೋಪಿ ರಾಜುಸಿಂಗ್, ಗಾಂಧಿನಗರದ ಎಸ್.ಎನ್. ಬಜಾರ್‌ನಲ್ಲಿ ಮೊಬೈಲ್ ದುರಸ್ತಿ ಮಳಿಗೆ ಇಟ್ಟುಕೊಂಡಿದ್ದ. ಆರೋಪಿಗಳು ಸುಲಿಗೆ ಮಾಡಿ ತಂದುಕೊಡುತ್ತಿದ್ದ ಮೊಬೈಲ್‌ಗಳ ಬಿಡಿಭಾಗಗಳನ್ನು ಬೇರ್ಪಡಿಸಿ ಮಾರಾಟ ಮಾಡುತ್ತಿದ್ದ’ ಎಂದೂ ಪೊಲೀಸರು ಹೇಳಿದರು.

‘ರಾತ್ರಿಯಲ್ಲೇ ಆರೋಪಿಗಳು ಹೆಚ್ಚು ಸುಲಿಗೆ ಮಾಡುತ್ತಿದ್ದರು. ಮೊಬೈಲ್‌ಗಳನ್ನು ರಾಜುಸಿಂಗ್‌ಗೆ ಕೊಟ್ಟು ಹಣ ಪಡೆಯುತ್ತಿದ್ದರು’ ಎಂದೂ ತಿಳಿಸಿದರು.

ಸಫಾರಿಗೆ ಒಟ್ಟು 13 ಕಿ.ಮೀ ಮಾರ್ಗ • ಭರದ ಸಿದ್ಧತೆ

ದರೋಜಿ ಕರಡಿಧಾಮದಲ್ಲಿ ಜಂಗಲ್ ಸಫಾರಿ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಇಲ್ಲಿಗೆ ಸಮೀಪದ ದರೋಜಿ ಕರಡಿಧಾಮದಲ್ಲಿ ಜಂಗಲ್ ಸಫಾರಿ ಆರಂಭಿಸಲು ಭರದ ಸಿದ್ಧತೆ ನಡೆದಿದೆ. ಕರಡಿಧಾಮದಲ್ಲಿ ಸಫಾರಿಗೆ ಒಟ್ಟು 13 ಕಿ.ಮೀ ಮಾರ್ಗ ಗುರುತಿಸಲಾಗಿದ್ದು, ಈಗಾಗಲೇ ಮಣ್ಣಿನ ಕಚ್ಚಾ ರಸ್ತೆಯನ್ನು ನಿರ್ಮಿಸಲಾಗಿದೆ.

ಬೆಳಿಗ್ಗೆ ಮತ್ತು ಮಧ್ಯಾಹ್ನದ ವೇಳೆ ಎರಡು ವಾಹನಗಳಲ್ಲಿ ಸಫಾರಿಗೆ ಅವಕಾಶ ಕಲ್ಪಿಸಲು ಯೋಜಿಸಲಾಗಿದೆ. ಇನ್ನಷ್ಟೇ ದರ ನಿಗದಿಯಾಗಬೇಕಿದೆ. ಕರಡಿಧಾಮವು ಸಂಪೂರ್ಣವಾಗಿ ಬಂಡೆಗಲ್ಲುಗಳ ಬೆಟ್ಟ–ಗುಡ್ಡ, ಕುರುಚಲು ಕಾಡಿನಿಂದ ಕೂಡಿದೆ. ಕುರುಚಲು ಕಾಡಿನ ವಿಭಿನ್ನ ಅನುಭವ ಕಟ್ಟಿಕೊಡುವುದಕ್ಕಾಗಿಯೇ ದರೋಜಿಯಲ್ಲಿ ಸಫಾರಿ ಆರಂಭಿಸಲಾಗುತ್ತಿದೆ.

ಕರಡಿಧಾಮವೆಂದರೆ ಕೇವಲ ಕರಡಿಗಳಿಗಷ್ಟೇ ಸೀಮಿತ ಎನ್ನುವ ಭಾವನೆ ಹಲವರಲ್ಲಿದೆ. ಅದನ್ನು ದೂರವಾಗಿಸಲೆಂದೆ ಈ ಯೋಜನೆ ರೂಪಿಸಲಾಗುತ್ತಿದೆ. ಪ್ರಾಣಿ, ಪಕ್ಷಿಗಳ ವೀಕ್ಷಣೆ, ಪ್ರಕೃತಿ ಶಿಬಿರ, ಕುರುಚಲು ಕಾಡಿನ ಮಹತ್ವ, ಅಲ್ಲಿ ಬೆಳೆಯುವ ಅಪರೂಪದ ಗಿಡ, ಮರಗಳ ಬಗ್ಗೆ ತಿಳಿಸುವುದು ಇದರ ಮುಖ್ಯ ಉದ್ದೇಶ.

ಹೊಸಪೇಟೆ ಸಮೀಪದ ದರೋಜಿ ಕರಡಿಧಾಮದ ನೋಟ

ಪ್ರಜಾವಾಣಿ ವಿಶೇಷ

‘27 ವರ್ಷಗಳಲ್ಲಿ ದರೋಜಿ ಕರಡಿಧಾಮ ಸಮೃದ್ಧವಾಗಿ ಬೆಳೆದಿದೆ. 2019ರಲ್ಲಿ ಸರ್ಕಾರ ಧಾಮವನ್ನು ಪರಿಸರ ಸೂಕ್ಷ್ಮ ವಲಯವಾಗಿ ಘೋಷಿಸಿದ ನಂತರ ಎಲ್ಲ ರೀತಿಯ ಮಾನವ ಚಟುವಟಿಕೆಗಳಿಗೆ ತಡೆ ಬಿದ್ದಿದೆ. ಇಂಗು ಗುಂಡಿ, ಬದು ನಿರ್ಮಾಣ, ಸಣ್ಣಕೆರೆಗಳ ಹೂಳು ತೆಗೆಸಿರುವುದರಿಂದ ಅಂತರ್ಜಲ ಹೆಚ್ಚಾಗಿದೆ. ಅರಣ್ಯೀಕರಣದಿಂದ ಇಡೀ ಪರಿಸರ ಹಸಿರಾಗಿದೆ. ಬೇರೆ ಅರಣ್ಯಗಳಂತೆ ಕುರುಚಲು ಕಾಡಿಗೂ ಅದರದೇ ಆದ ಮಹತ್ವ ಇರುತ್ತದೆ. ಸಫಾರಿ ಮೂಲಕ ಅದರ ಮಹತ್ವ ತಿಳಿಸಲು ಯೋಜಿಸಲಾಗಿದೆ’ ಎಂದು ವಲಯ ಅರಣ್ಯ ಅಧಿಕಾರಿ ಉಷಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಧಾಮವು ಕರಡಿ, ಗುಳ್ಳೇನರಿ, ಕಾಡು ಹಂದಿ, ಮೊಲ ಸೇರಿದಂತೆ ಇತರೆ ಪ್ರಾಣಿಗಳ ನೆಲೆವೀಡಾಗಿದೆ. 180 ಜಾತಿಯ ಪಕ್ಷಿಗಳು, 50 ಬಗೆಯ ಸರೀಸೃಪಗಳಿವೆ. ಉಲುಪಿ, ಕಾರೆ, ಕವಳೆ, ಬಾರೆ, ಜಾನೆ, ಕಕ್ಕೆ, ಗೊರವಿ, ಸೀತಾಫಲ ಸೇರಿ 28 ಜಾತಿಯ ಗಿಡ, ಮರಗಳಿವೆ. ಹೊರಗಿನವರಿಗೆ ಇದೆಲ್ಲ ಪರಿಚಯಿಸುವುದೇ ಸಫಾರಿಯ ಗುರಿ’ ಎಂದು ವಿವರಿಸಿದರು.

> **ದರೋಜಿ ಕರಡಿಧಾಮ ಪ್ರವಾಸಿ ತಾಣವಾಗಿ ಬದಲಿಸಿ, ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಸಫಾರಿ ಆರಂಭಿಸಲು ಯೋಜನೆ ರೂಪಿಸಲಾಗಿದೆ**
> **ಉಷಾ,** ವಲಯ ಅರಣ್ಯ ಅಧಿಕಾರಿ, ದರೋಜಿ ಕರಡಿಧಾಮ

ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದ ಕೊರೊನಾ ಸೋಂಕುಪೀಡಿತ

ದಿನವಿಡೀ ಅಲೆದರೂ ಹಾಸಿಗೆ ಸಿಗಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವರ ಹೆಸರು ಕರುಣಾಮೂರ್ತಿ. ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಶಾಮಣ್ಣ ಗಾರ್ಡನ್ ನಿವಾಸಿ. ನಗರದಲ್ಲಿ ಕೋವಿಡ್ ಹರಡುವಿಕೆಯಿಂದ ಉಂಟಾಗಿರುವ ಪರಿಸ್ಥಿತಿ ಅವರ ಮೇಲೆ ಕರುಣೆ ತೋರಿಲ್ಲ. ಕೋವಿಡ್ ಸೋಂಕಿನಿಂದ ಬಳಲುತ್ತಿರುವ ಅವರು ಆಂಬುಲೆನ್ಸ್‌ನಲ್ಲಿ ದಿನವಿಡೀ ಅಲೆದರೂ ತುರ್ತು ನಿಗಾ ವ್ಯವಸ್ಥೆಯ ಹಾಸಿಗೆ ಲಭಿಸಲಿಲ್ಲ.

ಕರುಣಾಮೂರ್ತಿ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಮಂಗಳವಾರ ದೃಢಪಟ್ಟಿತ್ತು. ಅವರಿಗೆ ಬಿಬಿಎಂಪಿ ಪೂರ್ವ ವಲಯದ ಅಧಿಕಾರಿಗಳು ಬಿ.ಯು.ನಂಬರ್ ಒದಗಿಸಿ ಕಿಮ್ಸ್ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಿದ್ದರು.

ಅಲ್ಲಿಗೆ ಹೋಗುವಷ್ಟರಲ್ಲಿ ಕರುಣಾಮೂರ್ತಿ ಅವರ ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಶೇ 70ಕ್ಕಿಂತ ಕಡಿಮೆ ಆಗಿತ್ತು. ಅಮ್ಲಜನಕ ಪೂರಣ ವ್ಯವಸ್ಥೆಯ ಹಾಸಿಗೆ ಲಭ್ಯ ಇಲ್ಲದ ಕಾರಣ ಕಿಮ್ಸ್‌ನವರು ಅವರನ್ನು ಬೇರೆ ಕಡೆ ಕರೆದೊಯ್ಯುವಂತೆ ಸೂಚಿಸಿದರು. ಅವರನ್ನು ಬೇರೆ ಆಸ್ಪತ್ರೆಗೆ ದಾಖಲಿಸಲು ಕುಟುಂಬಸ್ಥರು ಮುಂದಾದರು.

'ನಾವು ಮೂರು ಗಂಟೆಗಳಿಂದ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುತ್ತಿದ್ದೇವೆ. ಎಲ್ಲೂ ಹಾಸಿಗೆ ಸಿಗುತ್ತಿಲ್ಲ. ಏನು ಮಾಡಬೇಕೆಂದೇ ತೋಚುತ್ತಿಲ್ಲ' ಎಂದು ಕರುಣಾಮೂರ್ತಿ ಅವರ ಸಹೋದರ ರಾಮಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಗರದಲ್ಲಿ ಅನೇಕ ರೋಗಿಗಳು ಐಸಿಯು ಹಾಸಿಗೆ ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ. ಪರಿಸ್ಥಿತಿ ಬಿಗಡಾಯಿಸಲು ಆರಂಭವಾಗಿ 15 ದಿನಗಳೇ ಕಳೆದಿವೆ. ಜನರ ಜೀವವನ್ನು ಕಾಪಾಡುವುದಕ್ಕೆ ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿಲ್ಲ. ಬಿಬಿಎಂಪಿಯ ಸಹಾಯವಾಣಿಗೆ ಕರೆ ಮಾಡಿದರೆ ಸ್ಪಂದನೆ ಸಿಗುತ್ತಿಲ್ಲ. ಅಧಿಕಾರಿಗಳೂ ಕರೆ ಸ್ವೀಕರಿಸುತ್ತಿಲ್ಲ. ಭವಿಷ್ಯದ ದಿನಗಳು ಇನ್ನಷ್ಟು ಕರಾಳ ಆಗಿರಲಿವೆ. ಈ ಬಗ್ಗೆ ಯೋಚಿಸಿದರೇ ಮೈ ನಡುಗುತ್ತದೆ' ಎಂದು ಮಾಜಿ ಕಾರ್ಪೊರೇಟರ್ ಒಬ್ಬರು ಕಳವಳ ವ್ಯಕ್ತಪಡಿಸಿದರು.



ಸಾಂದರ್ಭಿಕ ಚಿತ್ರ

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,70,035 ಒಟ್ಟು ಸೋಂಕಿತರು

4,49,889 ಗುಣಮುಖರಾದವರು

1,14,833 ಸಕ್ರಿಯ ಪ್ರಕರಣ

5,312 ಸಾವು

ಮಂಗಳವಾರದ ಏರಿಕೆ

13,782 ದೃಢಪಟ್ಟ ಪ್ರಕರಣ

2,035 ಗುಣಮುಖ

92 ಸಾವು

ವೈದ್ಯಕೀಯ ಕಾಲೇಜು: ಹೆಚ್ಚುವರಿ ಹಾಸಿಗೆ ಗುರುತಿಸಲು ಮನವಿ

ಬೆಂಗಳೂರು: 'ಕೋವಿಡ್ ಪೀಡಿತರ ಸಂಖ್ಯೆ ವೇಗವಾಗಿ ಹೆಚ್ಚಳವಾಗುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿನ ಹಾಸಿಗೆಗಳು ಕೂಡ ಸಾಕಾಗುವುದಿಲ್ಲ. ಹಾಗಾಗಿ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಹೆಚ್ಚಿನ ಹಾಸಿಗೆಗಳನ್ನು ಚಿಕಿತ್ಸೆಗೆ ಗುರುತಿಸಬೇಕು' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಸರ್ಕಾರಕ್ಕೆ ಮನವಿ ಮಾಡಿದೆ.

ಈ ಸಂಬಂಧ ಫಾನಾ ಆರೋಗ್ಯ ಮತ್ತು ವೈದ್ಯಕೀಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಪತ್ರ ಬರೆದಿದೆ. 'ಸೋಂಕಿತರಿಗೆ ಶೇ 50ರಷ್ಟು ಹಾಸಿಗೆಗಳನ್ನು ಮೀಸಲಿಡಲು ನಾವು ಬದ್ಧರಾಗಿದ್ದೇವೆ. ಆದರೆ, ಕೋವಿಡ್ ಪೀಡಿತರ ಸಂಖ್ಯೆ ಏರುತ್ತಿರುವುದರಿಂದ ಈ ಹಾಸಿಗೆಗಳು ಸಾಕಾಗುವುದಿಲ್ಲ. ಹಾಗಾಗಿ, ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಹೆಚ್ಚುವರಿ ಹಾಸಿಗೆ ಪಡೆದುಕೊಳ್ಳಬೇಕಿದೆ. ಸದ್ಯ ರಾಜ್ಯದ ಖಾಸಗಿ ವೈದ್ಯಕೀಯ ಕಾಲೇಜುಗಳು ಸರಾಸರಿ 245 ಹಾಸಿಗೆಯನ್ನು ಕೋವಿಡ್ ಚಿಕಿತ್ಸೆಗೆ ನೀಡಿವೆ. ಅವುಗಳು ಹೆಚ್ಚುವರಿ ಕೋವಿಡ್ ಹಾಸಿಗೆಗಳನ್ನು ಒದಗಿಸುವ ಸಾಮರ್ಥ್ಯ ಹೊಂದಿವೆ' ಎಂದು ಫಾನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದ್ದಾರೆ.

'ಸರ್ಕಾರವು ವೈದ್ಯಕೀಯ ಕಾಲೇಜುಗಳನ್ನು ಸಂಪರ್ಕಿಸಿದರೆ ಪ್ರತಿ ಸಂಸ್ಥೆಯಿಂದ 800 ಹಾಸಿಗೆಯನ್ನು ಕೋವಿಡ್ ಚಿಕಿತ್ಸೆಗೆ ಪಡೆಯಬಹುದಾಗಿದೆ. ಇದರಿಂದ ಸೋಂಕಿತರ ಚಿಕಿತ್ಸೆಗೆ ಹೆಚ್ಚುವರಿಯಾಗಿ 8 ಸಾವಿರ ಹಾಸಿಗೆಗಳು ದೊರೆಯಲಿವೆ. ವೈದ್ಯಕೀಯ ಕಾಲೇಜುಗಳು ಕಡಿಮೆ ಅವಧಿಯಲ್ಲೇ ಹಾಸಿಗೆ ಸಂಖ್ಯೆ ಹೆಚ್ಚಿಸುವ ಸಾಮರ್ಥ್ಯ ಹೊಂದಿವೆ' ಎಂದು ವಿವರಿಸಿದ್ದಾರೆ.

ಅಂತ್ಯಕ್ರಿಯೆಗೆ ಜಮೀನು ಒದಗಿಸಲು ಆದೇಶ

ರಾಜ್ಯದ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯ ಸಂಸ್ಕಾರಕ್ಕೆ ಸರ್ಕಾರಿ ಜಮೀನುಗಳನ್ನು ಗುರುತಿಸಿ, ಒದಗಿಸುವಂತೆ ಕಂದಾಯ ಸಚಿವ ಆರ್. ಅಶೋಕ, ಎಲ್ಲ ಜಿಲ್ಲಾಧಿಕಾರಿಗಳಿಗೆ ಮಂಗಳವಾರ ಆದೇಶಿಸಿದ್ದಾರೆ.

ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಸಂಭವಿಸುತ್ತಿರುವ ಸಾವುಗಳ ಸಂಖ್ಯೆ ಹೆಚ್ಚುತ್ತಿದೆ. ಮೃತರ ಅಂತ್ಯಸಂಸ್ಕಾರಕ್ಕೆ ಜಮೀನು ಲಭ್ಯವಾಗುತ್ತಿಲ್ಲ ಎಂಬ ಅಂಶ ಗಮನಕ್ಕೆ ಬಂದಿದೆ. ಬಿಬಿಎಂಪಿ ಸೇರಿದಂತೆ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ 1ರಿಂದ 2 ಕಿ.ಮೀ. ದೂರದಲ್ಲಿ ಸರ್ಕಾರಿ ಜಮೀನುಗಳನ್ನು ಗುರುತಿಸಿ, ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕಾಗಿ ಒದಗಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೊರೊನಾ ಕೇಂದ್ರವಾಗಿ ಹಾಸ್ಟೆಲ್ ಬಳಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಎರಡನೇ ಅಲೆಯ ನಿಯಂತ್ರಣಕ್ಕಾಗಿ ವಿದ್ಯಾರ್ಥಿ ನಿಲಯಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಮುಂದಾಗಿರುವುದರಿಂದ ದಲಿತ ಸಮುದಾಯದ ವಿದ್ಯಾರ್ಥಿಗಳಿಗೆ ಭಾರಿ ಸಮಸ್ಯೆಯಾಗಲಿದೆ' ಎಂದು ವಿದ್ಯಾರ್ಥಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಕೆಲವು ವಿದ್ಯಾರ್ಥಿ ನಿಲಯಗಳನ್ನು ಕೊರೊನಾ ಆರೈಕೆ ಕೇಂದ್ರಗಳನ್ನಾಗಿ ಬಳಸಲು ಅನುವು ಮಾಡಿಕೊಡುವಂತೆ ಬಿಬಿಎಂಪಿಯು ಇಲಾಖೆಗೆ ಮನವಿ ಮಾಡಿದೆ. ಈಗಿನ ಪರಿಸ್ಥಿತಿಯಲ್ಲಿ ದಲಿತ ಸಮುದಾಯದ ವಿದ್ಯಾರ್ಥಿಗಳು ತಮ್ಮ ಊರುಗಳಿಗೆ ವಾಪಸ್ ಆಗುವುದರಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಿದೆ' ಎಂದು ವಿದ್ಯಾರ್ಥಿ ಕಾವೇರಿ ದಾಸ್ ತಿಳಿಸಿದರು.

'ಕಳೆದ ವರ್ಷ ಕೊರೊನಾ ಮಿತಿ ಮೀರಿದ್ದ ಸಂದರ್ಭದಲ್ಲೂ ಇದೇ ರೀತಿ ಹಾಸ್ಟೆಲ್‌ಗಳನ್ನು ಕೋವಿಡ್ ಕೇಂದ್ರಗಳನ್ನಾಗಿ ಬಳಸಿಕೊಂಡಿದ್ದರು. ಸೂಚನೆಯಂತೆ ಹಾಸ್ಟೆಲ್‌ಗಳನ್ನು ಬಿಟ್ಟುಕೊಟ್ಟಿದ್ದೆವು. ಆದರೆ, ಹಿಂತಿರುಗಿದಾಗ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಮಹತ್ವದ ವಸ್ತುಗಳು ಹಾಗೂ ದಾಖಲೆಗಳು ಕಾಣೆಯಾಗಿದ್ದವು. ಕೋವಿಡ್ ಸೋಂಕಿತರು ಬಳಸಿದ್ದ ವಿದ್ಯಾರ್ಥಿ ನಿಲಯಗಳ ಸ್ಥಿತಿಯೂ ಬದಲಾಗಿರಲಿಲ್ಲ. ಸ್ಯಾನಿಟೈಸ್ ಕೂಡ ಮಾಡಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಚಿತಾಗಾರ ಕಾರ್ಮಿಕರ ಕಾಯಂಗೊಳಿಸಿ'

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಚಿತಾಗಾರಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಕಾಯಂ ಗೊಳಿಸಬೇಕು' ಎಂದು ಸಿಪಿಎಂ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

'ಕೋವಿಡ್‌ನಿಂದಾಗಿ ಮೃತಪಡುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಈ ಪರಿಸ್ಥಿತಿಯಲ್ಲಿ ಕಾರ್ಮಿಕರು ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಕಳೆದ ಕೆಲವು ತಿಂಗಳುಗಳಿಂದ ವೇತನ ನೀಡಿಲ್ಲ. ಬಾಕಿ ವೇತನವನ್ನು ಕೂಡಲೇ ಬಿಡುಗಡೆಮಾಡಬೇಕು. ಪ್ರಸ್ತುತ ಸನ್ನಿವೇಶದಲ್ಲಿ ನಿತ್ಯ ರಾತ್ರಿ ಒಂದು ಗಂಟೆವರೆಗೂ ಅಂತ್ಯಕ್ರಿಯೆ ನೆರವೇರಿಸಬೇಕಾಗಿದೆ. ಈ ಕಾರ್ಮಿಕರನ್ನು ಕೊರೊನಾ ಸೇನಾನಿಗಳೆಂದು ಗುರುತಿಸಿ ₹30 ಲಕ್ಷ ಮೊತ್ತದ ವಿಮೆ ಒದಗಿಸಬೇಕು' ಎಂದು ಬೆಂಗಳೂರು ದಕ್ಷಿಣ ಸಮಿತಿಯ ಕಾರ್ಯದರ್ಶಿ ಕೆ.ಎನ್.ಉಮೇಶ್ ಆಗ್ರಹಿಸಿದ್ದಾರೆ.

44 ಲಕ್ಷ ಲಸಿಕೆ ಪೋಲು: ದೆಹಲಿ ಹೈಕೋರ್ಟ್ ಅತೃಪ್ತಿ

ನವದೆಹಲಿ (ಪಿಟಿಐ): ಲಸಿಕೆಯು ಭಾರಿ ಪ್ರಮಾಣದಲ್ಲಿ ಪೋಲು ಆಗುತ್ತಿರುವ ಬಗ್ಗೆ ದೆಹಲಿ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಪೋಲು ತಡೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ದಿನವೂ ಶೇ 6ರಷ್ಟು ಲಸಿಕೆ ಪೋಲಾಗುತ್ತಿದೆ. ಈವರೆಗೆ 10 ಕೋಟಿ ಜನರಿಗೆ ಲಸಿಕೆ ನೀಡಲಾಗಿದ್ದರೆ 44 ಲಕ್ಷ ಪೋಲಾಗಿದೆ. ತಮಿಳುನಾಡಿನಲ್ಲಿಯೇ ಹೆಚ್ಚು ಪೋಲಾಗಿದೆ ಎಂದು ವರದಿಗಳನ್ನು ಉಲ್ಲೇಖಿಸಿ ಕೋರ್ಟ್ ಹೇಳಿದೆ.

'ಪೋಲಿನ ಪ್ರಮಾಣವು ಬಹಳ ಹೆಚ್ಚು. ಯಾರಿಗೆ ಲಸಿಕೆ ಹಾಕಿಸಲು ಸಾಧ್ಯವೋ ಅವರಿಗೆ ಹಾಕಿಸಿ. ವರ್ಷ 16 ಆಗಿರಲಿ, 60 ಆಗಿರಲಿ. ಸಾಂಕ್ರಾಮಿಕಕ್ಕೆ ವಯಸ್ಸಿನ ತಾರತಮ್ಯ ಇಲ್ಲ' ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರ ಪೀಠವು ಹೇಳಿದೆ.

ತಮಿಳುನಾಡಿನಲ್ಲಿ ಅತಿ ಹೆಚ್ಚು ಅಂದರೆ ಶೇ 12ರಷ್ಟು ಲಸಿಕೆ ವ್ಯರ್ಥವಾಗಿದೆ. ಹರಿಯಾಣ (ಶೇ 9.74), ಪಂಜಾಬ್ (ಶೇ 8.12), ಮಣಿಪುರ (ಶೇ 7.8) ಮತ್ತು ತೆಲಂಗಾಣ (ಶೇ 7.55) ನಂತರದ ಸ್ಥಾನಗಳಲ್ಲಿವೆ ಎಂದು ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆದ ಮಾಹಿತಿ ಉಲ್ಲೇಖಿಸಿ ವರದಿ ಪ್ರಕಟವಾಗಿದೆ.

ಸಂಚಾರ ವಿರಳ

ಕೋವಿಡ್ ಎರಡನೇ ಅಲೆ ಹೆಚ್ಚಾಗುತ್ತಿದ್ದಂತೆ ನಗರದ ಮೈಸೂರು ರಸ್ತೆ ನಾಯಂಡಹಳ್ಳಿ ಬಳಿ ಜನರ ಓಡಾಟ ಪ್ರತಿದಿನಕ್ಕಿಂತ ಅತ್ಯಂತ ಕಡಿಮೆ ಇರುವ ದೃಶ್ಯ ಮಂಗಳವಾರ ಕಂಡುಬಂತು - ಪ್ರಜಾವಾಣಿ ಚಿತ್ರ

ಉಸಿರಾಟ ಸಮಸ್ಯೆ: ರಸ್ತೆ ಬದಿ ಬಿದ್ದಿದ್ದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಕೋವಿಡ್ ಅಬ್ಬರ ದಿನೇ ದಿನೇ ಹೆಚ್ಚಾಗುತ್ತಿದೆ. ಉಸಿರಾಟದ ತೊಂದರೆಯಿಂದ ವ್ಯಕ್ತಿಯೊಬ್ಬರ ಸಾವು, ಆಸ್ಪತ್ರೆಯಲ್ಲಿ ಚಿಕಿತ್ಸೆ ದೊರೆಯದ ಬಗ್ಗೆ ವಿಡಿಯೊ ಮಾಡಿದ್ದ ಯುವಕ ಸಾವು, ಅದಲು–ಬದಲು ಶವ ನೀಡಿದ ಆಸ್ಪತ್ರೆ ಸಿಬ್ಬಂದಿ, ಚಿಕಿತ್ಸೆಗಾಗಿ ತಪ್ಪದ ಅಲೆದಾಟ...

ಇವು ಬೆಂಗಳೂರಿನಲ್ಲಿ ಕೋವಿಡ್ ಸೃಷ್ಟಿಸಿರುವ ಅವಾಂತರದ ಕೆಲ ತುಣುಕುಗಳು. ಕೋವಿಡ್ ಸೋಂಕಿತರ ನೋವು ಒಂದೇ ಕಡೆಯಾದರೆ, ಕೋವಿಡೇತರ ರೋಗಿಗಳಿಗೂ ಸಕಾಲಕ್ಕೆ ಚಿಕಿತ್ಸೆ ಸಿಗುತ್ತಿಲ್ಲ.

ಕಮಲಾನಗರದ ಮಾರುಕಟ್ಟೆ ಬಳಿ ಉಸಿರಾಟದ ತೊಂದರೆಯಿಂದ ನರಳುತ್ತಾ ಬಿದ್ದಿದ್ದ 40 ವರ್ಷದ ವ್ಯಕ್ತಿಯೊಬ್ಬರನ್ನು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ನರಳುತ್ತಾ ರಸ್ತೆ ಬದಿ ಬಿದ್ದಿದ್ದರೂ ಕೋವಿಡ್ ಭಯದಿಂದ ಅವರಿಗೆ ತುರ್ತು ಆರೈಕೆ ಮಾಡಲು ಜನ ಮುಂದೆ ಬರಲಿಲ್ಲ.

ವಿಷಯ ತಿಳಿದು ಸ್ಥಳಕ್ಕೆ ಬಂದ ಬಿಬಿಎಂಪಿಯ ಮಾಜಿ ಸದಸ್ಯ ಎಂ. ಶಿವರಾಜು ಅವರು ಸ್ಥಳಕ್ಕೆ ಆಂಬ್ಯುಲೆನ್ಸ್ ಕರೆಸಿ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಿದರು. ಅಲ್ಲಿ ಚಿಕಿತ್ಸೆ ಸಿಗದೆ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಯೂ ಚಿಕಿತ್ಸೆ ಸಿಗದೆ ಜಯದೇವ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ವಿಳಂಬ ಆಗಿದ್ದರಿಂದ ಅವರು ಮೃತಪಟ್ಟರು ಎಂದು ಶಿವರಾಜು ತಿಳಿಸಿದರು.

ಮೈಸೂರು ರಸ್ತೆ ಬಳಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತ ಇಬ್ಬರು ಮಹಿಳೆಯರು ಮೃತಪಟ್ಟಿದ್ದರು. ಅವರಿಬ್ಬರ ಹೆಸರು ಒಂದೇ ಆಗಿತ್ತು. ಆಸ್ಪತ್ರೆ ಸಿಬ್ಬಂದಿ ಮೃತದೇಹಗಳನ್ನು ಕುಟುಂಬ ಸದಸ್ಯರಿಗೆ ಸೋಮವಾರ ಅದಲು–ಬದಲಾಗಿ ನೀಡಿದ್ದರು. ಇದರಿಂದ ಅವಾಂತರ ಸೃಷ್ಟಿಯಾಗಿತ್ತು. ಸಂಬಂಧಿಕರು ಆಕ್ರೋಶ ವ್ಯಕ್ತ ಪಡಿಸಿದ ಬಳಿಕ ಸಿಬ್ಬಂದಿ ಕ್ಷಮೆ ಯಾಚಿಸಿದರು.

ಸಾವಿಗೂ ಮುನ್ನ ವಿಡಿಯೊ ಮಾಡಿದ್ದ ಯುವಕ

ಕೋವಿಡ್ ಸೋಂಕಿತ ಯುವಕ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿನ ಅವ್ಯವಸ್ಥೆ ಮತ್ತು ಚಿಕಿತ್ಸೆ ನೀಡದ ಕಾರಣ ಮೈಸೂರು ರಸ್ತೆ ಬಳಿಯ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿಯೂ ಇಬ್ಬರು ಮೃತಪಟ್ಟಿದ್ದನ್ನು ಕಂಡು ಆಘಾತಕ್ಕೆ ಒಳಗಾಗಿ ವಿಡಿಯೊ ಒಂದನ್ನು ಮಾಡಿ ಬಿಡುಗಡೆ ಮಾಡಿದ್ದರು.

ಅದಕ್ಕೂ ಮುನ್ನ ತಮ್ಮ ಕುಟುಂಬ ಸದಸ್ಯರ ಜೊತೆಯೂ ಮಾತನಾಡಿ ಆತಂಕ ವ್ಯಕ್ತಪಡಿಸಿದ್ದರು. 'ಚಿಕಿತ್ಸೆ ನೀಡಲು ಯಾರೂ ವಾರ್ಡ್‌ಗೆ ಬರುವುದೇ ಇಲ್ಲ. ಕುಡಿಯಲು ನೀರು ಕೊಡುವವರೂ ಇಲ್ಲ. ಮನೆಗೆ ಬರುತ್ತೇನೆ ಕರೆದೊಂಡು ಹೋಗಿ' ಎಂದು ಬೇಡಿಕೊಂಡಿದ್ದರು. ಆದರೆ, ಮಂಗಳವಾರ ಅವರು ಮೃತಪಟ್ಟರು. ಬಾಳಿ ಬದುಕಬೇಕಿದ್ದ ಮಗನ ಸಾವು ಕುಟುಂಬ ಸದಸ್ಯರ ಆಕ್ರೋಶಕ್ಕೆ ಕಾರಣವಾಗಿತ್ತು.

'ಗಂಭೀರ ಪರಿಸ್ಥಿತಿ ಹೊರತುಪಡಿಸಿದರೆ ನಿಗದಿತ ಸಮಯದಲ್ಲಿ ಮಾತ್ರ ಊಟ ಹಾಗೂ ಔಷಧ ನೀಡಲು ವೈದ್ಯಕೀಯ ಸಿಬ್ಬಂದಿ ವಾರ್ಡ್‌ಗಳಿಗೆ ತೆರಳುತ್ತಾರೆ. ನೀರನ್ನು ಇಟ್ಟಿರುವ ಸ್ಥಳಕ್ಕೇ ಹೋಗಿ ಸೋಂಕಿತರು ನೀರು ಕುಡಿಯಬೇಕು. ಕೋವಿಡ್ ಚಿಕಿತ್ಸೆಯಲ್ಲಿ ಇದು ಸಹಜ ಪ್ರಕ್ರಿಯೆ. ನೀರು ವಾರ್ಡ್ ಹೊರಗಡೆ ಇರಿಸಲಾಗಿತ್ತು. ಪಕ್ಕದ ಬೆಡ್‌ನಲ್ಲಿದ್ದ ವ್ಯಕ್ತಿಗಳ ಸಾವಿನಿಂದ ಗಾಬರಿಗೆ ಒಳಗಾಗಿದ್ದ ಸೋಂಕಿತ ನೀರಿರುವುದನ್ನು ಗಮನಿಸದೆ ಸಹೋದರನಿಗೆ ಕರೆ ಮಾಡಿದ್ದಾರೆ. ಆಸ್ಪತ್ರೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿರಲಿಲ್ಲ. ಇದರಿಂದ ಗೊಂದಲ ಉಂಟಾಗಿದೆ. ಸಾವು ಸಂಭವಿಸಿರುವುದು ನಿರ್ಲಕ್ಷ್ಯದಿಂದಲ್ಲ' ಎಂದು ರಾಜರಾಜೇಶ್ವರಿ ವೈದ್ಯಕೀಯ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಪ್ರವೀಣ್ ಕುಮಾರ್ ಸ್ಪಷ್ಟಪಡಿಸಿದರು.

ಡಿಆರ್‌ಡಿಒ ಮಾರ್ಗದರ್ಶನದಲ್ಲಿ ಆಕ್ಸಿಜನ್ ಉತ್ಪಾದಿಸುವ ಹೊಸ ಘಟಕಗಳ ಸ್ಥಾಪನೆ

ಆಕ್ಸಿಜನ್ ಸಾಗಣೆ ಟ್ಯಾಂಕರ್ ಮುಕ್ತ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದ ತುರ್ತು ಅಗತ್ಯವಾದ ಆಕ್ಸಿಜನ್ ಸಿಲಿಂಡರ್‌ಗಳ ಸಾಗಣೆಗೆ ಯಾವುದೇ ತೊಂದರೆ ಆಗದಂತೆ ಆರ್‌ಟಿಒ ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಸೂಚಿಸಿದರು.

ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಅವರು, 'ಟೋಲ್ ಗೇಟ್‌ಗಳಲ್ಲಿ ಆಕ್ಸಿಜನ್ ವಾಹನಗಳು ತಾಸುಗಟ್ಟಲೆ ಕಾಯುವಂತೆ ಆಗಬಾರದು. ಅಂಥ ವಾಹನಗಳಿಗೆ ಕೋವಿಡ್ ತುರ್ತು ಸೇವೆ ವಾಹನದ ಸ್ಟಿಕರ್ ನೀಡಿ, ಆಂಬುಲೆನ್ಸ್ ರೀತಿ ಮುಕ್ತ ಸಂಚಾರಕ್ಕೆ ಅವಕಾಶ ನೀಡುವ ಸಂಬಂಧ ರಾಷ್ಟ್ರೀಯ ಹೆದ್ದಾರಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ಡಿಆರ್‌ಡಿಒ ಮಾರ್ಗದರ್ಶನದಲ್ಲಿ ಆಕ್ಸಿಜನ್ ಉತ್ಪಾದಿಸುವ ಹೊಸ ಘಟಕಗಳ ಸ್ಥಾಪನೆಗೆ ಉತ್ತರ ಪ್ರದೇಶದಲ್ಲಿ 5-6 ದಿನಗಳಲ್ಲಿ ಅನುಮತಿ ನೀಡಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಹೊಸ ಘಟಕಗಳ ಸ್ಥಾಪನೆಗೆ ಪರವಾನಗಿ ನೀಡಲಾಗುವುದು. ಯೂನಿವರ್ಸಲ್ ಏರ್ ಪ್ರಾಡಕ್ಟ್ ಕಂಪನಿ ಹೊಸ ಘಟಕ ಆರಂಭಿಸಲು ಅನುಕೂಲವಾಗುವಂತೆ ವಿದ್ಯುತ್ ಸಂಪರ್ಕ ಹಾಗೂ ಇನ್ನಿತರ ಪರವಾನಗಿ ನೀಡುವ ಸಂಬಂಧ ಸಭೆಯಲ್ಲೇ ನಿರ್ದೇಶನ ನೀಡಲಾಗಿದೆ' ಎಂದರು.

'ಬೆಂಗಳೂರು ನಗರಕ್ಕೆ 330 ಟನ್ ಆಕ್ಸಿಜನ್ ಪೂರೈಕೆ ಆಗುತ್ತಿದ್ದು, ಮಂಗಳವಾರದಿಂದ ಹೆಚ್ಚುವರಿ 40 ಟನ್ ಹೆಚ್ಚುವರಿ ಆಕ್ಸಿಜನ್ ಪೂರೈಕೆ ಆಗುತ್ತಿದೆ. ಅಗತ್ಯ ಬಿದ್ದರೆ ಇನ್ನೂ ಹೆಚ್ಚು ಆಕ್ಸಿಜನ್ ಪೂರೈಕೆ ಮಾಡುವಂತೆ ಜಿಂದಾಲ್ ಕಂಪನಿಗೆ ಸೂಚಿಸಲಾಗಿದೆ. ಮೆಡಿಕಲ್ ಆಕ್ಸಿಜನ್ ಪೂರೈಕೆಗಾಗಿ ಕೈಗಾರಿಕಾ ಆಕ್ಸಿಜನ್ ಸಿಲಿಂಡರ್‌ಗಳನ್ನು ಉಪಯೋಗಿಸಲು ಅನುಮತಿ ನೀಡಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಿಂದಲೂ ಹೆಚ್ಚುವರಿ ಆಕ್ಸಿಜನ್ ಪೂರೈಕೆ ಸಾಧ್ಯವಾಗಲಿದೆ' ಎಂದು ಹೇಳಿದರು.

'ರಾಜ್ಯಕ್ಕೆ ದಿನಕ್ಕೆ 400 ಟನ್ ಆಕ್ಸಿಜನ್ ಪೂರೈಕೆ ಮಾಡಲು ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿ ಒಪ್ಪಿಕೊಂಡಿದೆ' ಎಂದು ಗಣಿ ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದರು.

ಜೆಎಸ್‌ಡಬ್ಲ್ಯು ಸ್ಟೀಲ್ ಉಪ ವ್ಯವಸ್ಥಾಪಕ ನಿರ್ದೇಶಕ ಡಾ.ವಿನೋದ್ ನೋವಲ್, 'ನಮ್ಮ ಕಂಪನಿಗಳ ಬದ್ಧತೆ ಕರ್ನಾಟಕದ ಕಡೆಗೆ. ಬೇಡಿಕೆ ಎದುರಾದರೆ ನಾವು ಹೆಚ್ಚು ಆಮ್ಲಜನಕವನ್ನು ಪೂರೈಸಲು ಸಿದ್ಧ' ಎಂದು ಅವರು ತಿಳಿಸಿದರು.

ಜೆಎಸ್‌ಡಬ್ಲ್ಯು ಹಿರಿಯ ಉಪಾಧ್ಯಕ್ಷ ಮಂಜುನಾಥ ಪ್ರಭು, 'ನಾವು ಸರಾಸರಿ 240ರಿಂದ 350 ಟನ್ ಆಕ್ಸಿಜನ್ ಉತ್ಪಾದಿಸುತ್ತೇವೆ, ಕೆಲವೊಮ್ಮೆ 400 ಟನ್ ದಾಟುತ್ತದೆ. ಈ ಪೈಕಿ, 120 ಟನ್ ಬೇರೆ ರಾಜ್ಯಗಳಿಗೆ ಪೂರೈಕೆ ಆಗುತ್ತಿದೆ. 300 ಟನ್ ಉತ್ಪಾದಿಸಿದಾಗ 75ರಿಂದ 80 ಟನ್ ಬೇರೆ ರಾಜ್ಯಗಳಿಗೆ ಹೋಗುತ್ತದೆ. ಇತರ ರಾಜ್ಯಗಳಿಗೆ ಪೂರೈಸದಂತೆ ನಿರ್ದೇಶನವೇನೂ ಇಲ್ಲ' ಎಂದರು.

ಬೆಂಗಳೂರು ಮೂಲದ ಭರೂಕಾ ಗ್ಯಾಸ್ ಕಂಪನಿಯ ವ್ಯವ ಸ್ಥಾಪಕ (ಉತ್ಪಾದನೆ) ಸುಬ್ರಮಣಿ ಗೋವಿಂದ ಸ್ವಾಮಿ, 'ನಮ್ಮಲ್ಲಿ ಉತ್ಪಾದನೆಯಾದ ಶೇ 80ರಷ್ಟು ಆಕ್ಸಿಜನ್ ಸರ್ಕಾರದ ಅಗತ್ಯಗಳಿಗೆ ತಕ್ಕಂತೆ ವೈದ್ಯಕೀಯ ಬಳಕೆಗೆ ಪೂರೈಕೆ ಆಗುತ್ತಿದೆ. ಶೇ 20ರಷ್ಟು ಮಾತ್ರ ಕೈಗಾರಿಕೆಗಳಿಗೆ ಬಳಕೆ ಆಗುತ್ತಿದೆ' ಎಂದರು.

ರಾಜ್ಯದಲ್ಲಿದೆ 7 ಘಟಕ, 56 ವಿತರಕರು

ದ್ರವೀಕೃತ ಆಕ್ಸಿಜನ್ ಉತ್ಪಾದಿಸುವ ಏಳು ಘಟಕಗಳು ಮತ್ತು 56 ವಿತರಕರು ರಾಜ್ಯದಲ್ಲಿದ್ದಾರೆ. ಘಟಕಗಳು– ಭರೂಕಾ ಗ್ಯಾಸ್ (65 ಟನ್), ಪ್ರಾಕ್ಸೈರ್ ಕೊಪ್ಪಳ (65 ಟನ್), ಪ್ರಾಕ್ಸೈರ್ ಬಳ್ಳಾರಿ (160 ಟನ್). ಏರ್ ವಾಟರ್ ಇಂಡಿಯಾ (92 ಟನ್), ಬಳ್ಳಾರಿ ಆಕ್ಸಿಜನ್ (80 ಟನ್). ಯುನಿವರ್ಸಲ್ ಏರ್ (50 ಟನ್). ಜೆಎಸ್‌ಡಬ್ಲ್ಯು (300 ಟನ್).

ರಾಜ್ಯದಲ್ಲಿ 45 ಆಕ್ಸಿಜನ್ ಸಾಗಣೆ ಟ್ಯಾಂಕರ್‌ಗಳಿದ್ದು, ಅವುಗಳ ಒಟ್ಟು ಸಾಗಣೆ ಸಾಮರ್ಥ್ಯ 484 ಟನ್. ಇದೀಗ ನೈಟ್ರೋಜನ್ ಸಾಗಿಸುವ 33 ಟ್ಯಾಂಕರ್, ಆರ್ಗೋನ್ ಸಾಗಿಸುವ 16 ಟ್ಯಾಂಕರ್‌ಗಳಿಗೆ ಆಕ್ಸಿಜನ್ ಪೂರೈಕೆಯ ಪರವಾನಗಿ ನೀಡಲಾಗಿದೆ. ಅಲ್ಲದೆ, ರಾಜ್ಯಕ್ಕೆ ಪೂರೈಸುವ ಆಕ್ಸಿ ಜನ್ ಪ್ರಮಾಣ ಹೆಚ್ಚಿಸುವಂತೆ ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಗೆ ಪತ್ರ ಬರೆದಿರುವ ರಾಜ್ಯ ಸರ್ಕಾರ, ಆಕ್ಸಿಜನ್ ಹಂಚಿಕೆ ಹೆಚ್ಚಿಸುವಂತೆ ಮನವಿ ಮಾಡಿದೆ.

ಬೆಂಗಳೂರು ನಗರ ವಿ.ವಿ: ಪರೀಕ್ಷೆ ಮುಂದೂಡಿಕೆ

ಬೆಂಗಳೂರು: 'ಇದೇ 21ರಿಂದ ನಡೆಯಬೇಕಾದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲ ಪರೀಕ್ಷೆಗಳನ್ನು ಕೋವಿಡ್ ಎರಡನೇ ಅಲೆ ತೀವ್ರಗೊಂಡಿರುವುದರಿಂದ ಮತ್ತು ಸಾರಿಗೆ ನೌಕರರ ಮುಷ್ಕರದ ಕಾರಣಕ್ಕೆ ಮುಂದೂಡಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ರಮೇಶ್ ಬಿ. ತಿಳಿಸಿದ್ದಾರೆ.

'ಎಂಸಿಎ ಕೋರ್ಸ್ (3ನೇ ಮತ್ತು 5ನೇ ಸೆಮಿಸ್ಟರ್) ಮತ್ತು ಎಂ.ಇಡಿ (3ನೇ ಸೆಮಿಸ್ಟರ್) ಪರೀಕ್ಷೆಗಳನ್ನು ಮುಂದಿನ ಆದೇಶದವರೆಗೂ ಮುಂದೂಡಲಾಗಿದೆ' ಎಂದೂ ಅವರು ಹೇಳಿದ್ದಾರೆ.

ಖಾಸಗಿ ಆಸ್ಪತ್ರೆಗಳಿಗೆ ಧಿಡೀರ್ ಭೇಟಿ: ಪರಿಶೀಲನೆ

ಬೊಮ್ಮನಹಳ್ಳಿ: ಕೊರೊನಾ ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗುತ್ತಿಲ್ಲ ಎಂಬ ದೂರಿನ ಕಾರಣ ಬಿಬಿಎಂಪಿ ಅಧಿಕಾರಿಗಳ ತಂಡವು ಖಾಸಗಿ ಆಸ್ಪತ್ರೆಗಳಿಗೆ ಮಂಗಳವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್, ಅಪೋಲೋ, ಚಂದಾಪುರದ ಬಳಿ ನಾರಾಯಣ ಹೃದಯಾಲಯ ಹಾಗೂ ಆಕ್ಸ್ ಫರ್ಡ್ ಆಸ್ಪತ್ರೆಗಳಲ್ಲಿ ಶೇಕಡ 50ರಷ್ಟು ಹಾಸಿಗೆಗಳನ್ನು ಮೀಸಲಿಡಲಾಗಿದೆಯೇ? ಎಂಬುದನ್ನು ಅಧಿಕಾರಿಗಳು ಖುದ್ದು ಪರಿಶೀಲನೆ ನಡೆಸಿದರು. ಆದರೆ, ಯಾವ ಆಸ್ಪತ್ರೆಯಲ್ಲೂ ಸರ್ಕಾರ ನಿಗದಿಪಡಿಸಿದ ಹಾಸಿಗೆಗಳನ್ನು ಮೀಸಲಿಡದಿರುವುದು ಕಂಡು ಬಂತು.

ಈ ಕುರಿತು ಪ್ರತಿಕ್ರಿಯಿಸಿದ ವಲಯ ಆಯುಕ್ತ ರಾಜೇಂದ್ರ ಚೋಳನ್, 'ಖಾಸಗಿ ಆಸ್ಪತ್ರೆಯವರು ಸದ್ಯ ಶೇಕಡ 20 ರಿಂದ 30 ರಷ್ಟು ಹಾಸಿಗೆಗಳನ್ನು ನೀಡಿದ್ದಾರೆ. ಸರ್ಕಾರಿ ಆದೇಶ ಪಾಲಿಸದ ಆಸ್ಪತ್ರೆಗಳಿಗೆ ನೋಟೀಸ್ ನೀಡಿದ್ದೇವೆ. ಮುಂದುವರಿದು ಕೆಪಿಎಂಇ ಕಾಯ್ದೆ ಅನ್ವಯ ಕ್ರಮಕೈಗೊಳ್ಳಲಾಗುವುದು. ಖಾಸಗಿ ಆಸ್ಪತ್ರೆಗಳಿಂದ ಶೇಕಡ 50ರಷ್ಟು ಹಾಸಿಗೆಗಳು ಲಭ್ಯವಾದಲ್ಲಿ ಈಗಿರುವ ಕೊರತೆ ನೀಗಲಿದೆ' ಎಂದರು.

'ಹಾಸಿಗೆ ಇಲ್ಲ ಎಂದು ರೋಗಿಗಳನ್ನು ವಿನಾಕಾರಣ ಕಾಯಿಸುವುದು, ಹೊರ ಕಳುಹಿಸುವುದು, ಒಳರೋಗಿಯಾಗಿ ದಾಖಲಿಸದೇ ಇರುವುದು ಇತ್ಯಾದಿ ದೂರುಗಳು ಬಂದಿವೆ. ಹೀಗಾಗಿ, ಪ್ರತಿ ಆಸ್ಪತ್ರೆಯ ಪ್ರವೇಶ ದ್ವಾರದಲ್ಲಿ 'ಸಹಾಯ ಕೇಂದ್ರ' ಸ್ಥಾಪಿಸಲಾಗುವುದು. ಒಬ್ಬ ವೈದ್ಯ, ನೋಡಲ್ ಅಧಿಕಾರಿ ಹಾಗು ಸಿಬ್ಬಂದಿ ಇರಲಿದ್ದು, ಬಂದ ರೋಗಿಗಳಿಗೆ ಯಾವುದೇ ಅನಾನುಕೂಲ ಆಗದಂತೆ ನಿಗಾವಹಿಸಲಿದ್ದಾರೆ' ಎಂದರು.

ಐಎಎಸ್ ಅಧಿಕಾರಿ ಯಶವಂತ್, ಜಂಟಿ ಆಯುಕ್ತ ಎಂ.ರಾಮಕೃಷ್ಣ, ಆರೋಗ್ಯಾಧಿಕಾರಿ ಡಾ.ಸವಿತಾ, ಡಾ.ಸುರೇಶ್ ಹಾಗೂ ಆರೋಗ್ಯ ವೈದ್ಯಾಧಿಕಾರಿ ನಾಗೇಂದ್ರ ಇದ್ದರು.

ಖಾಸಗಿ ಆಸ್ಪತ್ರೆಯೊಂದರಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿದರು. ವಲಯ ಆಯುಕ್ತ ರಾಜೇಂದ್ರ ಚೋಳನ್, ಐಎಎಸ್ ಅಧಿಕಾರಿ ಯಶವಂತ್, ಜಂಟಿ ಆಯುಕ್ತ ಎಂ.ರಾಮಕೃಷ್ಣ ಇದ್ದಾರೆ.

ಹಾಗಲವಾಡಿ: ಕೆರೆ ಹೂಳೆತ್ತುವಾಗ ಪತ್ತೆ

ಹೊಯ್ಸಳರ ಕಾಲದ ವಿಗ್ರಹ ಪತ್ತೆ

ಪ್ರಜಾವಾಣಿ ವಾರ್ತೆ

ಹಾಗಲವಾಡಿ: ಗ್ರಾಮದ ಕೆರೆಯ ಹೂಳು ಎತ್ತುವಾಗ ಮಂಗಳವಾರ ಹೊಯ್ಸಳರ ಕಾಲದ ಬೂದು ಬಳಪದ ಕಲ್ಲಿನ ಪುರಾತನ ವಿಗ್ರಹವೊಂದು ದೊರೆತಿದೆ.

ಮಣ್ಣು ಅಗೆಯುವ ಯಂತ್ರಗಳಿಂದ ಕೆರೆಯ ಹೂಳು ಎತ್ತುವಾಗ ಅಂದಾಜು ಎಂಟು ಅಡಿ ಆಳದಲ್ಲಿ ಈ ವಿಗ್ರಹ ದೊರೆತಿದೆ. ವಿಗ್ರಹದ ಎರಡೂ ಕೈಗಳು ತುಂಡಾಗಿದ್ದು, ತುಂಡಾದ ಒಂದು ಸ್ಥಳದಲ್ಲಿಯೇ ಸಿಕ್ಕಿದೆ. ಉಳಿದಂತೆ ವಿಗ್ರಹ ಸುಸ್ಥಿತಿಯಲ್ಲಿದ್ದು, ಸುಂದರವಾಗಿದೆ.

ನಿಂತಿರುವ ಭಂಗಿಯಲ್ಲಿರುವ ಈ ಸುಂದರ ವಿಗ್ರಹ ನಾಲ್ಕೂವರೆ ಅಡಿ ಉದ್ದ ಮತ್ತು ಎರಡೂವರೆ ಅಡಿ ಅಗಲವಿದ್ದು, ಭುಜಬಲ, ಕಾಲು ಮತ್ತು ಕೈಗಡಗಳ ಅಲಂಕೃತವಾಗಿದೆ.

ವಿಗ್ರಹದ ಸುತ್ತಲೂ ಸುರುಳಿ ಆಕಾರದ ಪ್ರಭಾವಳಿ ಇದ್ದು, ಕೆಳಪೀಠದ ಅಕ್ಕಪಕ್ಕ ಭೂದೇವಿ, ಶ್ರೀದೇವಿಯರು ಛತ್ರಿ, ಚಾಮರ ಹಿಡಿದು ನಿಂತಿದ್ದಾರೆ. ಕೆಳಪೀಠದಲ್ಲಿ ಆಕರ್ಷಕ ದಶಾವತರಗಳ ಸುಂದರ ಕೆತ್ತನೆ ಕಣ್ಮನ ಸೆಳೆಯುತ್ತದೆ.

ಇದು ಜನಾರ್ಧನ/ಚನ್ನಕೇಶವನ ವಿಗ್ರಹವಾಗಿರಬಹುದು ಎಂದು ಗುಬ್ಬಿ ತಾಲ್ಲೂಕು ಇತಿಹಾಸ ಮತ್ತು ಪುರಾತತ್ವಗಳ ಬಗ್ಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನ ನಡೆಸುತ್ತಿರುವ ಶ್ರೀನಿವಾಸ್ ಅಭಿಪ್ರಾಯಪಟ್ಟಿದ್ದಾರೆ.

ಹೊಯ್ಸಳರ ಕಾಲದಲ್ಲಿ ನಾಯಕ ಪಾಳೇಗಾರರ ಮನೆತನದ ಆಳ್ವಿಕೆಗೆ ಒಳಪಟ್ಟಿದ್ದ ಹಾಗಲವಾಡಿ ಗ್ರಾಮದಲ್ಲಿ ಕೋಟೆ ಕೊತ್ತಲ, ದೇವಸ್ಥಾನಗಳಿಗೆ ಲೆಕ್ಕವಿಲ್ಲ ಎಂದು ಸ್ಥಳ ಇತಿಹಾಸ ಹೇಳುತ್ತದೆ.

ಗ್ರಾಮದ ಹಳೆಯ ದೇವಾಲಯದ ಬಳಿ ವಿಗ್ರಹ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲು ಗ್ರಾಮಸ್ಥರು ತೀರ್ಮಾನಿಸಿದ್ದಾರೆ. ವಿಗ್ರಹದ ಬಗ್ಗೆ ಮೈಸೂರು ಪುರಾತತ್ವ ಇಲಾಖೆಗೆ ಮಾಹಿತಿ ನೀಡಲಾಗಿದೆ.

ಹಾಗಲವಾಡಿ ಕೆರೆಯಲ್ಲಿ ದೊರೆತ ವಿಗ್ರಹ

ಅಬನಾಳಿ ಗ್ರಾಮ: ಒಂದೇ ದಿನ 144 ಕೋವಿಡ್ ಪ್ರಕರಣ ಪತ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಶಿರೋಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಅಬನಾಳಿ ಗ್ರಾಮದಲ್ಲಿ ಮಂಗಳವಾರ ಒಟ್ಟು 144 ಹೊಸ ಕೋವಿಡ್-19 ಪ್ರಕರಣಗಳು ಪತ್ತೆಯಾಗಿದ್ದು ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಇಡೀ ಗ್ರಾಮವನ್ನು ನಿಷೇಧಿತ ವಲಯ ಎಂದು ಘೋಷಿಸಲಾಗಿದೆ. ತಾಲ್ಲೂಕಿನ ಭೀಮಗಡ ವನ್ಯಧಾಮ ವ್ಯಾಪ್ತಿಯಲ್ಲಿರುವ ಈ ಗ್ರಾಮದಲ್ಲಿ ಏ.5 ಮತ್ತು 6ರಂದು ಜರುಗಿದ ಗ್ರಾಮದೇವಿ ಜಾತ್ರೆಯಲ್ಲಿ ಭಾಗವಹಿಸಿದ್ದ ಬಹುತೇಕರಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ. ಇವರೆಲ್ಲರೂ ಮಹಾರಾಷ್ಟ್ರದ ವಿವಿಧ ನಗರ ಪ್ರದೇಶಗಳಿಗೆ ಉದ್ಯೋಗಸ್ಥರಾಗಿದ್ದು ಜಾತ್ರೆಯಲ್ಲಿ ಭಾಗವಹಿಸಲು ಗ್ರಾಮಕ್ಕೆ ಮರಳಿದ್ದರು.

ಜಾತ್ರೆಯಿಂದ ಮರಳಿದ ಗ್ರಾಮಸ್ಥರಿಗೆ ವಾಂತಿ-ಭೇದಿ ಕಾಣಿಸಿಕೊಂಡಿದ್ದರಿಂದ ಅವರು ದೂರದ ಅಶೋಕನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಅಲ್ಲಿ ಚಿಕಿತ್ಸೆ ಪಡೆದು ಬಳಿಕ ಚೇತರಿಸಿಕೊಂಡಿದ್ದರು.

ಅನಾರೋಗ್ಯಕ್ಕೆ ಕಾರಣ ವಿಚಾರಿಸಿದ ವೈದ್ಯರಿಗೆ ಗ್ರಾಮಸ್ಥರು, ಮಹಾರಾಷ್ಟ್ರದಿಂದ ಮರಳಿದ್ದ ವಿಷಯವನ್ನು ಮರೆಮಾಚಿದ್ದರು.

ಆದರೆ ನಿಯಮದ ಪ್ರಕಾರ, ಚಿಕಿತ್ಸೆಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ್ದ ಎಲ್ಲರ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಿದ್ದರಿಂದ ಗ್ರಾಮಸ್ಥರಲ್ಲಿ ಕೋವಿಡ್-19 ದೃಢಪಟ್ಟಿರುವುದು ಪತ್ತೆಯಾಗಿದೆ.

ಅಬನಾಳಿ ಗ್ರಾಮಕ್ಕೆ ಭೇಟಿ ಜಿಲ್ಲಾಧಿಕಾರಿ ಹರೀಶಕುಮಾರ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿ ತುರ್ತು ಸಭೆ ನಡೆಸಿದರು.

'ಅಬನಾಳಿ ಗ್ರಾಮಸ್ಥರಲ್ಲಿ ಯಾವುದೇ ರೋಗ ಲಕ್ಷಣಗಳಿಲ್ಲ. ಅಸ್ವಸ್ಥರಾಗಿದ್ದ ಎಲ್ಲರೂ ಈಗ ಗುಣಮುಖರಾಗಿದ್ದಾರೆ. ವೈದ್ಯರ ತಂಡ ಗ್ರಾಮದಲ್ಲಿ ಬೀಡುಬಿಟ್ಟಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಂಜೀವ ನಾಂದ್ರೆ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕಟೀಲು ದೇವಳದ ಜಾತ್ರೆ ಮೊಟಕು

ಪ್ರಜಾವಾಣಿ ವಾರ್ತೆ

ಮೂಲ್ಕಿ: ಕೋವಿಡ್ ಭೀತಿಯಿಂದಾಗಿ ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರೋತ್ಸವ ಅರ್ಧಕ್ಕೆ ಮೊಟಕುಗೊಂಡಿದೆ. ಸೋಮವಾರ ರಾತ್ರಿ ರಥೋತ್ಸವ ನಡೆದಿದ್ದು, ಈ ವೇಳೆ ಸಹಸ್ರಾರು ಮಂದಿ ಸೇರಿದ್ದರು. ದೇವಸ್ಥಾನದ ಆಡಳಿತ ಮಂಡಳಿಯ ವಿನಂತಿಯ ಬಳಿಕವೂ ದುರ್ಗಾ ಪರಮೇಶ್ವರಿಯ ಭಕ್ತರು ದೇವಸ್ಥಾನದ ರಥೋತ್ಸವದ ಸಂದರ್ಭದಲ್ಲಿ ಹಾಜರಿದ್ದರು.

ದಕ್ಷಿಣ ಕನ್ನಡ ಜಿಲ್ಲಾಡಳಿತದ ಅಧಿಕಾರಿಗಳು, ತಹಶೀಲ್ದಾರ್ ಸೇರಿದಂತೆ ಅಧಿಕಾರಿಗಳು ದೇವಸ್ಥಾನದ ಆಡಳಿತ ಮಂಡಳಿಗೆ ಮತ್ತೆ ಸೂಚನೆ ನೀಡಿದ್ದು, ಜಾತ್ರೋತ್ಸವ ಅರ್ಧಕ್ಕೆ ಮೊಟಕುಗೊಂಡಿದೆ.

ಏಪ್ರಿಲ್ 13ರಿಂದ 20 ರವರೆಗೆ ಕಟೀಲು ಜಾತ್ರೋತ್ಸವ ನಡೆಯಬೇಕಾಗಿದ್ದು, ಇದೀಗ ಅರ್ಧಕ್ಕೆ ಮೊಟಕುಗೊಂಡಿದೆ. ಮಂಗಳವಾರ ದೇವಸ್ಥಾನದಲ್ಲಿ ಶಯನ, ಕವಾಟೋದ್ಘಾಟನೆ, ರಾತ್ರಿ ರಥೋತ್ಸವ, ಅವಭೃತೋತ್ಸವ ನಡೆಯಬೇಕಿತ್ತು. ಆದರೆ ಜಿಲ್ಲಾಡಳಿತದ ಆದೇಶದಂತೆ ಕಟೀಲು ಜಾತ್ರೋತ್ಸವ ರದ್ದುಗೊಂಡಿದೆ.

ಅದೇ ರೀತಿ ಕಟೀಲು ದುರ್ಗಾಪರಮೇಶ್ವರಿಯ ಎಕ್ಕಾರು ಕೊಡಮಣಿತ್ತಾಯ ಭೇಟಿ ಮತ್ತು ಶಿಬರೂರು ಕೊಡ ಮಣಿತ್ತಾಯ ಭೇಟಿಯೂ ರದ್ದಾಗಿದೆ. ಕಟೀಲು ದುರ್ಗಾಪರಮೇಶ್ವರಿ ಜಾತ್ರೆಯ ಪ್ರಮುಖ ಆಕರ್ಷಣೆ ತೂಟೆದಾರ ಉತ್ಸವವೂ ರದ್ದಾಗಿದೆ.

ತೂಟೆದಾರ ಉತ್ಸವದ ಬಳಿಕ ದೇವಿಯು ವಿಶ್ರಾಂತಿಗೆ ತೆರಳುವ ನಂಬಿಕೆಯಿದ್ದು, ಈ ದಿನ ಕಟೀಲು ಆರು ಮೇಳದ ಯಕ್ಷಗಾನ ಪ್ರದರ್ಶನವೂ ನಡೆಯುವುದಿಲ್ಲ ಎಂದು ತಿಳಿದುಬಂದಿದೆ.

ಕಟೀಲು ದುರ್ಗಪರಮೇಶ್ವರೀ ದೇವಸ್ಥಾನ.

ಸುಭಾಷಿತ

ನಿಮ್ಮ ಆಲೋಚನೆಗಳಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ.
-ರೂಮಿ

ರ್‍ಯಾಲಿ ನಡೆಸದಿರುವ ತೀರ್ಮಾನ ನೈತಿಕ ಮೇಲ್ಪಂಕ್ತಿಯ ನಡೆ

ದೇಶದಲ್ಲಿ ಕೋವಿಡ್–19 ಪ್ರಕರಣಗಳು ದಾಖಲೆಯ ಪ್ರಮಾಣದಲ್ಲಿ ಹೆಚ್ಚಾಗುತ್ತಿರುವ ಸಮಯದಲ್ಲೇ ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆ ನಡೆದಿದೆ. ಚುನಾವಣಾ ಪ್ರಕ್ರಿಯೆಯ ಬಹುಮುಖ್ಯ ಭಾಗ ಬಹಿರಂಗ ಸಭೆಗಳನ್ನು ಆಯೋಜಿಸುವುದು. ಈ ಸಭೆಗಳು ಯಾವುದೇ ರಾಜಕೀಯ ಪಕ್ಷಕ್ಕೆ ಮತ ಯಾಚನೆಗೆ ಇರುವ ಬಹುದೊಡ್ಡ ವೇದಿಕೆ. ಹೀಗಿದ್ದರೂ, ಕೋವಿಡ್–19ರ ಎರಡನೆಯ ಅಲೆಯ ತೀವ್ರತೆಯನ್ನು ಗಮನಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಾವು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ರ್‍ಯಾಲಿಗಳನ್ನು ನಡೆಸುವುದಿಲ್ಲ ಎಂದು ಮೂರು ದಿನಗಳ ಹಿಂದೆ ಪ್ರಕಟಿಸಿದ್ದು ಒಂದು ಮೇಲ್ಪಂಕ್ತಿಯ ನಡೆ. ಪಶ್ಚಿಮ ಬಂಗಾಳದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಕಾಂಗ್ರೆಸ್ ಹಿಡಿಯುವ ಸಾಧ್ಯತೆ ತೀರಾ ಕ್ಷೀಣವೆಂಬುದು ನಿಜ. ಆ ಪಕ್ಷ ಎಷ್ಟು ಸ್ಥಾನ ಗೆಲ್ಲಬಹುದು ಎಂಬ ಪ್ರಶ್ನೆಯೇ ಈಗ ಉಳಿದಿರುವುದು. ಹೀಗಿದ್ದರೂ, ದೇಶದ ಒಂದು ಪ್ರಮುಖ ರಾಜಕೀಯ ಪಕ್ಷದ ಮುಂಚೂಣಿ ನಾಯಕ ಈ ಬಗೆಯ ನಿಲುವು ತಾಳುವುದು ಸ್ವಾಗತಾರ್ಹವೂ ಹೌದು ಅಪೇಕ್ಷಣೀಯವೂ ಹೌದು. ರಾಹುಲ್ ಅವರು ತಾಳಿದ ಈ ನಿಲುವು, ರ್‍ಯಾಲಿಗಳನ್ನು ನಿಲ್ಲಿಸುವಂತೆ ಇತರ ರಾಜಕೀಯ ಪಕ್ಷಗಳ ನಾಯಕರಲ್ಲಿ ಅವರು ಮಾಡಿದ ಮನವಿಯು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಬಿಜೆಪಿ ಮೇಲೆ ನೈತಿಕ ಒತ್ತಡವೊಂದನ್ನು ಸೃಷ್ಟಿಸಿತು. ರಾಹುಲ್ ಅವರ ನಿಲುವನ್ನು ಆರಂಭದಲ್ಲಿ ಅಣಕಿಸಿದ ಬಿಜೆಪಿ ಕೂಡ ಈಗ ತಾನು ದೊಡ್ಡ ರ್‍ಯಾಲಿಗಳನ್ನು ಆಯೋಜಿಸುವುದಿಲ್ಲ ಎಂದು ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾಷಣ ಮಾಡಲಿರುವ ರ್‍ಯಾಲಿಗಳು ಕೂಡ 500ಕ್ಕಿಂತ ಕಡಿಮೆ ಜನರ ಪಾಲ್ಗೊಳ್ಳುವಿಕೆಯವು ಆಗಿರಲಿವೆ ಎಂದು ಬಿಜೆಪಿ ಹೇಳಿದೆ. ಟಿಎಂಸಿ ಕೂಡ ಇದೇ ಮಾದರಿಯ ನಿಲುವೊಂದನ್ನು ತಳೆದಿದ್ದು, ಕೋಲ್ಕತ್ತ ನಗರದಲ್ಲಿ ದೊಡ್ಡ ಪ್ರಮಾಣದ ರ್‍ಯಾಲಿಗಳನ್ನು ಆಯೋಜಿಸುವುದಿಲ್ಲ ಎಂದು ಹೇಳಿದೆ.

ಈ ಆರೋಗ್ಯ ಬಿಕ್ಕಟ್ಟಿನ ಸಂದರ್ಭದಲ್ಲಿ ಬಿಜೆಪಿಯು ಬೇರೆ ಪಕ್ಷಗಳಿಗೆ ಮಾದರಿಯಾಗಿ ನಿಲ್ಲುವ ಅವಕಾಶವನ್ನು ಕೈಚೆಲ್ಲಿದೆ

ಪಶ್ಚಿಮ ಬಂಗಾಳದಲ್ಲಿ ಇನ್ನು ಮೂರು ಹಂತಗಳ ಮತದಾನ ಬಾಕಿ ಇದೆ. ಕೋವಿಡ್–19ರ ಎರಡನೆಯ ಅಲೆಯ ಸೋಂಕನ್ನು ಚುನಾವಣಾ ಪ್ರಚಾರ ಸಭೆಗಳು ಆರಂಭವಾಗುವ ಸಂದರ್ಭದಲ್ಲೇ ಇದ್ದವು. ಜನ ಒಂದೆಡೆ ಗುಂಪುಗೂಡುವುದು ಕೊರೊನಾ ಹರಡಲು ಕಾರಣವಾಗುತ್ತದೆ, ಚುನಾವಣಾ ರ್‍ಯಾಲಿಗಳಲ್ಲಿ ಜನ ಸಹಸ್ರಾರು ಸಂಖ್ಯೆಯಲ್ಲಿ ಸೇರುತ್ತಾರೆ ಎಂಬುದೇನೂ ನಮ್ಮ ರಾಜಕಾರಣಿಗಳಿಗೆ ತಿಳಿಯದ್ದೇನೂ ಅಲ್ಲ. 2020ರಲ್ಲಿ ಆತುರಾತುರವಾಗಿ ದೇಶದಾದ್ಯಂತ ಲಾಕ್‌ಡೌನ್ ಘೋಷಣೆ ಮಾಡುವವರೆಗೆ ಈ ಚುನಾವಣೆಯಲ್ಲಿ ಸಾವಿರಾರು ಜನ ಒಂದೆಡೆ ಸೇರುವಂತೆ ಮಾಡಿದ್ದು, ಜನ ಒಂದೆಡೆ ಸೇರುವುದನ್ನು ಸಂಭ್ರಮದಿಂದ ಕಂಡಿದ್ದು ನೈತಿಕವಾಗಿ ತೀರಾ ಕೆಟ್ಟ ನಡೆ. 2020ರಲ್ಲಿ ಲಾಕ್‌ಡೌನ್ ಹೇರಿದ್ದನ್ನು ಬಿಜೆಪಿ ಅತ್ಯಂತ ಬಲವಾಗಿ ಸಮರ್ಥಿಸಿಕೊಂಡಿತ್ತು. ಈಗ ಚುನಾವಣೆ ನಡೆದಲ್ಲಿ ಸಹಸ್ರಾರು ಜನರನ್ನು ಒಂದೆಡೆ ಸೇರಿಸಿದ್ದನ್ನು ಪಕ್ಷವು ಹೇಗೆ ಸಮರ್ಥಿಸಿಕೊಳ್ಳಲಿದೆ? ಕಾಯಿಲೆ ಹರಡುವುದನ್ನು ತಡೆಯಲು ಜನರ ಜೀವನಾಧಾರವಾದ ಆರ್ಥಿಕ ಚಟುವಟಿಕೆಗಳಿಗೆ ಲಗಾಮು ಹಾಕುವುದನ್ನು ಸಮರ್ಥಿಸಿಕೊಳ್ಳಲಾಗಿತ್ತು. ಹೀಗಿರುವಾಗ ಸಾವಿರಾರು ಜನರ ಆರೋಗ್ಯವನ್ನು ಅಪಾಯಕ್ಕೆ ಸಿಲುಕಿಸುವ ರ್‍ಯಾಲಿಗಳನ್ನು ಸಮರ್ಥಿಸಿಕೊಳ್ಳಲು ಯಾವ ಕಾರಣವೂ ಕಾಣಿಸುವುದಿಲ್ಲ. ರ್‍ಯಾಲಿಗಳ ಮೂಲಕ ತಲುಪುವುದಕ್ಕಿಂತ ಹೆಚ್ಚಿನ ಜನರನ್ನು ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ತಲುಪುವ ಶಕ್ತಿಯು ಇತರ ಪಕ್ಷಗಳಿಗಿಂತ ಬಿಜೆಪಿಗೆ ಹೆಚ್ಚು ಇದೆ. ಬಿಜೆಪಿಯಲ್ಲಿ ಸುಸಜ್ಜಿತ ಐ.ಟಿ. ಪಡೆ ಕೂಡ ಇದೆ ಎಂಬ ವರದಿಗಳಿವೆ. ಅದನ್ನು ಬಳಸಿಕೊಂಡರೆ ಆ ಪಕ್ಷವು ಜನರನ್ನು ತಲುಪಿ, ಮತ ಯಾಚಿಸಬಹುದಿತ್ತು. ಅತ್ಯಂತ ವಿಷಮವಾಗಿರುವ ಈ ಆರೋಗ್ಯ ಬಿಕ್ಕಟ್ಟಿನ ಸಂದರ್ಭದಲ್ಲಿ ಬಿಜೆಪಿಯು ಬೇರೆ ಪಕ್ಷಗಳಿಗೆ ಮಾದರಿಯಾಗಿ ನಿಲ್ಲುವ ಅವಕಾಶವನ್ನು ಕೈಚೆಲ್ಲಿದೆ. ಯಾವುದೇ ರಾಜಕೀಯ ಪಕ್ಷದ ಮುಖಂಡರನ್ನು ಉದ್ದೇಶಿಸಿ, 'ನೀವು ತಪ್ಪು ಮಾಡುತ್ತಿದ್ದೀರಿ' ಎಂದು ವಿವೇಕಿಗಳು ಹೇಳಿದರೆ, 'ನಮ್ಮನ್ನೇಕೆ ದೂಷಿಸುತ್ತೀರಿ, ಹಿಂದಿನವರು ತಪ್ಪು ಮಾಡಿರಲಿಲ್ಲವೇ' ಎಂಬ ಮರುಪ್ರಶ್ನೆ ಹಾಕಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿರುವ ಕಾಲಘಟ್ಟ ಇದು. ಇನ್ನೊಬ್ಬರ ಲೋಪದಲ್ಲಿ ತಮ್ಮ ಲೋಪವನ್ನು ಮುಚ್ಚಿಕೊಳ್ಳುವವರಿಗೆ ವಿವೇಕದ ಮಾತುಗಳು ರುಚಿಸುವುದಿಲ್ಲ. ಆದರೆ, ಯಾವ ಬೆಲೆ ತೆತ್ತಾದರೂ ಚುನಾವಣೆ ಗೆಲ್ಲಬೇಕು ಎಂಬ ಸಂದರ್ಭದಲ್ಲಿಯೂ ನೈತಿಕ ಹಿರಿಮೆಯ ನಿಲುವನ್ನು ತಾಳಬಹುದು. ಅಂತಹ ನಿಲುವನ್ನು ಜನ ಮೆಚ್ಚಿಕೊಳ್ಳುತ್ತಾರೆ ಕೂಡ.

ದಿನದ ಟ್ವೀಟ್

ಏಕೈಕ ಸೇವಾ ಮಾರ್ಗ

ವಿಕೇಂದ್ರೀಕೃತ, ಎಲ್ಲರೂ ಪರಸ್ಪರ ಕೈಜೋಡಿಸುವ ಮತ್ತು ಎಲ್ಲಾ ಸಮನ್ವಯಗೊಂಡ ವಿಧಾನವೊಂದೇ ಭಾರತದಲ್ಲಿ ಸಾರ್ವಜನಿಕ ಸೇವೆಗಳನ್ನು ಎಲ್ಲರಿಗೂ ತಲುಪಿಸಲು ಇರುವ ಏಕೈಕ ಮಾರ್ಗ. ನಮ್ಮ ಸರ್ಕಾರಗಳು, ರಾಜಕಾರಣಿಗಳು ಮತ್ತು ಅಧಿಕಾರಿಗಳು ಇದನ್ನು ಎಷ್ಟು ಬೇಗ ಅರ್ಥಮಾಡಿಕೊಂಡರೆ ಅಷ್ಟು ಒಳ್ಳೆಯದು.

ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಸಂಸ್ಥೆ

25 ವರ್ಷಗಳ ಹಿಂದೆ

ಭಾನುವಾರ, 21-4-1996

● **ಕೌಲ್ ರಾಜೀನಾಮೆಗೆ ರಾಷ್ಟ್ರಪತಿ ಸಲಹೆ**

ನವದೆಹಲಿ, ಏ. 20 (ಪಿಟಿಐ)– ಸರ್ಕಾರಿ ವಸತಿ ಹಗರಣದಲ್ಲಿ ಆರೋಪಿ ಎಂದು ಗುರುತಿಸಲಾಗಿರುವ ಕೇಂದ್ರದ ಮಾಜಿ ನಗರಾಭಿವೃದ್ಧಿ ಸಚಿವೆ ಮತ್ತು ಈಗ ಹಿಮಾಚಲ ಪ್ರದೇಶದ ರಾಜ್ಯಪಾಲೆಯಾಗಿರುವ ಶೀಲಾ ಕೌಲ್ ಅವರು ವಿಳಂಬ ಮಾಡದೆ ರಾಜೀನಾಮೆ ನೀಡುವುದು ಉತ್ತಮ ಎಂದು ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಇಂದು ರಾತ್ರಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಸಂವಿಧಾನದ ಘನತೆಯನ್ನು ಎತ್ತಿಹಿಡಿಯಲು ಕೌಲ್ ಅವರು ರಾಜೀನಾಮೆ ನೀಡುವುದು ಒಳ್ಳೆಯದು ಎಂದು ಡಾ. ಶರ್ಮಾ ಅವರು ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರಿಗೆ ತಿಳಿಸಿದ್ದಾರೆ ಎಂದು ರಾಷ್ಟ್ರಪತಿ ಭವನದ ಪತ್ರಿಕಾ ಪ್ರಕಟಣೆ ತಿಳಿಸಿದೆ.

● **'ಬಸವದಳ ಚಳವಳಿ ತಾತ್ಕಾಲಿಕ ಸ್ಥಗಿತ'**

ಬೆಂಗಳೂರು, ಏ. 20– ಗುಲ್ಬರ್ಗ ವಿಶ್ವ ವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣ ಮಾಡುವಂತೆ ಒತ್ತಾಯಿಸಿ ನಡೆಸುತ್ತಿರುವ ಚಳವಳಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ರಾಷ್ಟ್ರೀಯ ಬಸವದಳ ನಿರ್ಧರಿಸಿದೆ ಎಂದು ಗ್ರಾಮೀಣ ಅಭಿವೃದ್ಧಿ ಸಚಿವ ಎಂ.ಪಿ.ಪ್ರಕಾಶ್ ಇಂದು ಇಲ್ಲಿ ಪ್ರಕಟಿಸಿದರು.

ಲೋಕಸಭಾ ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಪುನರ್ ನಾಮಕರಣ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸರ್ಕಾರ ಭರವಸೆ ನೀಡಿದ ಹಿನ್ನೆಲೆಯಲ್ಲಿ ಚಳವಳಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಬಸವದಳ ಒಪ್ಪಿಕೊಂಡಿದೆ ಎಂದು ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 21-4-1971

● **ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ರಬ್ಬರ್ ಗೆಲುವು**

ಪೋರ್ಟ್ ಆಫ್ ಸ್ಪೇನ್ (ಟ್ರಿನಿಡಾಡ್), ಏ. 20– ಪ್ರಬಲ ವೆಸ್ಟ್ ಇಂಡೀಸ್ ವಿರುದ್ಧ ಕ್ರಿಕೆಟ್ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಭಾರತವು ಸರಣಿಯ 'ರಬ್ಬರ್' ಗೆದ್ದುಕೊಂಡಿದೆ.

ಸೋಮವಾರ ಮುಕ್ತಾಯವಾದ ಸರಣಿಯಲ್ಲಿ ಭಾರತ ಟೀಮಿನವರು ನಡೆದ ಐದು ಟೆಸ್ಟ್‌ಗಳಲ್ಲಿ ಎರಡನೇ ಟೆಸ್ಟ್ ಪಂದ್ಯದಲ್ಲಿ ಗೆದ್ದು ಉಳಿದ ನಾಲ್ಕು ಟೆಸ್ಟ್‌ಗಳನ್ನು ಡ್ರಾ ಮಾಡಿಕೊಂಡರು.

ದ್ವಿತೀಯ ಟೆಸ್ಟ್ ನಡೆದ ಪೋರ್ಟ್ ಆಫ್ ಸ್ಪೇನಿನ ಕ್ವೀನ್ಸ್ ಪಾರ್ಕ್ ಮೈದಾನದಲ್ಲಿ ನಡೆದ ಐದನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯ ಡ್ರಾ ಆಗಿ ಕೊನೆಗೊಂಡಿತು.

● **ನದಿ ದಾಟುತ್ತಿದ್ದ ನಿರಾಶ್ರಿತರಿಗೆ ಗುಂಡಿಕ್ಕಿ ಕೊಲೆ**

ಕಲ್ಕತ್ತ, ಏ. 20– ಪಾಕಿಸ್ತಾನಿ ಸೈನಿಕರಿಂದ ವಿಧ್ವಂಸಗೊಂಡ ನಂತರ ಬೆಂಕಿಯಲ್ಲಿ ಉರಿಯುತ್ತಿದ್ದ ರಾಜಷಾಹಿ ಜಿಲ್ಲೆಯ ಗ್ರಾಮವೊಂದರಲ್ಲಿ ಶನಿವಾರ ತಾವು ಕಣ್ಣಾರೆ ಕಂಡ ದಾರುಣ ದೃಶ್ಯವನ್ನು ಪಶ್ಚಿಮ ಬಂಗಾಳದ ಉಪಮುಖ್ಯಮಂತ್ರಿ ಬಿಜಯ್ ಸಿಂಗ್ ನಹಾರ್ ಅವರು ಸೋಮವಾರ ಇಲ್ಲಿ ಪತ್ರಕರ್ತರಿಗೆ ಬಣ್ಣಿಸಿದರು.

ನದಿ ದಾಟುತ್ತಿದ್ದ ನಿರಾಶ್ರಿತರನ್ನು ಪಾಕಿಸ್ತಾನದ ಸೈನಿಕರು ಗುಂಡಿಕ್ಕಿ ಕೊಂದ ಸ್ಥಳವನ್ನೂ ತಾವು ಸಂದರ್ಶಿಸಿದ್ದಾಗಿ, ನಿರಾಶ್ರಿತರು ಆಶ್ರಯ ಪಡೆದಿರುವ ಮುರ್ಷಿದಾಬಾದ್ ಜಿಲ್ಲೆಯ ಪ್ರವಾಸದ ನಂತರ ವಾಪಸಾದ ಅವರು ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಹೂಡಿಕೆ ಮಾಡುವ ವಿಶಾಲ ದೃಕ್ಪಥವನ್ನು ಸರ್ಕಾರ ಹೊಂದಬೇಕು

ಸಣ್ಣ ರೈತರೂ ಗುತ್ತಿಗೆ ಕೃಷಿಯೂ

ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

ಬೆಲೆ ಖಾತರಿ ಮತ್ತು ಕೃಷಿ ಸೇವೆಗಳಿಗೆ ಸಂಬಂಧಿಸಿದಂತೆ ರೈತರೊಂದಿಗಿನ ಒಪ್ಪಂದದ ಬಗೆಗಿನ ಕಾನೂನು (The Farmers (Empowerment and Protection) Agreement on Price Assurance and Farm Services Act, 2020) ಅತ್ಯಂತ ಜಟಿಲವಾದ ವಿಷಯವನ್ನು ಒಳಗೊಂಡಿದೆ. ಕೃಷಿಗೆ ಸಂಬಂಧಿಸಿದ ಮಿಕ್ಕೆರಡು ಕಾನೂನುಗಳು ವ್ಯಾಪಾರಕ್ಕೆ ಸಂಬಂಧಿಸಿದವೆಂದೂ ಅವು ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಬರುತ್ತವೆಂದೂ ಹೇಗೋ ವಿತಂಡವಾದ ಮಂಡಿಸಬಹುದಾದರೂ, ಗುತ್ತಿಗೆ ಕೃಷಿಯ ಬಗೆಗಿನ ಈ ಕಾನೂನನ್ನು ಹೊರಡಿಸುವಲ್ಲಿ ಕೇಂದ್ರವು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿಗೆ ಲಗ್ಗೆಯಿಟ್ಟಿದೆ ಎಂದು ಸ್ಪಷ್ಟವಾಗಿ ಹೇಳಬಹುದು. ಈ ಕಾನೂನು ಕೇವಲ ವ್ಯಾಪಾರಕ್ಕೆ ಸಂಬಂಧಿಸಿದ ಕಾನೂನೆಂದು ವಾದಿಸುವುದು ಕಷ್ಟ.

'ರೈತರ ಉತ್ಪತ್ತಿಯ ವ್ಯಾಪಾರ ಮತ್ತು ವ್ಯವಹಾರ (ಸುಗಮಗೊಳಿಸುವ, ಪ್ರೋತ್ಸಾಹಿಸುವ) ಕಾಯ್ದೆ–2020'ರಂತೆ ಇದರಲ್ಲೂ ಎರಡು ಭಿನ್ನ ಅಂಶಗಳಿವೆ. ಅವುಗಳಲ್ಲಿ ಮೊದಲನೆಯದು, ರೈತರು ಮತ್ತು ಕಾರ್ಪೊರೇಟ್ ಸಂಸ್ಥೆಗಳ ನಡುವೆ ಆಗಬಹುದಾದ ಒಪ್ಪಂದಗಳ ರೂಪುರೇಷೆ. ಎರಡನೆಯದು, ತಗಾದೆ, ತಕರಾರುಗಳನ್ನು ಪರಿಹರಿಸಿಕೊಳ್ಳುವ ವಿಧಿವಿಧಾನದ ಚೌಕಟ್ಟು. ಈ ಚೌಕಟ್ಟನ್ನು ಈಗ ಪ್ರಸ್ತಾಪಿಸಿರುವಂತೆ ಉಪ ವಿಭಾಗೀಯ ಮ್ಯಾಜಿಸ್ಟ್ರೇಟರ ಕಾರ್ಯವ್ಯಾಪ್ತಿಯಿಂದ ನ್ಯಾಯಾಂಗಕ್ಕೆ ವರ್ಗಾಯಿಸಲು ಸರ್ಕಾರ ತಯಾರಿರುವುದಾದರೆ, ಆ ವಿಷಯವನ್ನು ಬಿಟ್ಟು ಬರೇ ಕರಾರಿನ ವಿಷಯವನ್ನು ಚರ್ಚಿಸಬಹುದು.

ಕೃಷಿ ಉತ್ಪನ್ನಗಳ ಬೆಲೆ, ಗುಣಮಟ್ಟ, ಪ್ರಮಾಣಗಳನ್ನು ಪೂರ್ವನಿಗದಿತ ಚೌಕಟ್ಟಿನಲ್ಲಿ ಕರಾರು ಮಾಡಿಕೊಳ್ಳುವ ಸರಳ ಒಪ್ಪಂದ ಒಂದು ತುದಿಯಲ್ಲಿದ್ದರೆ, ಇಡೀ ಉತ್ಪಾದನೆ ಪ್ರಕ್ರಿಯೆಯನ್ನೇ ಕಾರ್ಪೊರೇಟು ಸಂಸ್ಥೆಗಳು ನಿಭಾಯಿಸಬಹುದಾದ ಸಾಧ್ಯತೆಗಳು ಮತ್ತೊಂದು ತುದಿಯಲ್ಲಿವೆ. ಈ ಕಾನೂನಿನಲ್ಲಿ ದುಷ್ಟ ಉದ್ದೇಶದ ಪಿತೂರಿ ಇರಬಹುದೇ ಎಂದು ಊಹಿಸುವುದು ಕಷ್ಟದ ಮಾತು. ವಿವಿಧ ರೀತಿಯ ಒಪ್ಪಂದಗಳನ್ನು ವಿಶ್ಲೇಷಿಸಿ ನೋಡದ ಹೊರತು, ಇದರಲ್ಲಿ ಯಾರಿಗೆ ಯಾವುದರಿಂದ ಫಾಯಿದೆಯಾಗಬಹುದು ಎನ್ನುವುದನ್ನು ಸರಳವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಈ ಕಾನೂನನ್ನು ಜಾರಿ ಮಾಡುವಂತಹ ಅತ್ಯವಶ್ಯಕ ಮತ್ತು ತುರ್ತಿನ ಸಂದರ್ಭದಲ್ಲಿ ನಾವು ಖಂಡಿತವಾಗಿಯೂ ಇಲ್ಲ.

ನಮ್ಮ ಕೃಷಿಯು ಕಾಲಾಂತರದಿಂದ ಎರಡು ರೀತಿಯ ಏರ್ಪಾಟುಗಳನ್ನು ಕಂಡಿದೆ. ರೈತರು ತಮ್ಮದೇ ಭೂಮಿಯನ್ನು ಉತ್ತು ನಿಭಾಯಿಸುವುದು. ಇಲ್ಲವೇ ಬೇರೊಬ್ಬರ ಜಮೀನಿನಲ್ಲಿ ಗೇಣಿ ಅಥವಾ ಕೃಷಿ ಭಾಗಸ್ವಾಮ್ಯದ ಏರ್ಪಾಟುಗಳನ್ನು ಮಾಡಿಕೊಳ್ಳುವುದು. ತಮ್ಮ ಭೂಮಿಯಲ್ಲೇ ಕೆಲಸ ಮಾಡಿದಾಗ ಅದರಿಂದ ಉಂಟಾಗುವ ಸಕಲ ಲಾಭನಷ್ಟಗಳೂ ರೈತರಿಗೇ ಸಂದುತ್ತವೆ. ಆದರೆ ಇತರರ ಭೂಮಿಯಲ್ಲಿ ಕೃಷಿ ಮಾಡಿದಾಗ ಆ ಪ್ರಕ್ರಿಯೆಯಲ್ಲಿನ ಅಪಾಯಗಳೆಲ್ಲವೂ ಗುತ್ತಿಗೆದಾರರ ಕತ್ತಿಗೆ ಬಿದ್ದರೆ, ಬಂದ ಲಾಭ ಮತ್ತು ಫಾಯಿದೆಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಹೀಗಾಗಿಯೇ ಕಾರ್ಪೊರೇಟು ಸಂಸ್ಥೆಗಳೊಂದಿಗೆ ಗುತ್ತಿಗೆ ಕೃಷಿ ನಡೆಸಲು ಮಾಡಿಕೊಳ್ಳುವ ಒಪ್ಪಂದಗಳ ಚೌಕಟ್ಟಿನ ಬಗ್ಗೆ ರೈತರಿಗೆ ಆತಂಕ-ಅನುಮಾನಗಳಿರುವುದು ಸಹಜವೇ ಆಗಿದೆ. ಈ ರೀತಿಯ ಕರಾರುಗಳಿಂದ ರೈತರಿಗೆ ಉತ್ತಮ ಬೀಜ, ತಾಂತ್ರಿಕ ಜ್ಞಾನ, ತರಬೇತಿ, ಆಧುನಿಕ ಮತ್ತು ವೈಜ್ಞಾನಿಕ ಕೃಷಿಯು ದಕ್ಕಬಹುದು. ಉತ್ತಮ ಬೆಲೆಯ ನಿರೀಕ್ಷೆಯೂ ಇರಬಹುದು. ಆದರೆ ಕೃಷಿಯಲ್ಲಿನ ಅಪಾಯಗಳು ಮತ್ತು ನೈಸರ್ಗಿಕ ವಿಕೋಪಗಳು ರೈತರ ವಿರುದ್ಧವಾಗಿ ಇರುತ್ತವೆ.

ಗುತ್ತಿಗೆ ಕೃಷಿಯ ಕರಾರಿನಲ್ಲಿ ಇಳುವರಿ, ಗುಣಮಟ್ಟ, ತೇವಾಂಶದಂತಹ ಅನೇಕ ಅಂಶಗಳಿರುತ್ತವೆ. ಗುತ್ತಿಗೆ ಕೃಷಿಯನ್ನು ಕೈಗೊಂಡಾಗ ಹಲವು ಬಾರಿ ಆ ಬೆಳೆ ಅತಿ ವಿಶಿಷ್ಟವಾಗಿರಬಹುದು. ಉದಾಹರಣೆಗೆ, ಪೆಪ್ಸಿ ಕಂಪೆನಿಯ ಲೇಸ್ ಚಿಪ್ಸ್‌ಗಾಗಿ ಉಪಯೋಗಿಸುವ ಆಲೂಗಡ್ಡೆ ಒಂದು ವಿಶಿಷ್ಟ ಬಗೆಯದ್ದಾಗಿದ್ದು, ಅದನ್ನು ಆ ಕಂಪನಿ ಕೊಳ್ಳದಿದ್ದರೆ ಇತರ ಜಾಗದಲ್ಲಿ ಅದರ ಮಾರಾಟದ ಸಾಧ್ಯತೆ ಇಲ್ಲವಾಗಬಹುದು. ಹೀಗಾಗಿ, ಇವು ಒಮ್ಮುಖ ಕರಾರುಗಳಾಗಿದ್ದು, ಏನಾದರೂ ಏರುಪೇರಾದರೆ ರೈತರಿಗೇ ತುಟ್ಟಿಯಾಗುತ್ತವೆ. ಅದೇ ಕಾಲಕ್ಕೆ ಕಾರ್ಪೊರೇಟು ಸಂಸ್ಥೆಗಳು ಕೊಡುವ ಬೀಜ, ಕೀಟನಾಶಕಗಳು ಕೆಲಸ ಮಾಡದಿದ್ದರೆ, ಸರಿಯಾಗಿ ಇಳುವರಿ ಬರದಿದ್ದರೆ ಅದರ ಜವಾಬ್ದಾರಿಯನ್ನು ಯಾರು ಹೊರುತ್ತಾರೆ ಎನ್ನುವ ಬಗ್ಗೆಯೂ ಸ್ಪಷ್ಟೀಕರಣವಿಲ್ಲ.

ಈ ಕರಾರುಗಳು ಎರಡು ಅಸಮಾನ ಪಾರ್ಟಿಗಳ ನಡುವೆ ಆಗುತ್ತಿವೆ ಎನ್ನುವುದನ್ನು ನಾವು ಗಮನಿಸಬೇಕು. ಒಂದೆಡೆ ಕಾರ್ಪೊರೇಟು ಸಂಸ್ಥೆಗಳು, ಅವುಗಳ ಸಂಪನ್ಮೂಲ, ಧನಬಲ ಮತ್ತು ವಶೀಲಿಗಳಿವೆ. ಮತ್ತೊಂದೆಡೆ, ಬಿಕ್ಕಟ್ಟಿನಲ್ಲಿರುವ ರೈತರಿದ್ದಾರೆ. ಎಲ್ಲವೂ ಸರಿಹೊಂದಿದ ಸಮಯಕ್ಕೆ ಈ ಕರಾರು- ಒಪ್ಪಂದಗಳು ಚೆನ್ನಾಗಿಯೇ ನಡೆಯುತ್ತವೆ. ಆದರೆ ಯಾವುದೇ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾದರೆ ಅದರ ದುಷ್ಪರಿಣಾಮ ಹೆಚ್ಚಾಗಿ ಆಗುವುದು ರೈತರ ಮೇಲೇ. ಹೀಗಾಗಿ ನಾವು ಕೇಳಬೇಕಾದುದು, ಕಾರ್ಪೊರೇಟ್ ಗುತ್ತಿಗೆಗಳು ರೈತರನ್ನು ಈಗಿರುವ ಸ್ಥಿತಿಗಿಂತ ಹೀನ ಸ್ಥಿತಿಗೆ ಒಯ್ಯುತ್ತವೆಯೇ ಎನ್ನುವ ಪ್ರಶ್ನೆಯನ್ನು. ರೈತರ ಮನದಲ್ಲಿಯೂ ಇದೇ ಪ್ರಶ್ನೆಯಿದೆ.

ಕಾರ್ಪೊರೇಟ್ ಗುತ್ತಿಗೆ ಕೃಷಿಯು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳ ಆಧಾರದ ಮೇಲೆ ನಡೆಯುವುದಿಲ್ಲ. ಈ ಏರ್ಪಾಟಿನಲ್ಲಿ ಕಾರ್ಪೊರೇಟು ಸಂಸ್ಥೆಗಳು ಹೆಚ್ಚು ಹೂಡಿಕೆ ಮಾಡಬೇಕಾದರೆ, ಹಲವು ಎಕರೆಗಳ ಒಂದು ದೊಡ್ಡ ಭೂಭಾಗ ಬೇಕಾಗುತ್ತದೆ. ಇದು ಸಣ್ಣ ಹಿಡುವಳಿಗಳ ಕ್ರೋಡೀಕರಣದಿಂದ ಮಾತ್ರ ಸಾಧ್ಯ. ಕ್ರೋಡೀಕರಣ ಅಂದಮಾತ್ರಕ್ಕೆ ಜಮೀನಿನ ಮಾಲೀಕತ್ವವನ್ನು ಸಂಸ್ಥೆಗಳಿಗೆ ವರ್ಗಾಯಿಸಿದಂತಲ್ಲ. ಆದರೂ ಜಮೀನುಗಳ ನಡುವಿನ ಅಂತರವನ್ನು ಮುರಿದು, ಒಂದು ದೊಡ್ಡ ಭೂಭಾಗದಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ಕೃಷಿಯನ್ನು ವೈಜ್ಞಾನಿಕವಾಗಿ ಕೈಗೊಂಡಾಗಲೇ ಸಂಸ್ಥೆಗಳಿಗೆ ಇದು ಗಿಟ್ಟುತ್ತದೆ. ಕ್ರೋಡೀಕರಣ ಪ್ರಕ್ರಿಯೆ, ಎಲ್ಲರಿಗೂ ಸಲ್ಲುವಂತಹ ಕರಾರುಗಳು, ಅವುಗಳ ನಿಗದಿತ ಅವಧಿ, ಸೀಮೆ ಈ ಎಲ್ಲವೂ ಜಟಿಲ ವಿಚಾರಗಳು. ಆದರೆ ಇಷ್ಟು ಮಾತ್ರ ನಿಜ. ಕಾರ್ಪೊರೇಟ್ ಕೃಷಿ ವ್ಯವಸ್ಥೆ ಆಗಬೇಕಾದರೆ, ಕೃಷಿ ಭೂಮಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕು, ಇಲ್ಲದಿದ್ದರೆ ಅದರಿಂದ ಹೆಚ್ಚು ಗಿಟ್ಟುವುದಿಲ್ಲ. ಹೀಗೆ ಕೃಷಿ ಭೂಮಿಯನ್ನು ಕಾರ್ಪೊರೇಟು ಸಂಸ್ಥೆಗಳಿಗೆ ಬಿಟ್ಟುಕೊಟ್ಟಾಗ ರೈತ ಏನು ಮಾಡಬೇಕು ಎನ್ನುವುದೂ ಪ್ರಶ್ನೆಯೇ. ಆತ ತನ್ನದೇ ಜಮೀನಿನಲ್ಲಿ ಕೂಲಿಯಾಗಿ ಕೆಲಸ ಮಾಡಬೇಕೇ? ಇದು ಕೇವಲ ವ್ಯವಹಾರದ ಪ್ರಶ್ನೆಯಾಗದೆ ಆತ್ಮಸನ್ಮಾನದ ಪ್ರಶ್ನೆಯೂ ಆಗುತ್ತದೆ.



ಗುತ್ತಿಗೆ ಪಡೆದ ಸಂಸ್ಥೆಗಳು ಯಾವುದೇ ಸ್ಥಾಯಿ ಕಟ್ಟಡಗಳನ್ನು ಕೃಷಿ ಭೂಮಿಯ ಮೇಲೆ ಕಟ್ಟಬಾರದು– ಭೂಮಿಯ ಸದರಿ ರೂಪಕ್ಕೆ ಯಾವುದೇ ಮೂಲಭೂತ ಬದಲಾವಣೆಗಳನ್ನು ಮಾಡಬಾರದೆಂದು ಕಾನೂನು ಸೂಚಿಸುತ್ತದೆ. ಹಾಗೇನಾದರೂ ಅವಶ್ಯವಾದ ಬದಲಾವಣೆಗಳನ್ನು ಮಾಡಿದರೆ, ಒಪ್ಪಂದ ಮುಗಿದು ರೈತರಿಗೆ ಭೂಮಿಯನ್ನು ಮರಳಿಸುವ ವೇಳೆಗೆ ಅದು ಹೇಗಿತ್ತೋ ಹಾಗೇ ಮರುಪರಿವರ್ತಿಸಿ ಕೊಡಬೇಕೆಂದು ತಿಳಿಸುತ್ತದೆ. ಕಾನೂನಿನ ಈ ಕಲಮನ್ನು ವಸ್ತುನಿಷ್ಠವಾಗಿ ಜಾರಿ ಮಾಡಲು ಸಾಧ್ಯವೇ ಇಲ್ಲ.

ಈ ಕಾನೂನಿನ ಸಾರಾಂಶವಿಷ್ಟೇ- ಇದರಲ್ಲಿ ಸಣ್ಣ ರೈತರ ಹಿತಾಸಕ್ತಿಗಳನ್ನು ಕಾಪಾಡುವ ಬಲವಾದ ಕಲಮುಗಳು ಕಾಣುತ್ತಿಲ್ಲ. ರೈತರ ಹಿತರಕ್ಷಣೆ ಬಗ್ಗೆ, ಭಿನ್ನ ಪರಿಸ್ಥಿತಿಗಳು ಮತ್ತು ಭಿನ್ನ ಬೆಳೆಗಳಿಗೆ ಬೇಕಾದ ಭಿನ್ನ ಒಪ್ಪಂದಗಳ ಬಗ್ಗೆ ಗಮನವನ್ನು ಹರಿಸಿಲ್ಲ. ತರಕಾರಿಗಳ ಪರಿಸ್ಥಿತಿ ಆಹಾರಧಾನ್ಯಗಳಿಗಿಂತ ಭಿನ್ನವಾಗಿರುತ್ತದೆ. ದಾಸ್ತಾನು ಮಾಡಲು ಸಾಧ್ಯವಾಗುವ ಉತ್ಪನ್ನಗಳಿಗೂ ತಕ್ಷಣ ಸಂಸ್ಕರಣೆಗೆ ಕಳಿಸಬೇಕಾದ ಉತ್ಪನ್ನಗಳಿಗೂ ಮೂಲಭೂತ ಭಿನ್ನತೆಗಳಿರುತ್ತವೆ.

ಯಾವುದೇನೇ ಆದರೂ ಈ ಕಾನೂನನ್ನು ಸ್ಥಳೀಯ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದಾದ ರಾಜ್ಯ ಸರ್ಕಾರಗಳಿಗೆ ಬಿಟ್ಟುಕೊಡುವುದೇ ಒಳಿತು. ಕೇಂದ್ರ ಸರ್ಕಾರದ ಜಿದ್ದೇ ಮುಂದುವರಿಯಬೇಕು ಎನ್ನುವುದಾದರೆ, ಇದನ್ನು ಮಾದರಿ ಕಾನೂನಾಗಿ ಪರಿವರ್ತಿಸಬಹುದು. ಆದರೂ ಈ ಕಾನೂನಿನ ಹಿಂದೆ ನಮಗೆ ಯಾವುದೇ ದೂರದೃಷ್ಟಿ ಕಾಣುವುದಿಲ್ಲವಾದ್ದರಿಂದ, ಇದನ್ನು ಮಾದರಿ ಕಾನೂನು ಎಂದು ಕರೆಯುವುದೂ ತಪ್ಪಾಗುತ್ತದೆ. ಹೀಗಾಗಿಯೇ ಈ ಕಾನೂನನ್ನು ರದ್ದು ಮಾಡಬೇಕೆನ್ನುವ ಬೇಡಿಕೆಯಲ್ಲಿ ಹುರುಳಿದೆ.

ರೈತರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವ ಗಂಭೀರ ಸಾಧ್ಯತೆ ಇಲ್ಲದಂತಹ ಟೊಳ್ಳು ಕಾನೂನುಗಳನ್ನು ಜಾರಿ ಮಾಡುವುದಕ್ಕೆ ಬದಲು, ಸರ್ಕಾರವು ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಹೂಡಿಕೆಯನ್ನು ಮಾಡುವ ವಿಶಾಲ ದೃಕ್ಪಥವನ್ನು ಹೊಂದಬೇಕು. ಆದರೆ ಆ ದೃಕ್ಪಥ ನಮಗೆ ಈ ಸರ್ಕಾರದಲ್ಲಿ ಕಾಣುತ್ತಿಲ್ಲ.

ಚುರುಮುರಿ

ಸಾರಿಗೆ ಸವಾರಿ

● ಮಣ್ಣೆರಾಜು

ವಿಶಲ್ ಊದಿ 'ಹೋಲ್ಡಾನ್...' ಅಂದ್ರು ಸಿ.ಎಂ.

ಬ್ರೇಕ್ ಹಾಕಿ ಬಸ್ ನಿಲ್ಲಿಸಿದ ಸಾರಿಗೆ ಮಂತ್ರಿ, 'ಯಾಕೆ ಸಾರ್ ಹೋಲ್ಡಾನ್ ಹೇಳಿದ್ರಿ?' ಅಂತ ಕೇಳಿದ್ರು.

'ಸೌಲಭ್ಯ ಸಾಲದು ಅಂತ ಸಾರಿಗೆ ಪ್ರಯಾಣಿಕರು ಬಸ್ ಇಳಿದಿದ್ದಾರೆ, ಮತ್ತೆ ಹತ್ತುವುದಿಲ್ಲವಂತೆ...' ಅಂದ್ರು ಸಿ.ಎಂ.

'ಸ್ಟೇರಿಂಗ್, ಹಾರ್ನ್, ಕ್ಲಚ್ಚು, ಬ್ರೇಕು ಸರಿಯಾಗೇ ಇದೆಯಲ್ಲಾ ಸಾರ್'.

'ಬಸ್ ಭದ್ರವಾಗಿದ್ದರೂ ಪ್ರಯಾಣಿಕರಿಗೆ ಸುಭದ್ರತೆ ಇಲ್ವಂತೆ, ಬಸ್ಸಿನಲ್ಲಿ ಉಸಿರುಕಟ್ಟುವ ವಾತಾವರಣ ಇದೆಯಂತೆ'.

'ಕಿಟಕಿ ಗ್ಲಾಸ್ ಓಪನ್ ಮಾಡಿದ್ರೆ ಗಾಳಿ, ಬೆಳಕು ಬರುತ್ತದೆ. ಪ್ರಪಂಚದ ಪರಿಸ್ಥಿತಿ ಕಾಣುತ್ತೆ ಅಂತ ಹೇಳಿ ಸಾರ್'.

'ಹೇಳಿದೆ, ಕೊರೊನಾ ಕಷ್ಟಕಾಲದಲ್ಲಿ ಇದಕ್ಕಿಂಥ ಹೆಚ್ಚಿನ ಸೌಕರ್ಯ ಕೊಡಲಾಗದು, ದಯವಿಟ್ಟು ಸಹಕರಿಸಿ ಅಂತ ಪ್ರಯಾಣಿಕರಲ್ಲಿ ಮನವಿ ಮಾಡಿದೆ. ಬಸ್ ಹತ್ತಲು ಹಟ ಮಾಡಿದ್ರೆ ಹೋದ ವರ್ಷ ಮಾಡಿದಂತೆ ಕೊರೊನಾ ನೆಪದಲ್ಲಿ ಬಸ್ ಸೇವೆಯನ್ನೇ ಬಂದ್ ಮಾಡ್ತೀವಿ ಅಂತಾನೂ ಹೆದರಿಸಿದೆ'.

'ಹೆದರಿಕೊಂಡ್ರಾ ಸಾರ್?'

'ಇಲ್ಲ, ಸರ್ಕಾರವನ್ನೇ ಪಂಚರ್ ಮಾಡ್ತೀವಿ ಅಂತ ನನ್ನನ್ನೇ ಹೆದರಿಸಿದ್ರು'.

'ದಯವಿಟ್ಟು ಬಂದು ಬಸ್ ಹತ್ತಿ, ಬಸ್ ಚಕ್ರ ಉರುಳಿದರಷ್ಟೇ ನಮ್ಮ ಸರ್ಕಾರ, ನಿಮ್ಮ ಸಂಸಾರ ಮುಂದಕ್ಕೆ ಸಾಗೋದು' ಮುಷ್ಕರನಿರತ ಸಾರಿಗೆ ಪ್ರಯಾಣಿಕರಿಗೆ ಸಿ.ಎಂ. ಮನವಿ ಮಾಡಿದರು.

'ನಾವೇನು ರಾಜಹಂಸ, ಐರಾವತ, ಸುಖಾಸೀನ ಸೇವೆ ಕೇಳ್ತಿಲ್ಲ, ಸಾಧಾರಣ ಬಸ್ಸಿನ ಸುಖಕರ ಪ್ರಯಾಣ ಒದಗಿಸಿ' ಪ್ರಯಾಣಿಕರು ಪಟ್ಟು ಹಿಡಿದರು.

ಸಿ.ಎಂ, ಸಾರಿಗೆ ಮಂತ್ರಿ ತಲೆ ಕೆಡಿಸಿಕೊಂಡರು.

'ನಿಮ್ಮ ಸೇವಾ ಸೌಕರ್ಯಗಳನ್ನು ಟಿಕೆಟ್ ಹಿಂದೆ ಬರೆದುಕೊಡ್ತೀವಿ. ಕೊರೊನಾ ಕಾಟ ಮುಗಿದ ಮೇಲೆ ಟಿಕೆಟ್ ತೋರಿಸಿ ಈಸ್ಕೊಳ್ಳಿ...' ಎಂದು ಎಲ್ಲರಿಗೂ ಟಿಕೆಟ್ ಹಂಚಿ, ಬಸ್ ಹತ್ತಿ 'ರೈಟ್...' ಹೇಳಿದರು.

ಸಂಗತ

ಕೋವಿಡ್ ಮತ್ತು ಏಡ್ಸ್ ನಿಯಂತ್ರಣ ಯೋಜನೆ

ಕಾಂಡೋಂ ಹಂಚಿಕೆಯಿಂದ ಕೋವಿಡ್ ಹರಡಲು ಪರೋಕ್ಷ ನೆರವು?

● ರೂಪ ಹಾಸನ

ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಮತ್ತು ಸಂಶೋಧಕರ ತಂಡವು ಕಳೆದ ಮೇ ತಿಂಗಳಲ್ಲಿ ಆತಂಕಕಾರಿ ವರದಿಯೊಂದನ್ನು ಬಿಡುಗಡೆ ಮಾಡಿತು. ಈ ವರದಿಯಲ್ಲಿ, 'ಭಾರತದ ಕೆಂಪುದೀಪ ಪ್ರದೇಶಗಳನ್ನು ಮುಚ್ಚಿದರೆ, ಹೊಸ ಕೋವಿಡ್ ಪ್ರಕರಣಗಳ ಪೈಕಿ ಶೇ 72ರಷ್ಟನ್ನು ತಡೆಗಟ್ಟಬಹುದು. ಸಾರ್ವಜನಿಕ ಲೈಂಗಿಕ ಚಟುವಟಿಕೆ ತಾಣಗಳ ಮೇಲಿನ ನಿರ್ಬಂಧವನ್ನು ಮುಂದುವರಿಸಿದರೆ ಸೋಂಕು ಹರಡುವಿಕೆ ಮತ್ತು ಸಾವಿನ ಪ್ರಮಾಣವು ಶೇ 63ರಷ್ಟು ತಗ್ಗಲಿದೆ' ಎಂದು ಒತ್ತಿ ಹೇಳಲಾಗಿತ್ತು.

'ಕೋವಿಡ್ ಪ್ರಕರಣಗಳು ಗರಿಷ್ಠ ಮಟ್ಟ ಮುಟ್ಟುವುದನ್ನು ತಡೆಯಲು ಕೆಂಪುದೀಪ ಪ್ರದೇಶಕ್ಕೆ ನಿರ್ಬಂಧ ಅನಿವಾರ್ಯ. ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ (ನ್ಯಾಕೋ) ದಾಖಲೆಗಳ ಪ್ರಕಾರ, ದೇಶದಲ್ಲಿ ನೋಂದಣಿಯಾದ 6,37,500 ಲೈಂಗಿಕ ಕಾರ್ಯಕರ್ತೆಯರಿದ್ದು, ಪ್ರತಿದಿನ ಐದು ಲಕ್ಷ ಗ್ರಾಹಕರು 'ಕೆಂಪುದೀಪ' ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಅಲ್ಲಿಯ ಚಟುವಟಿಕೆಗಳ ಪುನರಾರಂಭಕ್ಕೆ ಅವಕಾಶ ನೀಡಿದರೆ ಸೋಂಕು ವೇಗವಾಗಿ ಹರಡುತ್ತದೆ. ಲೈಂಗಿಕ ಕ್ರಿಯೆಯಲ್ಲಿ ಅಂತರ ಕಾಯ್ದುಕೊಳ್ಳುವುದು ಅಸಾಧ್ಯವಾದ್ದರಿಂದ ಸೋಂಕು ಕ್ಷಿಪ್ರವಾಗಿ ಹರಡುವ ಅಪಾಯವಿದೆ' ಎಂದು ಸಂಶೋಧಕರು ಎಚ್ಚರಿಸಿದ್ದರು.

ಈ ಎಚ್ಚರಿಕೆಯನ್ನು ಪರಿಗಣಿಸಿ ಆಸ್ಟ್ರೇಲಿಯಾ, ಜರ್ಮನಿ, ನೆದರ್ಲೆಂಡ್ಸ್‌ನಲ್ಲಿ ವೇಶ್ಯಾಗೃಹಗಳನ್ನು ಅನಿರ್ದಿಷ್ಟಾವಧಿಯವರೆಗೆ ಬಂದ್ ಮಾಡಿದ್ದನ್ನೂ ತನ್ಮೂಲಕ ಅಲ್ಲಿ ಸೋಂಕು ಹರಡುವ ಪ್ರಮಾಣ ಗಣನೀಯವಾಗಿ ತಗ್ಗಿದ್ದನ್ನೂ ಜಪಾನ್‌ನಲ್ಲಿ ಇಂತಹ ನಿಯಂತ್ರಣ ವಿಧಿಸದ ಕಾರಣ ಅಲ್ಲಿ ಸೋಂಕಿನ ಪ್ರಕರಣಗಳು ಭಾರಿ ಸಂಖ್ಯೆಯಲ್ಲಿ ಹೆಚ್ಚಿದ್ದನ್ನೂ ವರದಿಯು ಉಲ್ಲೇಖಿಸಿತ್ತು. ಭಾರತ ಸರ್ಕಾರಕ್ಕೆ ತುರ್ತು ಜಾಗೃತಿಯ ಸಂದೇಶ ನೀಡಿತ್ತು. ಆದರೆ ಇಲ್ಲಿ ಕಠಿಣ ಕ್ರಮ ಇರಲಿ, ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿದ್ದು ಬಿಟ್ಟರೆ ಬೇರೆಡೆ ಚರ್ಚೆಯೂ ಆಗಲಿಲ್ಲ!

ಭಾರತದಲ್ಲಿ 'ಕೆಂಪುದೀಪ' ಪ್ರದೇಶದಲ್ಲಿ ಮಾತ್ರವಲ್ಲದೆ ದೇಶದ ಮೂಲೆ ಮೂಲೆಗಳಲ್ಲಿಯೂ ವೇಶ್ಯಾವಾಟಿಕೆಯ ಬೇರು ವ್ಯಾಪಿಸಿದೆ. ಏಡ್ಸ್ ನಿಯಂತ್ರಣಕ್ಕಾಗಿ ಕಾರ್ಯನಿರ್ವಹಿಸುವ ಬೃಹತ್ ಸ್ವಯಂಸೇವಾ ಸಂಸ್ಥೆಯಾದ ನ್ಯಾಕೋ, ನಮ್ಮ ವಿಕೇಂದ್ರೀಕೃತ ಆರೋಗ್ಯ ವ್ಯವಸ್ಥೆಯನ್ನು ಬಳಸಿಕೊಳ್ಳಲು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಪ್ರತೀ ರಾಜ್ಯದಲ್ಲಿಯೂ ಮುಖ್ಯಮಂತ್ರಿಯೇ ರಾಜ್ಯ ಶಾಖೆಗಳ ಅಧ್ಯಕ್ಷರಾಗಿರುತ್ತಾರೆ. ಆರೋಗ್ಯ ಸಚಿವರೇ ಮುಖ್ಯ ಕಾರ್ಯದರ್ಶಿಯಾಗಿರುತ್ತಾರೆ. ಸರ್ಕಾರ ಮತ್ತು ವಿಶ್ವಮಟ್ಟದ ಸ್ವಯಂಸೇವಾ ಸಂಸ್ಥೆಗಳಿಂದ ಕೋಟ್ಯಂತರ ರೂಪಾಯಿಗಳ ಅನುದಾನವು ಕಾಂಡೋಂ ಹಂಚಿಕೆಯ ಯೋಜನೆಗಾಗಿ ಹರಿದುಬರುತ್ತದೆ. ಒಂದರ್ಥದಲ್ಲಿ, ಸರ್ಕಾರದ ಬೆಂಬಲದಿಂದಲೇ ವೇಶ್ಯಾವಾಟಿಕೆ ಪರೋಕ್ಷವಾಗಿ ಕಾನೂನುಬದ್ಧವೇ ಆಗಿಹೋಗಿದೆ!

ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಲಕ್ಷಾಂತರ ತಳಹಂತದ ಲೈಂಗಿಕ ಕಾರ್ಯಕರ್ತೆಯರು, ಸಲಿಂಗಕಾಮಿಗಳು, ಲಿಂಗತ್ವ ಅಲ್ಪಸಂಖ್ಯಾತರನ್ನು ಕಾಂಡೋಮ್ ವಿತರಣೆಯ ಜಾಲದಲ್ಲಿ ನೋಂದಣಿ ಮಾಡಿಕೊಳ್ಳಲಾಗಿದೆ. ಕಾಂಡೋಂ ಹಂಚಿಕೆಗೆ ಪ್ರೋತ್ಸಾಹಧನದ ಜೊತೆಗೆ ಗುರಿ ನೀಡಿ, ಇನ್ನಷ್ಟು ಪ್ರೋತ್ಸಾಹಧನದ ಆಮಿಷವನ್ನು ಒಡ್ಡಲಾಗುತ್ತದೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ವೇಶ್ಯಾವಾಟಿಕೆ ವ್ಯಾಪಕವಾಗುತ್ತಿದೆ. ಇದು ನೋಂದಣಿಯಾದವರ ಲೆಕ್ಕಾಚಾರವಷ್ಟೇ. ಸೆಕ್ಸ್ ಟೂರಿಸಂ, ಸೆಕ್ಸೋದ್ಯಮ, ಹಲ ಬಗೆಯ ಮಾಫಿಯಾಗಳು... ಹೀಗೆ ಇಂತಹ ಜಾಲಕ್ಕೆ ಬಿದ್ದವರ ಲೆಕ್ಕ ಅಂದಾಜಿಸಲೂ ಸಾಧ್ಯವಿಲ್ಲ. ಇದು ಗೋಪ್ಯ ಚಟುವಟಿಕೆಯಾದ್ದರಿಂದ ಕೊರೊನಾ ಸೋಂಕಿನ ಮೂಲವನ್ನು ಪತ್ತೆ ಹಚ್ಚುವುದು ಅಸಾಧ್ಯ. ಹೀಗಾಗಿ ಸೋಂಕಿನ ವ್ಯಾಪಕತೆ ವಿಪರೀತವಾಗಿ ಹೆಚ್ಚುತ್ತದೆ ಎಂಬುದು ತಜ್ಞರ ಆತಂಕ.



ಹೀಗೆಂದೇ, ರಾಜ್ಯದ ಆರೋಗ್ಯ ಸಚಿವರಾಗಿದ್ದ ಶ್ರೀರಾಮುಲು ಅವರ ಗಮನಕ್ಕೆ ಇದನ್ನು ತಂದಾಗ, ಅವರು ವೇಶ್ಯಾವಾಟಿಕೆಯನ್ನು ನಿರ್ಬಂಧಿಸಲು ಆರೋಗ್ಯ ಇಲಾಖೆ, ಏಡ್ಸ್ ನಿಯಂತ್ರಣ ಮಂಡಳಿ ಹಾಗೂ ಗೃಹ ಇಲಾಖೆಗೆ ಕಳೆದ ಮೇ ತಿಂಗಳಲ್ಲೇ ಲಿಖಿತ ಆದೇಶ ನೀಡಿದ್ದರು. ಇದರಿಂದ ಸಂಕಷ್ಟಕ್ಕೆ ಒಳಗಾಗುವ ಕಾಂಡೋಂ ವಿತರಣೆ ಜಾಲದಲ್ಲಿರುವ ಸಂತ್ರಸ್ತರಿಗೆ ತಕ್ಷಣಕ್ಕೆ ಆಹಾರಧಾನ್ಯ, ಸಹಾಯಧನ ವಿತರಣೆ ಮತ್ತು ಅವರ ಶಾಶ್ವತ ಪುನರ್ವಸತಿಗೆ ವಿಸ್ತೃತ ವರದಿಯೊಂದಿಗೆ ತಕ್ಷಣವೇ ಪ್ರಸ್ತಾವವನ್ನು ಸಲ್ಲಿಸಲು ಸೂಚಿಸಿದ್ದರು. ಈ ಕಾಂಡೋಂ ವಿತರಣೆ ಜಾಲದಲ್ಲಿರುವ ಎಲ್ಲ ಸಮುದಾಯಗಳಿಗೂ ಕೋವಿಡ್ ಸೋಂಕಿನ ಜಾಗೃತಿ ನೀಡಬೇಕೆನ್ನುವುದು ಆದ್ಯತೆಯಾಗಿತ್ತು. ಆದರೆ ಯಾವುದೂ ಕಾರ್ಯಗತವಾಗಿಲ್ಲ. ಸರ್ಕಾರದ ನೆರವಿನೊಂದಿಗೇ ಏಡ್ಸ್ ನಿಯಂತ್ರಣ ಸಂಸ್ಥೆ 'ಸುರಕ್ಷಿತ ಲೈಂಗಿಕತೆ' ಹೆಸರಿನಲ್ಲಿ ನಿರಾತಂಕವಾಗಿ ಪ್ರತಿನಿತ್ಯ ಕಾಂಡೋಂ ವಿತರಣೆ ಮಾಡುತ್ತಲೇ ಇದೆ. ತನ್ಮೂಲಕ ವೇಶ್ಯಾವಾಟಿಕೆಗೆ ಪರೋಕ್ಷ ಪ್ರಚೋದನೆ ನೀಡುತ್ತಲೇ ಇದೆ! ಸಾಂಕ್ರಾಮಿಕ ರೋಗ ನಿಯಂತ್ರಣ ಕಾಯ್ದೆ, ವಿಪತ್ತು ನಿರ್ವಹಣಾ ತಡೆ ಕಾಯ್ದೆಗಳೂ ಪಾಪ, ಕೇವಲ ಆದೇಶಗಳಾಗಿ ಸತ್ತು ಬಿದ್ದಿವೆ.

ಕೋವಿಡ್ ಸೋಂಕು ಮಿತಿಮೀರಿರುವ ಈ ಸಮಯದಲ್ಲಿ, ಪರಸ್ಪರ ವೈರುಧ್ಯದ- ವೇಶ್ಯಾವಾಟಿಕೆ ನಿಯಂತ್ರಣಕ್ಕೆ ಆದ್ಯತೆ ನೀಡಬೇಕೇ ಅಥವಾ ಏಡ್ಸ್ ನಿಯಂತ್ರಣಕ್ಕಾಗಿ ಕಾಂಡೋಂ ವಿತರಣೆಗೆ ಆದ್ಯತೆ ನೀಡಬೇಕೇ ಎಂಬುದನ್ನು ಸರ್ಕಾರ ಮತ್ತು ಆರೋಗ್ಯ ಇಲಾಖೆ ತಕ್ಷಣಕ್ಕೆ ಜವಾಬ್ದಾರಿಯುತವಾಗಿ ನಿರ್ಧರಿಸಿ, ಕಠಿಣ ಕ್ರಮ ಕೈಗೊಳ್ಳಲೇಬೇಕಿದೆ.

ವಾಚಕರ ವಾಣಿ

ಇಡೀ ಮನುಕುಲದ ಸಾಧನೆ

ಮಂಗಳನ ಅಂಗಳದಲ್ಲಿ ನಾಸಾ ಸಂಸ್ಥೆಯು ಹೆಲಿಕಾಪ್ಟರ್ ಅನ್ನು ಹಾರಿಸಿದೆ (ಪ್ರ.ವಾ., ಏ. 20). ಕಳೆದ ಆರು ವರ್ಷಗಳ ಸತತ ಪ್ರಯತ್ನದಿಂದಾಗಿ ನಾಸಾ ಈ ಮಹತ್ವದ ಸಾಧನೆಯನ್ನು ಮಾಡಿದೆ. ಇದನ್ನು ಕೇವಲ ಅಮೆರಿಕದ ಬಾಹ್ಯಾಕಾಶ ಸಂಸ್ಥೆಯ ಸಾಧನೆಯನ್ನಾಗಿ ನೋಡದೆ ಇಡೀ ಮನುಕುಲದ ಸಾಧನೆಯನ್ನಾಗಿ ನೋಡಬೇಕಿದೆ.

ಈ ಪ್ರಯೋಗದ ಇನ್ನೊಂದು ಮಹತ್ವದ ಅಂಶವೆಂದರೆ, ಹೆಲಿಕಾಪ್ಟರಿನ ಯಶಸ್ವಿ ಹಾರಾಟಕ್ಕೆ ಬೇಕಾದ ಬಲ ಪ್ರಮಾಣವನ್ನು ನಿರ್ಧರಿಸಲು ನಾಸಾದ ವಿಜ್ಞಾನಿಗಳು ಬಳಸಿದ್ದು ನ್ಯೂಟನ್‌ನ ನಿಯಮಗಳನ್ನೇ. ಅಂದರೆ, ಶತಮಾನದಿಂದ ಭೂಮಿಯ ಮೇಲೆ ವಿಮಾನಗಳನ್ನು ಹಾರಿಸಲು ವಿಜ್ಞಾನಿಗಳು ಬಳಸುತ್ತಿದ್ದ ನ್ಯೂಟನ್‌ನ ನಿಯಮಗಳು ಮಂಗಳದಲ್ಲೂ (ಗುರುತ್ವಶಕ್ತಿ ಮತ್ತು ವಾತಾವರಣದ ಒತ್ತಡದ ಪ್ರಮಾಣಗಳು ಮಾತ್ರ ಬೇರೆ) ಅನ್ವಯವಾಗುತ್ತವೆ ಎಂಬುದು ಈ ಪ್ರಯೋಗದಿಂದ ಸಾಬೀತಾಗಿದೆ.

ಡಾ. ಸುದರ್ಶನ ಪಾಟೀಲ ಕುಲಕರ್ಣಿ, ಮೈಸೂರು

ಭಯ, ಸಂಶಯಕ್ಕೆ ಬೇಕು ಮಾಹಿತಿ ಮದ್ದು

ಕೋವಿಡ್ ಕಾಲದ ನೂರೊಂದು ಅಭಾವಗಳಲ್ಲಿ ಮಾಹಿತಿ ಅಭಾವವೇ ಅತ್ಯಂತ ದುರ್ಭರವಾಗಿದೆ. ಭಯಗ್ರಸ್ತರಿಗೆ ನೂರೊಂದು ಬಗೆಯ ಮಾಹಿತಿ, ಮಾರ್ಗಸೂಚಿ ಬೇಕಾಗಿದೆ. ಉದಾಹರಣೆಗೆ, ಅಂಗಡಿಯಲ್ಲಿ ಸಿಗುವ ಸ್ಟೀರಾಯ್ಡ್ ಔಷಧವನ್ನು ಬಳಸಬಹುದೇ? ಅದರ ಅಡ್ಡ ಪರಿಣಾಮ ಏನು? ಮನೆಯಲ್ಲಿ ವೆಂಟಿಲೇಟರ್ ಇಲ್ಲದೆಯೂ ಉಸಿರೆಳೆತದ ಪ್ರಮಾಣವನ್ನು ಹೆಚ್ಚಿಸುವ ಸರಳ ಉಪಾಯ ಏನು? ಆಕ್ಸಿಮೀಟರ್ ಇಲ್ಲದಾಗ ರಕ್ತದಲ್ಲಿ ಆಮ್ಲಜನಕದ ಕೊರತೆಯನ್ನು ಹೇಗೆ ಗುರುತಿಸಬಹುದು? ಜೊತೆಗೆ ತೀರ ಸರಳ ಪ್ರಶ್ನೆಗಳಾದ (1) ಮನೆಯ ನಾಯಿಗೂ ಅಥವಾ ನಾಯಿಯ ಮೂಲಕವೂ ಕೊರೊನಾ ಬಂದೀತೆ? (2) ಲಸಿಕೆ ಹಾಕಿಸಿಕೊಂಡರೂ ಮುಖವಾಡ ಬೇಕೇಕೆ? (3) ಬೀದಿ ಬದಿಯಲ್ಲಿ ಕಲ್ಲಂಗಡಿ ತಿನ್ನಬಹುದೇ? (4) ಹಬೆಸ್ನಾನ ಎಂದರೇನು? ಇತ್ಯಾದಿಗಳಿಗೂ ಉತ್ತರ ಬೇಕಾಗಿದೆ. ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ ಎಂದೋ ಉತ್ತರ ಬಂದಿರುತ್ತದಾದರೂ ಬೇಕೆಂದಾಗ ಸಿಗುವುದಿಲ್ಲ. ವಾಹಿನಿಗಳ ಚೀರಾಟದಲ್ಲಿ ಜನಕ್ಕೆ ಬೇಕಿದ್ದ ಮಾಹಿತಿಗಳು ಮಾತ್ರ ಸಿಗುವುದಿಲ್ಲ.

ದೂರದರ್ಶನದವರು ಈ ತುರ್ತುಸ್ಥಿತಿಯಲ್ಲಿ ತಮ್ಮ ಹಾಡು-ಕುಣಿತ, ಥಟ್ಟಂತಗಳನ್ನೆಲ್ಲ ಲಾಕ್‌ಡೌನ್ ಮಾಡಿ, ಸಹಾಯವಾಣಿ ತೆರೆದಿಟ್ಟು ಇಂಥ ನೂರಾರು ಸರಳ ಪ್ರಶ್ನೆಗಳನ್ನು ತಾವೇ ಕೇಳುತ್ತ, ಉತ್ತರ ಹೇಳುತ್ತ, ತಪ್ಪು ಕಲ್ಪನೆಯನ್ನು ನಿವಾರಿಸುತ್ತ (ಹೇಳಿದ್ದನ್ನೇ ಬೇಕಿದ್ದರೆ ಮತ್ತೆ ಮತ್ತೆ ಹೇಳುತ್ತ) ಹೋಗಬೇಕು. ಯಾವ ಹೊತ್ತಿನಲ್ಲಿ ಸ್ವಿಚಾನ್ ಮಾಡಿದರೂ ಒಂದಿಷ್ಟು ಮಾಹಿತಿ ಸಿಗುವ ವ್ಯವಸ್ಥೆ ಮಾಡಬೇಕು.

ನಾಗೇಶ ಹೆಗಡೆ, ಕೆಂಗೇರಿ

ವೆಂಕಟಸುಬ್ಬಯ್ಯ ಎಂಬ 'ಜೀವಿ'

ಕನ್ನಡ ಸಂಸ್ಕೃತಿಯನ್ನು ಎದೆಗೆ
ಇಂಬಿಟ್ಟುಕೊಂಡ ಜಿವಿ
ನಿಮಗೆ ರಾಮಚಂದ್ರ ಶರ್ಮರು
ಇಟ್ಟ ಸಾರ್ಥಕ ಶಬ್ದ 'ಜೀವಿ'
ನೂರೆಂಟು ಗಾಯತ್ರಿ ಪಠಿಸಿದಿರಿ
ಕನ್ನಡ ಮಂತ್ರವನ್ನು ಎಲ್ಲೆಲ್ಲೂ
ಸಾರುತ್ತ ಸಾಗಿದಿರಿ
ಶಬ್ದಬ್ರಹ್ಮ, ಕಾವ್ಯಜೀವಿ,
ಶಿಸ್ತಿನ ವಸ್ತ್ರಜೀವಿ, ಜನಜೀವಿ,
ರಸಿಕಜೀವಿ, ಸಂದರ್ಭೋಚಿತ
ವಾಕ್‌ಜೀವಿ ಎನಿಸಿದಿರಿ
ನಿಮ್ಮ ನೆನಪಲಿ ಕನ್ನಡದ ತೇರೆಳೆಯುತ
ಸಾಗುತ್ತೇವೆ ಇನ್ನು ಮುಂದೆ...

ಪ್ರೊ. ಅ.ರಾ.ಮಿತ್ರ, ಬೆಂಗಳೂರು

ಎಲ್ಲಕ್ಕೂ ಕೋರ್ಟ್ ನಿರ್ದೇಶನ ಬೇಕೇ?

ರಾಜ್ಯದ ಎಲ್ಲಾ 65,911 ಅಂಗನವಾಡಿಗಳಿಗೆ ವಿದ್ಯುತ್ ಸಂಪರ್ಕ ಮತ್ತು ಫ್ಯಾನ್‌ಗಳನ್ನು ಒದಗಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ ನಿರ್ದೇಶನ ನೀಡಿರುವುದು ವರದಿಯಾಗಿದೆ (ಪ್ರ.ವಾ., ಏ. 19). ಆಡಳಿತಾತ್ಮಕ ವಿಚಾರಗಳಲ್ಲೂ ಹೈಕೋರ್ಟ್ ನಿರ್ದೇಶನ ಮಾಡುವವರೆಗೂ ಸರ್ಕಾರ ಕಾಯಬೇಕೇ? ಕೋರ್ಟ್‌ನಿಂದ ನಿರ್ದೇಶನ ಪಡೆದು ಕೆಲಸ ಮಾಡುವುದಾದರೆ ಅದಕ್ಕೆ ಸರ್ಕಾರ ಏಕೆ ಬೇಕು? ಅಧಿಕಾರಿಗಳೇ ಮಾಡುತ್ತಾರೆ. ಕೋರ್ಟುಗಳು ಮಾಡುವ ಕೆಲಸ ಬೆಟ್ಟದಷ್ಟಿರುತ್ತದೆ. ಇಂತಹವುಗಳೆಡೆಗೂ ಗಮನ ಹರಿಸಬೇಕಾದ ಪರಿಸ್ಥಿತಿಯನ್ನು ಸರ್ಕಾರ ಒದಗಿಸಕೂಡದು.

ಕೇವಲ ಇದೊಂದೇ ಅಲ್ಲದೆ ವರ್ಗಾವಣೆ, ಪ್ರತಿಭಟನೆ, ಆರೋಗ್ಯ, ರಸ್ತೆ ದುರಸ್ತಿ, ಹವಾಮಾನ, ಸಾರಿಗೆ, ಅಬಕಾರಿ ಮುಂತಾದ ಅನೇಕ ವಿಷಯಗಳಲ್ಲಿ ಕೋರ್ಟ್ ಸ್ವಯಂಪ್ರೇರಿತವಾಗಿ ಸರ್ಕಾರಕ್ಕೆ ಸೂಚನೆ ನೀಡುತ್ತಾ ತನ್ನ ಚಾಟಿ ಬೀಸುತ್ತಿರುವುದನ್ನು ಗಮನಿಸಬಹುದು. ಅಷ್ಟರವರೆಗೂ ಸರ್ಕಾರ ಸುಮ್ಮನಿರದೆ ತನ್ನ ಕೆಲಸವನ್ನು ಮಾಡುವಂತಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಮೌಲ್ಯಮಾಪನ ವಿಕೇಂದ್ರೀಕೃತವಾಗಲಿ

ಪ್ರತಿವರ್ಷ ದ್ವಿತೀಯ ಪಿಯು ಮೌಲ್ಯಮಾಪನವು ಬೆಂಗಳೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ ಮುಂತಾದ ಕೆಲವು ಕೇಂದ್ರಗಳಲ್ಲಿ ನಿಗದಿಯಾಗಿ, ಇತರ ಜಿಲ್ಲೆಗಳ ಉಪನ್ಯಾಸಕರು ಈ ಕೇಂದ್ರಗಳಿಗೆ ಹೋಗಬೇಕಾಗುತ್ತದೆ. ತಮ್ಮ ಅನಾರೋಗ್ಯ, ದಟ್ಟ ಬಿಸಿಲು, ವೈಯಕ್ತಿಕ ಸಮಸ್ಯೆಗಳು, ಸಂಸಾರದ ತಾಪತ್ರಯಗಳನ್ನು ಬದಿಗಿರಿಸಿ ಸುಮಾರು ಎರಡು ವಾರಕ್ಕೂ ಹೆಚ್ಚು ಕಾಲ ಮೌಲ್ಯಮಾಪನ ಕಾರ್ಯವನ್ನು ಉಪನ್ಯಾಸಕರು ಚಾಚೂ ತಪ್ಪದೆ ಮಾಡಿಕೊಂಡು ಬಂದಿದ್ದಾರೆ. ಈ ವರ್ಷ ಕೊರೊನಾ ವೈರಸ್ ಸೋಂಕಿನ ಕಾರಣದಿಂದ ಪರೀಕ್ಷಾ ಮೌಲ್ಯಮಾಪನ ಕೇಂದ್ರವು ಆಯಾ ಜಿಲ್ಲೆಗಳಲ್ಲೇ ಇರುವಂತೆ ನೋಡಿಕೊಳ್ಳುವುದು ಒಳ್ಳೆಯದು.

ಕಳೆದ ವರ್ಷ ಇದೇ ಕೊರೊನಾ ಕಾರಣದಿಂದ ಬಹುತೇಕ ಉಪನ್ಯಾಸಕರು ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾದದ್ದನ್ನು ಸ್ಮರಿಸಬಹುದು. ಜೊತೆಗೆ ಲಾಕ್‌ಡೌನ್ ಕಾರಣದಿಂದ ಬಾಕಿ ಉಳಿದಿದ್ದ ಇಂಗ್ಲಿಷ್ ಪರೀಕ್ಷೆಯ ಮೌಲ್ಯಮಾಪನ ಆಯಾ ಜಿಲ್ಲೆಗಳಲ್ಲಿ ಸುಸೂತ್ರವಾಗಿ, ಪಾರದರ್ಶಕವಾಗಿ ನಡೆದಿತ್ತು. ಇದು, ಆಯಾ ಜಿಲ್ಲೆಯಲ್ಲೇ ಮೌಲ್ಯಮಾಪನಕ್ಕೆ ಅವಕಾಶ ನೀಡಬೇಕೆಂಬ ಮನವಿಗೆ ಪುಷ್ಟಿ ನೀಡುತ್ತದೆ. ಇಂತಹ ಕ್ರಮದಿಂದ ಉಪನ್ಯಾಸಕರ ಹಿತವನ್ನು ಕಾಪಾಡಿದಂತೆ ಆಗುತ್ತದೆ.

ಫಾಲ್ಗುಣ ಗೌಡ, ಅಚವೆ, ಅಂಕೋಲಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ಕಾನೂನಿನ ಮೂಲಕ ನಿಷೇಧಿಸಿದ, ಆವರೆಗಿನ ಕನ್ನಡ ಸಾಹಿತ್ಯವೆಲ್ಲ ಬೂಸಾ ಎಂದು ಹೇಳುವ ಮೂಲಕ ದಲಿತ ಚಳವಳಿಯ ಬೀಜ ಬಿತ್ತಿದ, ದಲಿತ ಸಮುದಾಯಗಳ ಜನರು ಘನತೆಯಿಂದ ತಲೆ ಎತ್ತುವಂತೆ ಮಾಡಿದ ದಾರ್ಶನಿಕ ರಾಜಕಾರಣಿ ಬಿ. ಬಸವಲಿಂಗಪ್ಪ ಅವರು ಹುಟ್ಟಿ ಇಂದಿಗೆ ನೂರು ವರ್ಷ. ಸಮಾನತೆಯ ಪ್ರಖರ ಪ್ರತಿಪಾದಕರಾಗಿದ್ದ ನಾಯಕನ ನೆನಪಿಗೆ ಈ ಲೇಖನ

ಜನಾಂಗಗಳ ಕಣ್ಣು ತೆರೆಸಿದ ನಾಯಕ

• ಅಗ್ರಹಾರ ಕೃಷ್ಣಮೂರ್ತಿ

ನೆನಪಾಗುತ್ತಿಲ್ಲ, ಬಹುಶಃ 1987-1990ರ ನಡುವೆ ಇರಬೇಕು, ಒಡಿಶಾದ ಭುವನೇಶ್ವರದ ಒಂದು ಸರ್ಕಾರಿ ಅತಿಥಿಗೃಹದಲ್ಲಿ ತಂಗಿದ್ದೆ. ಬೆಳಗಿನ ಉಪಾಹಾರಕ್ಕೆ ಹೋಗುವಾಗ ಕೈತೋಟದಲ್ಲಿ ನಾಲ್ಕಾರು ಕರಪತ್ರಗಳು ಬಿದ್ದಿದ್ದವು. ಒರಿಯಾ ಭಾಷೆಯಲ್ಲಿದ್ದುದರಿಂದ ಕುತೂಹಲ ಕಡಿಮೆಯಾದರೂ ಅದರಲ್ಲಿದ್ದ ಬಣ್ಣದ ಚಿತ್ರ ಒಂದು ಕ್ಷಣ ಸೆಳೆಯಿತು. ತುಪ್ಪಳದ ಟೊಪ್ಪಿಗೆ ಧರಿಸಿದ್ದ ಭೂಪೇನ್ ಹಜಾರಿಕಾ, ಫಾರೂಕ್ ಅಬ್ದುಲ್ಲಾ ರೀತಿಯಲ್ಲಿ ಕಂಡರೂ ಕರಪತ್ರವನ್ನು ಕೈಗೆತ್ತಿಕೊಂಡು ನೋಡಿದಾಗ ಆಶ್ಚರ್ಯವಾಯಿತು. ಅದು ನಮ್ಮವರೇ ಆಗಿದ್ದ ಬಸವಲಿಂಗಪ್ಪನವರ ಚಿತ್ರ ಅನಿಸಿತು! ಅವರನ್ನೇ ಹೋಲುವ ಬೇರೆ ಯಾರದ್ದೋ ಇರಬೇಕೆನಿಸಿತು ಒಂದು ಕ್ಷಣ. ಚಿತ್ರದ ಕೆಳಗೆ ಏನು ಬರೆಯಲಾಗಿತ್ತು ಎಂಬುದು ತಿಳಿಯುವಂತಿರಲಿಲ್ಲ.

ಉಪಹಾರ ನೀಡಿದವರನ್ನು ಕೇಳಿದೆ. ಅವರು ಅದನ್ನು ಗ್ರಹಿಸಿ ಸಾರಾಂಶ ಹೇಳಲಾಗದೆ ನನ್ನ ಮುಂದೆ ಒಂದೇಸಮ ಓದಿದರು. ಬಸವಲಿಂಗಪ್ಪನವರ ಹೆಸರು ತಿಳಿಯಿತು. ಅವರು ಓದಿದ್ದನ್ನು ನಾನು ಅರ್ಥಮಾಡಿಕೊಂಡಂತೆ ಅದು ಬಸವಲಿಂಗಪ್ಪನವರ ಪರಿಚಯ ಮತ್ತು ತಲೆಯ ಮೇಲೆ ಮಲ ಹೊರುವ ಪದ್ಧತಿಯ ರದ್ದತಿಯ ವಿಷಯವಾಗಿತ್ತು. ಆ ಕರಪತ್ರಗಳು ಯಾಕೆ ಯಾವ ಕಾರ್ಯಕ್ರಮಕ್ಕೆ ಅಲ್ಲಿ ಚೆಲ್ಲಿಕೊಂಡಿದ್ದವೋ ತಿಳಿಯಲಿಲ್ಲ. ಆದರೆ ಬಸವಲಿಂಗಪ್ಪನವರ ವ್ಯಕ್ತಿತ್ವ ಮತ್ತು ಅವರು ಕರ್ನಾಟಕದಲ್ಲಿ ಮಾಡಿದ್ದ ಅಸಾಮಾನ್ಯ ಕೆಲಸದ ಮಹತ್ವವನ್ನು ಸೂಚಿಸಿದಂತಿತ್ತು. ಅವರ ವಕೀಲಿ ವೃತ್ತಿ ಮತ್ತು ರಾಜಕೀಯ ಜೀವನದ ವಿವರಗಳ ಬಗ್ಗೆ ಇಲ್ಲಿ ಬರೆಯುವ ಇರಾದೆಯಿಲ್ಲ. ಅವರೊಬ್ಬ ಕರ್ನಾಟಕದ ವರ್ಣರಂಜಿತ ರಾಜಕಾರಣಿ ಎಂಬ ಕ್ಲೀಷೆಯಲ್ಲಿ ಹೇಳದೆ ಅವರು ಯಾಕೆ ನಮಗೆ ಮುಖ್ಯರಾಗುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆನಿಸುತ್ತದೆ.

1973ರ ಕೊನೆಯ ವಾರಗಳಲ್ಲಿ ಕರ್ನಾಟಕದಲ್ಲಿ ನಡೆದ ರಾಜಕೀಯ ವಿಪ್ಲವ ಐತಿಹಾಸಿಕವಾದುದು. ಬಸವಲಿಂಗಪ್ಪನವರು ಮೈಸೂರಿನ ತಮ್ಮ ಭಾಷಣವೊಂದರಲ್ಲಿ ಒಂದು ವಿಚಾರ ದೀವಿಗೆಯನ್ನು ಬೆಳಗಿದರು. ಅದನ್ನು ಒಂದು ಕಿಚ್ಚು ಎಂದು ಭೂತಕನ್ನಡಿಯಲ್ಲಿಟ್ಟು ರಾಜ್ಯದಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿಸಲಾಯಿತು. ಹಾಗೆ ಮಾಡುವುದರಲ್ಲಿ ಸಮಕಾಲೀನ ರಾಜಕಾರಣ, ಸಾಂಪ್ರದಾಯಿಕ ಪಟ್ಟಭದ್ರ ಹಿತಾಸಕ್ತಿ ಮತ್ತು ಹುಸಿ ಸಾಂಸ್ಕೃತಿಕ ಅಟ್ಟಹಾಸವಿತ್ತು. ಆ ಕಾಳ್ಗಿಚ್ಚು ಆಧುನಿಕ ವೈಚಾರಿಕತೆ, ಪ್ರಗತಿಶೀಲ ಪ್ರಜ್ಞೆಯೊಂದರ ಮೇಲೆ ನಡೆದ ದಾಳಿಯಾಗಿತ್ತು. ಅದು ಬೂಸಾ ಪ್ರಕರಣವೆಂದು ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಇತಿಹಾಸದಲ್ಲಿ ದಾಖಲಾಗಿದೆ.

ಅವರು ಅಂಬೇಡ್ಕರ್ ವಿಚಾರವಂತಿಕೆಯನ್ನು ಒಪ್ಪಿದ್ದವರು. ತಮ್ಮ ಸಮಾಜದ ಯುವಕರ ಬೌದ್ಧಿಕ ಕ್ಷೇಮಚಿಂತನೆಯ ಅರಿವಿನಲ್ಲಿ ಕನ್ನಡದಲ್ಲಿ ಏನೂ ಇಲ್ಲ, ಬರೀ ಬೂಸಾ, ಇಂಗ್ಲಿಷಿನ ಪುಸ್ತಕಗಳನ್ನು ಓದಿರಿ ಎಂದ ಅವರ ಮಾತು ನಾನಾ ಅವತಾರಗಳನ್ನು ತಳೆಯಿತು. ಆಗಿನ ಎರಡು ಆಶ್ಚರ್ಯಗಳೆಂದರೆ, ಬಸವಲಿಂಗಪ್ಪನವರ ಮಾತುಗಳಿಗೆ ಕುವೆಂಪು ಬೆಂಬಲ ಸೂಚಿಸುವವರೆಗೂ ಅಂದಿನ ಸಾಹಿತ್ಯಲೋಕ ಮೌನವಾಗಿದ್ದಿದ್ದು ಮತ್ತು ಪ್ರಾಣಗಳನ್ನು ಒತ್ತೆಯಿಟ್ಟು ಅವರ ಪರವಾಗಿ ಸಭೆ, ಮೆರವಣಿಗೆಗಳನ್ನು ನಡೆಸಿದವರು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಕೆಲವೇ ದಲಿತೇತರ ವಿದ್ಯಾರ್ಥಿಗಳಾಗಿದ್ದುದು. ಅದು ದಿನಗಳುರುಳಿದಂತೆ ಬೆಂಗಳೂರಿನ ಬಹುತೇಕ ಎಲ್ಲ ದಲಿತ ವಿದ್ಯಾರ್ಥಿಗಳು ಮೊದಲ ಬಾರಿಗೆ ತಮ್ಮ ಸಮುದಾಯದ ಘನತೆಯನ್ನು ಕಾಪಾಡಿಕೊಳ್ಳಲು ಮೈಚಳಿ ಬಿಟ್ಟು ಎದ್ದುನಿಂತರು. ಅನಂತರ ಆ ಹೋರಾಟ ಕರ್ನಾಟಕದಾದ್ಯಂತ ಹುಟ್ಟಿಕೊಂಡ ದಲಿತ ಸಂಘಟನೆ ಮತ್ತು ಹೋರಾಟಗಳಿಗೆ ಕಾರಣವಾಯಿತು. ಬಸವಲಿಂಗಪ್ಪನವರ ಉದ್ದೇಶ ಇದೇ ಆಗಿತ್ತು ಎನ್ನುವಂತಿಲ್ಲ. ಆದರೆ ಅವರು ಹಚ್ಚಿದ ಸಣ್ಣ ದೀಪದ ಕುಡಿ ಕಾರಣವಾಗಿತ್ತು.

ಬೂಸಾಗಿಂತ ಮುಂಚಿನಿಂದಲೂ ಬಸವಲಿಂಗಪ್ಪನವರ ಅನೇಕ ಮಾತುಗಳು ಸಾಂಪ್ರದಾಯಿಕ ಮನಸ್ಸುಗಳಿಗೆ ವಿಚಿತ್ರ ಅನಿಸಿದ್ದುಂಟು. ದೇವರ ಪಟಗಳನ್ನು ಚರಂಡಿಗೆ ಹಾಕಿರಿ ಅಂದದ್ದುಂಟು. ಇವತ್ತಿನ ದಿನಮಾನಗಳಲ್ಲಾಗಿದ್ದರೆ ಅವರ ನಾಲಿಗೆಯ ಮೇಲೋ, ತಲೆಯ ಮೇಲೋ ಲಕ್ಷಾಂತರ ರೂಪಾಯಿಗಳ ಬೆಲೆ ನಿಗದಿಯಾಗಿಬಿಡುತ್ತಿತ್ತು. ಆಗಿನ ದಿನಗಳಲ್ಲಿ ಅಮ್ಮಮ್ಮಾ ಅಂದರೆ ಬಸವಲಿಂಗಪ್ಪ ಒಬ್ಬ ತಲೆಕೆಟ್ಟ ಮನುಷ್ಯ ಅನ್ನುತ್ತಿದ್ದರು. ಆ ಬಗೆಯ ಅಭಿವ್ಯಕ್ತಿ ಮತ್ತು ವೈಚಾರಿಕ ಸ್ವಾತಂತ್ರ್ಯದ ಕಾರಣ ಕೋಟ್ಯಂತರ ದಲಿತ ಚೇತನಗಳು ನಾನಾ ಕ್ಷೇತ್ರಗಳಲ್ಲಿ ಘನತೆಯಲ್ಲಿ ತಲೆಯೆತ್ತಿ ನಿಂತಿವೆ. ಅವರು ಯಾವ ರೀತಿಯ ಸಾಹಿತ್ಯವನ್ನು ನಿರೀಕ್ಷಿಸಿದ್ದರೋ ಆ ರೀತಿಯ ಅನುಭವ ಜಗತ್ತು ಮತ್ತು ಕನ್ನಡ ಬಾಷೆ ಇಂದು ನಮಗೆ ದಕ್ಕುತ್ತಿರುವುದರಿಂದಲೇ ನಮಗೆ ಬಸವಲಿಂಗಪ್ಪ ಮುಖ್ಯರು.

ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ಅವರು ಕಾಯ್ದೆಯ ಮೂಲಕ ನಿಷೇಧಿಸಿದ್ದು ಇಡೀ ದೇಶದಲ್ಲೇ ಮೊಟ್ಟಮೊದಲ ಮಾದರಿಯಾಗಿತ್ತು. ಆದರೂ ಇದನ್ನು ಯುಗಗಳಿಂದಲೂ ಅನಾಗರಿಕ ಪದ್ಧತಿಯನ್ನಾಗಿ ಕಾಪಾಡಿಕೊಂಡು ಬಂದಿದ್ದ ಪ್ರಜ್ಞೆಗೆ ಇದೊಂದು ಕ್ರಾಂತಿಕಾರಕ ಹೆಜ್ಜೆ ಅನಿಸದೆ ಕೋರ್ಟು ಕಚೇರಿಗಳಲ್ಲಿ ಅಲೆದಾಡಿ ತಡೆಯೊಡ್ಡಿದ್ದುಂಟು. ಆದರೆ ಬಸವಲಿಂಗಪ್ಪನವರು ಜಗ್ಗದೆ ಈ ಕಾಯ್ದೆಯನ್ನು ಯಶಸ್ವಿಗೊಳಿಸಿದರು. ಅನಾಗರಿಕ ಸಮುದಾಯದ ಕಣ್ಣು ತೆರೆಯಿಸಿದರು. ಜನಾಂಗಗಳ ಕಣ್ಣುಗಳನ್ನು ತೆರೆಯಿಸುವ ಕೆಲಸ ಕವಿ ದಾರ್ಶನಿಕರದ್ದು ಮಾತ್ರವಲ್ಲ ಎಂಬುದನ್ನು ಮಾಡಿ ತೋರಿಸಿದರು.

ತಮಾಷೆಯೆಂದರೆ ಪಟಗಳನ್ನು ಚರಂಡಿಗೆ ಹಾಕಿ ಅಂದಾಗ ಕೆರಳದ, ಮಲ ಹೊರುವ ಪದ್ಧತಿ ತಂದಾಗ ಕೆರಳದೆ ಕೇವಲ ಕಾನೂನು ಮೆಟ್ಟಿಲಲ್ಲಿ ತಿರುಗಾಡಿದ ಸಾಂಪ್ರದಾಯಕ ಸವರ್ಣೀಯ ಸಮಾಜ ಕನ್ನಡ ಸಾಹಿತ್ಯದಲ್ಲಿ ಬೂಸಾ ಇದೆ ಅನ್ನುವ ಮಾತಿನ ಮೇಲೆ ಒಮ್ಮೆಲೆ ಹೌಹಾರಿಬಿದ್ದು ಬಸವಲಿಂಗಪ್ಪನವರ ಬಲಿಯನ್ನೇ ತೆಗೆದುಕೊಂಡುಬಿಟ್ಟಿತು! ಪಕ್ಷ ರಾಜಕಾರಣದಲ್ಲೂ ಅದರಿಂದಾಚೆಗೂ ಇದ್ದ ಜಾತೀಯತೆ ಅವರನ್ನು ಬಲಿ ತೆಗೆದುಕೊಳ್ಳಲು ಭಾಷೆ, ಸಾಹಿತ್ಯವೆಂಬ ಒಂದು ಸೆಕ್ಯುಲರ್ ವಿಷಯದ ವಿವಾದಕ್ಕಾಗಿಯೇ ಕಾಯುತ್ತ ಕುಳಿತಿದ್ದು ಭಾವನಾತ್ಮಕ ಅಂಶವನ್ನೇ ಬಳಸಿಕೊಂಡದ್ದು ದೊಡ್ಡ ಕ್ರೌರ್ಯ.

ಬೂಸಾ ಪ್ರಕರಣ ಪ್ರಾರಂಭವಾದಾಗ 18-20ರ ತರುಣರಾಗಿದ್ದ ನಾವೆಲ್ಲ ಅವರನ್ನು ಬೆಂಬಲಿಸಿರುವುದನ್ನು ತಿಳಿದು ನಮ್ಮನ್ನು ನೋಡುವ ಇಚ್ಛೆಯಿಂದ ಯಾರ ಮೂಲಕವೋ ಕರೆಸಿಕೊಂಡಿದ್ದರು. ನಾವು ಹೋದಾಗ ಸಂತೋಷಪಟ್ಟು ಎಲ್ಲಕಡೆ ನಿಮ್ಮನ್ನು ಹುಡುಕಾಡಿ ಥಳಿಸುತ್ತಿದ್ದಾರಂತೆ. 'ನಿಮ್ಮ ರಕ್ಷಣೆಗೆ ಏನು ಮಾಡಿಕೊಂಡಿದ್ದೀರಿ' ಎಂದು ಕಾಳಜಿ ತೋರಿಸಿದರು. 'ನಾವು ಬರಿಗೈ ಹೋರಾಟಗಾರರು' ಎಂದಾಗ ಅವರ ವಾಚ್‌ಮನ್‌ನನ್ನು ಕರೆದು ಮನೆ ಮುಂದಿದ್ದ ಬಿದಿರುಮೆಳೆಯಿಂದ ಕಡಿಸಿ ನಮಗೆಲ್ಲ ಒಂದೊಂದು ಮೊಳದುದ್ದ ಹಸಿ ಬಿದಿರುಬೆತ್ತ ಕೊಡಿಸಿದ್ದರು! ನಾವು ಕೈಲಿ ಅದನ್ನು ಹಿಡಿದು ಹೊರಟಾಗ 'ಅಯ್ಯೊ ನೀವು ಹಿಂಗೆ ಹಿಡಕೊಂಡು ಬೀದೀಲಿ ಹೋಗ್ತಿದ್ದರೆ ಪೊಲೀಸಿನವರು ನಿಮ್ಮನ್ನ ಹಿಡಕೊಂಡು ಹೋಗ್ತಾರೆ' ಎಂದು ಬೆತ್ತವನ್ನು ಬೆನ್ನಿನ ಹಿಂದೆ ಷರಟಿನ ಒಳಗೆ ತೂರಿಸಿ ಹೇಗೆ ಬಚ್ಚಿಟ್ಟಕೊಳ್ಳಬೇಕೆಂಬುದನ್ನು ತೋರಿಸಿಕೊಟ್ಟು ಬೀಳ್ಕೊಟ್ಟಿದ್ದರು. ನಾವು ನಮ್ಮನಮ್ಮ ರೂಮುಗಳಿಗೆ ಹೋಗುವುದರೊಳಗೇ ಅವುಗಳನ್ನು ವಿಸರ್ಜಿಸಿದ್ದೆವು. ಬಹುಶಃ ಆಗಿನ ಕರ್ನಾಟಕ ಮಂತ್ರಿ ಮಂಡಲದ ಸಾಮೂಹಿಕ ರಾಜೀನಾಮೆಯ ಸಂದರ್ಭದಲ್ಲಿ ಬಸವಲಿಂಗಪ್ಪನವರು ಸಹ ತಮ್ಮ ರಕ್ಷಣೆಗೆ ತಮ್ಮ ಬೆನ್ನನ್ನು ಬರಿದಾಗಿಯೇ ಇರಿಸಿಕೊಂಡಿದ್ದರೆನಿಸುತ್ತದೆ. ಯಾಕೆಂದರೆ ಆ ಕಾಲದಲ್ಲೇ ಮೊದಲ ಬಾರಿಗೆ ಕರ್ನಾಟಕದ ರಾಜಕಾರಣಿಗಳು ತಮ್ಮ ರಕ್ಷಣೆಗೆ ಬೆನ್ನಲ್ಲಿ 'ಜನ' ಇಟ್ಟುಕೊಳ್ಳುವುದನ್ನು ಶುರು ಮಾಡಿದ್ದರು.

ಬಸವಲಿಂಗಪ್ಪನವರು ದಲಿತ ಮತ್ತು ದಲಿತೇತರ ಸಮುದಾಯದ ಒಳಿತಿಗಾಗಿ, ಸಮಾನತೆಗಾಗಿ, ಮನುಷ್ಯ ಘನತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಸರ್ವ ನಿರಾಕರಣಾವಾದಿಯಾಗಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಪೆರಿಯಾರ್ ಅವರ ತಾತ್ವಿಕತೆಯನ್ನು ಒಪ್ಪಿ ಪಾಲಿಸುತ್ತಿದ್ದವರು. ಅವರ ಜನ್ಮ ಶತಾಬ್ದಿಯ ಹೊತ್ತಿನಲ್ಲಿ ಅವರ ಮಾರ್ಗದ ರಚನಾತ್ಮಕ ಮತ್ತು ಬೌದ್ಧಿಕ ಚಿಂತನೆಗಳನ್ನು ರೂಢಿಸಿಕೊಳ್ಳುವುದು ಅವರಿಗೆ ನಾವು ಸಲ್ಲಿಸುವ ಗೌರವವಾದೀತು.

(ಲೇಖಕ: ಕೇಂದ್ರ ಸಾಹಿತ್ಯ ಅಕಾಡೆಮಿಯ ಮಾಜಿ ಕಾರ್ಯದರ್ಶಿ, ಸಾಹಿತಿ)



ಇಂದಿರಾ ಗಾಂಧಿ ಜತೆಗೆ

ದಲೈಲಾಮಾ ಜತೆಗೆ

1978ರ ಚುನಾವಣಾ ರ‍್ಯಾಲಿಯೊಂದರಲ್ಲಿ ಬಸವಲಿಂಗಪ್ಪ ಅವರ ಮಾತು. ಇಂದಿರಾ ಗಾಂಧಿ, ದೇವರಾಜ ಅರಸು, ಶಂಕರಾನಂದ, ಎಸ್‌.ಎಂ.ಯಾಹ್ಯಾ ಚಿತ್ರದಲ್ಲಿದ್ದಾರೆ

ಮಮತಾ ಅವರು ಮುರ್ಷಿದಾಬಾದ್‌ನಲ್ಲಿ ಮಂಗಳವಾರ ರ‍್ಯಾಲಿ ನಡೆಸಿದರು ಪಿಟಿಐ ಚಿತ್ರ

ಕೋವಿಡ್ ಸಾಂಕ್ರಾಮಿಕ ಚುನಾವಣೆಗೂ ಬಳಕೆ

ಪ್ರಜಾ ಮತ 2021 ಜನತಂತ್ರದ ಹಬ್ಬ

• ಶೋಮು ದಾಸ್

ಕೋಲ್ಕತ್ತ: ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯ ಮಧ್ಯೆಯೇ ಅಪ್ಪಳಿಸಿದ ಕೋವಿಡ್–19ರ ಎರಡನೇ ಅಲೆಯು ರಾಜಕೀಯ ಅಸ್ತ್ರವಾಗಿಯೂ ಪರಿವರ್ತಿತವಾಗಿದೆ. ರಾಜ್ಯದಲ್ಲಿ ತೀವ್ರ ಹಣಾಹಣಿ ನಡೆಸುತ್ತಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಬಿಜೆಪಿ ಎರಡೂ ಕೋವಿಡ್ ಅವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಯತ್ನಿಸುತ್ತಿವೆ.

ಪಶ್ಚಿಮ ಬಂಗಾಳದಲ್ಲಿ ಕೋವಿಡ್ ಪ್ರಕರಣಗಳು ತೀವ್ರವಾಗಿ ಏರಿಕೆ ಆಗುತ್ತಿವೆ. ದಿನದ ಏರಿಕೆಯು 10 ಸಾವಿರವನ್ನು ದಾಟಿದೆ. ಕೋವಿಡ್ ವಿಚಾರವನ್ನು ರಾಜಕೀಯಕ್ಕೆ ಮೊದಲು ಬಳಸಿಕೊಂಡಿದ್ದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ. ಹೊರ ರಾಜ್ಯದ ಜನರನ್ನು ಪ್ರಚಾರಕ್ಕೆ ಕರೆ ತಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಜ್ಯದಲ್ಲಿ ಕೋವಿಡ್ ಹರಡಲು ಕಾರಣವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳಲ್ಲಿ ತಲೆದೋರಿರುವ ಕೋವಿಡ್ ತಡೆ ಲಸಿಕೆಯ ಕೊರತೆಯನ್ನೂ ಮಮತಾ ಅವರು ರಾಜಕೀಯವಾಗಿ ಬಳಸಿಕೊಂಡಿದ್ದಾರೆ. ಲಸಿಕೆ ಖರೀದಿಗೆ ರಾಜ್ಯಗಳಿಗೆ ಅವಕಾಶ ಕೊಡಬೇಕು ಎಂದು ಪದೇ ಪದೇ ಕೇಳಿಕೊಂಡರೂ ಪ್ರಧಾನಿ ಮೋದಿ ಅವರು ಅದಕ್ಕೆ ಅವಕಾಶ ಕೊಟ್ಟಿಲ್ಲ ಎಂದೂ ಮಮತಾ ಹೇಳಿದ್ದಾರೆ.

ರಾಜ್ಯಕ್ಕೆ ಕೇಂದ್ರದಿಂದ ಆಗುತ್ತಿರುವ ಲಸಿಕೆ ಪೂರೈಕೆಯು ಅವ್ಯವಸ್ಥಿತವಾಗಿದೆ. ಲಸಿಕೆಯ ಕೊರತೆಯೂ ಇದೆ ಎಂದು ಮೋದಿ ಅವರಿಗೆ ಬರೆದ ಪತ್ರದಲ್ಲಿ ಮಮತಾ ಆರೋಪಿಸಿದ್ದಾರೆ. ಕೇಂದ್ರವು ರಾಜ್ಯ ಸರ್ಕಾರದ ಜತೆಗೆ ಸಹಕರಿಸುತ್ತಿಲ್ಲ ಎಂದೂ ಅವರು ಆರೋಪಿಸಿದ್ದಾರೆ. 18 ವರ್ಷ ದಾಟಿದ ಎಲ್ಲರಿಗೂ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಕಲ್ಪಿಸಿರುವ ಕೇಂದ್ರದ ನಿರ್ಧಾರವನ್ನು 'ಹುಸಿ ಮಾತು' ಎಂದು ಮಮತಾ ತಳ್ಳಿ ಹಾಕಿದ್ದಾರೆ. ಮಾರುಕಟ್ಟೆಯಲ್ಲಿ ಲಸಿಕೆ ಲಭ್ಯವಿರುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯಿಂದ ನುಣುಚಿಕೊಂಡು ಇಂತಹ ನಿರ್ಧಾರ ಕೈಗೊಂಡರೆ ಏನು ಪ್ರಯೋಜನ ಎಂದು ಅವರು ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮೋದಿ ಅವರು ನಡೆಸಿದ ರ‍್ಯಾಲಿಗಳಲ್ಲಿ ಅಂತರ ಕಾಯ್ದುಕೊಂಡಿಲ್ಲ. ರಾಜಕೀಯ ಲಾಭಕ್ಕಾಗಿ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

'ಟಿಎಂಸಿಗೆ ಬೇರೆ ವಿಷಯಗಳಿಲ್ಲ'

ಮಮತಾ ಮತ್ತು ಟಿಎಂಸಿಯ ಆರೋಪಗಳಿಗೆ ಬಿಜೆಪಿ ತಿರುಗೇಟು ನೀಡಿದೆ. ಟಿಎಂಸಿಗೆ ಈಗ ಜನರ ಮುಂದೆ ಹೇಳಲು ಯಾವುದೇ ವಿಷಯ ಇಲ್ಲ. ಚಾಲ್ತಿಯಲ್ಲಿ ಇರಬೇಕು ಎಂಬ ಕಾರಣಕ್ಕೆ ಕೋವಿಡ್ ಸಾಂಕ್ರಾಮಿಕಕ್ಕೆ ಆ ಪಕ್ಷವು ಜೋತು ಬಿದ್ದಿದೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಘಟಕದ ವಕ್ತಾರ ಸಮಿಕ್ ಭಟ್ಟಾಚಾರ್ಯ ಹೇಳಿದ್ದಾರೆ.

ಸಾಂಕ್ರಾಮಿಕ ನಿಯಂತ್ರಣದ ವಿಚಾರದಲ್ಲಿ ಮಮತಾ ಅವರು ನಿಜಕ್ಕೂ ಗಂಭೀರವಾಗಿ ಇದ್ದಿದ್ದರೆ, ಪ್ರಧಾನಿ ನಡೆಸಿದ ಮುಖ್ಯಮಂತ್ರಿಗಳ ಸಭೆಯನ್ನು ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ ಎಂದೂ ಬಿಜೆಪಿ ಮುಖಂಡರು ಆಪಾದಿಸಿದ್ದಾರೆ.

'ಬಿಜೆಪಿ ಹೊರಗಿನವರ ಪಕ್ಷ' ಎಂಬ ಆರೋಪವನ್ನು ಮಮತಾ ಅವರು ಮೊದಲಿನಿಂದಲೂ ಮಾಡುತ್ತಾ ಬಂದಿದ್ದಾರೆ. ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಅದಕ್ಕೆ ಬೇರೊಂದು ತಿರುವನ್ನೂ ಅವರು ಕೊಟ್ಟಿದ್ದಾರೆ. ಹೊರಗಿನಿಂದ ಸಾವಿರಾರು ಜನರನ್ನು ಪಶ್ಚಿಮ ಬಂಗಾಳಕ್ಕೆ ಬಿಜೆಪಿ ಕರೆತಂದಿದೆ. ಆದರೆ ಅವರಲ್ಲಿ ಯಾರನ್ನೂ ಸರಿಯಾದ ಪರೀಕ್ಷೆಗೆ ಒಳಪಡಿಸಿಲ್ಲ. ಈ ಹೊರಗಿನವರು ರಾಜ್ಯದಾದ್ಯಂತ ಮುಕ್ತವಾಗಿ ಸಂಚರಿಸುತ್ತಿದ್ದಾರೆ. ಸ್ಥಳೀಯರ ಜತೆಗೆ ಬೆರೆಯುತ್ತಿದ್ದಾರೆ. ಈ ಮೂಲಕ ಸೋಂಕು ಹರಡುತ್ತಿದ್ದಾರೆ ಎಂದು ಮಮತಾ ಆಪಾದಿಸಿದ್ದಾರೆ.

ಚುನಾವಣಾ ಆಯೋಗವನ್ನೂ ಅವರು ಬಿಟ್ಟಿಲ್ಲ. ಉಳಿದ ಮೂರು ಹಂತಗಳ ಮತದಾನವನ್ನು ಒಂದೇ ಹಂತದಲ್ಲಿ ಮುಗಿಸಿ ಬಿಡಿ ಎಂದು ಅವರು ಆಯೋಗವನ್ನು ಪದೇ ಪದೇ ಕೋರಿದ್ದಾರೆ. ಆದರೆ, ಮೋದಿ ಅವರ ರ‍್ಯಾಲಿಗಳಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಆಯೋಗವು ಒಂದೇ ಹಂತದಲ್ಲಿ ಮತದಾನ ನಡೆಸಲು ಮುಂದಾಗುತ್ತಿಲ್ಲ ಎಂದು ಮಮತಾ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗಾಜಿಯಾಬಾದ್‌ನ ಸಂಸದ ಹಾಗೂ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ವಿ.ಕೆ. ಸಿಂಗ್ ಅವರ ಸಹೋದರ ಕೋವಿಡ್ ಪೀಡಿತನಾಗಿದ್ದು, ಹಾಸಿಗೆ ಇಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಸ್ವತಃ ಸಿಂಗ್ ಅವರೇ ಟ್ವೀಟ್ ಮಾಡಿ, ಸಹಾಯ ಮಾಡುವಂತೆ ಜಿಲ್ಲಾಧಿಕಾರಿಗೆ ಕೇಳಿಕೊಂಡಿದ್ದಾರೆ ಎನ್ನಲಾದ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಕಷ್ಟು ವೈರಲ್ ಆಗಿದೆ. ಮಾಜಿ ಸಚಿವರ ಸ್ಥಿತಿಯೇ ಹೀಗಿದೆ ನೋಡಿ ಎಂದು ಹಲವರು ಟ್ವೀಟ್ ಮಾಡಿದ್ದಾರೆ. ಗಾಜಿಯಾಬಾದ್‌ನಲ್ಲಿ ಕೊರೊನಾ ಭೀಕರ ರೂಪ ತಾಳಿದೆ ಎಂಬುದಾಗಿ ಚರ್ಚೆಯಾಗುತ್ತಿದೆ.

ವಿ.ಕೆ. ಸಿಂಗ್ ಟ್ವೀಟ್ ಬಗ್ಗೆ ಇಂಡಿಯಾ ಟುಡೇ ಫ್ಯಾಕ್ಟ್ ಚೆಕ್ ತಂಡವು ಪರಿಶೀಲನೆ ನಡೆಸಿದೆ. ಸಿಂಗ್ ಅವರು ಮತ್ತೊಬ್ಬ ವ್ಯಕ್ತಿಯ ಪರವಾಗಿ ಟ್ವೀಟ್ ಮಾಡಿದ್ದರು. ಆ ವ್ಯಕ್ತಿಯ ಸಹೋದರನಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಅಗತ್ಯವಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿ ಎಂದು ಅವರು ಜಿಲ್ಲಾಧಿಕಾರಿಗೆ ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದರು. ಆದರೆ ಈ ಟ್ವೀಟ್ ಗೊಂದಲ ಮೂಡಿಸುವಂತಿತ್ತು. ಸಿಂಗ್ ಅವರ ಸ್ವಂತ ಸಹೋದರನಿಗೇ ಈ ಸಮಸ್ಯೆ ಆಗಿದೆ ಎಂಬ ಅರ್ಥ ಕೊಡುವಂತಿತ್ತು. ವಿವಾದ ಆಗುತ್ತಿದ್ದಂತೆ ಎಚ್ಚೆತ್ತ ಅವರು ಟ್ವೀಟ್ ಅಳಿಸಿ ಹಾಕಿದ್ದಾರೆ. ಅದಕ್ಕೆ ಸ್ಪಷ್ಟನೆ ನೀಡುವ ಟ್ವೀಟ್ ಅನ್ನೂ ಮಾಡಿದ್ದಾರೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಫಲಿಸಿದ ಮೋಸ

ಗಿಳಿಮರಿ ಬಂದು ಹೇಳಿದ ವಿಷಯವನ್ನು ಕೇಳಿ ಮಹೋಷಧಕುಮಾರ, ನಗರದಲ್ಲಿ ಎಲ್ಲರನ್ನೂ ಸೇರಿಸಿ ಕೋಟೆಯ ಬಾಗಿಲುಗಳನ್ನು ಹಾಕಿಸಿದ. ಅಪಾರವಾದ ಧನ-ಧಾನ್ಯಗಳನ್ನು, ಹಣವನ್ನು, ಔಷಧಿಗಳನ್ನು ಶೇಖರಿಸಿ ಇಟ್ಟ. ಮಂತ್ರಿ ಕೇವಟ್ಟ ಹೇಳಿದಂತೆ ಬ್ರಹ್ಮದತ್ತ, ಮಿಥಿಲೆಯ ವಿದೇಹ ರಾಜನೊಬ್ಬನನ್ನುಳಿದು ಉಳಿದೆಲ್ಲ ಚಿಕ್ಕ-ಪುಟ್ಟ ರಾಜರನ್ನು ತನ್ನೆಡೆಗೆ ಸೆಳೆದುಕೊಂಡಿದ್ದ. ವಿದೇಹದ ರಾಜನನ್ನು ಗೆದ್ದು ಇಡೀ ಜಂಬೂದ್ವೀಪಕ್ಕೆ ಚಕ್ರವರ್ತಿಯಾಗುವ ಹಂಬಲ ಅವನಿಗೆ. ಆದರೆ ಕೇವಟ್ಟ, ರಾಜನಿಗೆ ಮಹೋಷಧಕುಮಾರನ ಬಗ್ಗೆ ಎಚ್ಚರಿಕೆ ನೀಡಿದ. ಆತ ತುಂಬ ಬುದ್ಧಿವಂತ, ಅವನಿರುವವರೆಗೆ ವಿದೇಹ ರಾಜನನ್ನು ಸೋಲಿಸುವುದು ಕಷ್ಟ ಎಂದು ತಿಳಿಸಿದ. ಆದರೆ ಬ್ರಹ್ಮದತ್ತನಿಗೆ ಈಗ ದೊರೆತ ಜಯದಿಂದ ಅಹಂಕಾರ ಬಲಿತು ನಿಂತಿತ್ತು.

ಕೇವಟ್ಟ ಹೇಳಿದ, 'ಮಹಾರಾಜಾ, ವಿದೇಹದ ರಾಜನೊಡನೆ ಯುದ್ಧ ಬಹುಕಾಲ ನಡೆಯಬಹುದು. ಆದ್ದರಿಂದ ಮೊದಲಿನ ಯೋಜನೆಯಂತೆ, ಈಗ ನಮ್ಮೊಂದಿಗಿರುವ ರಾಜರನ್ನೆಲ್ಲ ಉದ್ಯಾನವನದಲ್ಲಿ ಸೇರಿಸಿ ಒಂದು ಕೂಟವನ್ನು ಮಾಡಿ, ಅವರಿಗೆ ವಿಷಪೂರಿತ ಮದ್ಯವನ್ನು ಕುಡಿಸಿ ಕೊಂದುಬಿಡೋಣ. ನಂತರ ವಿದೇಹ ರಾಜನ ಮೇಲೆ ದಾಳಿ ಮಾಡೋಣ. ಈ ಕೂಟಕ್ಕೆ ವಿದೇಹ ರಾಜನನ್ನು ಆಮಂತ್ರಿಸೋಣ. ಅವನನ್ನು ಸೇರಿಸಿ ಎಲ್ಲರನ್ನೂ ಸಾಯಿಸಿಬಿಡೋಣ'. ಅವನು ಹೇಳಿದಂತೆ ವಿದೇಹರಾಜನಿಗೆ ಆಮಂತ್ರಣ ಬಂದಿತು. ಮಹೋಷಧಕುಮಾರನಿಗೆ ಈ ನೀಚರ ಯೋಜನೆ ಮೊದಲೇ ಗಿಳಿಮರಿಯಿಂದ ತಿಳಿದಿದ್ದರಿಂದ ಆತ ಮತ್ತೊಂದು ಯೋಜನೆ ಮಾಡಿದ.ಪಾಪ! ಅಷ್ಟೊಂದು ಜನ ರಾಜರು ಸಾಯುವುದು ಸರಿಯಲ್ಲ, ಅವರನ್ನು ಉಳಿಸಿಕೊಳ್ಳಬೇಕೆಂದುಕೊಂಡ.

ಮಹೋಷಧಕುಮಾರ ತನ್ನ ಅತ್ಯಂತ ನಂಬಿಕೆಯ ಸಾವಿರ ಜನ ಸೈನಿಕರನ್ನು ಕರೆದು ಹೇಳಿದ, 'ನೀವು ಒಳ್ಳೆಯ ಬಟ್ಟೆ ಹಾಕಿಕೊಂಡು ಕೂಟ ನಡೆಯುವ ಉದ್ಯಾನವನಕ್ಕೆ ಹೋಗಿ ಬ್ರಹ್ಮದತ್ತನಿಗೆಂದು ಇಟ್ಟ ಸಿಂಹಾಸನದ ಮೇಲೆ ಮತ್ತು ಅದರ ಸುತ್ತಮುತ್ತಲಿನ ಕುರ್ಚಿಗಳ ಮೇಲೆ ಕುಳಿತುಕೊಳ್ಳಿ. ಬ್ರಹ್ಮದತ್ತನ ಸೇವಕರು ಬಂದು ಜಾಗ ಖಾಲಿ ಮಾಡಿ ಎಂದಾಗ, ಇದು ನಮ್ಮ ವಿದೇಹ ಮಹಾರಾಜರ ಜಾಗ ಎಂದು ಗಲಾಟೆ ಮಾಡಿ. ಅವರನ್ನು ಮತ್ತಷ್ಟು ಸಿಟ್ಟಿಗೆಬ್ಬಿಸಿ ದಪ್ಪನಾದ ಕೋಲುಗಳಿಂದ ಸುರೆಯ ಮಡಕೆಗಳನ್ನೆಲ್ಲ ಒಡೆದು ಹಾಕಿಬಿಡಿ. ನೀವು ಆ ಸುರೆಯನ್ನು ಕುಡಿಯಬೇಡಿ. ಅವೆಲ್ಲ ವಿಷ ತುಂಬಿದ ಮಡಕೆಗಳು. ನಂತರ ಅವರ ಸೈನ್ಯದಲ್ಲಿ ಗಲಭೆಯನ್ನೆಬ್ಬಿಸಿ ಮರಳಿ ಬಂದು ಬಿಡಿ'. ಅವರೆಲ್ಲ ಆಗಲಿ ಎಂದು ಉದ್ಯಾನವನಕ್ಕೆ ಬಂದು ಸುರೆಯ ಮಡಕೆಗಳನ್ನು ಒಡೆದು ಸೈನ್ಯದಲ್ಲಿ ಗದ್ದಲವನ್ನೆಬ್ಬಿಸಿ ಮರಳಿ ಬಂದು ಮಹೋಷಧಕುಮಾರನಿಗೆ ವರದಿ ನೀಡಿದರು. ತಾನು ವಿಷಪೂರಿತ ಸುರೆಯನ್ನು ರಾಜರುಗಳಿಗೆ ಕುಡಿಸಿ ಕೊಲ್ಲುವ ಉಪಾಯ ವಿಫಲವಾದದ್ದನ್ನು ಕಂಡು ಬ್ರಹ್ಮದತ್ತನಿಗೆ ಅಸಾಧ್ಯ ಕೋಪ ಬಂದಿತು. ತಕ್ಷಣವೇ ತನ್ನ ಹದಿನೆಂಟು ಅಕ್ಷೋಹಿಣಿ ಸೇನೆಯನ್ನು ತೆಗೆದುಕೊಂಡು ಮಿಥಿಲೆಯ ಮೇಲೆ ದಾಳಿ ಮಾಡಲು ನಿರ್ಧರಿಸಿದ. ಆದರೆ ಮಂತ್ರಿ ಕೇವಟ್ಟ ಹೇಳಿದ, 'ಪ್ರಭೂ, ಮಹೋಷಧಕುಮಾರ ಭಾರೀ ಬುದ್ಧಿವಂತ. ಅವನನ್ನು ಶಕ್ತಿಯಿಂದ ಸೋಲಿಸುವುದು ಅಸಾಧ್ಯ. ಅವಸರ ಬೇಡ. ವಿದೇಹ ರಾಜನ ಹಿಂದಿರುವ ಶಕ್ತಿ ಅವನೇ'. ಆದರೆ ರಾಜ ಮಂತ್ರಿಯ ಮಾತು ಕೇಳದೆ ಯುದ್ಧಕ್ಕೆ ಕರೆ ನೀಡಿಯೇ ಬಿಟ್ಟ. ಅದಕ್ಕೆ ಸರಿಯಾದ ಪ್ರತಿಕ್ರಿಯೆಯನ್ನು ಮಹೋಷಧಕುಮಾರ ಸಿದ್ಧಮಾಡಿಕೊಂಡಿಟ್ಟ. ❖

ಗುಂಡಣ್ಣ



ದಿನ ಭವಿಷ್ಯ

ಬುಧವಾರ 21 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ನವಮೀ ಗಂ. 31-39 (ಸಾ. 6-50) ಬುಧವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 52-27(ರಾ. 3-10) ಶೂಲ ನಾಮ ಯೋಗ ಗಂ 19-37 ಬಾಲವ ಕರಣ ಗಂ. 1-35 ವಿಷ ಗಂ. 23-42 ಅಮೃತ ಗಂ. 47-56: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-07 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 4 7

ಮೇಷ: ದೈನಂದಿನ ಚಟುವಟಿಕೆಯಲ್ಲಿ ಉತ್ಸಾಹ. ಋಣ ಪರಿಹಾರದಿಂದ ಸಂತೃಪ್ತಿ. ಆಸ್ತಿ ಅಥವಾ ಚಿನ್ನಾಭರಣ ಖರೀದಿ. ವೃತ್ತಿಯಲ್ಲಿನ ಸಮಸ್ಯೆಗಳು ನಿವಾರಣೆ. ಸಾಮಾಜಿಕ ಗೌರವ ಪ್ರಾಪ್ತಿ.

ವೃಷಭ: ಮನೆಯಲ್ಲಿ ನೆಮ್ಮದಿ. ನಿಷ್ಠೆ, ಪ್ರಾಮಾಣಿಕತೆಯಿಂದಾಗಿ ಯಶಸ್ಸು. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಮೇಲಾಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಿಗಳಿಗೆ ಉದ್ಯಮದಲ್ಲಿ ಪ್ರಗತಿ.

ಮಿಥುನ: ಮಿತ್ರವ್ಯವಹಾರಗಳಲ್ಲಿ ಜಾಗರೂಕರಾಗಿರುವುದು ಒಳ್ಳೆಯದು. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ. ವಿದ್ಯಾಭ್ಯಾಸದಲ್ಲಿ ಉತ್ತಮ ಶ್ರದ್ಧೆಯಿಂದ ಸಫಲತೆ. ಯಂತ್ರೋಪಕರಣಗಳ ಖರೀದಿಗಾಗಿ ಖರ್ಚು.

ಕರ್ಕಾಟಕ: ದೀರ್ಘಕಾಲಿಕ ಅನಾರೋಗ್ಯದಿಂದ ಮುಕ್ತಿ. ಪ್ರಾಪ್ತವಯಸ್ಕರಿಗೆ ಉತ್ತಮ ಸಂಬಂಧಗಳು ದೊರಕುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ತೊಡಕು. ಮಕ್ಕಳಿಂದ ಶುಭ ವಾರ್ತೆ.

ಸಿಂಹ: ಕಳೆದುಹೋದ ದಿನಗಳ ಬಗ್ಗೆ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರತೆ ತೋರಿ ಗಂಡಾಂತರಕ್ಕೆ ಸಿಲುಕದಿರಿ. ಹಿತಶತ್ರುಗಳಿಂದ ಸಮಸ್ಯೆ.

ಕನ್ಯಾ: ಭೂ ವ್ಯವಹಾರಗಳಿಂದ ಲಾಭ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿಯ ಜೀವನಕ್ಕೆ ನಾಂದಿಯಾಗುವುದು.

ತುಲಾ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಸೋದರರಿಂದ ಸಲಹೆ ಸಹಕಾರ ದೊರಕಿ ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ವಿದೇಶದಿಂದ ಪ್ರಮುಖ ಸುದ್ದಿ ಬರುವ ಸಾಧ್ಯತೆ.

ವೃಶ್ಚಿಕ: ದೂರದ ಪ್ರಯಾಣ ಯೋಗ. ವಾಹನ ಖರೀದಿ ಸಾಧ್ಯತೆ. ನ್ಯಾಯಾಲಯದಲ್ಲಿ ಜಯ. ಕುಟುಂಬ ಸದಸ್ಯರಿಂದ ಹೊಸ ಕೆಲಸ ಕಾರ್ಯಗಳಿಗೆ ಉತ್ತಮ ಸಹಕಾರ ದೊರಕಿ ನಿರಾಳತೆ.

ಧನು: ಮಾತೃವರ್ಗದವರಿಂದ ಸಹಕಾರ. ಆರೋಗ್ಯದಲ್ಲಿ ಏರುಪೇರಾಗುವ ಸಂಭವ, ವೈದ್ಯರ ಸಲಹೆ ಅತ್ಯಗತ್ಯ. ಅನವಶ್ಯಕ ವ್ಯವಹಾರಕ್ಕೆ ತಲೆಹಾಕದಿರುವುದು ಉತ್ತಮ.

ಮಕರ: ಆಧ್ಯಾತ್ಮಿಕ ಜೀವನದಲ್ಲಿ ಸಂತೃಪ್ತಿಯನ್ನು ಕಾಣುವಿರಿ. ವಿಶೇಷ ವ್ಯವಹಾರಗಳಲ್ಲಿ ಅಗತ್ಯ ಪ್ರೋತ್ಸಾಹಗಳು ದೊರಕುವುದು. ಸಹೋದರರಿಂದ ಸಹಕಾರ.

ಕುಂಭ: ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ನೆರೆಹೊರೆಯವರೊಂದಿಗೆ ಕಲಹ ಸಂಭವ. ಮಕ್ಕಳಿಂದ ನೆಮ್ಮದಿ ಸೌಖ್ಯ. ವಿವಾಹಾಕಾಂಕ್ಷಿಗಳಿಗೆ ವಿವಾಹ ಯೋಗ. ಗೃಹ ನಿರ್ಮಾಣ ಕೆಲಸಗಳಲ್ಲಿ ಪ್ರಗತಿ.

ಮೀನ: ನಿರೀಕ್ಷಿತ ಮೂಲಗಳಿಂದ ಧನಾಗಮನ. ವೃತ್ತಿ ಸಮಸ್ಯೆಗಳಿಂದ ಪರಿಹಾರ. ಮಹಿಳೆಯರಿಗೆ ಕಲಾವಿದರುಗಳಿಗೆ ಉತ್ತಮ ಅವಕಾಶ. ವಿವಾದಾತ್ಮಕ ಸಮಸ್ಯೆಗಳಿಂದ ಮುಕ್ತರಾಗುವಿರಿ.

ನಿಮ್ಮ ಜನ್ಮದಿನ 21-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ಬಹುಮುಖ ಪ್ರತಿಭೆ ಇದ್ದರೂ ಸಮಚಿತ್ತದ ಅಭಾವದಿಂದಾಗಿ ಕಾರ್ಯಗಳಲ್ಲಿ ಎಡರುತೊಡರುಗಳನ್ನು ಎದುರಿಸಬೇಕಾದೀತು.

ಪದಬಂಧ 4573 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾದದಲ್ಲಿ ಕೊನೆಗೊಂಡಿರುವ ಸಂಭಾಷಣೆ (3)
4.ಕೆಟ್ಟ ವಾಸನೆಯಿದು (4)
6.ಮಜದಲ್ಲಿ ರುವ ಮನ್ಮಥ ಕಾಣುತ್ತಿದ್ದಾನೆಯೇ? (4)
8.ಕಣ್ಣಿನಿಂದ ಬರುವ ಪಿಚ್ಚು (3)
11.ಮುದದಿಂದಿರುವ ಅಜ್ಜ! (3)
13.ಇದಿನ್ನೂ ಎಳೆ ಮಗು (4)
17.ತಡವಾಗಿ ಗುಣಿಯಲ್ಲಿ ಬಿತ್ತಿದ ಅಲಸಂದೆ (4)
18.ಕಣ್ಣಿನ ಕೊನೆ (3)

ಮೇಲಿಂದ ಕೆಳಕ್ಕೆ
1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಬಾಜಿ ಕಟ್ಟುತ್ತಿರುವ ಮೋಸಗಾರ (4)
3.ಆಲದ ಮರಕ್ಕೊರಗಿದ ಸೋಮಾರಿ! (3)
5.ಪ್ರಿಯತಮನ ನೋಡುವಾಗ ಆವರಿಸಿದ ಕತ್ತಲು (2)
7.ಗತಿಸಿದ ಪುಣ್ಯಪುರುಷರ ಹುಟ್ಟುಹಬ್ಬ (3)
9.ಕೊಡತಕ್ಕ ಹಣ (3)
10.ಕೊನೆಗೆ ಕಾಯವಿದ್ದರೆ ಈ ಅನುಮಾನ! (3)
12.ಲೆಕ್ಕ ಬರೆಯುವವನು ಕೈ ಮುಂದಿಟ್ಟಿದ್ದಾನಲ್ಲಾ? (4)
14.ದೇವ ಲೋಕದ ಹಸು (3)
15.ಹರಸುತಲಿದ್ದಾಗ ಕಾಣಿಸಿದ ಮಗ (2)
16.ದವಸ ಧಾನ್ಯಗಳು ಸಮೃದ್ಧಿಯಾಗಿರುವಿಕೆ (3)



4572ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭ್ರಮನಿರಸನ 4.ಗುರುತರ 5.ಚಾಣಾಕ್ಷ 7.ಉದ್ದಾಮ 9.ನಗದು 12.ಗಟಾರ 13.ನಳಪಾಕ 15.ವಿಗ್ರಹಾರಾಧನೆ

ಮೇಲಿಂದ ಕೆಳಕ್ಕೆ: 1.ಭ್ರಷ್ಟಾಚಾರ 2.ನಗು 3.ಮರವೆ 6.ಕ್ಷಮಾದಾನ 7.ಉಮೇದು 8.ಮನೋರೋಗ 10.ಅರಮನೆ 11.ಅನರ್ಘ್ಯ 14.ಕವಿ

ಸುಡೊಕು 4959

				3		4		6
		1	5		2			
		8		4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4958 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ನಗರದ ಖಾಸಗಿ ಆಸ್ಪತ್ರೆಗಳ ವೈದ್ಯರ ಅಳಲು ● ರೋಗಿಗಳಿಗೆ ತಪ್ಪದ ಆಸ್ಪತ್ರೆ ಅಲೆದಾಟ

ಕೋವಿಡ್: ಹಾಸಿಗೆಯಿದ್ದರೂ ಆಕ್ಸಿಜನ್ ಇಲ್ಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ತೀವ್ರತೆಯಿಂದಾಗಿ ನಗರದಲ್ಲಿ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಆದರೆ, ಬಹುತೇಕ ಖಾಸಗಿ ಆಸ್ಪತ್ರೆಗಳು ಹಾಸಿಗೆಯಿದ್ದರೂ ವೈದ್ಯಕೀಯ ಆಮ್ಲಜನಕ (ಆಕ್ಸಿಜನ್) ಇಲ್ಲ ಎಂಬ ಕಾರಣ ನೀಡಿ ಸೋಂಕಿತರನ್ನು ದಾಖಲಿಸಿಕೊಳ್ಳಲು ನಿರಾಕರಿಸುತ್ತಿವೆ.

ಕೋವಿಡ್ ಎರಡನೇ ಅಲೆಯಲ್ಲಿ ವೇಗವಾಗಿ ಸೋಂಕು ವ್ಯಾಪಿಸಿಕೊಳ್ಳುತ್ತಿದೆ. ಕೆಲ ದಿನಗಳಿಂದ ಕೋವಿಡ್‌ಗೆ ಸಾವಿಗೀಡಾಗುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಈ ತಿಂಗಳಲ್ಲಿ 20 ದಿನಗಳಲ್ಲಿ (ಏ.20ರವರೆಗೆ) 601 ಮಂದಿ ಸಾವಿಗೀಡಾಗಿದ್ದಾರೆ. ದಿನವೊಂದಕ್ಕೆ ದೃಢಪಡುತ್ತಿರುವ ಮರಣ ಪ್ರಕರಣಗಳ ಸಂಖ್ಯೆ ನೂರರ ಗಡಿ ಆಸುಪಾಸಿಗೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಲಕ್ಷದ ಗಡಿ ದಾಟಿದೆ.

ಕೋವಿಡ್ ಪೀಡಿತರಲ್ಲಿ ಶೇ 90ರಷ್ಟು ಮನೆ ಆರೈಕೆಗೆ ಒಳಗಾಗಿದ್ದಾರೆ. ಸಮಸ್ಯೆ ಗಂಭೀರ ಸ್ವರೂಪ ಕಾಣಿಸಿಕೊಂಡ ಬಳಿಕ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಇದರಿಂದಾಗಿ ಹೆಚ್ಚಿನವರಿಗೆ ಆಮ್ಲಜನಕದ ಸಂಪರ್ಕ ಒದಗಿಸಬೇಕಿದೆ. ನಗರದಲ್ಲಿ ಇರುವ 500ಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳಲ್ಲಿ ಅಪೋಲೊ, ಮಣಿಪಾಲ್, ಕೊಲಂಬಿಯಾ ಏಷ್ಯಾ ಸೇರಿದಂತೆ ಪ್ರಮುಖ 8ರಿಂದ 10 ಆಸ್ಪತ್ರೆಗಳು ಮಾತ್ರ ಆಮ್ಲಜನಕ ಘಟಕಗಳನ್ನು ಹೊಂದಿವೆ. ಉಳಿದವು ದೈನಂದಿನ ಪೂರೈಕೆಯನ್ನೇ ಅವಲಂಬಿಸಿವೆ.

ಇದರಿಂದಾಗಿ ಬಹುತೇಕ ಆಸ್ಪತ್ರೆಗಳು ಆಕ್ಸಿಜನ್ ಸಮಸ್ಯೆ ಎದುರಿಸುತ್ತಿವೆ. ನಗರದ ಖಾಸಗಿ ಆಸ್ಪತ್ರೆಗಳಿಗೆ ಪ್ರತಿದಿನ ವೈದ್ಯಕೀಯ ಬಳಕೆಗೆ 300 ಟನ್ ಆಕ್ಸಿಜನ್ ಅಗತ್ಯವಿದೆ.

ಸರ್ಕಾರದ ವಿರುದ್ಧ ಆಕ್ರೋಶ: ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಾಗಿ ಕೋವಿಡ್ ಪೀಡಿತರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಲಾರಂಭಿಸಿದ್ದಾರೆ. ಈಗಾಗಲೇ ದಾಖಲಾಗಿರುವ ರೋಗಿಗಳಿಗೆ ಆಮ್ಲಜನಕ ಪೂರೈಸಲು ಸಾಧ್ಯವಾಗದ ಕಾರಣ ರೋಗಿಗಳು ಬೇರೆಡೆಗೆ ತೆರಳಲು ಇಚ್ಛಿಸಿದಲ್ಲಿ ಬಿಡುಗಡೆ ಮಾಡುವುದಾಗಿ ಆತ್ರೇಯಾ ಸೇರಿದಂತೆ ಕೆಲ ಆಸ್ಪತ್ರೆಗಳು ಹೇಳುತ್ತಿವೆ. ಇದರಿಂದಾಗಿ ಕೋವಿಡ್ ಪೀಡಿತರು ಹಾಗೂ ಅವರ ಕುಟುಂಬದ ಸದಸ್ಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾರಂಭಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೂಡ ಟೀಕೆ ವ್ಯಕ್ತವಾಗಿದೆ.

‘ನಮಗೆ ಕೃತಕ ಆಮ್ಲಜನಕ ಒದಗಿಸುತ್ತಿಲ್ಲ. ತುಂಬಾ ಸುಸ್ತಾಗುತ್ತಿದ್ದು, ಸರಿಯಾದ ಚಿಕಿತ್ಸೆಯೂ ಸಿಗುತ್ತಿಲ್ಲ. ಇದರಿಂದಾಗಿಯೇ ಜನಗಳು ಸಾಯುತ್ತಾ ಇದ್ದಾರೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತೆಯೊಬ್ಬರು ಅಳಲು ತೋಡಿಕೊಂಡಿದ್ದಾರೆ.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಯಿಲ್ಲ. ಖಾಸಗಿ ಆಸ್ಪತ್ರೆಗಳು ಅಗತ್ಯ ಪ್ರಮಾಣದಲ್ಲಿ ಸಿಲಿಂಡರ್ ಇಟ್ಟುಕೊಳ್ಳದೆಯೇ ಈಗ ಆಕ್ಸಿಜನ್ ಇಲ್ಲ ಎಂದು ಕೈಚೆಲ್ಲುತ್ತಿವೆ. ಕೆಲ ಆಸ್ಪತ್ರೆಗಳು ಒಟ್ಟಾಗಿ ಸಾರಿಗೆ ವ್ಯವಸ್ಥೆ ಮಾಡಿಕೊಂಡು, ಸಿಲಿಂಡರ್ ತರಿಸಿಕೊಂಡಲ್ಲಿ ಸಮಸ್ಯೆಯಾಗದು’ ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಆಕ್ಸಿಪ್ಲಾಂಟ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ಆಮ್ಲಜನಕ ಸಿದ್ಧವಾಗುತ್ತಿರುವುದು
ಪ್ರಜಾವಾಣಿ ಚಿತ್ರ

‘ಅಸಹಾಯಕರಾಗಿದ್ದೇವೆ’

‘ಗಂಭೀರವಾಗಿ ಅಸ್ವಸ್ಥಗೊಂಡ ಐವರು ಸೋಂಕಿತರಿಗೆ ನಿರಂತರ ಆಮ್ಲಜನಕ ಸಂಪರ್ಕ ಒದಗಿಸಬೇಕಿದೆ. ದಿನಕ್ಕೆ 20 ಸಿಲಿಂಡರ್ ಬೇಕಿದೆ. ಆದರೆ, 5 ಸಿಲಿಂಡರ್ ಮಾತ್ರ ಸಿಗುತ್ತಿದೆ. ಇದರಿಂದಾಗಿ ನಾವು ಅಸಹಾಯಕರಾಗಿದ್ದೇವೆ. ಆಕ್ಸಿಜನ್ ಸಿಕ್ಕರೆ ಮಾತ್ರ ರೋಗಿಗಳನ್ನು ಉಳಿಸಿಕೊಳ್ಳಲು ಸಾಧ್ಯ. ಸುತ್ತಮುತ್ತಲಿನ ಎಲ್ಲ ಆಸ್ಪತ್ರೆಗಳು ಸೇರಿ ಆಕ್ಸಿಜನ್ ಸಿಲಿಂಡರ್ ತರಲು ಪೀಣ್ಯಕ್ಕೆ ವಾಹನ ಕಳುಹಿಸಿವೆ. ಸಿಲಿಂಡರ್ ಸಿಗದಿದ್ದಲ್ಲಿ ಸೋಂಕಿತರ ಜೀವಕ್ಕೆ ಅಪಾಯವಾಗಲಿದೆ’ ಎಂದು ಆತ್ರೇಯಾ ಆಸ್ಪತ್ರೆಯ ಡಾ. ನಾರಾಯಣ ಸ್ವಾಮಿ ತಿಳಿಸಿದರು.

‘ಅಧಿಕಾರಿಗಳ ತಂಡ ಆಸ್ಪತ್ರೆಗೆ ಬಂದು ಪರಿಶೀಲಿಸಿದರೂ ಸಮಸ್ಯೆ ಪರಿಹಾರವಾಗಿಲ್ಲ. ರೋಗಿಗಳು ನರಳಾಟ ನಡೆಸುತ್ತಿದ್ದಾರೆ. ನಮ್ಮಲ್ಲಿ 74 ಹಾಸಿಗೆಗಳಿವೆ. ಅದರಲ್ಲಿ 34 ಹಾಸಿಗೆಗಳು ಭರ್ತಿಯಾಗಿವೆ. ಸರ್ಕಾರಿ ಕೋಟಾದ 37 ಹಾಸಿಗೆಗಳು ಖಾಲಿಯಿವೆ. ಆಕ್ಸಿಜನ್ ನೀಡಿದ ಬಳಿಕವೇ ರೋಗಿಗಳನ್ನು ಕಳುಹಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ‘ರೆಮ್‌ಡಿಸಿವಿರ್’ ಔಷಧ ಕೂಡ ಸಿಗುತ್ತಿಲ್ಲ. ಸಂಬಂಧಿಸಿದವರು ದೂರವಾಣಿ ಕರೆಗೆ ಸ್ಪಂದಿಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ದಾಖಲಾತಿ ನಿರಾಕರಣೆ ಅನಿವಾರ್ಯ’

‘ವೈದ್ಯಕೀಯ ಆಮ್ಲಜನಕ ಕೊರತೆ ಮುಂದುವರಿದಿದೆ. ನಮಗೇ ಆಮ್ಲಜನಕ ದೊರೆಯುತ್ತಿಲ್ಲ ಎಂದು ಪೂರೈಕೆದಾರರು ಹೇಳುತ್ತಿದ್ದಾರೆ. ಸರ್ಕಾರವು ಇದಕ್ಕೆ ಪರಿಹಾರ ಒದಗಿಸಬೇಕು. ಔಷಧವು ಸಿಗದಿದ್ದಲ್ಲಿ ಪರ್ಯಾಯ ಔಷಧ ನೀಡಬಹುದು. ಆದರೆ, ಆಕ್ಸಿಜನ್‌ಗೆ ಬೇರೆ ಆಯ್ಕೆಗಳಿಲ್ಲ. ಆಮ್ಲಜನಕ ಸಿಗದಿದ್ದಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಬಿಡುಗಡೆಮಾಡಿ, ಸರ್ಕಾರಿ ಆಸ್ಪತ್ರೆಗೆ ಕಳುಹಿಸಬೇಕಾಗುತ್ತದೆ. ವಾರ್ ರೂಮ್‌ಗೆ ಕರೆ ಮಾಡಿದರೂ ಸ್ಪಂದನೆ ಸಿಗುತ್ತಿಲ್ಲ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

‘ಆಕ್ಸಿಜನ್ ಇರದ ಕಾರಣ ಬಹುತೇಕ ಆಸ್ಪತ್ರೆಗಳು ಹೊಸದಾಗಿ ಕೋವಿಡ್ ಪೀಡಿತರನ್ನು ದಾಖಲಿಸಿಕೊಳ್ಳುತ್ತಿಲ್ಲ. ಎರಡರಿಂದ ಮೂರು ದಿನಕ್ಕೆ ಸಾಕಾಗುವಷ್ಟು ಆಕ್ಸಿಜನ್ ಇರುವ ಆಸ್ಪತ್ರೆಗಳು ಮಾತ್ರ ಸೋಂಕಿತರನ್ನು ದಾಖಲಿಸಿಕೊಳ್ಳುತ್ತಿವೆ. ಆಮ್ಲಜನಕ ಇಲ್ಲದೆಯೇ ದಾಖಲಿಸಿಕೊಂಡು, ರೋಗಿಗೆ ಸಮಸ್ಯೆಯಾದಲ್ಲಿ ಸಾರ್ವಜನಿಕರು ಆಸ್ಪತ್ರೆಯನ್ನು ಆರೋಪಿಯನ್ನಾಗಿಸುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬೇಡಿಕೆ– ಪೂರೈಕೆ ನಡುವೆ ಅಂತರ’

‘ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾದವರು ಕನಿಷ್ಠ ನಾಲ್ಕು ದಿನಗಳು ಆಸ್ಪತ್ರೆಗಳಲ್ಲಿ ಇರುತ್ತಾರೆ. ಹಾಗಾಗಿ, ಸಾಮಾನ್ಯ ವಾರ್ಡ್‌ಗಳನ್ನೇ ಐಸಿಯು ವಾರ್ಡ್ ಆಗಿ ಪರಿವರ್ತಿಸಲಾಗುತ್ತಿದೆ. ಶೇ 50ರಷ್ಟು ಸಿಲಿಂಡರ್‌ಗಳು ಖಾಲಿಯಾಗುತ್ತಿದ್ದಂತೆ ಇನ್ನುಳಿದ ಸಿಲಿಂಡರ್‌ಗಳನ್ನು ತುಂಬಿಸಿಕೊಂಡು ಬರಲಾಗುತ್ತಿದೆ. ಆದರೂ ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರ ಹೆಚ್ಚಿದೆ. ಒಂದು ತಿಂಗಳಿಗೆ 30 ಆಕ್ಸಿಜನ್ ಸಿಲಿಂಡರ್ ಬೇಕಾಗುತ್ತಿತ್ತು. ಈಗ ದಿನಕ್ಕೇ 40 ಸಿಲಿಂಡರ್‌ಗಳು ಬೇಕಾಗುತ್ತಿವೆ’ ಎಂದು ಎಸಿಇ ಸುಹಾಸ್ ಆಸ್ಪತ್ರೆಯ ಜಗದೀಶ್ ಹಿರೇಮಠ ತಿಳಿಸಿದರು.

ಗೋವಾ: ಬಿಜೆಪಿ ಸೇರಿದ ಶಾಸಕರ ಅನರ್ಹತೆ ಕೋರಿದ್ದ ಅರ್ಜಿ ವಜಾ

ಪಣಜಿ (ಪಿಟಿಐ): ಪಕ್ಷ ತೊರೆದು ಬಿಜೆಪಿ ಸೇರಿದ್ದ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಕಾಂಗ್ರೆಸ್ ಹಾಗೂ ಮಹಾರಾಷ್ಟ್ರವಾದಿ ಗೋಮಾಂತಕ ಪಾರ್ಟಿ (ಎಂಜಿಪಿ) ಸಲ್ಲಿಸಿದ್ದ ಅರ್ಜಿಗಳನ್ನು ಗೋವಾ ವಿಧಾನಸಭೆ ಸ್ಪೀಕರ್ ರಾಜೇಶ್ ಪಾಟ್ನೇಕರ್ ಮಂಗಳವಾರ ವಜಾಗೊಳಿಸಿದರು.

ಕಾಂಗ್ರೆಸ್‌ನ 10 ಹಾಗೂ ಎಂಜಿಪಿಯ ಇಬ್ಬರು ಶಾಸಕರು 2019ರಲ್ಲಿ ಬಿಜೆಪಿ ಸೇರಿದ್ದರು. 40 ಸದಸ್ಯ ಬಲದ ಗೋವಾ ವಿಧಾನಸಭೆಯಲ್ಲಿ ಈಗ ಬಿಜೆಪಿ ಶಾಸಕರ ಸಂಖ್ಯೆ 27 ಇದೆ.

ಕಾಂಗ್ರೆಸ್‌ನ ಗೋವಾ ಘಟಕದ ಅಧ್ಯಕ್ಷ ಗಿರೀಶ್ ಚೋಡಾನಕರ್, ಎಂಜಿಪಿಯ ಮುಖಂಡ ಸುದಿನ್ ಧವಳೀಕರ್ ಅವರು ಪ್ರತ್ಯೇಕ ಅರ್ಜಿ ಸಲ್ಲಿಸಿ, ತಮ್ಮ ಪಕ್ಷ ತೊರೆದು ಬಿಜೆಪಿ ಸೇರಿರುವ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿದ್ದರು.

ಯಾವುದೇ ಕಾರಣಗಳನ್ನು ನೀಡದೆಯೇ ಈ ಎರಡೂ ಅರ್ಜಿಗಳನ್ನು ವಜಾಗೊಳಿಸಿ ಸ್ಪೀಕರ್ ಮೌಖಿಕ ಆದೇಶ ನೀಡಿದ್ದಾರೆ.

‘ಸ್ಪೀಕರ್ ಅವರ ಆದೇಶದ ಪ್ರತಿಗಾಗಿ ಕಾಯುತ್ತಿದ್ದೇವೆ. ಅದು ಕೈ ಸೇರಿದ ನಂತರ, ಕೋರ್ಟ್ ಮೊರೆ ಹೋಗುತ್ತೇವೆ’ ಎಂದು ಚೋಡಾನಕರ್ ಪರ ವಕೀಲ ಅಭಿಜಿತ್ ಗೋಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

‘ಅರ್ಜಿ ವಜಾಗೊಳಿಸಲು ಸ್ಪೀಕರ್ ಅವರು ನೀಡಿರುವ ಕಾರಣಗಳನ್ನು ಪರಿಶೀಲಿಸಿದ ನಂತರ ನಮ್ಮ ಮುಂದಿನ ಕ್ರಮದ ಕುರಿತು ನಿರ್ಧರಿಸಲಾಗುವುದು’ ಎಂದು ಎಂಜಿಪಿ ಪರ ವಕೀಲ ಸಿ.ಎ.ಫೆರೀರಾ ಹೇಳಿದ್ದಾರೆ.

ಭಾರತಕ್ಕೆ ಪ್ರಯಾಣ ಮುಂದೂಡಿ: ನಾಗರಿಕರಿಗೆ ಅಮೆರಿಕ ಸೂಚನೆ

ನವದೆಹಲಿ: ಭಾರತದಲ್ಲಿ ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಬಗ್ಗೆ ಅಮೆರಿಕ ಕಳವಳ ವ್ಯಕ್ತಪಡಿಸಿದ್ದು, ಪ್ರಯಾಣ ಮಾಡುವ ಯೋಚನೆಯಿದ್ದರೆ ಅದನ್ನು ಮುಂದೂಡಿ ಎಂದು ಹೇಳಿದೆ.

ಭಾರತದಲ್ಲಿ ಕೋವಿಡ್ 19 ಪ್ರಕರಣ ಅತ್ಯಧಿಕ ಸಂಖ್ಯೆಯಲ್ಲಿ ವರದಿಯಾಗುತ್ತಿದೆ. ಹೀಗಾಗಿ ಅಲ್ಲಿಗೆ ಪ್ರಯಾಣ ಮಾಡದಿರುವುದು ಉತ್ತಮ ಎಂದು ಎಚ್ಚರಿಕೆ ನೀಡಲಾಗಿದೆ. ಹಾಗಿದ್ದೂ, ತೀರಾ ಅಗತ್ಯವಿದ್ದಲ್ಲಿ ಮಾತ್ರ ಲಸಿಕೆ ತೆಗೆದುಕೊಂಡು, ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಮೂಲಕ ಪ್ರಯಾಣ ಮಾಡಿ ಎಂದು ಹೇಳಿದೆ.

ಹರಿದ್ವಾರದಲ್ಲಿ ನಡೆದ ಕುಂಭಮೇಳದ ದೃಶ್ಯ –ರಾಯಿಟರ್ಸ್ ಚಿತ್ರ

ಕುಂಭಮೇಳದಲ್ಲಿ ಭಾಗವಹಿಸಿದ್ದ ನೇಪಾಳದ ಮಾಜಿ ರಾಜ, ರಾಣಿಗೆ ಕೋವಿಡ್

ಕಠ್ಮಂಡು: ಹರಿದ್ವಾರದಲ್ಲಿ ಇತ್ತೀಚೆಗೆ ನಡೆದ ಮಹಾಕುಂಭ ಮೇಳದಲ್ಲಿ ಪಾಲ್ಗೊಂಡಿದ್ದ ನೇಪಾಳದ ಹಿಂದಿನ ರಾಜ– ರಾಣಿ ಜ್ಞಾನೇಂದ್ರ ಷಾ ಮತ್ತು ಕೋಮಲ್ ಷಾ ಅವರಿಗೆ ಕೋವಿಡ್ ಇರುವುದು ಪರೀಕ್ಷೆಯಲ್ಲಿ ದೃಢಪಟ್ಟಿದೆ ಎಂದು ಮಂಗಳವಾರ ಮಾಧ್ಯಮವೊಂದು ವರದಿ ಮಾಡಿದೆ.

‘ಜ್ಞಾನೇಂದ್ರ ಷಾ ಮತ್ತು ಕೋಮಲ್ ಷಾ ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಹರ್ ಕಿ ಪೌರಿಯಲ್ಲಿ ಪವಿತ್ರ ಸ್ನಾನ ಮಾಡಿದ್ದರು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಬಳಿಕ ಇಬ್ಬರೂ ನೇಪಾಳಕ್ಕೆ ಹಿಂತಿರುಗಿದ್ದರು’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

‘ಜ್ಞಾನೇಂದ್ರ ಮತ್ತು ಕೋಮಲ್ ಅವರಿಗೆ ಪಿಸಿಆರ್ (ಪಾಲಿಮರೇಸ್ ಚೈನ್ ರಿಯಾಕ್ಷನ್) ಪರೀಕ್ಷೆ ಮಾಡಲಾಗಿತ್ತು. ಇದರಲ್ಲಿ ಇಬ್ಬರಿಗೂ ಕೋವಿಡ್–19 ಇರುವುದು ದೃಢಪಟ್ಟಿದೆ. ನೇಪಾಳಕ್ಕೆ ಹಿಂತಿರುಗಿದ ಇಬ್ಬರನ್ನೂ ಸ್ವಾಗತಿಸಲು ವಿಮಾನ ನಿಲ್ದಾಣದಲ್ಲಿ ನೂರಾರು ಜನರು ಸೇರಿದ್ದರು’ ಎಂದು ದಿ ಹಿಮಾಲಯನ್ ಟೈಮ್ಸ್ ವರದಿ ಮಾಡಿದೆ.

ಮಹಾರಾಷ್ಟ್ರ: ಬೆಳಿಗ್ಗೆ ಮಾತ್ರ ತೆರೆದಿರುವ ಅಂಗಡಿಗಳು

ಮುಂಬೈ: ಕೋವಿಡ್ ಸೋಂಕು ಹರಡುವಿಕೆ ತಡೆಯುವ ಕ್ರಮವಾಗಿ ಗೃಹೋಪಯೋಗಿ ವಸ್ತುಗಳು ಮತ್ತು ಆಹಾರ ಮಳಿಗೆಗಳು ಇನ್ನು ಬೆಳಿಗ್ಗೆ 7ರಿಂದ 11 ಗಂಟೆಯವರೆಗೆ ಮಾತ್ರ ಮಹಾರಾಷ್ಟ್ರದಲ್ಲಿ ಕಾರ್ಯನಿರ್ವಹಿಸಲಿವೆ.

ನೂತನ ನಿಯಮವು ಮಂಗಳವಾರ ರಾತ್ರಿ 8 ಗಂಟೆಯಿಂದ ಜಾರಿಗೆ ಬರಲಿದ್ದು, ಮೇ 1ರಂದು ಬೆಳಿಗ್ಗೆ 7ಗಂಟೆಯವರೆಗೂ ಚಾಲ್ತಿಯಲ್ಲಿರುತ್ತದೆ ಎಂದು ರಾಜ್ಯ ಸರ್ಕಾರ ಮಂಗಳವಾರ ಪ್ರಕಟಿಸಿದೆ.

ಮನೆಗೆ ಸಾಮಗ್ರಿಗಳನ್ನು ಪೂರೈಸುವ ಸೇವೆಗೆ ಬೆಳಿಗ್ಗೆ 7ರಿಂದ ರಾತ್ರಿ 8 ಗಂಟೆಯವರೆಗೂ ಅವಕಾಶ ಇರುತ್ತದೆ. ಸ್ಥಳೀಯ ಸಂಸ್ಥೆಗಳು ಅಗತ್ಯಾನುಸಾರ ಸಮಯ ಬದಲಾವಣೆ ಮಾಡಿಕೊಳ್ಳಬಹುದು ಎಂದು ಸರ್ಕಾರ ಸೂಚಿಸಿದೆ.

ರಾಜ್ಯದ ಪ್ರಾಕೃತಿಕ ವಿಕೋಪ ನಿರ್ವಹಣೆ ಮತ್ತು ಪುನರ್ವಸತಿ ಇಲಾಖೆಯು ಈ ಕುರಿತು ಆದೇಶ ಹೊರಡಿಸಿದೆ.

ಲಾಕ್‌ಡೌನ್: ತವರಿನತ್ತ ಚಿತ್ತ– ಗಿಜಿಗುಡುತ್ತಿರುವ ಬಸ್‌ನಿಲ್ದಾಣ

ಪ್ರಜಾವಾಣಿ ವಾರ್ತೆ

ಲಖನೌ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಲಾಕ್‌ಡೌನ್ ಘೋಷಣೆಯಾಗುತ್ತಿದ್ದಂತೆಯೇ, ದೆಹಲಿ ತೊರೆದ ಸಾವಿರಾರು ಜನ ವಲಸೆ ಕಾರ್ಮಿಕರು ಉತ್ತರ ಪ್ರದೇಶದ ತಮ್ಮ ಊರುಗಳತ್ತ ಹೆಜ್ಜೆ ಹಾಕಿದ್ದಾರೆ.

ಹೀಗಾಗಿ ಇಲ್ಲಿನ ಬಸ್ ನಿಲ್ದಾಣಗಳು ವಲಸೆ ಕಾರ್ಮಿಕರಿಂದ ಗಿಜಿಗುಡುತ್ತಿದ್ದ ದೃಶ್ಯಗಳು ಮಂಗಳವಾರ ಕಂಡು ಬಂದವು. ಸೋಮವಾರ ರಾತ್ರಿ ದೆಹಲಿಯಿಂದ ಹೊರಟಿರುವ ಕಾರ್ಮಿಕರು ಇಲ್ಲಿ ಬಂದಿಳಿದಿದ್ದು, ಈಗ ತಮ್ಮ ಊರುಗಳಿಗೆ ತೆರಳಲು ಬಸ್‌ಗಳನ್ನು ಹುಡುಕುತ್ತಾ ಸಂಚರಿಸಿದರು.

ಅದರಲ್ಲೂ, ಉತ್ತರ ಪ್ರದೇಶದ ಪೂರ್ವ ಭಾಗದ ಜಿಲ್ಲೆಗಳಾದ ಗೋರಖ್‌ಪುರ, ದೇವರಿಯಾ, ಅಜಮ್‌ಗಢ ಹಾಗೂ ಇತರ ಜಿಲ್ಲೆಗಳ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ರಾಜ್ಯದಲ್ಲಿ ನಡೆಯುತ್ತಿರುವ ಪಂಚಾಯತ್ ಚುನಾವಣೆಗಾಗಿ ಬಸ್‌ಗಳನ್ನು ನಿಯೋಜನೆ ಮಾಡಿರುವ ಕಾರಣ, ನಗರದ ಆಲಂಬಾಗ್‌ನಲ್ಲಿರುವ ಕೇಂದ್ರ ಬಸ್ ನಿಲ್ದಾಣದಲ್ಲಿ ಕೆಲವೇ ಬಸ್‌ಗಳು ಇದ್ದವು. ಹೀಗಾಗಿ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಲು ತೊಂದರೆ ಅನುಭವಿಸಬೇಕಾಯಿತು ಎಂದು ಮೂಲಗಳು ಹೇಳಿವೆ.

‘ವಲಸೆ ಕಾರ್ಮಿಕರು ಅವರ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ಖಾಸಗಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ’ ಎಂದು ಉತ್ತರ ಪ್ರದೇಶ ಸಾರಿಗೆ ಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದರು.

ಭಾರಿ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ದೆಹಲಿ ತೊರೆದು, ರಾಜ್ಯದತ್ತ ಮುಖ ಮಾಡಿದ್ದರಿಂದ ಉಂಟಾಗಿರುವ ತೊಂದರೆಗೆ ದೆಹಲಿ ಸರ್ಕಾರವೇ ಕಾರಣ ಎಂದು ಉತ್ತರ ಪ್ರದೇಶ ಸಚಿವ ಸಿದ್ಧಾರ್ಥನಾಥ್ ಸಿಂಗ್ ಟೀಕಿಸಿದರು.

‘ತರಾತುರಿಯಲ್ಲಿ ದೆಹಲಿಯಲ್ಲಿ ಲಾಕ್‌ಡೌನ್ ಘೋಷಿಸಲಾಗಿದೆ. ದೆಹಲಿ ಸಾರಿಗೆ ಬಸ್‌ಗಳಲ್ಲಿ ಕರೆದುಕೊಂಡು ಬಂದ ಕಾರ್ಮಿಕರನ್ನು , ನೋಯ್ಡಾ ಮತ್ತು ಗಾಜಿಯಾಬಾದ್ ಗಡಿಗಳಲ್ಲಿ ಇಳಿಸಿ ಹೋಗಲಾಗಿದೆ’ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

DH DECCAN HERALD Classifieds
More value, more impact
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

BOOK YOUR CLASSIFIED ADVERTISEMENT @ ANY OF OUR ADVERTISING AGENCIES

CENTRAL

SESHADRIPURAM: Vizdom Outlooks: 9845021250 **CHICKPET:** Nagaraj Ads: 9448533327 S. R. Advertising: 43029993 / 9845269729 **MAJESTIC:** Nishkala Enterprise: 22870191 **GANDHI NAGAR :** Meghana Advertising : 9845494426 **KUMARA PARK:** Bronze Communications: 23310081 Avanti Communications: 22205998 **FRAZER TOWN:** Walk-Advertising: 9844001541 **COX TOWN:** D. R. Associates: 9845120432 Creative Eye: 9845014592 Moan Advt: 9886803251 **DICKENSON ROAD:** Manipal Advertising: 25583225 **VASANTH NAGAR :** Ad Point: 9845176901 Batha Advertising : 22269106 **HENNUR :** Jeevitha Creative Communications: 9886280456 **KALYAN NAGAR:** Docaly Ads: 98455 44753 **KORAMANGALA:** 365 Ads: 9343703463 Pulse Advertising: 8197870039 **INDIRANAGAR :** Kshama Communications: 9845067714 Radha Advertising: 9845242574 Trinity Advertising: 9945571777 Centigrade : 9902251683 **K. R. PURAM:** Lakshmi Advertising: 9945907610 **ULSOOR:** Samparka : 98450 72348 Royal Agency: 96209 72060 **St. JON'S ROAD:** Graphic Arts Industries: 9844073437

SOUTH

JAYANAGAR : Redd Arrow: 26655705/06 / 9980459999 Spectrum Inc: 26761220 / 26768805 Shastry Ventures : 9880660308 Sneha Advertisers: 41210111 / 9844076925 Surabhi Ads : 99455 87574 Sellers Advertising : 9986660497 **J. P. NAGAR:** Shree Enterprises: 9901076272 / 080-42011524 Raksheenda Publicity : 9845064970 Future Vision: 9886084460 Guha Advertisers: 9845901968 **BTM Layout :** Mysha Enterprises: 9060034387 **HANUMATH NAGAR:** Avena Media 99869 34449 OM Shree Ads: 94485 93438 **BANASHANKARI :** Popular Enterprises : 9448672817 Akpha Advertising : 26764536 Popular Advertising: 9035775105 Anand Communications : 9845511145, 9844029326 T. R. Adds: 9845884648 SGR Advertising: 9945605205 / 9742645352 Sampoorna Advertising: 9986190744 Reality Advertisers: 9742013378 D.G Publicities : 41618530 / 9243402739 **K. R. ROAD:** Streamline: 9880490672 / 48543060 **YEDIYUR :** Ankit Communications: 9448001951 **GANDHI BAZAAR:** Allied Publicity: 9343772964 AdSmart: 9341239946 **PADMANABHA NAGAR:** Ashu Communications : 9886714078 **CHAMARAJPET:** Adarsh Advertising: 9845520418 Bharathi Ads: 41503131 **V.V Puram :** Nandana Ads : 9448493382 **Mahalakshmi Layout :** CreActive : 9845133368 **BASAVANAGUDI:** Pragathi Advertisers: 7353762673 First Choice: 9880177773 Cauvery Ads : 9886824737 Subha Advertising: 26629850 MASS Designs: 9886287849 Vinyas Advertising : 9845048414 **WILSON GARDEN:** Aditi Advertising: 9448112441 **KANAKAPURA ROAD :** Sagar Advertisers 9964652358 **UTTARAHALLI:** Golden Ads: 98444 24877

NORTH

R T NAGAR : AD6 Advertising: 90089 99919 Smart Media: 9590518900 Madhu Ads : 9945072007 **BENSON TOWN :** Rounaqh Publicity: 9845172646 Surekha Advertisers: 9342233097 **YELAHANKA:** Chandu Ads : 98806 90007 **MATHIKERE:** A.A.Associates: 23378382 **VIDYARANYAPURA :** Balaram Advertisers: 9880598082 Spectrum Media: 8762646486 Joydeep's E-Commerce Service: 7676375102 **PEENYA:** Indira Advertising : 99803 14247 Shrusti Media : 98456 58993 **RAJAJINAGAR :** Chiya & Girish : 98457 33624 Patil Graphics: 23122545 / 9880359470 Sri Sainath Enterprises: 23521276 / 23423270 S. R. Advertising : 98452 69729 V. R. Opticians : 98453 59345 Adz Corner: 9886245268 Spoorthi Ads: 9845597155 Garden City: 9844423886 Vijaya Publicities: 9845359345 S.D.Enterprises: 9845500301 **MALLESHWARAM:** Media Options: 9845553559 Sparkles Network : 9663984711 Roopa Advertisers: 98452 88832 Prakurthi Ads: 9148917339 Madyam Ads: 9886981719 Pochi Advertisers: 94490 59015 Deepu Enterprises: 96324 06519 Ads360: 9739991752 Skanda Advertising: 98804 10524 Nesara Advertisers : 9845030087 A. A. Advertising: 94814 28108 **NAGARBHAVI :** Damam Advertising : 23214391 / 9900158293 Roopa Communications : 98808 77599 Shirdi Sai Communications: 9008084552 / 8050717273 Yashaswi Ads : 99806 97155 Bhargav Enterprises: 9880177773 **VIJAYNAGAR :** Pragati Advertisers:9845542727 Trupty Advertisers: 98450 46667 Yukta Advertisers: 98459 29215 Topcopy: 9901255400 **BASAVESHWARNAGAR :** Ekalavya Ads: 9066501124 Omkar Advertising : 9972099398 Ambar Communications : 9986879230 Pravasthi Advertising: 9448325268 **MAGADI ROAD:** Zeal Advertising: 9341806169 **KENGERI:** Linmark Enterprises: 9844548248 Sri Sai Agency: 7795989800

For more information contact: Ph: 45557160 | 163 | 164 Mobile: 9880856233 | 9731810277 | 9901641752 | 9845114560 | 9886213331
E-mail: dhclassifieds@deccanherald.co.in

ಕೋವಿಡ್ ರೋಗಿಗಳ ಚಿಕಿತ್ಸೆ: ಹೊಸ ಮಾರ್ಗಸೂಚಿ ಪ್ರಕಟ ● ಪರಿಸ್ಥಿತಿ ನಿರ್ವಹಣೆ–ಪ್ರತಿಪಕ್ಷಗಳ ತರಾಟೆ

ರೋಗ ಉಲ್ಬಣಿಸಿದರಷ್ಟೇ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆಗೆ ಸಂಬಂಧಿಸಿದಂತೆ ಮಂಗಳವಾರ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿರುವ ಆರೋಗ್ಯ ಇಲಾಖೆ, ರೋಗ ಲಕ್ಷಣಗಳು ಉಲ್ಬಣಿಸಿದವರನ್ನು ಮಾತ್ರವೇ ಆಸ್ಪತ್ರೆಗೆ ದಾಖಲಿಸಬೇಕು ಎಂದು ಸೂಚನೆ ನೀಡಿದೆ.

ಹೋಂ ಕ್ವಾರಂಟೈನ್, ಆಸ್ಪತ್ರೆಗೆ ದಾಖಲಾತಿ, ಕೋವಿಡ್ ಆರೈಕೆ ಕೇಂದ್ರಕ್ಕೆ ಸ್ಥಳಾಂತರ, ಆಸ್ಪತ್ರೆಯಿಂದ ಬಿಡುಗಡೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯಲ್ಲಿ ಸ್ಪಷ್ಟವಾದ ನಿರ್ದೇಶನಗಳನ್ನು ನೀಡಲಾಗಿದೆ. ರೋಗ ಲಕ್ಷಣವೇ ಇಲ್ಲದವರು ಅಥವಾ ಕಡಿಮೆ ರೋಗಲಕ್ಷಣ ಇರುವವರನ್ನು ಒಬ್ಬ ಸಹಾಯಕರ ನೆರವಿನಲ್ಲಿ ಹೋಂ ಕ್ವಾರಂಟೈನ್‌ಗೆ ಒಳಪಡಿಸಬೇಕು ಎಂದು ಸೂಚಿಸಲಾಗಿದೆ.

‘38 ಡಿಗ್ರಿಗಿಂತ ಕಡಿಮೆ ಜ್ವರ ಹೊಂದಿರುವ ಹಾಗೂ ರಕ್ತದಲ್ಲಿನ ಆಮ್ಲಜನಕದ ಪ್ರಮಾಣ 95ಕ್ಕಿಂತ ಕಡಿಮೆ ಇಲ್ಲದಿದ್ದರೆ ಅಂತಹವರನ್ನು ಹೋಂ ಕ್ವಾರಂಟೈನ್‌ನಲ್ಲಿ ಇರಿಸಬಹುದು. 60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ತೀವ್ರ ಸ್ವರೂಪದ ಕಾಯಿಲೆಗಳನ್ನು ಹೊಂದಿರುವವರನ್ನು ವೈದ್ಯರ ಅಭಿಪ್ರಾಯ ಪಡೆದ ಬಳಿಕವೇ ಹೋಂ ಕ್ವಾರಂಟೈನ್‌ನಲ್ಲಿ ಇಡಬಹುದು. ಹಾಲುಣಿಸುವ ತಾಯಂದಿರನ್ನೂ ವೈದ್ಯರ ಸಲಹೆಯ ಆಧಾರದ ಮೇಲೆ ಹೋಂ ಕ್ವಾರಂಟೈನ್‌ನಲ್ಲಿ ಇರಿಸಬಹುದು’ ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಎರಡು ವಾರಗಳೊಳಗೆ ಹೆರಿಗೆಯಾಗಬಹುದಾದ ಗರ್ಭಿಣಿಯರನ್ನು ಹೋಂ ಕ್ವಾರಂಟೈನ್‌ನಲ್ಲಿ ಇರಿಸುವಂತಿಲ್ಲ. ಮನೆಯಲ್ಲಿ ಹೆಚ್ಚು ಗಾಳಿಯಾಡುವ ಪ್ರತ್ಯೇಕ ಕೊಠಡಿ ಮತ್ತು ಪ್ರತ್ಯೇಕ ಶೌಚಾಲಯ ಹೊಂದಿರುವವರಿಗೆ ಮಾತ್ರವೇ ಹೋಂ ಕ್ವಾರಂಟೈನ್‌ನಲ್ಲಿ ಇರಲು ಸಮ್ಮತಿಸಬಹುದು ಎಂದು ನಿರ್ದೇಶನ ನೀಡಿದ್ದಾರೆ.

ಹೋಂ ಕ್ವಾರಂಟೈನ್ ಆಯ್ಕೆ ಮಾಡಿಕೊಂಡ ವ್ಯಕ್ತಿಯು ನಿಗದಿತ ಅವಧಿಯವರೆಗೂ ಮನೆಯ ಇತರರ ಸಂಪರ್ಕಕ್ಕೆ ಬಾರದೆ ಪ್ರತ್ಯೇಕವಾಸದಲ್ಲಿ ಇರಬೇಕು. ಮನೆಯಲ್ಲಿ ಅಗತ್ಯ ಸೌಲಭ್ಯಗಳನ್ನು ಹೊಂದಿರದ ವ್ಯಕ್ತಿಗಳನ್ನು ಕೋವಿಡ್ ಆರೈಕೆ ಕೇಂದ್ರ ಅಥವಾ ಆಸ್ಪತ್ರೆಗಳಿಗೆ ಸ್ಥಳಾಂತರಿಸಬೇಕು ಎಂದು ಸೂಚಿಸಿದ್ದಾರೆ.

ಮಧ್ಯಮ ಮತ್ತು ತೀವ್ರ ಸ್ವರೂಪದ ರೋಗಲಕ್ಷಣ ಇರುವ ಕೋವಿಡ್ ರೋಗಿಗಳನ್ನು ಮಾತ್ರವೇ ನಿಗದಿತ ಕೋವಿಡ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಬೇಕು. ಕಡಿಮೆ ರೋಗ ಲಕ್ಷಣ ಇರುವವರನ್ನು ಮನೆಯಲ್ಲಿ ಅಥವಾ ಕೋವಿಡ್ ಆರೈಕೆ ಕೇಂದ್ರದಲ್ಲಿ ಇರಿಸಬೇಕು ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೋವಿಡ್ ರೋಗಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲು ಈ ಹಿಂದೆ ಅನುಸರಿಸುತ್ತಿದ್ದ ಕ್ರಮಗಳನ್ನೇ ಪಾಲಿಸಬೇಕು. ರೋಗಿಯೊಬ್ಬರು ಆಸ್ಪತ್ರೆಗೆ ದಾಖಲಾದ ದಿನವನ್ನು ಆಧರಿಸಿ ಬಿಡುಗಡೆಗೆ ನಿರ್ಧಾರ ಕೈಗೊಳ್ಳಬಾರದು. ಅವರಿಗೆ ರೋಗಲಕ್ಷಣ ಕಾಣಿಸಿಕೊಂಡ ದಿನವನ್ನು ಆಧರಿಸಿ ಆಸ್ಪತ್ರೆಯಿಂದ ಬಿಡುಗಡೆ ಮಾಡಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ಮೂರು ದಿನಗಳಿಂದ ಸತತವಾಗಿ ಜ್ವರ ಮತ್ತು ಇತರ ರೋಗಲಕ್ಷಣ ಇಲ್ಲದೇ ಇರುವವರು ಹಾಗೂ ನಾಲ್ಕು ದಿನಗಳಿಂದ ಸತತವಾಗಿ 95ರಷ್ಟು ರಕ್ತದ ಆಮ್ಲಜನಕದ ಪ್ರಮಾಣಟ ಹೊಂದಿದ್ದರೆ ಅಂತಹವರನ್ನು ಆಸ್ಪತ್ರೆಯಿಂದ ಕೋವಿಡ್ ಆರೈಕೆ ಕೇಂದ್ರಗಳಿಗೆ ಸ್ಥಳಾಂತರಿಸಬಹುದು ಎಂದು ಸೂಚಿಸಲಾಗಿದೆ.

ಕೋವಿಡ್– ಬಿಜೆಪಿ ಸಮನ್ವಯ ಸಮಿತಿ ರಚನೆ: ಕೋವಿಡ್ ನಿರ್ವಹಣೆಯ ಸಂಬಂಧ ಬಿಜೆಪಿಯ ರಾಜ್ಯ ಘಟಕ ಸಮನ್ವಯ ಸಮಿತಿರಚಿಸಿದೆ.

ಎನ್. ರವಿಕುಮಾರ್, ಕೇಶವಪ್ರಸಾದ್, ಚಂದ್ರಶೇಖರ್ ಕವಟಗಿ ಮತ್ತು ಅಮರನಾಥ ಪಾಟೀಲ ಸಮಿತಿಯಲ್ಲಿ ಇದ್ದಾರೆ.

ಬೆಂಗಳೂರಿನ ಮೇದಿ ಅಗ್ರಹಾರದದಲ್ಲಿ ಇರುವ ಚಿತಾಗಾರದ ಎದುರು ಶವಗಳನ್ನು ತಂದ ಆಂಬುಲೆನ್ಸ್‌ಗಳು ಮಂಗಳವಾರ ಸಾಲುಗಟ್ಟಿರುವುದು –ಪ್ರಜಾವಾಣಿ ಚಿತ್ರ

ಲಾಕ್‌ಡೌನ್ ಅನಿವಾರ್ಯ: ಎಚ್‌ಡಿಕೆ



ಕುಮಾರಸ್ವಾಮಿ

ಬೆಂಗಳೂರು: ಕಳೆದ ವರ್ಷ ಕೋವಿಡ್‌ನ ಆರಂಭಿಕ ಹಂತದಲ್ಲಿ ಕೇಂದ್ರ ಸರ್ಕಾರ ಲಾಕ್‌ಡೌನ್ ಘೋಷಿಸಿತ್ತು. ಅದರಿಂದಾಗಿ ಸೋಂಕು ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು. ಈಗಲೂ ಸೋಂಕು ನಿಯಂತ್ರಣಕ್ಕೆ ಲಾಕ್‌ಡೌನ್ ಅನಿವಾರ್ಯ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದರು.

ಸರ್ವಪಕ್ಷಗಳ ಸಭೆಯಲ್ಲಿ ಮಾತನಾಡಿದ ಅವರು, ‘ಈ ಬಗ್ಗೆ ನಾನು ಮಾರ್ಚ್ 15ರಂದೇ ಟ್ವೀಟ್ ಮಾಡಿದ್ದೆ. ಈಗ ಆರ್ಥಿಕತೆಗೆ ಹೊಡೆತ ಬೀಳುತ್ತದೆ ಎಂಬ ಕಾರಣಕ್ಕೆ ಲಾಕ್‌ಡೌನ್‌ಗೆ ಸರ್ಕಾರ ಮುಂದಾಗುತ್ತಿಲ್ಲ. ಆದರೆ, ಇಂತಹ ನಿರ್ಧಾರದಿಂದ ಸರ್ಕಾರ ಅನಾಹುತವನ್ನು ಆಹ್ವಾನಿಸುತ್ತಿದೆ ಎಂಬುದು ನನ್ನ ಅಭಿಪ್ರಾಯ’ ಎಂದರು.

ಕಳೆದ ವರ್ಷ ಲಾಕ್‌ಡೌನ್ ಮಾಡಿದ್ದಾಗ ಸರ್ಕಾರ ಅಥವಾ ಜನರು ಮುಳುಗಿ ಹೋಗಲಿಲ್ಲ. ಈಗ ತಕ್ಷಣವೇ ಲಾಕ್‌ಡೌನ್ ಘೋಷಿಸಬೇಕು. ರಾತ್ರಿ ಕರ್ಫ್ಯೂ ಮೂಲಕ ಸೋಂಕು ನಿಯಂತ್ರಿಸಲು ಸಾಧ್ಯವಿಲ್ಲ. ರಾಜ್ಯ ಸರ್ಕಾರ ದಿವಾಳಿಯಾಗಿಲ್ಲ. ಆರ್ಥಿಕ ಕಾರಣ ನೀಡಿ ಲಾಕ್‌ಡೌನ್‌ನಿಂದ ದೂರ ಉಳಿಯಬಾರದು. ದೊಡ್ಡ ನಗರಗಳಲ್ಲಿ ತಕ್ಷಣವೇ ಲಾಕ್‌ಡೌನ್ ಜಾರಿಗೊಳಿಸಬೇಕು. ಮಹಾರಾಷ್ಟ್ರ ಸೇರಿದಂತೆ ಸೋಂಕು ಹೆಚ್ಚಾಗಿರುವ ರಾಜ್ಯಗಳಿಂದ ಜನರು ರಾಜ್ಯಕ್ಕೆ ಬರದಂತೆ ತಡೆಯಬೇಕು ಎಂದು ಹೇಳಿದರು.

‘ರಾಜ್ಯ ಸರ್ಕಾರವೇ ರಚಿಸಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞ ವೈದ್ಯರು ಕೋವಿಡ್ ಎರಡನೇ ಅಲೆ ವೇಗವಾಗಿ ಹರಡುತ್ತದೆ ಎಂಬುದನ್ನು ನವೆಂಬರ್ ತಿಂಗಳಿನಲ್ಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಗಮನಕ್ಕೆ ತಂದಿದ್ದರು. ನಾವು ಮೈ ಮರೆತೆವೇನೋ ಎಂಬ ನೋವಿದೆ. ಎಲ್ಲಿ ಎಡವಿದ್ದೇವೆ? ಏಕೆ ಈ ರೀತಿಯ ಅನಾಹುತಗಳು ಸಂಭವಿಸುತ್ತಿವೆ? ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಸರ್ಕಾರವೂ ಸೇರಿದಂತೆ ಯಾರನ್ನೂ ದೂಷಿಸುವುದಿಲ್ಲ’ ಎಂದರು.

ಬಡವರಿಗೆ ನೇರವಾಗಿ ಆರ್ಥಿಕ ನೆರವು ಒದಗಿಸುವ ಕೆಲಸ ಮಾಡಬೇಕು. ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ನಿವಾರಿಸಬೇಕು ಎಂದು ಒತ್ತಾಯಿಸಿದರು.

ಪ್ರತೀ ಕೋವಿಡ್ ಸಾವು ಸರ್ಕಾರಿ ಕೊಲೆ: ಎಸ್‌.ಆರ್‌. ಪಾಟೀಲ

ಬೆಂಗಳೂರು: ‘ರಾಜ್ಯದಲ್ಲಿ ಕೊರೊನಾದಿಂದ ಸಂಭವಿಸುತ್ತಿರುವ ಪ್ರತೀ ಸಾವು ಕೂಡ ಸರ್ಕಾರಿ ಪ್ರಾಯೋಜಿತ ಕೊಲೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಆಸ್ಪತ್ರೆಗಳಲ್ಲಿ ರೆಮ್‌ಡಿಸಿವರ್ ಇಲ್ಲ, ಬೆಡ್ ಇಲ್ಲ, ಆ್ಯಕ್ಸಿಜನ್ ಇಲ್ಲ, ವೆಂಟಿಲೇಟರ್ ಇಲ್ಲ, ವ್ಯಾಕ್ಸಿನ್ ಕೊರತೆಯ ಸ್ಥಿತಿ ನಿರ್ಮಾಣವಾಗಿದೆ. ಜನರಿಗೆ ಕನಿಷ್ಠ ಚಿಕಿತ್ಸೆಯನ್ನೂ ನೀಡಲಾಗದ ಈ ಸರ್ಕಾರ ಯಾವ ಪುರುಷಾರ್ಥಕ್ಕೆ ಬೇಕು’ ಎಂದು ಪ್ರಶ್ನಿಸಿದ್ದಾರೆ.

‘ಮೇ ತಿಂಗಳ ಅಂತ್ಯದ ವೇಳೆಗೆ ಕೊರೊನಾ ವೈರಾಣು ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಬೆಂಗಳೂರಿನಲ್ಲಿ ಪರಿಸ್ಥಿತಿ ಕೈಮೀರಿದೆ. ಮುಂದೆ ಭೀಕರ ಪರಿಸ್ಥಿತಿ ಎದುರಿಸಲು ಸಜ್ಜಾಗಬೇಕಾದ ಸರ್ಕಾರ ಆಸ್ಪತ್ರೆಗಳಲ್ಲಿ ಬೆಡ್ ಹೆಚ್ಚಳ, ಆ್ಯಕ್ಸಿಜನ್, ವೆಂಟಿಲೇಟರ್ ವ್ಯವಸ್ಥೆ ಮಾಡದೇ ಜನರ ಜೀವದ ಜತೆ ಚೆಲ್ಲಾಟವಾಡುತ್ತಿದೆ’ ಎಂದಿದ್ದಾರೆ.

ತಜ್ಞರ ವರದಿ ನಿರ್ಲಕ್ಷ್ಯವೇ ದೊಡ್ಡ ಅಪರಾಧ: ಸಿದ್ದರಾಮಯ್ಯ

ಸಿದ್ದರಾಮಯ್ಯ

ಬೆಂಗಳೂರು: ಸರ್ಕಾರವೇ ರಚಿಸಿರುವ ತಾಂತ್ರಿಕ ಸಲಹಾ ಸಮಿತಿ ಕೊರೊನಾ ಎರಡನೇ ಅಲೆಯ ಬಗ್ಗೆ ನವೆಂಬರ್‌ನಿಂದೀಚೆಗೆ ಮೂರು ವರದಿ ನೀಡಿದೆ. ಆಗಲೇ ಸರ್ಕಾರ ಎಚ್ಚರ ವಹಿಸಬೇಕಿತ್ತು. ಅದರ ಬದಲು ತಜ್ಞರ ವರದಿಯನ್ನೇ ನಿರ್ಲಕ್ಷ್ಯ ಮಾಡಿರುವುದು ಸರ್ಕಾರದ ದೊಡ್ಡ ಅಪರಾಧ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸರ್ವಪಕ್ಷ ಸಭೆಯ ಆರಂಭದಲ್ಲೇ ರಾಜ್ಯಪಾಲರು ಸಭೆ ಕರೆದಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದ ಅವರು, ‘ರಾಜ್ಯಪಾಲರು ಸರ್ವಪಕ್ಷ ಸಭೆ ಕರೆದಿರುವುದೇ ಸಂವಿಧಾನಬಾಹಿರ. ರಾಜ್ಯದ ಆಡಳಿತದಲ್ಲಿ ರಾಜ್ಯಪಾಲರಿಗೆ ಹಸ್ತಕ್ಷೇಪ ಮಾಡುವ ಅಧಿಕಾರ ಸಂವಿಧಾನದಲ್ಲಿ ಕೊಟ್ಟಿಲ್ಲ. ಹೀಗಾಗಿ, ಈ ಸಭೆಗೆ ನನ್ನ ಸಂವಿಧಾನಾತ್ಮಕವಾದ ತಕರಾರು ಇದೆ’ ಎಂದರು.

‘ಯಡಿಯೂರಪ್ಪ ಅವರು ಈ ಸಭೆಯ ಬಗ್ಗೆ ಅವರ ವಕೀಲರು, ಅಡ್ವೊಕೇಟ್ ಜನರಲ್ ಅವರಿಂದ ಅಭಿಪ್ರಾಯ ಪಡೆದಿದ್ದಾರೊ ಗೊತ್ತಿಲ್ಲ. ಈ ಸಭೆಯ ಅಭಿಪ್ರಾಯಗಳ ಆಧಾರದಲ್ಲಿ ರಾಜ್ಯಪಾಲರು ತೀರ್ಮಾನ ತೆಗೆದುಕೊಳ್ಳಲು ಸಾಧ್ಯ ಇಲ್ಲ. ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳಬೇಕು. ಆದರೂ ರಾಜ್ಯಪಾಲರು ಇಂಥ ಸಭೆ ಕರೆದಿರುವುದರಿಂದದ ಅವರಿಗೆ ಗೌರವ ಕೊಡುವ ದೃಷ್ಟಿಯಿಂದ ಭಾಗವಹಿಸಿದ್ದೇನೆ’ ಎಂದರು.

‘ಕೋವಿಡ್ ಎರಡನೇ ಅಲೆಯ ಬರುವ ಬಗ್ಗೆ ಮುಖ್ಯಮಂತ್ರಿಗೆ ಮಾಹಿತಿ ಇದ್ದರೂ ಇಲ್ಲಿಯವರೆಗೆ ಸರ್ವಪಕ್ಷ ಸಭೆ ಕರೆಯದೇ ಇದ್ದುದು ತಪ್ಪು’ ಎಂದು ಅವರು ಹೇಳಿದರು.

ರಾಜ್ಯಪಾಲರಿಂದ ಸಭೆ: ಸರ್ಕಾರದ ವೈಫಲ್ಯವೇ?



ಎಚ್.ವಿಶ್ವನಾಥ್

ಮೈಸೂರು: ‘ಕೋವಿಡ್‌ನಿಂದ ಸತ್ತವರನ್ನು ಕೇಳುವವರಿಲ್ಲ. ಹೂಳಲು ಜಾಗವಿಲ್ಲ. ಆಸ್ಪತ್ರೆಗಳಲ್ಲಿ ಬೆಡ್, ವೆಂಟಿಲೇಟರ್‌ಗಳಿಲ್ಲ. ಈ ಸರ್ಕಾರಕ್ಕೆ ಹೇಳೋರಿಲ್ಲ, ಕೇಳೋರಿಲ್ಲ ಎನ್ನುವಂತಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಇಲ್ಲಿ ವಾಗ್ದಾಳಿ ನಡೆಸಿದರು.

‘ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. ನಾನು ಆಡಳಿತ ಪಕ್ಷದಲ್ಲಿದ್ದೇನೆ ನಿಜ. ಆದರೆ, ಇದನ್ನೆಲ್ಲ ಹೇಳದೇ ಇದ್ದರೆ, ನನಗೆ ನಾನೇ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ’ ಎಂದರು.

‘ಯಾವ ಮಂತ್ರಿಗೂ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿ ಕೊಟ್ಟಿಲ್ಲ. ಪ್ರತಿ ಕೆಲಸಕ್ಕೂ ಅವರ ಬಳಿಯೇ ಹೋಗಬೇಕಾದ ಸ್ಥಿತಿ ಇದೆ. ಯಾವ ಐಎಎಸ್ ಅಧಿಕಾರಿಯೂ ಮಂತ್ರಿಗಳ ಮಾತು ಕೇಳುತ್ತಿಲ್ಲ. ಸಚಿವರಲ್ಲಿ ಏನನ್ನಾದರೂ ಕೇಳಿದರೆ, ಮುಖ್ಯಮಂತ್ರಿ ಬಂದು ತೀರ್ಮಾನ ತೆಗೆದುಕೊಳ್ಳುವರು ಎನ್ನುವರು. ಹಾಗಾದಲ್ಲಿ ಸಚಿವ ಸಂಪುಟ ಏಕಿರಬೇಕು, ಸಚಿವರೆಲ್ಲ ಏನು ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

‘ಕೋವಿಡ್‌ಗೆ ಸಂಬಂಧಿಸಿ ರಾಜ್ಯಪಾಲರು ಸಭೆ ನಡೆಸುತ್ತಿದ್ದಾರೆ ಎಂಬುದು ಮಾಧ್ಯಮಗಳಿಂದ ಗೊತ್ತಾಯಿತು. ಚುನಾಯಿತ ಸರ್ಕಾರ ವಿಫಲವಾದರೆ ಮಾತ್ರ ರಾಜ್ಯಪಾಲರು ಮಧ್ಯಪ್ರವೇಶಿಸುವರು. ಹಾಗಾದಲ್ಲಿ ಕೊರೊನಾ ಹಿಮ್ಮೆಟ್ಟಿಸುವಲ್ಲಿ ಸರ್ಕಾರ ವಿಫಲವಾಗಿದೆಯೇ’ ಎಂದು ಅವರು ಕೇಳಿದರು.

ರಜೆ ತಾರತಮ್ಯ: ಪ್ರೌಢಶಾಲಾ ಶಿಕ್ಷಕರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಮೊದಲ ಬಾರಿಗೆ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ ಶಿಕ್ಷಕರಿಗೆ ಬೇರೆ ಅವಧಿಯಲ್ಲಿ ಬೇಸಿಗೆ ರಜೆ ಘೋಷಿಸಲಾಗಿದೆ. ರಾಜ್ಯ ಸರ್ಕಾರದ ಈ ನಡೆ, ಪ್ರೌಢಶಾಲಾ ಶಿಕ್ಷಕರ ಅಸಮಾಧಾನಕ್ಕೆ ಕಾರಣವಾಗಿದೆ.

ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಮೇ 1ರಿಂದ ಜೂನ್ 14ರವರೆಗೆ ಹಾಗೂ ಪ್ರೌಢ ಶಾಲೆಗಳ ಶಿಕ್ಷಕರಿಗೆ ಜೂನ್ 15ರಿಂದ ಜುಲೈ 14ರವರೆಗೆ ಬೇಸಿಗೆ ರಜೆ ಘೋಷಿಸಲಾಗಿದೆ.

‘ಬೇಸಿಗೆ ರಜೆ ನೀಡುವ ವಿಷಯದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಾರತಮ್ಯ ಮಾಡಿದ್ದಾರೆ. ಹಿಂದೆಂದೂ ಈ ರೀತಿ ಆಗಿರಲಿಲ್ಲ. ಈ ವಿಚಾರವನ್ನು ಸರ್ಕಾರ ಮರುಪರಿಶೀಲಿಸಿ, ಮಾರ್ಗಸೂಚಿ ಬದಲಿಸಬೇಕು’ ಎಂದು ಪ್ರೌಢ ಶಾಲೆಯ ಶಿಕ್ಷಕರು ಆಗ್ರಹಿಸಿದ್ದಾರೆ.

’ಇಲ್ಲಿಯವರೆಗೆ ಒಂದೇ ರೀತಿ ಇತ್ತು. ಈ ಬಾರಿಯೂ ಕೋವಿಡ್ ಜೊತೆಗೆ ಬಿಸಿಲಿನ ಸಮಸ್ಯೆ ಇದೆ. ಸದ್ಯ ನಿಗದಿಪಡಿಸಿರುವಂತೆ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಜೂನ್ 21ರಿಂದ ಆರಂಭಗೊಂಡು ಜುಲೈ 5ರವರೆಗೆ ನಡೆಯಲಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ಸಂದರ್ಭದಲ್ಲಿ ಎಲ್ಲ ಆರೂ ವಿಷಯಗಳ ಶಿಕ್ಷಕರೂ ಶಾಲೆಗಳಲ್ಲಿ ಹಾಜರಿರಬೇಕಾಗುತ್ತದೆ. ಬಳಿಕ ಮೌಲ್ಯಮಾಪನದಲ್ಲಿ ಭಾಗವಹಿಸಬೇಕು. ಪರೀಕ್ಷೆ ಮತ್ತು ಮೌಲ್ಯಮಾಪನ ಕೆಲಸದಲ್ಲಿಯೇ ಬೇಸಿಗೆ ರಜೆ ಮುಗಿದು ಹೋಗುತ್ತದೆ. ಇದರಿಂದ ನಮಗೆ ಅನ್ಯಾಯವಾಗುತ್ತದೆ’ ಎನ್ನುವುದು ಪ್ರೌಢ ಶಿಕ್ಷಕರ ಆಕ್ಷೇಪ.

ದಾರಿತಪ್ಪಿಸಿದ ಅಧಿಕಾರಿಗಳು- ಶಹಾಪೂರ: ‘ಬೇಸಿಗೆ ರಜೆ ಘೋಷಿಸುವ ವಿಷಯದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ರೀತಿ ಸರ್ಕಾರವನ್ನು ದಾರಿತಪ್ಪಿಸುವ ಕೆಲಸ ಮಾಡಿದ್ದಾರೆ’ ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಅರುಣ್ ಶಹಾಪೂರ ಹೇಳಿದ್ದಾರೆ.

ರಜೆಯ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ‘ಸರ್ಕಾರ ಈ ತಾರತಮ್ಯವನ್ನು ಕೂಡಲೇ ಸರಿಪಡಿಸಬೇಕು. ಶಿಕ್ಷಣ ಮತ್ತು ಶಿಕ್ಷಕರಿಗೆ ಸಮಸ್ಯೆ ಆಗದಂತೆ ಈ ಗೊಂದಲವನ್ನು ಪರಿಹರಿಸಬೇಕು’ ಎಂದು ಒತ್ತಾಯಿಸಿದರು.

ವಿಟಿಯು ಪರೀಕ್ಷೆ ರದ್ದು ಇಲ್ಲ

ಪ್ರಜಾವಾಣಿ ವಾರ್ತೆ

ರಾಮನಗರ: ‘ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೊದಲ ಸೆಮಿಸ್ಟರ್ ಎಂಜಿನಿಯರಿಂಗ್ ಪರೀಕ್ಷೆಗಳನ್ನು ರದ್ದು ಮಾಡುವ ಪ್ರಶ್ನೆಯೇ ಇಲ್ಲ’ ಎಂದು ಉನ್ನತಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

‘ವಿಶ್ವವಿದ್ಯಾಲಯದ ಬಹುತೇಕ ಸೆಮಿಸ್ಟರ್ ಪರೀಕ್ಷೆಗಳು ಈಗಾಗಲೇ ಮುಗಿದಿದ್ದು, ಇದೊಂದು ಮಾತ್ರ ಬಾಕಿ ಇದೆ. ಪರೀಕ್ಷೆ ರದ್ದುಗೊಳಿಸಿದರೆ ವಿದ್ಯಾರ್ಥಿಗಳ ಮೂರ್ನಾಲ್ಕು ತಿಂಗಳ ಶ್ರಮ ವ್ಯರ್ಥ ಆಗುತ್ತದೆ. ಮೊದಲ ಸೆಮಿಸ್ಟರ್‌ನಲ್ಲಿ ಪರೀಕ್ಷೆ ಬರೆಯಲು ಆಗದ ವಿದ್ಯಾರ್ಥಿಗಳಿಗೆ ಮುಂದಿನ ಸೆಮಿಸ್ಟರ್‌ಗೆ ಅವಕಾಶ ನೀಡಲಾಗುವುದು’ ಎಂದು ಭರವಸೆ ನೀಡಿದರು.

ಕೋವಿಡ್: 21,794 ಮಂದಿಗೆ ಸೋಂಕು, 149 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಮಂಗಳವಾರ 21,794 ಮಂದಿ ಸೋಂಕಿತರಾಗಿರುವುದು ಹಾಗೂ 149 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಕೋವಿಡ್ ವೇಗವಾಗಿ ವ್ಯಾಪಿಸಿಕೊಳ್ಳುತ್ತಿರುವ ಪರಿಣಾಮ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಒಂದು ದಿನದ ಅವಧಿಯಲ್ಲಿ 1.47 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 14.77ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.68ಕ್ಕೆ ತಲುಪಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, 23 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ 13,782 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ತುಮಕೂರಿನಲ್ಲಿ ಕೂಡ ಏರಿಕೆ ಕಂಡಿದ್ದು, ಅಲ್ಲಿ 1,055 ಮಂದಿ ಸೋಂಕಿತರಾಗಿದ್ದಾರೆ. ಕಲಬುರ್ಗಿ (818), ಮೈಸೂರು (699), ದಕ್ಷಿಣ ಕನ್ನಡ (482), ಹಾಸನ (410), ಬಳ್ಳಾರಿ (406) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಸಂಖ್ಯೆ 12 ಲಕ್ಷ (11.98 ಲಕ್ಷ) ಸಮೀಪಿಸಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 92 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರದಲ್ಲಿ 13 ಮಂದಿ, ಬೀದರ್‌ನಲ್ಲಿ ಏಳು ಮಂದಿ, ಬಳ್ಳಾರಿಯಲ್ಲಿ ಐವರು, ತುಮಕೂರು, ಮೈಸೂರು ಹಾಗೂ ಧಾರವಾಡದಲ್ಲಿ ತಲಾ ನಾಲ್ಕು ಮಂದಿ, ಶಿವಮೊಗ್ಗದಲ್ಲಿ ಇಬ್ಬರು, ಯಾದಗಿರಿ, ಉಡುಪಿ, ರಾಮನಗರ, ರಾಯಚೂರು, ಕೋಲಾರ, ಕೊಡಗು, ಚಿಕ್ಕಮಗಳೂರು ಹಾಗೂ ಚಾಮರಾಜನಗರದಲ್ಲಿ ತಲಾ ಒಬ್ಬರು ಮರಣ ಹೊಂದಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 13,646ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.59 ಲಕ್ಷ ದಾಟಿದೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಸದ್ಯ 751 ಮಂದಿ ಐಸಿಯುನಲ್ಲಿದ್ದಾರೆ. ಕೋವಿಡ್ ಪೀಡಿತರಲ್ಲಿ 4,571 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10.25 ಲಕ್ಷಕ್ಕೆ ಏರಿಕೆಯಾಗಿದೆ.

ಇಬ್ಬರು ಶಾಸಕರಿಗೆ ಕೋವಿಡ್ ದೃಢ

ಮುದ್ದೇಬಿಹಾಳ (ವಿಜಯಪುರ): ಶಾಸಕ ಹಾಗೂ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಹಾಗೂ ಅವರ ತಂದೆ ಸಂಗನಗೌಡ ಪಾಟೀಲ ಅವರಿಗೆ ಮಂಗಳವಾರ ಕೋವಿಡ್ ದೃಢ ಪಟ್ಟಿದೆ.

ಸೋಂಕಿನ ಲಕ್ಷಣಗಳು ಇಲ್ಲದೇ ಇರುವುದರಿಂದ ಹೋಂ ಐಸೋಲೇಶನ್‌ಗೆ ಒಳಗಾಗಲು ವಿಜಯಪುರದ ಜಿಲ್ಲಾ ಆಸ್ಪತ್ರೆ ವೈದ್ಯರು ಸಲಹೆ ನೀಡಿದ್ದಾರೆ. ಹೀಗಾಗಿ ಇಲ್ಲಿನ ತಮ್ಮ ನಿವಾಸಕ್ಕೆ ಶಾಸಕರು ಮರಳಿದ್ದಾರೆ.

ಮುನ್ನೆಚ್ಚರಿಕೆಯಾಗಿ 15 ದಿನ ಅವರ ಗೃಹ ಕಚೇರಿ ಸಂಪೂರ್ಣ ಬಂದ್ ಆಗಲಿದೆ’ ಎಂದು ಶಾಸಕರ ಆಪ್ತರು ತಿಳಿಸಿದ್ದಾರೆ.

ಅಜಯಸಿಂಗ್‌ಗೆ ಕೋವಿಡ್ (ಕಲಬುರ್ಗಿ ವರದಿ): ಜೇವರ್ಗಿ ಶಾಸಕ ಡಾ. ಅಜಯಸಿಂಗ್ ಅವರಿಗೆ ಕೋವಿಡ್ ದೃಢಪಟ್ಟಿದೆ. ಅವರು ಬೆಂಗಳೂರಿನ ಮನೆಯಲ್ಲಿ ಪ್ರತ್ಯೇಕವಾಗಿದ್ದಾರೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

ಅತ್ಯಾಚಾರ ಪ್ರಕರಣ: ರಮೇಶ ಜಾರಕಿಹೊಳಿ ಪುನಃ ಗೈರು

ಬೆಂಗಳೂರು: ಅತ್ಯಾಚಾರದ ಆರೋಪ ಎದುರಿಸುತ್ತಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು, ಕೊರೊನಾ ಸೋಂಕಿನ ಕಾರಣ ನೀಡಿ ವಿಚಾರಣೆಗೆ ಗೈರಾದರು.

ಕಬ್ಬನ್ ಪಾರ್ಕ್ ಠಾಣೆಯಲ್ಲಿ ಸಂತ್ರಸ್ತೆ ದಾಖಲಿಸಿದ್ದ ಅತ್ಯಾಚಾರ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖಾಧಿಕಾರಿ ಎಂ.ಸಿ. ಕವಿತಾ, ‘ಬೆಂಗಳೂರು ಆಡುಗೋಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಮಂಗಳವಾರ (ಏಪ್ರಿಲ್ 20) ಸಂಜೆ ಹಾಜರಾಗಿ’ ಎಂದು ರಮೇಶ ಜಾರಕಿಹೊಳಿ ಅವರಿಗೆ ನೋಟಿಸ್ ನೀಡಿದ್ದರು.

ಆರೋಪಿ ವಿಚಾರಣೆಗೆ ಬರಬಹುದೆಂದು ತನಿಖಾಧಿಕಾರಿ ನೇತೃತ್ವದ ತಂಡ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ರಮೇಶ ಜಾರಕಿಹೊಳಿ ನಿಗದಿತ ಸಮಯಕ್ಕೆ ವಿಚಾರಣೆಗೆ ಹಾಜರಾಗಲಿಲ್ಲ.

ಎಸ್‌ಐಟಿ ನೀಡಿದ್ದ ನೋಟಿಸ್‌ಗೆ ಪ್ರತಿಯಾಗಿ ಪತ್ರವೊಂದನ್ನು ಕಳುಹಿಸಿರುವ ರಮೇಶ ಜಾರಕಿಹೊಳಿ, ‘ಕೊರೊನಾ ಸೋಂಕು ತಗುಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದೇನೆ. ಹೋಮ್ ಐಸೋಲೇಷನ್‌ನಲ್ಲಿ ಇರುವಂತೆ ವೈದ್ಯರು ಸೂಚಿಸಿದ್ದಾರೆ. ಅದನ್ನು ಪಾಲಿಸುತ್ತಿದ್ದೇನೆ. ಅದೇ ಕಾರಣಕ್ಕೆ ವಿಚಾರಣೆಗೆ ಬರಲು ಆಗುತ್ತಿಲ್ಲ. ಸ್ವಲ್ಪ ಕಾಲಾವಕಾಶ ನೀಡಿ’ ಎಂದಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಎಸ್‌ಐಟಿ ಮೂಲಗಳು, ‘ಗೋಕಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ರಮೇಶ ಜಾರಕಿಹೊಳಿ ಮನೆಗೆ ಹೋಗಿದ್ದಾರೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದರಿಂದ ನೋಟಿಸ್ ನೀಡಲಾಗಿತ್ತು. ಆದರೆ, ಅವರು ಬಂದಿಲ್ಲ. ಪತ್ರ ಕಳುಹಿಸಿದ್ದಾರೆ. ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದಿವೆ.

‘ಪ್ರಕರಣದ ಸಂತ್ರಸ್ತೆ ನ್ಯಾಯಾಲಯದಲ್ಲೇ ಹೇಳಿಕೆ ದಾಖಲಿಸಿದ್ದಾರೆ. ಅವರ ವೈದ್ಯಕೀಯ ಪರೀಕ್ಷೆ ಹಾಗೂ ಮಹಜರು ಸಹ ಮುಗಿಸಲಾಗಿದೆ. ಆರೋಪಿಯೂ ಆಗಿರುವ ರಮೇಶ ಜಾರಕಿಹೊಳಿ ವಿಚಾರಣೆ ನಡೆಸಿ ಮಾಹಿತಿ ಕಲೆಹಾಕಬೇಕಿದೆ. ಅದಕ್ಕಾಗಿ ಕಾಯುತ್ತಿದ್ದೇವೆ’ ಎಂದೂ ಮೂಲಗಳು ತಿಳಿಸಿವೆ.

ರಾತ್ರಿ ಕರ್ಫ್ಯೂ: ವಾರಾಂತ್ಯ ಬಂದ್

ಒಂದನೇ ಪುಟದಿಂದ

- ಹೋಟೆಲ್ ಮತ್ತು ರೆಸ್ಟೊರೆಂಟ್‌ಗಳಲ್ಲಿ ಪಾರ್ಸೆಲ್ ಮಾತ್ರ ಒಯ್ಯಲು ಅವಕಾಶ ಇದೆ.
- ಮದುವೆ ಸಮಾರಂಭಕ್ಕೆ 50ಕ್ಕೆ ಜನರಿಗೆ ಮಿತಿ. ಶವ ಸಂಸ್ಕಾರ, ಅಂತಿಮ ದರ್ಶನಕ್ಕೆ 20 ಜನರಿಗಷ್ಟೇ ಅವಕಾಶ.

ನಿರ್ಮಾಣ ಚಟುವಟಿಕೆಗಳು:

- ಎಲ್ಲ ರೀತಿಯ ನಿರ್ಮಾಣ ಚಟುವಟಿಕೆಗಳು, ರಿಪೇರಿ ಚಟುವಟಿಕೆಗಳಿಗೆ ಅವಕಾಶ ಇದೆ. ಮುಂಗಾರು ಪೂರ್ವ ಕಾಮಗಾರಿಗಳನ್ನು ನಡೆಸಬಹುದು. ಆದರೆ, ಇವುಗಳಿಗೆ ಅನುಮತಿ ಪಡೆದು ಕೋವಿಡ್ ನಿಯಮ ಪಾಲಿಸಿ ಚಟುವಟಿಕೆ ನಡೆಸಬಹುದು.

ಕೈಗಾರಿಕೆಗಳಿಗೆ ಅವಕಾಶ:

- ಎಲ್ಲ ಕೈಗಾರಿಕೆಗಳು, ಉತ್ಪಾದನಾ ಘಟಕಗಳನ್ನು ಕೋವಿಡ್ ನಿಯಮ ಪಾಲಿಸಿ ನಡೆಸಬಹುದು. ಕಾರ್ಮಿಕರು ಮತ್ತು ಸಿಬ್ಬಂದಿಯನ್ನು ಸಾಗಣೆ ಮಾಡಲು ಕೆಲಸದ ಸ್ಥಳದ ಗುರುತಿನ ಚೀಟಿ ಇರುವುದು ಅಗತ್ಯ.

ವಾಣಿಜ್ಯ ಚಟುವಟಿಕೆಗಳು:

- ಕಿರಾಣಿ ಅಂಗಡಿ, ನ್ಯಾಯ ಬೆಲೆ ಅಂಗಡಿ, ಆಹಾರ ಪದಾರ್ಥಗಳು, ಹಣ್ಣು, ತರಕಾರಿ, ಡೇರಿ, ಹಾಲು ಮತ್ತು ಇತರ ಉತ್ಪನ್ನಗಳು, ಮೀನು–ಮಾಂಸ, ಪ್ರಾಣಿಗಳ ಆಹಾರಗಳ ಮಾರಾಟಕ್ಕೆ ಅವಕಾಶ ಇದೆ.
- ಹೂವು, ಹಣ್ಣು, ತರಕಾರಿ ಸಗಟು ಮಾರುಕಟ್ಟೆಗಳನ್ನು ಏ.23 ರ ಬಳಿಕ ಮುಕ್ತ ಪ್ರದೇಶ ಅಥವಾ ಮೈದಾನಗಳಿಗೆ ಸ್ಥಳಾಂತರ.
- ಲಾಡ್ಜ್ ಮತ್ತು ಹೋಟೆಲ್‌ಗಳಲ್ಲಿ ಉಳಿದುಕೊಂಡ ಅತಿಥಿಗಳಿಗೆ ಆಹಾರ ಪೂರೈಕೆ ಮಾಡಬಹುದು
- ಸಲೂನು, ಬ್ಯೂಟಿ ಪಾರ್ಲರ್‌ಗಳು ಕೋವಿಡ್ ನಿಯಮ ಪಾಲಿಸಿ ಕಾರ್ಯಾಚರಣೆ ನಡೆಸಬಹುದು.
- ಬಸ್ ಮತ್ತು ರೈಲು ಓಡಾಟಕ್ಕೆ ಅವಕಾಶ. ಖಾಸಗಿ ವಾಹನಗಳಲ್ಲಿ ಅನಗತ್ಯ ಓಡಾಡುವುದಕ್ಕೆ ನಿರ್ಬಂಧ.
- ಪೆಟ್ರೋಲ್ ಬಂಕ್, ಗ್ಯಾಸ್ ಸೇವೆಗಳಿಗೆ ಅವಕಾಶ.
- ಆರೋಗ್ಯ ಮತ್ತು ಅದಕ್ಕೆ ಸಂಬಂಧಿಸಿದಎಲ್ಲ ಚಟುವಟಿಕೆ ನಡೆಬಹುದು. ಆಸ್ಪತ್ರೆ, ಪ್ರಯೋಗಾಲಯ ಇತ್ಯಾದಿ ತೆರೆಯಬಹುದು.

ಸರ್ಕಾರಿ ಮತ್ತು ಇತರ ಸಿಬ್ಬಂದಿಗಳು:

- ಐಟಿ–ಬಿಟಿ ಮತ್ತು ಖಾಸಗಿ ಕಂಪನಿಗಳ ಉದ್ಯೋಗಿಗಳು ಮನೆಯಿಂದ ಕೆಲಸ ಮಾಡಲು ಅವಕಾಶ
- ಸರ್ಕಾರಿ ಕಚೇರಿಗಳಲ್ಲಿ ಶೇ 50ರಷ್ಟು ಕಚೇರಿಯಿಂದ ಉಳಿದ ಶೇ 50 ರಷ್ಟು ಸಿಬ್ಬಂದಿಯನ್ನು ಕೋವಿಡ್ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗುವುದು.

ಅತಿ ಕಠಿಣ ಕ್ರಮ ತೆಗೆದುಕೊಳ್ಳಿ: ರಾಜ್ಯಪಾಲ ವಜುಭಾಯಿ ವಾಲಾ

‘ನಮಗೆ ಬೇಕಿರುವುದು ಆರೋಗ್ಯಪೂರ್ಣ ಕರ್ನಾಟಕ. ಆದ್ದರಿಂದ ಜನರ ಜೀವ ಮತ್ತು ಆರೋಗ್ಯ ಉಳಿಸಲು ಕಠಿಣ ಕ್ರಮ ತೆಗೆದುಕೊಳ್ಳಿ’ ಎಂದು ರಾಜ್ಯಪಾಲ ವಜುಭಾಯಿ ವಾಲಾ ಸಲಹೆ ನೀಡಿದರು.

‘ಇದಕ್ಕಾಗಿ ಅಗತ್ಯವಿದ್ದರೆ ಲಾಕ್‌ಡೌನ್ ಸೇರಿದಂತೆ ಯಾವುದೇ ಕಠಿಣ ಕ್ರಮ ತೆಗೆದುಕೊಳ್ಳಿ. ಜನ ಹಸಿವಿನಿಂದ ಸಾಯುವುದಿಲ್ಲ ಎಂಬ ವಿಶ್ವಾಸವಿದೆ. ಕಾರ್ಮಿಕರು, ಬಡವರ ಬಗ್ಗೆ ಕಾಳಜಿ ವಹಿಸಿ. ಲಾಕ್‌ಡೌನ್ ಆದರೆ ಜನ ಭಯ ಪಡಬಾರದು. ಜನ ಸಹಕಾರ ನೀಡಬೇಕು. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ಸೂಕ್ತ ನಿರ್ಣಯ ಕೈಗೊಳ್ಳಬೇಕು’ ಎಂದರು.

1ರಿಂದ 9: ಎಲ್ಲರೂ ಪಾಸ್

ಒಂದನೇ ಪುಟದಿಂದ

6ರಿಂದ 9ನೇ ತರಗತಿಗಳಿಗೆ ವಿದ್ಯಾಗಮ ಮತ್ತು ಶಾಲೆಗಳಲ್ಲಿ ತರಗತಿಗಳು ನಡೆದಿವೆ. ಅಲ್ಲದೆ, ಈ ತರಗತಿಯ ವಿದ್ಯಾರ್ಥಿಗಳು ಚಂದನವಾಹಿನಿಯ ಸಂವೇದ, ಇ-ಕಲಿಕಾ, ಆನ್‌ಲೈನ್ ಸೇರಿದಂತೆ ವಿವಿಧ ಪ್ರಕಾರದಲ್ಲಿ ಪಾಠ ಆಲಿಸಿದ್ದಾರೆ. ಅವರಿಗೆ ರೂಪಣಾತ್ಮಕ ಮೌಲ್ಯಮಾಪನ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ನಿರ್ವಹಿಸಿದ ದಾಖಲೆ ಆಧರಿಸಿ, ಪಡೆದ ಅಂಕಗಳನ್ನು 100ಕ್ಕೆ ವೃದ್ಧಿಸಿ ಶ್ರೇಣಿ ನಮೂದಿಸಿ ಮುಂದಿನ ತರಗತಿಗಳಿಗೆ ಬಡ್ತಿ ನೀಡಲಾಗುವುದು ಎಂದೂ ಮಾರ್ಗಸೂಚಿಯಲ್ಲಿದೆ.

‘ಸೇತು-ಬಂಧ’: 2021-22ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಆರಂಭವಾದ ನಂತರ, ಈ ಮಕ್ಕಳಿಗೆ ಕಳೆದ ಸಾಲಿನ ಕಲಿಕಾ ಸಾಮರ್ಥ್ಯಗಳ ಬಗ್ಗೆ ಪೂರ್ವ ಪರೀಕ್ಷೆ ನಡೆಸಿ, ಕಲಿಕಾ ಕೊರತೆ ಗುರುತಿಸಲಾಗುವುದು. ಈ ಕೊರತೆಗಳು ಹಾಗೂ ಹಿಂದಿನ ವರ್ಷ ಪಟ್ಟಿ ಮಾಡಿ ಇಟ್ಟುಕೊಂಡಿದ್ದ ಕಲಿಕಾ ಕೊರತೆಗಳನ್ನು ಆಧರಿಸಿ ಪ್ರತಿ ಮಗುವಿಗೆ ನಿರ್ದಿಷ್ಟ ತಂತ್ರಗಳನ್ನು ರೂಪಿಸಿ ‘ಸೇತು ಬಂಧ’ ಮೂಲಕ ಪರಿಹಾರ ಬೋಧನೆ ನಡೆಸಲಾಗುವುದು. ನಂತರ ಸಾಫಲ್ಯ ಪರೀಕ್ಷೆ ನಡೆಸಿ ಮಕ್ಕಳಲ್ಲಿ ಕಲಿಕೆ ಆಗಿರುವುದನ್ನು ದೃಢೀಕರಿಸಿ ಮುಂದಿನ ತರಗತಿಯ ಪಠ್ಯಾಧಾರಿತ ಕಲಿಕಾಂಶಗಳ ಬೋಧನೆ ಆರಂಭಿಸಲಾಗವುದು ಎಂದೂ ಸ್ಪಷ್ಟಪಡಿಸಲಾಗಿದೆ.

> **1–9 ತರಗತಿಯ ಮಕ್ಕಳಿಗೆ ಆನ್‌ಲೈನ್, ಆಫ್‌ಲೈನ್ ಮೂಲಕವೂ ಮೌಲ್ಯಾಂಕನ ಇಲ್ಲ. ಮೌಲ್ಯಾಂಕನ ವಿಶ್ಲೇಷಿಸಿ, ಫಲಿತಾಂಶ ಪ್ರಕಟಿಸಿ, ಬಡ್ತಿ ನೀಡಲಾಗುವುದು**
>
> **ಎಸ್. ಸುರೇಶ್ ಕುಮಾರ್,**
> ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಪ್ರಜಾವಾಣಿ facebook LIVE fb.com/prajavani.net
ರಾಮನವಮಿ ವಿಶೇಷ
ಶ್ರೀರಾಮ ಸಂಗೀತ ಮಾಧುರ್ಯ
ಹಾಡುಗಾರಿಕೆ: ವಿದುಷಿ ಬೆಂಗಳೂರು ಶುಭಲಕ್ಷ್ಮೀ ಕೃಷ್ಣಮೂರ್ತಿ (ಇಸ್ರೋ ವಿಜ್ಞಾನಿ, ಉಪ ನಿರ್ದೇಶಕಿ)
ವಯಲಿನ್: ವಿದುಷಿ ಜ್ಯೋತ್ಸ್ನಾ ಮಂಜುನಾಥ್, ಆದಾಯ ತೆರಿಗೆ ಅಧಿಕಾರಿ
ಮೃದಂಗಂ: ವಿದ್ವಾನ್ ವಿನಯ್ ನಾಗರಾಜನ್

ಜ್ಯೋತ್ಸ್ನಾ ಮಂಜುನಾಥ್

ಶುಭಲಕ್ಷ್ಮೀ ಕೃಷ್ಣಮೂರ್ತಿ

ವಿನಯ್ ನಾಗರಾಜನ್
ಇಂದು ಸಂಜೆ 7.00 ಗಂಟೆಯಿಂದ

ಪ್ರಜಾವಾಣಿ facebook LIVE fb.com/prajavani.net
ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಧಾರವಾಡದ ಸಾಯಿ ಪಿಯು ಕಾಲೇಜಿನ ಪ್ರಾಂಶುಪಾಲ ಪ್ರೊ.ನಾಗರಾಜ್ ಶಿರೂರು ಇವರಿಂದ ಟಿಪ್ಸ್
ವಿಷಯ: ಅಕೌಂಟೆನ್ಸಿ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
ಇಂದು ಸಂಜೆ 4.30 ರಿಂದ 6.00

ಪ್ರಜಾವಾಣಿ
ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕರಗದ ತಾಣ ಕರಗಿದಾಗ...
ಶಕ್ತಿ ದೇವತೆ ದ್ರೌಪದಿಯನ್ನು ಆಹ್ವಾನಿಸುತ್ತಿದ್ದುದು ಇಲ್ಲೇ. ವಿಶಾಲವಾಗಿದ್ದ ಪ್ರದೇಶ ಇಂದು ಪೀಠವಾಗಿ ಮಾತ್ರ ಉಳಿದಿದೆ. ಕರಗದ ತಾಣಗಳು ನಿತ್ಯ ಕರಗುತ್ತಲೇ ಇವೆ
https://bit.ly/3sDHwGS

ಕೊರೊನಾ ಸಾಂತ್ವನ

ಓಡಾಟ ನಿಲ್ಲಿಸದಿದ್ದರೆ ಅಪಾಯ

ಬೆಂಗಳೂರು: ‘ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ದೃಢ ಪ್ರಮಾಣ ಶೇ 20ರಷ್ಟು ವರದಿಯಾಗುತ್ತಿದೆ. ಇದರ ಪ್ರಕಾರ ರಾಜ್ಯದಲ್ಲಿ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಸುಮಾರು 1.5 ಕೋಟಿ ಮಂದಿಗೆ ಸೋಂಕು ತಗುಲಿದೆ. ಕಾಯಿಲೆ ತೀವ್ರತೆಯೂ ಜಾಸ್ತಿಯಾಗುತ್ತಿದೆ. ಜನರು ಹೊರಗಡೆ ಓಡಾಡುವುದನ್ನು ನಿಲ್ಲಿಸಬೇಕು.’

‘ಸದ್ಯದ ಪರಿಸ್ಥಿತಿಯಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಬಾರದು. ವಾರಾಂತ್ಯದ ಪ್ರಯಾಣ, ದೇವಸ್ಥಾನಗಳಿಗೆ ಹೋಗುವುದು ಸೇರಿ ಎಲ್ಲ ರೀತಿಯ ಪ್ರಯಾಣ ಮತ್ತು ಓಡಾಟಕ್ಕೆ ಮುಂದಿನ ಕೆಲ ದಿನಗಳು ಕಡಿವಾಣ ಹಾಕಿಕೊಳ್ಳಬೇಕಿದೆ. ಮುಖಗವಸನ್ನು ಕಡ್ಡಾಯವಾಗಿ ಬಾಯಿ, ಮೂಗು ಮುಚ್ಚುವಂತೆ ಧರಿಸಬೇಕು. ಹೆಚ್ಚಿನವರು ಬಟ್ಟೆ ಮುಖಗವಸನ್ನು ಧರಿಸುತ್ತಿದ್ದಾರೆ. ಬಹುತೇಕರು ಅದನ್ನು ಸೋಪಿನ ನೀರಿನಿಂದ ಪ್ರತಿನಿತ್ಯ ಸ್ವಚ್ಛಪಡಿಸಿಕೊಳ್ಳುತ್ತಿಲ್ಲ. ಇದರಿಂದಲೂ ವೈರಾಣು ತಗುಲುವ ಸಾಧ್ಯತೆ ಇರುತ್ತದೆ. ಹಾಗಾಗಿ, ಪ್ರತಿನಿತ್ಯ ಸ್ವಚ್ಛಗೊಳಿಸಿ, ಬಿಸಿಲಿನಲ್ಲಿ ಸರಿಯಾದ ರೀತಿಯಲ್ಲಿ ಒಣಗಿಸಬೇಕು. ಬಳಿಕ ಇಸ್ತ್ರಿ (ಐರನ್) ಮಾಡಿ, ಬಳಸಬೇಕು.’

‘ಜ್ವರ, ಕೆಮ್ಮು ಸೇರಿದಂತೆ ವಿವಿಧ ಅನಾರೋಗ್ಯ ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೋಂಕು ದೃಢಪಟ್ಟು, ಲಕ್ಷಣಗಳು ಅಷ್ಟಾಗಿ ಗೋಚರಿಸದಿದ್ದಲ್ಲಿ ನಿಗದಿತ ಅವಧಿಯವರೆಗೆ ಮನೆ ಆರೈಕೆಗೆ ಒಳಗಾಗಬೇಕು. ಸೋಂಕು ದೃಢಪಟ್ಟಲ್ಲಿ ಭಯಕ್ಕೆ ಒಳಗಾಗಬೇಕಿಲ್ಲ. ವೈದ್ಯರನ್ನು ಸಂಪರ್ಕಿಸಿ, ಅಗತ್ಯ ಮಾರ್ಗದರ್ಶನ ಪಡೆದುಕೊಳ್ಳಬೇಕು. ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಪರೀಕ್ಷೆಗೆ ಪಲ್ಸ್ ಆಕ್ಸಿಮೀಟರ್ ಇಟ್ಟುಕೊಳ್ಳಬೇಕು. 94 ಅಥವಾ 93ಕ್ಕೆ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಇಳಿದರೆ ತಡ ಮಾಡದೆಯೇ ಆಸ್ಪತ್ರೆಗೆ ಹೋಗಬೇಕು.’

‘ರಕ್ತದಲ್ಲಿನ ಆಮ್ಲಜನಕ ಪ್ರಮಾಣ 70ಕ್ಕೆ ಇಳಿಕೆಯಾದಲ್ಲಿ ಏನು ಮಾಡಲು ಸಾಧ್ಯವಾಗುವುದಿಲ್ಲ. 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ಕೊಡಬೇಕು ಎಂದು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಎಲ್ಲರೂ ಕಡ್ಡಾಯವಾಗಿ ಲಸಿಕೆ ಪಡೆಯಬೇಕು. ಲಸಿಕೆ ಸುರಕ್ಷಿತವಾಗಿದ್ದು, ರಕ್ಷಣೆ ಒದಗಿಸಲಿದೆ. ಕೆಲವರಿಗೆ ಸಣ್ಣ ಪ್ರಮಾಣದಲ್ಲಿ ನೋವು, ಜ್ವರದ ಸಮಸ್ಯೆ ಕಾಣಿಸಿಕೊಳ್ಳಬಹುದು. ಅದು ಲಸಿಕೆಯ ಅಡ್ಡ ಪರಿಣಾಮವಲ್ಲ. ಬದಲಾಗಿ ಲಸಿಕೆ ಕಾರ್ಯನಿರ್ವಹಿಸುತ್ತಿರುವುದರ ಪರಿಣಾಮ. ಲಸಿಕೆ ಪಡೆದ ಬಳಿಕ ಸೋಂಕು ತಗುಲಿದಲ್ಲಿ ಅದರ ತೀವ್ರತೆ ಕಡಿಮೆ ಇರುತ್ತದೆ. ಆದರೆ, ಲಸಿಕೆ ಪಡೆದ ಬಳಿಕ ಕೂಡ ಮುಖಗವಸು ಧರಿಸುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಪಾಲಿಸಬೇಕು.’

‘ಬ್ಲಡ್ ಥಿನ್ನರ್ಸ್ ತೆಗೆದುಕೊಳ್ಳುವವರು ಕೂಡ ಲಸಿಕೆ ಪಡೆದುಕೊಳ್ಳಬಹುದು. ಒಮ್ಮೆ ಕೋವಿಡ್ ಪೀಡಿತರಾದವರಿಗೆ ಮತ್ತೆ ಸೋಂಕು ತಗುಲಿದಲ್ಲಿ ಹೆಚ್ಚಿನ ತೀವ್ರತೆ ಇರಲಿದೆ ಎಂದು ಹೇಳಲಾಗದು. ಅವರಲ್ಲಿನ ರೋಗನಿರೋಧಕ ಶಕ್ತಿ ಆಧರಿಸಿ ಪರಿಣಾಮ ಬೀರುತ್ತದೆ. ಮೇ ಅಥವಾ ಜೂನ್ ತಿಂಗಳಲ್ಲಿ ಸೋಂಕು ನಿಯಂತ್ರಣಕ್ಕೆ ಬರುವ ಸಂಭವವಿದೆ. ಆದರೆ, ಇನ್ನೂ 6ರಿಂದ 9 ತಿಂಗಳು ಮುಖಗವಸು ಧರಿಸುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಪಾಲಿಸಬೇಕು.’

ಡಾ.ಸಿ.ಎನ್. ಮಂಜುನಾಥ್

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಮತ್ತು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	14.30 ಕೋಟಿ ▲	1.55 ಕೋಟಿ ▲
ಸಕ್ರಿಯ ಪ್ರಕರಣ	1.82 ಕೋಟಿ	21.23 ಲಕ್ಷ ▲
ಗುಣಮುಖ	12.15 ಕೋಟಿ ▲	1.32 ಕೋಟಿ ▲
ಸಾವು	30.48 ಲಕ್ಷ ▲	1.81 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.28 ಲಕ್ಷ ▼	2,57,003 ▼
ಗುಣಮುಖ	6.88 ಲಕ್ಷ ▲	1,54,357 ▲
ಸಾವು	9,551 ▼	1,757 ▲



ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಟರ್ಕಿ	ಅಮೆರಿಕ	ಬ್ರೆಜಿಲ್
55,149 ▼	51,650 ▲	34,642 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
68.50 ▼	11.41 ▼	10.72

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	61,343 ▲
ತಮಿಳುನಾಡು	13,205 ▲
ದೆಹಲಿ	12,361 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	39.60 ▲
ಕೇರಳ	12.72 ▲
ಆಂಧ್ರಪ್ರದೇಶ	10.13 ▲

ಪ್ರಜಾವಾಣಿ ಗ್ರಾಫಿಕ್ಸ್

IN REVERENCE & REMEMBERANCE

Prof. N. ANANTHACHAR
Founder Secretary
ACHARYA PATHASALA EDUCATIONAL TRUST
(Established in 1935)
N. R. Colony,
Bengaluru - 560 019.

05-09-1910 21-04-1976

"A FOUNTAIN HEAD OF KNOWLEDGE AND ALWAYS A SOURCE OF INSPIRATION",
who left us 45 years ago,
but his Memories of Strong Leadership and Hardwork will continue to guide us

EVER REMEMBERING HIS SERVICES
President & Board of Trustees, APSET.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	14,359
ಇಂದಿನ ಅಂತ್ಯ	14,296
▼	63
ದಿನದ ಕನಿಷ್ಠ	14,207

ವಿನಿಮಯ ದರ

$ ಡಾಲರ್	74.88
£ ಪೌಂಡ್	104.73
€ ಯುರೊ	90.32
¥ ಯೆನ್ (100ಕ್ಕೆ)	70

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹494

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1630)
ಸೋಯಾ (ರಿಫೈನ್ಡ್)	₹1410 (1395)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1315 (1300)

ಕೊಬ್ಬರಿ ಧಾರಣೆ

ಕಡೂರು	₹9000-9000
ಪುತ್ತೂರು	₹5000-13500
ತುರುವೇಕೆರೆ	₹16000-16500

ಚಿನ್ನದ ದರ ₹ 305ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10 ಗ್ರಾಂಗೆ ₹ 305ರಷ್ಟು ಇಳಿಕೆ ಕಂಡು ₹ 46,756ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶದಲ್ಲಿಯೂ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಇಪಿಎಫ್‌ಒ: ಚಂದಾದಾರರ ಪ್ರಮಾಣ ಹೆಚ್ಚಳ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಗೆ (ಇಪಿಎಫ್‌ಒ) ಚಂದಾದಾರರಾದ ನೌಕರರ ಸಂಖ್ಯೆಯು ಹಿಂದಿನ ವರ್ಷದ ಫೆಬ್ರುವರಿಗೆ ಹೋಲಿಸಿದರೆ ಈ ವರ್ಷದ ಫೆಬ್ರುವರಿಯಲ್ಲಿ ಸರಿಸುಮಾರು ಶೇಕಡ 20ರಷ್ಟು ಜಾಸ್ತಿ ಆಗಿದೆ. ಈ ಫೆಬ್ರುವರಿಯಲ್ಲಿ ಒಟ್ಟು 12.37 ಲಕ್ಷ ನೌಕರರು ಸಂಘಟನೆಯ ವ್ಯಾಪ್ತಿಗೆ ಬಂದಿದ್ದಾರೆ.

ಕೋವಿಡ್‌–19 ಸಾಂಕ್ರಾಮಿಕದ ಸಂದರ್ಭದಲ್ಲಿ ಸಂಘಟಿತ ವಲಯದಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಎಂಬುದನ್ನು ಮಂಗಳವಾರ ಬಿಡುಗಡೆ ಆಗಿರುವ ಈ ಅಂಕಿ–ಅಂಶಗಳು ಹೇಳುತ್ತಿವೆ. ಈ ವರ್ಷದ ಜನವರಿಯಲ್ಲಿ ಇಪಿಎಫ್‌ಒ ವ್ಯಾಪ್ತಿಗೆ ಬಂದ ನೌಕರರ ಸಂಖ್ಯೆಗೆ ಹೋಲಿಸಿದರೆ, ಫೆಬ್ರುವರಿಯಲ್ಲಿ ಆಗಿರುವ ಹೆಚ್ಚಳವು ಶೇ 3.52ರಷ್ಟಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ಹೇಳಿದೆ.

ಫೆಬ್ರುವರಿಯಲ್ಲಿ ಇಪಿಎಫ್‌ಒ ವ್ಯಾಪ್ತಿಗೆ ಬಂದ ಒಟ್ಟು ನೌಕರರ ಪೈಕಿ 7.56 ಲಕ್ಷ ಮಂದಿ ಇದೇ ಮೊದಲ ಬಾರಿಗೆ ಇಪಿಎಫ್‌ಒ ವ್ಯಾಪ್ತಿಗೆ ಬಂದವರು. 4.81 ಲಕ್ಷ ಮಂದಿ ತಮ್ಮ ಉದ್ಯೋಗ ಬದಲಿಸಿ, ಇಪಿಎಫ್‌ಒ ವ್ಯಾಪ್ತಿಯಿಂದ ಒಮ್ಮೆ ಹೊರನಡೆದು, ಮತ್ತೆ ಅದರ ವ್ಯಾಪ್ತಿಗೆ ಬಂದಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಅಂತರ ಕಾಯ್ದುಕೊಳ್ಳಿ

ಮುಷ್ಕರನಿರತ 199 ಸಿಬ್ಬಂದಿಯನ್ನು ವಜಾಗೊಳಿಸಿ ಆದೇಶ

ಸಾರಿಗೆ ನಿಗಮಗಳ 1,937 ನೌಕರರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಷ್ಕರನಿರತ ನೌಕರರ ವಿರುದ್ಧ ಕ್ರಮ ಜರುಗಿಸುವ ಪ್ರಕ್ರಿಯೆಯನ್ನು ನಾಲ್ಕೂ ಸಾರಿಗೆ ನಿಗಮಗಳು ಮುಂದುವರಿಸಿವೆ. ಮಂಗಳವಾರ ಒಂದೇ ದಿನ 1,937 ಸಿಬ್ಬಂದಿಯನ್ನು ಅಮಾನತು ಮಾಡಿದ್ದು, 199 ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ವೇತನ ಪರಿಷ್ಕರಣೆಯ ಬೇಡಿಕೆ ಮುಂದಿಟ್ಟುಕೊಂಡು ಸಾರಿಗೆ ನಿಗಮಗಳ ನೌಕರರ ಮುಷ್ಕರ ಮಂಗಳವಾರಕ್ಕೆ 14 ದಿನಗಳನ್ನು ಪೂರೈಸಿದೆ. ಈ ಮಧ್ಯೆ ಬಸ್ ಸಂಚಾರದಲ್ಲಿ ಮತ್ತಷ್ಟು ಏರಿಕೆಯಾಗಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೆಎಸ್ಆರ್‌ಟಿಸಿಯ 26, ಬಿಎಂಟಿಸಿಯ 1,905, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಎನ್‌ಡಬ್ಲ್ಯುಕೆಆರ್‌ಟಿಸಿ) ಇಬ್ಬರು ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಎನ್‌ಇಕೆಆರ್‌ಟಿಸಿ) ನಾಲ್ವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ. ಮುಷ್ಕರ ಆರಂಭವಾದ ದಿನಗಿಂದ ನಾಲ್ಕೂ ನಿಗಮಗಳಲ್ಲಿ ಸೇವೆಯಿಂದ ಅಮಾನತು ಮಾಡಲಾದ ನೌಕರರ ಸಂಖ್ಯೆ 2,941ಕ್ಕೆ ತಲುಪಿದೆ.

ಬಿಎಂಟಿಸಿಯ 189, ಕೆಎಸ್ಆರ್‌ಟಿಸಿಯ ಎಂಟು ಮತ್ತು ಎನ್‌ಇಕೆಆರ್‌ಟಿಸಿಯ ಇಬ್ಬರು ಕಾಯಂ ನೌಕರರನ್ನು ಸೇವೆಯಿಂದ ವಜಾಗೊಳಿಸಿ ಮಂಗಳವಾರ ಆದೇಶ ಹೊರಡಿಸಲಾಗಿದೆ. ನಾಲ್ಕು ನಿಗಮಗಳಲ್ಲಿ ಈವರೆಗೆ ಒಟ್ಟು 1.174 ಕಾಯಂ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಕೆಎಸ್ಆರ್‌ಟಿಸಿ 100, ಎನ್‌ಡಬ್ಲ್ಯುಕೆಆರ್‌ಟಿಸಿಯ 73 ಮತ್ತು ಎನ್‌ಇಕೆಆರ್‌ಟಿಸಿಯ ಮೂವರು ಟ್ರೈನಿ ಸಿಬ್ಬಂದಿಯನ್ನು ಮಂಗಳವಾರ ಕೈಬಿಡಲಾಗಿದೆ. ಮುಷ್ಕರದಲ್ಲಿ ಭಾಗಿಯಾದ ಕಾರಣಕ್ಕೆ ನಾಲ್ಕೂ ನಿಗಮಗಳಲ್ಲಿ ಸೇವೆಯಿಂದ ಕೈಬಿಡಲಾಗಿರುವ ಟ್ರೈನಿ ನೌಕರರ ಸಂಖ್ಯೆ 995ಕ್ಕೆ ಏರಿಕೆಯಾಗಿದೆ.

'ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಕೆಎಸ್ಆರ್‌ಟಿಸಿಯ 773 ಸಿಬ್ಬಂದಿಗೆ ಮಂಗಳವಾರ ನೋಟಿಸ್ ಜಾರಿ ಮಾಡಲಾಗಿದೆ. ಇದುವರಿಗೆ ನಾಲ್ಕೂ ನಿಗಮಗಳ ಒಟ್ಟು 7,666 ನೌಕರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕರ್ತವ್ಯಕ್ಕೆ ಹಾಜರಾಗಿರುವ 56 ಮಂದಿಯ ಅಮಾನತು ಆದೇಶವನ್ನು ರದ್ದುಪಡಿಸಲಾಗಿದೆ' ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲಲ್ಲಿ ಪ್ರತಿಭಟನೆ: ಸಾರಿಗೆ ನಿಗಮಗಳ ನೌಕರರ ಮುಷ್ಕರ 14ನೇ ದಿನ ಪೂರೈಸಿದೆ. ಮಂಗಳವಾರವೂ ರಾಜ್ಯದ ವಿವಿಧೆಡೆ ನೌಕರರು ಉಪವಾಸ ಸತ್ಯಾಗ್ರಹ, ಪ್ರತಿಭಟನೆ ನಡೆಸಿದರು.

ಕೆಲವು ಜಿಲ್ಲೆಗಳಲ್ಲಿ ಪ್ರತಿಭಟನೆಗೆ ಯತ್ನಿಸಿದ ಸಾರಿಗೆ ನಿಗಮಗಳ ನೌಕರರ ಮೇಲೆ ಪೊಲೀಸರು ಲಾಠಿ ಬೀಸಿ ಚದುರಿಸಿದ್ದಾರೆ. ಕೆಲವೆಡೆ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಕೆಲಕಾಲದ ಬಳಿಕ ಬಿಡುಗಡೆ ಮಾಡಲಾಗಿದೆ.

ಬಸ್‌ಗಳ ಮೇಲೆ ಕಲ್ಲು ತೂರಾಟದ ಪ್ರಕರಣಗಳೂ ಮುಂದುವರಿದಿವೆ. ಮಂಗಳವಾರ ಈ ಸಂಬಂಧ ಒಂಬತ್ತು ಪ್ರಕರಣಗಳನ್ನು ದಾಖಲಿಸಲಾಗಿದೆ. ಬಸ್ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಎಸ್ಮಾ) ಅಡಿಯಲ್ಲಿ ಮತ್ತೊಂದು ಪ್ರಕರಣ ದಾಖಲು ಮಾಡಲಾಗಿದೆ.

ಬಸ್ ಸಂಚಾರದಲ್ಲಿ ಹೆಚ್ಚಳ

ಮಂಗಳವಾರ ಬಸ್ ಸೇವೆಯಲ್ಲಿ ಮತ್ತಷ್ಟು ಹೆಚ್ಚಳವಾಗಿದೆ. ನಾಲ್ಕೂ ನಿಗಮಗಳಿಂದ ಸುಮಾರು 7,848 ಬಸ್‌ಗಳು ಸಂಚಾರ ನಡೆಸಿವೆ ಎಂದು ಸಾರಿಗೆ ನಿಗಮಗಳ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ.

'ಆದೇಶ ತಿಳಿದು ಮುಂದಿನ ನಿರ್ಧಾರ'

'ಸಾರಿಗೆ ನಿಗಮಗಳ ನೌಕರರ ಮುಷ್ಕರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿಖರವಾಗಿ ಏನು ಹೇಳಿದೆ ಎಂಬುದು ಇನ್ನೂ ನಮಗೆ ತಿಳಿದಿಲ್ಲ. ನ್ಯಾಯಾಲಯದ ಸೂಚನೆ ಮತ್ತು ಅಭಿಪ್ರಾಯದ ವಿವರವನ್ನು ಪಡೆದು, ವಕೀಲರ ಜತೆ ಚರ್ಚಿಸಿದ ಬಳಿಕ ಮುಂದಿನ ನಿರ್ಧಾರಕ್ಕೆ ಬರಲಾಗುವುದು' ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಹೈಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯದ ಕುರಿತು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ನ್ಯಾಯಾಲಯ ಯಾವ ವಿಚಾರದ ಕುರಿತು ಏನು ಹೇಳಿದೆ ಎಂಬುದನ್ನು ಮೊದಲು ನಾವು ತಿಳಿಯಬೇಕು. ಆ ಬಳಿಕವೇ ಮುಂದಿನ ತೀರ್ಮಾನಕ್ಕೆ ಬರುತ್ತೇವೆ' ಎಂದರು.

ಷೇರುಪೇಟೆ: ಮುಂದುವರಿದ ಕುಸಿತ

ಮುಂಬೈ (ಪಿಟಿಐ): ಸ್ಥಳೀಯವಾಗಿ ಅಲ್ಲಲ್ಲಿ ಜಾರಿಗೆ ಬರುತ್ತಿರುವ ಲಾಕ್‌ಡೌನ್ ಕ್ರಮಗಳು ಹಾಗೂ ಕೋವಿಡ್‌–19 ಪ್ರಕರಣಗಳು ಹೆಚ್ಚುತ್ತಿರುವುದು ಹೂಡಿಕೆದಾರರಲ್ಲಿ ಆತಂಕ ಹೆಚ್ಚಿಸಿತು. ಮಂಗಳವಾರದ ವಹಿವಾಟಿನಲ್ಲಿ ಆರಂಭದಲ್ಲಿ ಚೇತರಿಕೆ ಕಂಡಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ನಂತರ ಕುಸಿತ ದಾಖಲಿಸಿತು.

ಸೆನ್ಸೆಕ್ಸ್ 243 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕವಾದ ನಿಫ್ಟಿ 63 ಅಂಶ ಇಳಿಕೆ ಕಂಡಿತು. ಅಲ್ಟ್ರಾಟೆಕ್ ಸಿಮೆಂಟ್, ಎಚ್‌ಸಿಎಲ್ ಟೆಕ್, ಎಚ್‌ಡಿಎಫ್‌ಸಿ, ಟೆಕ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಯುಎಲ್ ಷೇರುಗಳು ಹೆಚ್ಚು ಕುಸಿತ ಕಂಡವು.

'ಆರಂಭದಲ್ಲಿ ಷೇರು ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಆದರೆ, ಜಾಗತಿಕ ಮಟ್ಟದಲ್ಲಿ ನಕಾರಾತ್ಮಕ ವಹಿವಾಟು ನಡೆದಿದ್ದು ಹಾಗೂ ಮಹಾರಾಷ್ಟ್ರದಲ್ಲಿ ಇನ್ನಷ್ಟು ಕಠಿಣ ನಿರ್ಬಂಧಗಳು ಜಾರಿಯಾಗುವ ಸಾಧ್ಯತೆಯು ಸೂಚ್ಯಂಕ ಕುಸಿಯುವಂತೆ ಮಾಡಿದವು' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದರು.

ಬುಧವಾರ ರಾಮನವಮಿ ಕಾರಣ ಷೇರುಮಾರುಕಟ್ಟೆಗಳಲ್ಲಿ ವಹಿವಾಟು ಇರುವುದಿಲ್ಲ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್‌-ಹಣಕಾಸು ತಜ್ಞ
uppuranik@gmail.com
ಮೊ: 9448015300

ಹೆಸರು, ಊರು ಬೇಡ

- **ಪ್ರಶ್ನೆ: ನನ್ನೊಡನೆ ಗೋಲ್ಡ್ ಬಾಂಡುಗಳಿವೆ. ಈ ಬಾಂಡುಗಳ ಆಧಾರದಿಂದ ಸಾಲ ಪಡೆಯಬೇಕೆಂದಿದ್ದೇನೆ. ನನಗೆ ಸಾಲ ದೊರೆಯಬಹುದೇ? ನನಗೆ ಬಾಂಡಿನ ಬೆಲೆಯ ಎಷ್ಟರಮಟ್ಟಿಗೆ ಸಾಲ ದೊರೆಯಬಹುದು ಹಾಗೂ ಬಡ್ಡಿದರ ಎಷ್ಟು?**

ಉತ್ತರ: ಬ್ಯಾಂಕುಗಳಲ್ಲಿ, ಆರ್ಥಿಕ ಸಂಸ್ಥೆಗಳಲ್ಲಿ ಹಾಗೂ ಎನ್‌ಬಿಎಫ್‌ಸಿಗಳಲ್ಲಿ ಬಂಗಾರದ ಬಾಂಡುಗಳನ್ನು ಒತ್ತೆ ಇಟ್ಟು (ಅಂಚೆ ಕಚೇರಿಯ ಎನ್‌ಎಸ್‌ಸಿ ಮಾದರಿಯಲ್ಲಿ) ಬಾಂಡುದಾರರು ಸಾಲ ಪಡೆಯಬಹುದು. ಭಾರತೀಯ ರಿಸರ್ವ್ ಬ್ಯಾಂಕ್ ಈ ಬಾಂಡುಗಳ ಭದ್ರತೆಯ ಮೇಲೆ ಸಾಲ ವಿತರಿಸಲು (eligible to be used as a collateral security) ಎಲ್ಲಾ ಆರ್ಥಿಕ ಸಂಸ್ಥೆಗಳಿಗೆ ಪರವಾನಗಿ ನೀಡಿದೆ. ಸಾಮಾನ್ಯವಾಗಿ ಬಾಂಡಿನ ಮುಖಬೆಲೆಯ ಶೇಕಡ 75ರಷ್ಟು ಸಾಲ ಪಡೆಯಬಹುದು. ಸಾಲದ ಬಡ್ಡಿದರವನ್ನು ಆಯಾ ಬ್ಯಾಂಕುಗಳು ನಿರ್ಧರಿಸಿದಂತಿರುತ್ತದೆ. ಇದೇ ವೇಳೆ, ಬಂಗಾರದ ಬಾಂಡುಗಳ ಮೇಲೆ ಸಾಲ ಕೊಡುವ ಅಥವಾ ಕೊಡದಿರುವ ನಿರ್ಧಾರ ಆಯಾ ಬ್ಯಾಂಕು ಹಾಗೂ ಆರ್ಥಿಕ ಸಂಸ್ಥೆಗೆ ಬಿಟ್ಟದ್ದಾಗಿದೆ. ಸಾಲ ನೀಡಲೇಬೇಕು ಎನ್ನುವಂತಿಲ್ಲ.

ಧನ್ವಂತರಿ ಡಿ., ಮೈಸೂರು

- **ಪ್ರಶ್ನೆ: ನಾನು ಪದವಿಪೂರ್ವ ಕಾಲೇಜು ಪ್ರಾಂಶುಪಾಲನಾಗಿ ಕೆಲಸ ಮಾಡುತ್ತೇನೆ. ಉಳಿದ ಸೇವಾವಧಿ ಮೂರುವರೆ ವರ್ಷ. ಎಲ್ಲಾ ಕಡಿತದ ನಂತರ ಬರುವ ಸಂಬಳ ₹ 85,140. ಸಾಲ ಇಲ್ಲ. ಸ್ವಂತ ಮನೆ ಇದೆ. ಬ್ಯಾಂಕ್ ಖಾತೆಯಲ್ಲಿ ₹ 35 ಲಕ್ಷ ಇದೆ. ನಾನು ಈಚೆಗೆ ಮನೆ ಮಾರಾಟ ಮಾಡಿದ್ದು, ಅದರಿಂದ ₹ 21 ಲಕ್ಷ ಬರಲಿದೆ. ನಿವೃತ್ತಿಯಿಂದ ಬರುವ ಹಣ ಹಾಗೂ ಮನೆ ಮಾರಾಟ ಮಾಡಿದ ಹಣದಿಂದ ಬೇರೊಂದು ಮನೆ ಕೊಳ್ಳಬೇಕೆಂದಿದ್ದೇನೆ. ಇದರಿಂದ ತೆರಿಗೆ ಉಳಿಸಲು ಸಾಧ್ಯವೆ?**

ಉತ್ತರ: ನೀವು ₹ 35 ಲಕ್ಷ ಉಳಿತಾಯ ಖಾತೆಯಲ್ಲಿ ಇರಿಸಿದಂತೆ ಕಾಣುತ್ತದೆ. ಉಳಿತಾಯ ಖಾತೆಯಲ್ಲಿ ದೊಡ್ಡ ಮೊತ್ತ ಇಡುವುದರಿಂದ ಬಡ್ಡಿ ವರಮಾನದಲ್ಲಿ ತುಂಬಾ ನಷ್ಟವಾಗುತ್ತದೆ. ಅವಧಿ ಠೇವಣಿಯಲ್ಲಿ ಹಣ ಇರಿಸಿದರೆ ಅವಧಿಗೆ ಮುನ್ನ ಹಣ ಪಡೆಯುವ ಹಕ್ಕು ನಿಮಗಿರುತ್ತದೆ. ಸೆಕ್ಷನ್ 54 ಆಧಾರದ ಮೇಲೆ ನೀವು ಮನೆ ಮಾರಾಟ ಮಾಡಿ ಬರುವ ಹಣದಿಂದ ಮಾರಾಟ ಮಾಡಿದ ಎರಡು ವರ್ಷದೊಳಗೆ ಇನ್ನೊಂದು ಮನೆ ಕೊಂಡರೆ ಅಥವಾ ನಿವೇಶನ ಕೊಂಡು ಮೂರು ವರ್ಷಗಳ ಒಳಗೆ ಮನೆ ಕಟ್ಟಿಸಿದರೆ ನಿಮಗೆ ಬಂಡವಾಳ ವೃದ್ಧಿ ತೆರಿಗೆ ಬರುವುದಿಲ್ಲ. ಇದೇ ವೇಳೆ ಈಗ ಮಾರಾಟ ಮಾಡಿ ಬಂದ ಮೊತ್ತವನ್ನು 1988ರ ಕ್ಯಾಪಿಟಲ್ ಗೇನ್ ನಿಯಮದಂತೆ ಬ್ಯಾಂಕ್‌ನಲ್ಲಿ ಜಮಾ ಇರಿಸಬೇಕು. ಮನೆ ಕೊಳ್ಳುವಾಗ ಈ ಹಣ ಬಳಸಬೇಕು. ಒಟ್ಟಿನಲ್ಲಿ ನೀವು ಬಯಸಿದಂತೆ, ಮನೆ ಮಾರಾಟ ಮಾಡಿ ಬರುವ ₹ 21 ಲಕ್ಷ ಹಾಗೂ ನಿಮ್ಮ ಹಣದಿಂದ ಬೇರೊಂದು ಮನೆ ಕೊಳ್ಳಬಹುದು. ನಿಮಗೆ ಗೊಂದಲ ಇದ್ದಲ್ಲಿ ಕರೆ ಮಾಡಿ.

ಡಾ. ಚಂದ್ರಶೇಖರ್, ಊರುಬೇಡ

- **ಪ್ರಶ್ನೆ: ನಾನು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ. ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ (ಎನ್‌ಪಿಎಸ್) ಸರ್ಕಾರದ ಕೊಡುಗೆಗೆ ತೆರಿಗೆ ಇದೆಯೇ? ಸೆಕ್ಷನ್ 80ಸಿ ಹಾಗೂ 80ಸಿಸಿಡಿ (1ಬಿ) ವಿನಾಯಿತಿ ಪಡೆಯಬಹುದೇ?**

ಉತ್ತರ: ಸೆಕ್ಷನ್ 80 ಸಿಸಿಡಿ (2) ಆಧಾರದ ಮೇಲೆ ಉದ್ಯೋಗದಾತರು ಎನ್‌ಪಿಎಸ್‌ಗೆ ಜಮಾ ಮಾಡುವ ಮೊತ್ತ, ಮೂಲವೇತನ ಹಾಗೂ ಡಿ.ಎ. ಸೇರಿಸಿ ಶೇಕಡ 10ರತನಕ ತೆರಿಗೆ ವಿನಾಯಿತಿ ಇದೆ. ಇಂತಹ ಸವಲತ್ತು ಇರುವ ವ್ಯಕ್ತಿಗಳು 80ಸಿ ಆಧಾರದ ಮೇಲೆ ಗರಿಷ್ಠ ₹ 1.5 ಲಕ್ಷ ಹೂಡಿಕೆ ಮಾಡಿ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಎನ್‌ಪಿಎಸ್‌ಗೆ ನೌಕರರ ಕೊಡುಗೆ ಇರುವುದರಿಂದ ಸೆಕ್ಷನ್ 80ಸಿ ಹೊರತುಪಡಿಸಿ ಸೆಕ್ಷನ್ 80 ಸಿಸಿಡಿ (1ಬಿ) ಆಧಾರದ ಮೇಲೆ ಕೂಡಾ ಗರಿಷ್ಠ ₹ 50 ಸಾವಿರ ವಿನಾಯಿತಿ ಪಡೆಯಬಹುದು. ಒಟ್ಟಿನಲ್ಲಿ 80ಸಿ ಹಾಗೂ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಗರಿಷ್ಠ ₹ 2 ಲಕ್ಷಗಳ ತನಕ ವಿನಾಯಿತಿ ಪಡೆಯಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ
20-4-2021

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1640)
ಒಂದು ವಾರದ ಡೆಲಿವರಿ	1645 (1635)
ಸೋಯಾ ಕಚ್ಚಾ	1400 (1390)
ಪಾಮ್ ವಾರದ ಡೆಲಿವರಿ	1313 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,300 (47,350)
ಬೆಳ್ಳಿ ಕೆ.ಜಿ 68,700 (68,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಲಾಕ್‌ಡೌನ್: ಆರ್ಥಿಕತೆಯಲ್ಲಿ ಕಾಣುತ್ತಿದೆ ಪರಿಣಾಮ'

ಮುಂಬೈ (ಪಿಟಿಐ): ಸ್ಥಳೀಯವಾಗಿ ಅಲ್ಲಲ್ಲಿ ಜಾರಿಗೆ ಬರುತ್ತಿರುವ ಲಾಕ್‌ಡೌನ್‌ಗಳು ಆರ್ಥಿಕ ಚಟುವಟಿಕೆಗಳ ಮೇಲೆ ಈಗಾಗಲೇ ಪರಿಣಾಮ ಬೀರಲಾರಂಭಿಸಿವೆ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಹೇಳಿದೆ.

ಕೋವಿಡ್ ಪ್ರಕರಣಗಳು ಹೆಚ್ಚುತ್ತಲೇ ಇದ್ದು, ಹಲವು ರಾಜ್ಯಗಳು ಜನರ ಸಂಚಾರ ಮತ್ತು ವಾಣಿಜ್ಯ ಚಟುವಟಿಕೆಗಳ ಮೇಲೆ ಸ್ಥಳೀಯವಾಗಿ ನಿರ್ಬಂಧ ಹೇರುತ್ತಿವೆ. ಇದರ ಪರಿಣಾಮವಾಗಿ ವಿದ್ಯುತ್ ಬಳಕೆ ಮತ್ತು ಜಿಎಸ್‌ಟಿ ಇ–ವೇಬಿಲ್ ಸಂಗ್ರಹ ಈಗಾಗಲೇ ಕಡಿಮೆ ಆಗಿದೆ. ಇದು ಆರ್ಥಿಕತೆಯ ಮೇಲೆ ಕಠಿಣ ಪರಿಣಾಮ ಉಂಟುಮಾಡಬಹುದು ಎಂದು ಕ್ರಿಸಿಲ್ ತನ್ನ ವರದಿಯಲ್ಲಿ ಎಚ್ಚರಿಕೆ ನೀಡಿದೆ.

ಉತ್ಪಾದನೆ ಮತ್ತು ನಿರ್ಮಾಣ ಚಟುವಟಿಕೆಗಳು ನಡೆದಿವೆ. ಬಹುತೇಕ ರಾಜ್ಯಗಳಲ್ಲಿ ಪರಸ್ಪರ ಅಂತರದೊಂದಿಗೆ ಪ್ರಯಾಣ ಮತ್ತು ಮನರಂಜನಾ ಸೇವೆಗಳಿಗೂ ಅನುಮತಿ ನೀಡಲಾಗಿದೆ ಎನ್ನುವುದು ತುಸು ಸಮಾಧಾನದ ವಿಷಯ. ಆದರೆ ಜನರಿಗೆ ಲಸಿಕೆ ನೀಡುವ ಸಂಖ್ಯೆಯಲ್ಲಿ ಇಳಿಕೆ ಕಂಡುಬರುತ್ತಿರುವುದು ಆತಂಕದ ವಿಷಯ ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1400
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	365
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಚಿತ್ರದುರ್ಗ	
ಆಪಿ	40929-41301
ಬೆಟ್ಟೆ	33219-33669
ಕೆಂಪುಗೋಟು	288096-29210
ರಾಶಿ	40339-40779
ಪುತ್ತೂರು	
ಕೋಕ	9500-24000
ಹೊಸತು	28500-40000
ಸಿದ್ದಾಪುರ	
ಬಿಳಿಗೋಟು	21199-30629
ಚಾಲಿ	34009-36389
ಕೋಕ	22699-29899
ಕೆಂಪುಗೋಟು	23089-29209
ರಾಶಿ	39009-41099
ತಟ್ಟಿಬೆಟ್ಟೆ	29199-39899
ಶಿರಸಿ	
ಬೆಟ್ಟೆ	18001-39028
ಬಿಳಿಗೋಟು	16099-30899
ಚಾಲಿ	30699-36899
ರಾಶಿ	34001-41809
ಯಲ್ಲಾಪುರ	
ಬಿಳಿಗೋಟು	24899-31211
ಚಾಲಿ	31899-36690
ಕೋಕ	18899-29299
ಕೆಂಪುಗೋಟು	26899-30799
ರಾಶಿ	39799-43699
ತಟ್ಟಿಬೆಟ್ಟೆ	33399-38880
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ	255-342
ದ್ವಿತಳಿ	299-445

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10050	9900	9900	130.05 ಸೆಂಟ್ಸ್
ಎಸಿ	4060	3800	3850	
ಆರ್‌ಪಿ	5100	5050	5125	ಲಂಡನ್
ಆರ್‌ಸಿ	2900	2950	2875	1359 ಡಾಲರ್ಸ್

ಕೋವಿಡ್‌–19 ಲಸಿಕೆ: ಕಸ್ಟಮ್ಸ್ ಸುಂಕ ಕೈಬಿಡುವ ಸಾಧ್ಯತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಆಮದಾಗುವ ಕೋವಿಡ್–19 ಲಸಿಕೆಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಕೈಬಿಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಲಸಿಕೆ ನೀಡಲು ಕೇಂದ್ರವು ಮುಂದಾಗಿದ್ದು, ದೇಶದಲ್ಲಿ ಲಸಿಕೆಗಳ ಕೊರತೆ ಎದುರಾಗುವ ಸಾಧ್ಯತೆ ಇದೆ. ಹೀಗಾಗಿ, ಆಮದು ಮಾಡಿಕೊಳ್ಳುವ ಲಸಿಕೆಗಳ ದರ ಕಡಿಮೆ ಮಾಡಲು ಈ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ ಎಂದು ಗೊತ್ತಾಗಿದೆ.

ಸರ್ಕಾರವು ಸದ್ಯ ಆಮದಾಗುತ್ತಿರುವ ಲಸಿಕೆಗಳ ಮೇಲೆ ಶೇಕಡ 10ರಷ್ಟು ಕಸ್ಟಮ್ಸ್ ಸುಂಕ, ಶೇ 16.5ರಷ್ಟು ಐಜಿಎಸ್‌ಟಿ ಮತ್ತು ಸಾಮಾಜಿಕ ಕಲ್ಯಾಣ ಸರ್ಚಾರ್ಜ್ ವಿಧಿಸುತ್ತಿದೆ. ಈ ತೆರಿಗೆಗಳಿಂದಾಗಿ ಆಮದು ಮಾಡಿಕೊಳ್ಳುವ ಲಸಿಕೆಗಳ ಬೆಲೆಯು ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್ ಕಂಪನಿಗಳು ತಯಾರಿಸುವ ಲಸಿಕೆಗಳಿಗಿಂತಲು ದುಬಾರಿ ಆಗುತ್ತಿವೆ ಎನ್ನಲಾಗಿದೆ.

2ನೇ ವರ್ಷದ ಪುಣ್ಯಸ್ಮರಣೆ



ದಿ. ಕೆ. ಜಿ. ಹನುಮಂತರಾಯಪ್ಪರವರು
ಮಾತೃಶ್ರೀ ಡೆವಲಪರ್ಸ್ T ದಾಸರಹಳ್ಳಿ
ನಿಧನ: 21–4–2019
ನೀವು ನಮ್ಮನ್ನು ಅಗಲಿ ಇಂದಿಗೆ ಎರಡು ವರ್ಷಗಳು ಸಂದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ಸಿ.ಎನ್.ಆರ್ ಗ್ರೂಪ್ ಹಾಗೂ ಕುಟುಂಬದವರು.

ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಗೋವೇನಹಳ್ಳಿ ಶಿವಣ್ಣ
05–06–1957 – 21–04–2019
ನೆಲಮಂಗಲದ ಪ್ರಥಮ ದರ್ಜೆ ಗುತ್ತಿಗೆದಾರರು,
ಖುಷಿ ಆರ್.ಎಂ.ಸಿ ನಿರ್ದೇಶಕರು ಹಾಗೂ ಹರ್ಷ ಆಸ್ಪತ್ರೆ ಪಾಲುದಾರರು.
ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಕೋರುವ
ದುಃಖತಪ್ತರು: ಎಚ್. ಗಿರಿಜಾ ಶಿವಕುಮಾರ್ ಮತ್ತು ಕುಟುಂಬವರ್ಗದವರು ಹಾಗು ಸಿಬ್ಬಂದಿ ವರ್ಗ ಹರ್ಷ ವಿದ್ಯಾಸಂಸ್ಥೆಗಳು, ಹರ್ಷ ಆಸ್ಪತ್ರೆ, ನೆಲಮಂಗಲ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hospital & Medical Jobs

HEALTHBLOOM POLYCLINIC AT WHITEFIELD, BANGALORE of RADICAL PROPERTY PVT LTD REQUIRES
CHIEF MEDICAL OFFICER
MBBS with MD in General Medicine with 10 years of practicing to head with profit sharing
MEDICAL OFFICER
MBBS preferably with PG diploma in pediatric or Ortho with 5 years of practicing
LAB TECHINICIANS
B.Sc/Diploma in Medical Lab Technology with 2-5years of experience
RADIOLOGY TECHINICIAN(RT)
B.Sc /DMRT in Radiology imaging Technology with 2-5years experience
PHARMACIST
B.Pharm/D.Pharm with 2-5years experience of managing pharmacy of repute.
NURSES
B.Sc/Diploma/+2 pass with nursing qualification with 5 years experience
RECEPTIONIST
BA/B.Sc preferably in computer science with 3 years experience in front office
Attractive Salary package and those fulfilling job specs,may apply to RADICAL PROPERTIES PVT LTD by Email radicalreality2013@gmail.com
99621 - 82221
0422- 3513451

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs

✓ ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611285757, 9611625051

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ
ಕನಿಷ್ಠ 4 ವರ್ಷದ ಅನುಭವ ವಯೋಮಿತಿ 30 ವರ್ಷ ಒಳಗೆ
ಆಕರ್ಷಕ ವೇತನ, ವಸತಿ ಸೌಲಭ್ಯವಿರುತ್ತದೆ.
ನಾಗರಭಾವಿ 2ನೇ ಸ್ಟೇಜ್ ಎನ್. ಜಿ. ಎಫ್ ಲೇಔಟ್
----: ಸಂಪರ್ಕಿಸಿ :----
97425 43188
99001 00244

ಬೇಕಾಗಿದ್ದಾರೆ: ಅಡುಗೆಕೆಲಸ, ಮನೆಕೆಲಸ, ಮಕ್ಕಳನ್ನು ನೋಡಿಕೊಳ್ಳುವವರು, ರೋಗಿಗಳನ್ನು ನೋಡಿಕೊಳ್ಳುವವರು, ಹೆಂಗಸರು ಬೇಕಾಗಿದ್ದಾರೆ. ಸಂಬಳ:18,000/- ಸಂಪರ್ಕಿಸಿ: ಸ್ಟ್ಯಾಂಡರ್ಡ್ ಸರ್ವೀಸ್ಸ್, 134/1, 3ನೇ ಮಹಡಿ, ಜ್ಯೋತಿ ಕಾಂಪ್ಲೆಕ್ಸ್, ಇನ್‌ಫ್ಯಾಂಟ್ರಿ ರೋಡ್, ಶಿವಾಜಿನಗರ, ಬೆಂಗಳೂರು-560051 080-44556677, 9844008345

ವ್ಯಾಪಾರ

Business to Business

Hotel & Restaurant

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/ 9606701007

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ದ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

★ಶ್ರೀಕ್ಷೇತ್ರ, ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

ಸಮಾಜಸೇವೆ

Others

ಶ್ರೀ ಶಕ್ತಿ ಹೆಲ್ತ್ ಕೇರ್ ಇವರ ವತಿಯಿಂದ ಕೊರನ ಸಂಕಷ್ಟದ ಕುಟುಂಬದವರಿಗೆ ನನ್ನ ಕೈಲಾದ ಹಣ ಸಹಾಯ ಮಾಡುತ್ತೇನೆ.ಬೆಂಗಳೂರು ಸಂಪರ್ಕಿಸಿ: 9019626612

ವಾಹನ

Four Wheelers Selling

Others

ಹೊಸ ವರ್ಷದಲ್ಲಿ ನಿಮ್ಮ ಹೊಸ ಪ್ರಯಾಣವನ್ನು ಪ್ರಾರಂಭಿಸಿ
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

Ace ಪೆಟ್ರೋಲ್, ಡೀಸಲ್ ಮತ್ತು ಸಿಎನ್‌ಜಿ ಮಾದರಿಯಲ್ಲೂ ಲಭ್ಯ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತವೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ **Classifieds**
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಮುಂಬೈ ಪರ ರೋಹಿತ್ ಶರ್ಮಾ ಉತ್ತಮ ಬ್ಯಾಟಿಂಗ್; ಮಿಂಚಿದ ಶಿಖರ್ ಧವನ್

ಅಮಿತ್ ಮಿಶ್ರಾ ಆಟಕ್ಕೆ ಒಲಿದ ಜಯ

ಚೆನ್ನೈ(ಪಿಟಿಐ): ಸಣ್ಣ ಮೊತ್ತ ಗಳಿಸಿದರೂ ಛಲದ ಹೋರಾಟ ಮಾಡಿದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸುವಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಕೊನೆಗೂ ಯಶಸ್ವಿಯಾಯಿತು.

ಮಂಗಳವಾರ ಚೆಪಾಕ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಮುಂಬೈ ತಂಡವು ಅಮಿತ್ ಮಿಶ್ರಾ ಸ್ಪಿನ್ ದಾಳಿಯ ಮುಂದೆ ತತ್ತರಿಸಿತ್ತು. 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 137 ರನ್‌ಗಳ ಸಾಧಾರಣ ಮೊತ್ತ ಗಳಿಸಿತ್ತು. ಆದರೆ ಡೆಲ್ಲಿ ತಂಡವು ಈ ಗುರಿಯನ್ನು ಸುಲಭವಾಗಿ ತಲುಪಲು ಮುಂಬೈ ಬೌಲರ್‌ಗಳು ಬಿಡಲಿಲ್ಲ. ಆದ್ದರಿಂದ ಕೊನೆಯ ಓವರ್‌ನವರೆಗೂ ಪಂದ್ಯವು ಲಂಬಿಸಿತು. ಶಿಖರ್ ಧವನ್ (45; 42ಎ) ಮತ್ತು ಸ್ಟೀವ್ ಸ್ಮಿತ್ (33; 29ಎ) ಅವರ ತಾಳ್ಮೆಯ ಬ್ಯಾಟಿಂಗ್‌ನಿಂದ ಡೆಲ್ಲಿ ತಂಡವು 6 ವಿಕೆಟ್‌ಗಳ ಜಯ ದಾಖಲಿಸಿತು. ಲಲಿತ್ ಯಾದವ್ (ಔಟಾಗದೆ 22) ಮತ್ತು ಶಿಮ್ರೊನ್ ಹೆಟ್ಮೆಯರ್ (ಔಟಾಗದೆ 14) ಮಹತ್ವದ ಕಾಣಿಕೆ ನೀಡಿದರು. ನಾಲ್ಕು ಪಂದ್ಯಗಳನ್ನು ಆಡಿರುವ ರಿಷಭ್ ಪಂತ್ ಬಳಗವು ಮೂರನೇ ಜಯ ಸಾಧಿಸಿತು.

ಮಿಶ್ರಾ ಕೈಚಳಕ: ಅನುಭವಿ ಲೆಗ್‌ಸ್ಪಿನ್ನರ್ ಅಮಿತ್ ಮಿಶ್ರಾ (24ಕ್ಕೆ4) ಮುಂಬೈ ತಂಡವು ಸಣ್ಣ ಮೊತ್ತ ಗಳಿಸಲು ಕಾರಣರಾದರು. ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದರು.

ಟಾಸ್ ಗೆದ್ದ ರೋಹಿತ್ ಶರ್ಮಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಮಾರ್ಕಸ್ ಸ್ಟೋಯಿನಿಸ್ ಅವರು ಕ್ವಿಂಟನ್ ಡಿ ಕಾಕ್ ವಿಕೆಟ್ ಗಳಿಸಿ ಮುಂಬೈಗೆ ಮೊದಲ ಆಘಾತ ನೀಡಿದರು. ಆದರೆ, ಇನ್ನೊಂದು ಬದಿಯಲ್ಲಿದ್ದ ರೋಹಿತ್ (44; 30ಎಸೆತ, 3ಬೌಂಡರಿ, 3ಸಿಕ್ಸರ್) ಮತ್ತು ಸೂರ್ಯಕುಮಾರ್ ಯಾದವ್ (24; 15ಎ,4ಬೌಂ) ಜೊತೆಗೂಡಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಗಳಿಸಿದರು. ಈ ಜೊತೆಯಾಟವನ್ನು ಆವೇಶ್ ಖಾನ್ ಮುರಿದರು. ಅವರು ಏಳನೇ ಓವರ್‌ನಲ್ಲಿ ಸೂರ್ಯಕುಮಾರ್ ವಿಕೆಟ್ ಗಳಿಸಿದರು.

ಅರ್ಧಶತಕದತ್ತ ಸಾಗಿದ್ದ ರೋಹಿತ್ ವಿಕೆಟ್ ಗಳಿಸುವ ಮೂಲಕ ಅಮಿತ್ ಮಿಶ್ರಾ ತಮ್ಮ ಖಾತೆ ತೆರೆದರು. ಅದೇ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯಗೆ ಖಾತೆ ತೆರೆಯಲು ಅವಕಾಶ ನೀಡದ ಮಿಶ್ರಾ ವಿಕೆಟ್ ಗಳಿಸಿದರು. 12ನೇ ಓವರ್‌ನಲ್ಲಿ ಕೀರನ್ ಪೊಲಾರ್ಡ್ ವಿಕೆಟ್ ಕೂಡ ಕಬಳಿಸಿದರು.

ತಂಡದ ಮೊತ್ತವನ್ನು ಹಿಗ್ಗಿಸುವ ಪ್ರಯತ್ನದಲ್ಲಿದ್ದ ಇಶಾನ್ ಕಿಶನ್ (24; 15ಎ) ಅವರನ್ನು 18ನೇ ಓವರ್‌ನಲ್ಲಿ ಔಟ್ ಮಾಡಿದರು. ಇದರಿಂದಾಗಿ ಮುಂಬೈ ತಂಡದ ದೊಡ್ಡ ಮೊತ್ತ ಗಳಿಸುವ ಆಸೆ ಕಮರಿತು.

ಅಮಿತ್ ಮಿಶ್ರಾ ಸಂಭ್ರಮ

ಸ್ಕೋರ್‌ಕಾರ್ಡ್

ಮುಂಬೈ ಇಂಡಿಯನ್ಸ್ 9ಕ್ಕೆ 137 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಸಿ ಸ್ಟೀವನ್ ಸ್ಮಿತ್ ಬಿ ಅಮಿತ್ ಮಿಶ್ರಾ	44
ಕ್ವಿಂಟನ್ ಡಿ ಕಾಕ್ ಸಿ ರಿಷಭ್ ಪಂತ್ ಬಿ ಮಾರ್ಕಸ್ ಸ್ಟೊಯಿನಿಸ್	2
ಸೂರ್ಯಕುಮಾರ್ ಯಾದವ್ ಸಿ ರಿಷಭ್ ಪಂತ್ ಬಿ ಆವೇಶ್ ಖಾನ್	24
ಇಶಾನ್ ಕಿಶನ್ ಬಿ ಅಮಿತ್ ಮಿಶ್ರಾ	26
ಹಾರ್ದಿಕ್ ಪಾಂಡ್ಯ ಸಿ ಸ್ಟೀವನ್ ಸ್ಮಿತ್ ಬಿ ಅಮಿತ್ ಮಿಶ್ರಾ	0
ಕೃಣಾಲ್ ಪಾಂಡ್ಯ ಬಿ ಲಲಿತ್ ಯಾದವ್	1
ಕೀರನ್ ಪೊಲಾರ್ಡ್ ಎಲ್‌ಬಿಡಬ್ಲ್ಯು ಬಿ ಅಮಿತ್ ಮಿಶ್ರಾ	2
ಜಯಂತ್ ಯಾದವ್ ಸಿ ಮತ್ತು ಬಿ ಕಗಿಸೊ ರಬಾಡ	23
ರಾಹುಲ್ ಚಾಹರ್ ಸಿ ರಿಷಭ್ ಪಂತ್ ಬಿ ಆವೇಶ್ ಖಾನ್	6
ಜಸ್‌ಪ್ರೀತ್ ಬೂಮ್ರಾ ಔಟಾಗದೆ	3
ಟ್ರೆಂಟ್ ಬೌಲ್ಟ್ ಔಟಾಗದೆ	1
ಇತರೆ(ಲೆಗ್‌ಬೈ 5)	05

ವಿಕೆಟ್ ಪತನ: 1–9 (ಡಿಕಾಕ್; 2.1), 2–67 (ಸೂರ್ಯಕುಮಾರ್; 6.6), 3–76 (ರೋಹಿತ್; 8.4), 4–77(ಹಾರ್ದಿಕ್;8.6), 5–81 (ಕೃಣಾಲ್; 10.4), 6–84 (ಪೊಲಾರ್ಡ್; 11.5), 7–123 (ಇಶಾನ್; 17.3), 8–129 (ಜಯಂತ್; 18.5), 9–135 (ರಾಹುಲ್; 19.4)

ಬೌಲಿಂಗ್: ಮಾರ್ಕಸ್ ಸ್ಟೋಯಿನಿಸ್ 3–0–20–1, ಆರ್.ಅಶ್ವಿನ್ 4–0–31–0, ಕಗಿಸೊ ರಬಾಡ 3–0–25–1, ಅಮಿತ್ ಮಿಶ್ರಾ 4–0–24–4, ಆವೇಶ್ ಖಾನ್ 2–0–15–2, ಲಲಿತ್ ಯಾದವ್ 4–0–17–1.

ಡೆಲ್ಲಿ ಕ್ಯಾಪಿಟಲ್ಸ್ 4ಕ್ಕೆ 138 (19.1 ಓವರ್‌ಗಳಲ್ಲಿ)

ಪೃಥ್ವಿ ಶಾ ಸಿ ಮತ್ತು ಬಿ ಜಯಂತ್ ಯಾದವ್	07
ಶಿಖರ್ ಧವನ್ ಸಿ ಕೃಣಾಲ್ ಪಾಂಡ್ಯ ಬಿ ರಾಹುಲ್ ಚಾಹರ್	45
ಸ್ಟೀವನ್ ಸ್ಮಿತ್ ಎಲ್‌ಬಿಡಬ್ಲ್ಯು ಬಿ ಕೀರನ್ ಪೊಲಾರ್ಡ್	33
ಲಲಿತ್ ಯಾದವ್ ಔಟಾಗದೆ	22
ರಿಷಭ್ ಪಂತ್ ಸಿ ಕೃಣಾಲ್ ಪಾಂಡ್ಯ ಬಿ ಜಸ್‌ಪ್ರೀತ್ ಬೂಮ್ರಾ	7
ಶಿಮ್ರೊನ್ ಹೆಟ್ಮೆಯರ್ ಔಟಾಗದೆ	14
ಇತರೆ (ಲೆಗ್ ಬೈ 3, ನೋಬಾಲ್ 3, ವೈಡ್ 4)	10

ವಿಕೆಟ್ ಪತನ: 1–11 (ಪೃಥ್ವಿ ಶಾ, 1.3), 2–64 (ಸ್ಮಿತ್, 9.2), 3–100 (ಶಿಖರ್, 14.5), 4–115 (ರಿಷಭ್ ಪಂತ್, 16.5)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–23–0, ಜಯಂತ್ ಯಾದವ್ 4–0–25–1, ಜಸ್‌ಪ್ರೀತ್ ಬೂಮ್ರಾ 4–0–32–1, ಕೃಣಾಲ್ ಪಾಂಡ್ಯ 2–0–17–0, ರಾಹುಲ್ ಚಾಹರ್ 4–0–29–1, ಕೀರನ್ ಪೊಲಾರ್ಡ್ 1.1–0–9–1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 6 ವಿಕೆಟ್‌ಗಳ ಜಯ

ರಾಹುಲ್ ಪಡೆಗೆ ಪುಟಿದೇಳುವ ಛಲ

ಮೊದಲ ಗೆಲುವಿನ ನಿರೀಕ್ಷೆಯಲ್ಲಿ ಸನ್‌ರೈಸರ್ಸ್ ಹೈದರಾಬಾದ್

ಚೆನ್ನೈ (ಪಿಟಿಐ): ಸತತ ಎರಡು ಸೋಲುಗಳಿಂದ ಕಂಗೆಟ್ಟಿರುವ ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಇನ್ನೂ ಜಯದ ಖಾತೆಯನ್ನೇ ತೆರೆಯದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಬುಧವಾರ ಎದುರಿಸಲಿದೆ.

ಡೇವಿಡ್ ವಾರ್ನರ್ ಬಳಗವು ಹಿಂದೆಂದೂ ಟೂರ್ನಿಯಲ್ಲಿ ಇಂತಹ ಆರಂಭ ಕಂಡಿರಲಿಲ್ಲ. ಯಾವಾಗಲೂ ಸಮತೋಲನವಾದ ತಂಡವೆಂಬ ಖ್ಯಾತಿ ಇದಕ್ಕಿದೆ. ಆದರೆ ಈ ಬಾರಿ ಕೆಳಕ್ರಮಾಂಕದ ಬ್ಯಾಟಿಂಗ್‌ನಲ್ಲಿ ಫಿನಿಷರ್ ಕೊರತೆ ಕಾಡುತ್ತಿದೆ.

ಆರಂಭಿಕ ಜೊತೆಯಾಟಗಳೂ ಉತ್ತಮವಾಗಿ ಮೂಡಿಬಂದಿಲ್ಲ. ನಾಯಕ ವಾರ್ನರ್ ಇಲ್ಲಿಯವರೆಗೆ ಕೇವಲ 93 ರನ್‌ಗಳನ್ನು ಮಾತ್ರ ಗಳಿಸಿದ್ದಾರೆ. ಅದರಲ್ಲಿ ಒಂದು ಅರ್ಧಶತಕ ಇದೆ.

ಕೇನ್ ವಿಲಿಯಮ್ಸನ್ ಇಲ್ಲದಿರುವ ಕೊರತೆ ತಂಡವನ್ನು ಕಾಡುತ್ತಿದೆ. ವೃದ್ಧಿಮಾನ್ ಸಹಾ ಲಯದಲ್ಲಿ ಇಲ್ಲ. ಮನೀಷ್ ಪಾಂಡೆ, ವಿಜಯಶಂಕರ್, ಅಭಿಷೇಕ್ ಶರ್ಮಾ ಮತ್ತು ಅಬ್ದುಲ್ ಸಮದ್ ಅವರು ನಿರೀಕ್ಷೆಯಂತೆ ಆಡಿಲ್ಲ. ಮನೀಷ್ ಫೀಲ್ಡಿಂಗ್ ಚೆನ್ನಾಗಿದೆ.

ಅನುಭವಿ ಆಲ್‌ರೌಂಡರ್ ಕೇದಾರ್ ಜಾಧವ್ ಮತ್ತು ಪ್ರಿಯಂ ಗರ್ಗ್ ಅವರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಬೌಲಿಂಗ್‌ನಲ್ಲಿ ರಶೀದ್ ಖಾನ್ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಭುವನೇಶ್ವರ್ ಕುಮಾರ್, ಟಿ. ನಟರಾಜನ್ ಮತ್ತು ಸಂದೀಪ್ ಶರ್ಮಾ ತಮ್ಮ ಎಂದಿನ ನೈಜ ಸಾಮರ್ಥ್ಯ ತೋರಿದರೆ ತಂಡದ ಬಲ ಹೆಚ್ಚಬಹುದು.

ಆದರೆ, ಗೆಲ್ಲಲೇಬೇಕಾದ ಒತ್ತಡದಲ್ಲಿರುವ ಸನ್‌ರೈಸರ್ಸ್ ವಿರುದ್ಧ ಮೇಲುಗೈ ಸಾಧಿಸಿ ಮತ್ತೆ ಜಯದ ಹಳಿಗೆ ಮರಳಲು ಪಂಜಾಬ್ ತಂಡವು ಯೋಜನೆ ಹೆಣೆಯುತ್ತಿದೆ.

ಹೋದ ಪಂದ್ಯದಲ್ಲಿ ಪಂಜಾಬ್ ತಂಡದ ಆರಂಭಿಕ ಜೋಡಿ ರಾಹುಲ್ ಮತ್ತು ಮಯಂಕ್ ಅಗರವಾಲ್ ಶತಕದ ಜೊತೆಯಾಟವಾಡಿದ್ದರು. ದೊಡ್ಡ ಮೊತ್ತ ಪೇರಿಸಲು ಕಾರಣರಾಗಿದ್ದರು. ಆದರೆ ಬೌಲರ್‌ಗಳ ವೈಫಲ್ಯ ತಂಡವನ್ನು ಕಾಡಿತ್ತು. ಮೊಹಮ್ಮದ್ ಶಮಿ, ಜೇ ರಿಚರ್ಡ್ಸನ್ ಮತ್ತು ರೀಲಿ ಮೆರೆಡಿತ್ ಅವರನ್ನು ಸಮರ್ಥವಾಗಿ ನಿಯೋಜಿಸುವಲ್ಲಿ ರಾಹುಲ್ ಯಶಸ್ವಿಯಾಗಿರಲಿಲ್ಲ. ಇದೀಗ ಪುಟಿದೇಳುವ ನಿರೀಕ್ಷೆಯಲ್ಲಿದ್ದಾರೆ.

ಕೆ.ಎಲ್ ರಾಹುಲ್

ತಂಡಗಳು: ಪಂಜಾಬ್ ಕಿಂಗ್ಸ್: ಕೆ.ಎಲ್. ರಾಹುಲ್ (ನಾಯಕ–ವಿಕೆಟ್‌ಕೀಪರ್), ಮಯಂಕ್ ಅಗರವಾಲ್, ಕ್ರಿಸ್ ಗೇಲ್, ಮನದೀಪ್ ಸಿಂಗ್, ಪ್ರಭಸಿಮ್ರನ್ ಸಿಂಗ್, ನಿಕೊಲಸ್ ಪೂರನ್, ದೀಪಕ್ ಹೂಡಾ. ಸರ್ಫರಾಜ್ ಖಾನ್,ಮೊಹಮ್ಮದ್ ಶಮಿ, ಕ್ರಿಸ್ ಜೋರ್ಡಾನ್, ಜೇ ರಿಚರ್ಡ್ಸನ್, ಡೇವಿಡ್ ಮಲಾನ್, ಶಾರೂಖ್ ಖಾನ್, ಮರುಗನ್ ಅಶ್ವಿನ್ ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್.

ಸನ್‌ರೈಸರ್ಸ್ ಹೈದರಾಬಾದ್: ಡೇವಿಡ್ ವಾರ್ನರ್ (ನಾಯಕ), ಕೇನ್ ವಿಲಿಯಮ್ಸನ್, ವಿರಾಟ್ ಸಿಂಗ್, ಮನೀಷ್ ಪಾಂಡೆ, ಪ್ರಿಯಂ ಗಾರ್ಗ್, ವೃದ್ಧಿಮಾನ್ ಸಹಾ, ಜಾನಿ ಬೆಸ್ಟೊ, ಜೇಸನ್ ರಾಯ್, ವಿಜಯಶಂಕರ್, ಮೊಹಮ್ಮದ್ ನಬಿ, ಕೇದಾರ್ ಜಾಧವ್, ಭುವನೇಶ್ವರ್ ಕುಮಾರ್, ಜೇಸನ್ ಹೋಲ್ಡರ್, ರಶೀದ್ ಖಾನ್, ಟಿ ನಟರಾಜನ್, ಸಂದೀಪ್ ಶರ್ಮಾ, ಸಿದ್ಧಾರ್ಥ್ ಕೌಲ್, ಬಾಸಿಲ್ ತಂಪಿ, ಖಲೀಲ್ ಅಹಮದ್, ಮುಜೀಬ್ ಉರ್ ರೆಹಮಾನ್.

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸೋಲಿನ ಸರಪಣಿ ಕಳಚಿಕೊಳ್ಳುವ ಛಲದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್

ಜಯದ ಓಟ ಮುಂದುವರಿಸುವತ್ತ ಚೆನ್ನೈ ಚಿತ್ತ

ಮುಂಬೈ (ಪಿಟಿಐ): ಒಂದರ ಹಿಂದೊಂದು ಜಯಸಾಧಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಬುಧವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ನಡೆಯಲಿರುವ ಪಂದ್ಯದಲ್ಲಿಯೂ ಮೇಲುಗೈ ಸಾಧಿಸುವ ಛಲದಲ್ಲಿದೆ.

ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಟೂರ್ನಿಯಲ್ಲಿ ಚೆನ್ನೈ ತಂಡವು ಪ್ಲೇ ಆಫ್ ಪ್ರವೇಶಿಸಿರಲಿಲ್ಲ. ಈ ಟೂರ್ನಿಯಲ್ಲಿಯೂ ಮಹೇಂದ್ರಸಿಂಗ್ ಧೋನಿ ಬಳಗವು ಮೊದಲ ಪಂದ್ಯದಲ್ಲಿ ಸೋಲನುಭವಿಸಿತ್ತು. ಆದರೆ ನಂತರದ ಎರಡು ಪಂದ್ಯಗಳಲ್ಲಿ ಪುಟಿದೆದ್ದ ರೀತಿ ಅಮೋಘವಾಗಿತ್ತು.

ವಾಂಖೆಡೆ ಕ್ರೀಡಾಂಗಣದಲ್ಲಿ ಚೆನ್ನೈ ತಂಡದ ಮಧ್ಯಮವೇಗಿ ದೀಪಕ್ ಚಾಹರ್, ಆಲ್‌ರೌಂಡರ್‌ಗಳಾದ ಮೋಯಿನ್ ಅಲಿ ಮತ್ತು ಸ್ಯಾಮ್ ಕರನ್ ಅವರ ಆಟದ ಬಲದಿಂದ ಜಯ ಸಾಧ್ಯವಾಗಿದೆ. ಚೆನ್ನೈ ಬ್ಯಾಟ್ಸ್‌ಮನ್‌ಗಳು ವೈಯಕ್ತಿಕವಾಗಿ ಬಹಳ ದೊಡ್ಡ ಸ್ಕೋರ್ ಗಳಿಸದಿದ್ದರೂ ತಂಡವು ಹೋರಾಟದ ಮೊತ್ತ ಪೇರಿಸುವಲ್ಲಿ ಕಾಣಿಕೆ ನೀಡಿದ್ದಾರೆ. ಅದಕ್ಕೆ ತಕ್ಕಂತೆ ಬೌಲರ್‌ಗಳೂ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಐಪಿಎಲ್‌ನಲ್ಲಿ 200ಕ್ಕೂ ಹೆಚ್ಚು ಪಂದ್ಯಗಳನ್ನು ಆಡಿರುವ ನಾಯಕ ಧೋನಿಯ ತಂತ್ರಗಳು ಫಲ ನೀಡಿವೆ. ಇದರಿಂದಾಗಿ ಕೆಕೆಆರ್ ವಿರುದ್ಧ ಗೆಲ್ಲುವ ನೆಚ್ಚಿನ ತಂಡ ಚೆನ್ನೈ ಆಗಿದೆ.

ಏಕೆಂದರೆ, ಮಾರ್ಗನ್ ನಾಯಕತ್ವದ ಕೋಲ್ಕತ್ತ ತಂಡವು ಆಡಿರುವ ಮೂರು ಪಂದ್ಯಗಳಲ್ಲಿ ಒಂದು ಗೆದ್ದು, ಎರಡರಲ್ಲಿ ಸೋತಿದೆ. ಹೋದ ಪಂದ್ಯದಲ್ಲಿ ಆರ್‌ಸಿಬಿಯ ಎಬಿ ಡಿವಿಲಿಯರ್ಸ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಅಬ್ಬರದ ಬ್ಯಾಟಿಂಗ್ ಮುಂದೆ ಕೆಕೆಆರ್ ಜಯದಾಸೆ ಕಮರಿತ್ತು.ತಂಡದ ಆಲ್‌ರೌಂಡರ್‌ಗಳಾದ ಆ್ಯಂಡ್ರೆ ರಸೆಲ್ ಮತ್ತು ಶಕೀಬ್ ಅಲ್ ಹಸನ್ ಫಿನಿಷರ್ ಪಾತ್ರ ನಿರ್ವಹಿಸದೇ ಇರುವುದು ತಂಡದ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ. ರಸೆಲ್ ತಮ್ಮ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಪ್ಯಾಟ್ ಕಮಿನ್ಸ್ ಲಯಕ್ಕೆ ಮರಳಿದರೆ ಎದುರಾಳಿ ತಂಡಕ್ಕೆ ಸವಾಲೊಡ್ಡುವುದು ಖಚಿತ. ತಮ್ಮ ತಂಡದ ಪ್ರತಿಭಾವಂತ ಬೌಲರ್‌ಗಳನ್ನು ನಿಯೋಜಿಸುವಲ್ಲಿ ಮಾರ್ಗನ್ ಅನುಸರಿಸುವ ತಂತ್ರಗಾರಿಕೆಯು ಪ್ರಮುಖವಾಗಲಿದೆ.

ಏಯಾನ್ ಮಾರ್ಗನ್

ಮಹೇಂದ್ರಸಿಂಗ್ ಧೋನಿ

ತಂಡಗಳು: ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ/ವಿಕೆಟ್‌ಕೀಪರ್), ಸುರೇಶ್ ರೈನಾ, ಅಂಬಟಿ ರಾಯುಡು, ಕೆ.ಎಂ. ಆಸಿಫ್, ದೀಪಕ್ ಚಾಹರ್, ಡ್ವೇನ್ ಬ್ರಾವೊ, ಫಫ್ ಡುಪ್ಲೆಸಿ, ಇಮ್ರಾನ್ ತಾಹೀರ್, ಎನ್. ಜಗದೀಶನ್, ಕರ್ಣ ಶರ್ಮಾ, ಲುಂಗಿ ಗಿಡಿ, ಮಿಚೆಲ್ ಸ್ಯಾಂಟನರ್, ರವೀಂದ್ರ ಜಡೇಜ, ಋತುರಾಜ್ ಗಾಯಕವಾಡ್, ಶಾರ್ದೂಲ್ ಠಾಕೂರ್, ಸ್ಯಾಮ್ ಕರನ್, ಜೋಶ್ ಹ್ಯಾಜಲ್‌ವುಡ್, ಆರ್. ಸಾಯಿಕಿಶೋರ್, ರಾಬಿನ್ ಉತ್ತಪ್ಪ, ಮೋಯಿನ್ ಅಲಿ, ಕೃಷ್ಣಪ್ಪ ಗೌತಮ್, ಚೇತೇಶ್ವರ್ ಪೂಜಾರ, ಎಂ. ಹರಿಶಂಕರ್ ರೆಡ್ಡಿ, ಕೆ. ಭಗತ್ ವರ್ಮಾ, ಸಿ. ಹರಿನಿಶಾಂತ್.

ಕೋಲ್ಕತ್ತ ನೈಟ್ ರೈಡರ್ಸ್: ಏಯಾನ್ ಮಾರ್ಗನ್ (ನಾಯಕ), ದಿನೇಶ್ ಕಾರ್ತಿಕ್, ಶುಭಮನ್ ಗಿಲ್, ನಿತೀಶ್ ರಾಣಾ, ಆ್ಯಂಡ್ರೆ ರಸೆಲ್, ಕುಲದೀಪ್ ಯಾದವ್, ಶಿವಂ ಮಾವಿ, ಲಾಕಿ ಫರ್ಗ್ಯುಸನ್, ಪ್ಯಾಟ್ ಕಮಿನ್ಸ್, ಕಮಲೇಶ್ ನಾಗರಕೋಟಿ, ಸಂದೀಪ್ ವರಿಯರ್, ಪ್ರಸಿದ್ಧ ಕೃಷ್ಣ, ರಿಂಕು ಸಿಂಗ್, ಶಕೀಬ್ ಅಲ್ ಹಸನ್, ರಾಹುಲ್ ತ್ರಿಪಾಠಿ, ವರುಣ್ ಚಕ್ರವರ್ತಿ, ಕರುಣ್ ನಾಯರ್, ಹರಭಜನ್ ಸಿಂಗ್

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸರ್ಕಾರದ ಗಮನ ಸೆಳೆದ ರಾಹುಲ್, ಮಮತಾ ಬ್ಯಾನರ್ಜಿ

ಕೇಂದ್ರದ ಲಸಿಕೆ ನೀತಿಗೆ ಆಕ್ಷೇಪ

ನವದೆಹಲಿ/ಕೋಲ್ಕತ್ತ (ಪಿಟಿಐ): ಕೇಂದ್ರ ಸರ್ಕಾರದ ಲಸಿಕೆ ನೀತಿಯು ತಾರಮತ್ಯದಿಂದ ಕೂಡಿದೆ ಎಂಬ ಕೂಗು ಎದ್ದಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ಬಗ್ಗೆ ದೂರಿದ್ದಾರೆ.

ರಾಹುಲ್ ಗಾಂಧಿ

ಮಮತಾ ಬ್ಯಾನರ್ಜಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಮಮತಾ, ಕೇಂದ್ರದ ಲಸಿಕೆ ನೀತಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಏಪ್ರಿಲ್ 19ರಂದು ತೀರಾ ತಡವಾಗಿ ಸಾರ್ವತ್ರಿಕ ಲಸಿಕಾ ನೀತಿ ಪ್ರಕಟಿಸಲಾಗಿದ್ದು, ಅದರಲ್ಲಿ ಯಾವುದೇ ಗಟ್ಟಿತನ ಇಲ್ಲ ಎಂದು ದೂರಿದ್ದಾರೆ.

ಉತ್ಪಾದಕರಿಂದ ಲಸಿಕೆ ಖರೀದಿಸಿ ರಾಜ್ಯ ಸರ್ಕಾರದ ಕಡೆಯಿಂದ ಜನರಿಗೆ ಉಚಿತವಾಗಿ ನೀಡಲು ಅವಕಾಶ ನೀಡುವಂತೆ ಫೆಬ್ರುವರಿ 24ರಂದೇ ಪ್ರಧಾನಿ ಅವರಿಗೆ ಮನವಿ ಮಾಡಿದ್ದೆ ಎಂದು ಮಮತಾ ಪತ್ರದಲ್ಲಿ ನೆನಪಿಸಿದ್ದಾರೆ.

'ನನ್ನ ಪತ್ರಕ್ಕೆ ನಿಮ್ಮ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈಗ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿದೆ. ಆದರೆ ಕೇಂದ್ರವು ಬರೀ ವಾಕ್ಚಾತುರ್ಯ ಪ್ರದರ್ಶಿಸುತ್ತಿದೆ. ಜನರಿಗೆ ಲಸಿಕೆಗಳನ್ನು ಲಭ್ಯವಾಗುವಂತೆ ಮಾಡುವ ಜವಾಬ್ದಾರಿಯಿಂದ ದೂರ ಸರಿಯುತ್ತಿದೆ' ಎಂದು ಬ್ಯಾನರ್ಜಿ ಉಲ್ಲೇಖಿಸಿದ್ದಾರೆ.

ಸೋಮವಾರ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ನೀತಿಯಲ್ಲಿ ಯಾವುದೇ ಖಾತರಿ ಇರುವ ಘೋಷಣೆಗಳನ್ನು ಪ್ರಕಟಿಸಿಲ್ಲ. ಲಸಿಕೆಗಳನ್ನು ರಾಜ್ಯಗಳು ಖರೀದಿಸಬೇಕಾದ ಬೆಲೆ ಮುಂತಾದ ಪ್ರಮುಖ ಸಮಸ್ಯೆಗಳನ್ನು ಕೇಂದ್ರ ಬಗೆಹರಿಸಿಲ್ಲ ಎಂದು ಅವರು ಗಮನ ಸೆಳೆದಿದ್ದಾರೆ.

'ನೀತಿಯಲ್ಲಿ ಲಸಿಕೆ ಪೂರೈಕೆ ಬಗ್ಗೆ ಕೇಂದ್ರ ಸರ್ಕಾರ ಖಚಿತ ನಿಲುವು ಪ್ರಕಟಿಸದ ಕಾರಣ, ಮಾರುಕಟ್ಟೆಯಲ್ಲಿ ಲಸಿಕೆ ಮಾರಾಟ ನಿಯಂತ್ರಣ ತಪ್ಪುತ್ತದೆ. ಇದು ಸಾಮಾನ್ಯ ಜನರಿಗೆ ಭಾರಿ ಆರ್ಥಿಕ ಹೊರೆಯಾಗುತ್ತದೆ' ಎಂದಿದ್ದಾರೆ.

'ದುರ್ಬಲರಿಗೆ ಲಭ್ಯವಾಗದು': ಕೇಂದ್ರ ಸರ್ಕಾರದ ಲಸಿಕೆ ನೀತಿಯು ತಾರತಮ್ಯದಿಂದ ಕೂಡಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

ದುರ್ಬಲ ಸಮುದಾಯದವರಿಗೆ ಲಸಿಕೆ ದೊರೆಯುತ್ತದೆ ಎಂಬ ಬಗ್ಗೆ ಯಾವುದೇ ಖಾತರಿ ಇಲ್ಲ ಎಂದು ಆರೋಪಿಸಿರುವ ಅವರು, 18ರಿಂದ 45 ವರ್ಷದೊಳಗಿನವರಿಗೆ ಲಸಿಕೆ ಉಚಿತವಾಗಿ ಸಿಗುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ.

ಮೇ 1ರಿಂದ ಎಲ್ಲ ವಯಸ್ಕರು ಕೋವಿಡ್ ಲಸಿಕೆ ಪಡೆಯಲು ಅರ್ಹರಾಗುತ್ತಾರೆ ಎಂದು ಸರ್ಕಾರ ಸೋಮವಾರ ಪ್ರಕಟಿಸಿತ್ತು. ಖಾಸಗಿ ಆಸ್ಪತ್ರೆಗಳು ಮತ್ತು ರಾಜ್ಯಗಳು ಉತ್ಪಾದಕರಿಂದ ನೇರವಾಗಿ ಡೋಸ್‌ಗಳನ್ನು ಖರೀದಿಸಲು ಸರ್ಕಾರ ಅನುವು ಮಾಡಿಕೊಟ್ಟಿದೆ.

ಮಹಾರಾಷ್ಟ್ರ, ರಾಜಸ್ಥಾನ, ಪಂಜಾಬ್ ದೆಹಲಿ ಮೊದಲಾದ ರಾಜ್ಯಗಳು ಲಸಿಕೆ ಪಡೆಯಲು ಇರುವ ವಯಸ್ಸಿನ ಮಿತಿ ತೆಗೆದುಹಾಕುವಂತೆ ಕೇಂದ್ರ ಸರ್ಕಾರವನ್ನು ಕೋರಿದ್ದವು.

ಮುಂದಿನ ತಿಂಗಳು ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಶುರುವಾಗಲಿದೆ. ಲಸಿಕೆ ತಯಾರಕರು ರಾಜ್ಯ ಸರ್ಕಾರಗಳಿಗೆ ಮತ್ತು ಮುಕ್ತ ಮಾರುಕಟ್ಟೆಗೆ ಶೇ 50ರಷ್ಟು ಡೋಸ್‌ಗಳನ್ನು ಪೂರೈಸಲು ಮುಕ್ತರಾಗಿದ್ದಾರೆ. ಆದರೆ ಅವರು ಮೇ 1ರ ಮೊದಲು ಬೆಲೆಯನ್ನು ಮುಂಗಡವಾಗಿ ಘೋಷಿಸಬೇಕಿದೆ.

> **ಮೋದಿ ಅವರೇ, ಚುನಾವಣೆ ಗೆಲ್ಲಲು ನೀವು ಸ್ನಾಯುಬಲ, ಮಾತಿನ ಬಲ ಎಲ್ಲವನ್ನೂ ಬಳಸುತ್ತೀರಿ. ಅದೇ ಹುರುಪಿನಲ್ಲಿ ಕೋವಿಡ್ ವಿರುದ್ಧ ನಮ್ಮ ಜನರಿಗಾಗಿ ಏಕೆ ಹೋರಾಡುತ್ತಿಲ್ಲ?**
> **ಕಪಿಲ್ ಸಿಬಲ್,** ಕಾಂಗ್ರೆಸ್ ಮುಖಂಡ

> **ಒಂದು ದೇಶ ಒಂದು ತೆರಿಗೆ, ಒಂದು ದೇಶ ಒಂದು ಚುನಾವಣೆಯಲ್ಲಿ ಈ ಸರ್ಕಾರಕ್ಕೆ ನಂಬಿಕೆ ಇದೆ. ಆದರೆ ಲಸಿಕೆಗಳಿಗೆ ಮಾತ್ರ ಬೇರೆ ಬೇರೆ ದರ ಇದೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಮುಖಂಡ

ಆರ್ಥಿಕ ಹಿತಾಸಕ್ತಿಯಲ್ಲ ಜೀವ ಮುಖ್ಯ: ಕೇಂದ್ರಕ್ಕೆ ದೆಹಲಿ ಹೈಕೋರ್ಟ್ ತರಾಟೆ

ನವದೆಹಲಿ: ಮನುಷ್ಯ ಜೀವಕ್ಕಿಂತ ಆರ್ಥಿಕ ಹಿತಾಸಕ್ತಿ ಮುಖ್ಯವಾಗಬಾರದು ಎಂದು ದೆಹಲಿ ಹೈಕೋರ್ಟ್ ಹೇಳಿದೆ. ದೆಹಲಿಯಲ್ಲಿ ಮತ್ತು ಇತರೆಡೆಗಳಲ್ಲಿ ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ ನ್ಯಾಯಾಲಯವು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. 'ನಾವು ದೊಡ್ಡ ದುರಂತದತ್ತ ಸಾಗುತ್ತಿದ್ದೇವೆ. ಸುಮಾರು ಒಂದು ಕೋಟಿ ಜನರು ಸಾಯುವ ಅಪಾಯಿದೆ. ಅದನ್ನು ಸಹಿಸಿಕೊಳ್ಳಲು ನಿಮಗೆ ಆಗುತ್ತದೆಯೇ' ಎಂದು ಪೀಠವು ಕೇಳಿದೆ.

ಲಾಕ್‌ಡೌನ್ ಮುಂದುವರಿದರೆ ಎಲ್ಲವೂ ಸ್ಥಗಿತವಾಗಿಯೇ ಇರಲಿದೆ. ಹಾಗಿರುವಾಗ ಉಕ್ಕು, ಪೆಟ್ರೋಲ್, ಡೀಸೆಲ್ ಯಾರಿಗೆ ಬೇಕು. ಮನುಷ್ಯ ಜೀವಗಳು ಅಪಾಯದಲ್ಲಿರುವಾಗ ಆಮ್ಲಜನಕದ ಕೈಗಾರಿಕಾ ಬಳಕೆಗೆ ನಿಷೇಧ ಹೇರಲು ಇದೇ 22ರವರೆಗೆ ಏಕೆ ಕಾಯಬೇಕು ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರ ಪೀಠವು ಪ್ರಶ್ನಿಸಿದೆ.

'ಕೊರತೆ ಇರುವುದು ಈಗ. ಹಾಗಾಗಿ ನಿಷೇಧವನ್ನು ಈಗ ಜಾರಿ ಮಾಡಬೇಕು. ಉಕ್ಕು ಮತ್ತು ಪೆಟ್ರೋಲಿಯಂ ಕೈಗಾರಿಕೆಯಿಂದ ಆಮ್ಲಜನಕ ಪಡೆದುಕೊಳ್ಳಿ. ಅವರ ಜೇಬು, ಪ್ರಭಾವ ದೊಡ್ಡದು. ಹಾಗಿದ್ದರೂ ಉತ್ಪಾದನೆ ಕಡಿತ ಮಾಡಿ ಎಂದರೆ ಉತ್ಪಾದನೆ ಕಡಿತ ಮಾಡಲೇಬೇಕು. ಜೀವಗಳನ್ನು ಉಳಿಸಬೇಕಿದೆ ಎಂದು ಅವರಿಗೆ ನೇರವಾಗಿ ಹೇಳಿ' ಎಂದು ಪೀಠವು ತಿಳಿಸಿದೆ.

ಕೇಂದ್ರ ಸರ್ಕಾರದ ಪರ ವಕೀಲರೊಬ್ಬರ ತಂದೆಯ ಪರಿಸ್ಥಿತಿಯನ್ನು ಪೀಠವು ಉಲ್ಲೇಖಿಸಿದೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಆಮ್ಲಜನಕದ ಬೆಂಬಲ ಬೇಕಾಗಿತ್ತು. ಆದರೆ, ಲಭ್ಯತೆ ಕೊರತೆಯಿಂದಾಗಿ ಕಡಿಮೆ ಒತ್ತಡದಲ್ಲಿ ಆಮ್ಲಜನಕ ಪೂರೈಸಲಾಗಿತ್ತು. ಏಪ್ರಿಲ್ 22ರವರೆಗೆ ಕಾಯಿರಿ ಎಂದು ಅವರಿಗೆ ಹೇಳಲಾಗುತ್ತದೆಯೇ ಎಂದು ಪೀಠವು ಪ್ರಶ್ನಿಸಿತು.

ದೆಹಲಿಗೆ ಆಮ್ಲಜನಕ ಪೂರೈಕೆಯಲ್ಲಿ ತೊಡಕು ಉಂಟಾಗಿಲ್ಲ. ಇದೇ 22ರಿಂದ ಕೈಗಾರಿಕಾ ಬಳಕೆ ಮೇಲೆ ನಿಷೇಧ ಹೇರಲಾಗಿದೆ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರು ಹೇಳಿದರು. ದೆಹಲಿ ಸೇರಿದಂತೆ ಎಲ್ಲ ರಾಜ್ಯಗಳು ವೈದ್ಯಕೀಯ ಆಮ್ಲಜನಕವನ್ನು ಮಿತವಾಗಿ ಬಳಸಬೇಕು ಎಂದರು.

ಕೋವಿಡ್ : ಭದ್ರತಾಪಡೆ ಅಧಿಕಾರಿಗಳೊಂದಿಗೆ ರಾಜನಾಥ್ ಸಿಂಗ್ ಚರ್ಚೆ

ನೆರವು: ರಕ್ಷಣಾ ಉದ್ದಿಮೆಗಳಿಗೆ ಸೂಚನೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ರಾಜ್ಯಗಳಿಗೆ ಆಮ್ಲಜನಕ ಸಿಲಿಂಡರ್‌ಗಳು, ಹೆಚ್ಚುವರಿ ಹಾಸಿಗೆಗಳನ್ನು ಪೂರೈಸಲು ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸುವಂತೆ ರಕ್ಷಣಾ ಕ್ಷೇತ್ರದ ಸಾರ್ವಜನಿಕ ವಲಯದ ಉದ್ದಿಮೆಗಳಾದ (ಡಿಎಸ್‌ಪಿಯು) ಡಿಆರ್‌ಡಿಒ ಹಾಗೂ ಒಎಫ್‌ಬಿಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸೂಚನೆ ನೀಡಿದ್ದಾರೆ.

ರಾಜನಾಥ ಸಿಂಗ್

ರಾಜನಾಥ್ ಸಿಂಗ್ ಅವರು ಭದ್ರತಾ ಪಡೆಗಳ ಮುಖ್ಯಸ್ಥರೊಂದಿಗೆ ನಡೆಸಿದ ವರ್ಚುವಲ್ ಸಭೆಯಲ್ಲಿ ಈ ಸೂಚನೆ ನೀಡಿದರು.

ರಕ್ಷಣಾ ಸಚಿವಾಲಯ ಕಾರ್ಯದರ್ಶಿ ಅಜಯ್‌ಕುಮಾರ್, ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಬಿಪಿನ್ ರಾವತ್, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಕರಂಬೀರ್ ಸಿಂಗ್, ಭೂಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ, ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗಳ (ಎಎಫ್‌ಎಂಎಸ್) ಮಹಾ ನಿರ್ದೇಶಕ ವೈಸ್ ಅಡ್ಮಿರಲ್ ರಜತ್ ದತ್ತಾ, ಡಿಆರ್‌ಡಿಒ ಅಧ್ಯಕ್ಷ ಜಿ.ಸತೀಶ್ ರೆಡ್ಡಿ ಸಭೆಯಲ್ಲಿ ಪಾಲ್ಗೊಂಡಿದ್ದರು.

'ಎಲ್ಲ ರಾಜ್ಯಗಳ ಆಡಳಿತಗಳೊಂದಿಗೆ ಭದ್ರತಾ ಪಡೆಗಳು ನಿರಂತರ ಸಂಪರ್ಕದಲ್ಲಿ ಇರಬೇಕು. ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಬೇಕಾದ ಯಾವುದೇ ನೆರವು ನೀಡಲು ಸನ್ನದ್ಧವಾಗಿರಬೇಕು' ಎಂದು ಸಚಿವ ಸಿಂಗ್ ಸೂಚಿಸಿದರು.

ಸಚಿವ ಜಿತೇಂದ್ರ ಸಿಂಗ್, ರಾಹುಲ್‌ಗೆ ಕೋವಿಡ್

ನವದೆಹಲಿ: ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಕೋವಿಡ್-19 ದೃಢಪಟ್ಟಿದೆ.

ತಮಗೆ ಕೋವಿಡ್‌ನ ಸೌಮ್ಯ ಲಕ್ಷಣಗಳಿರುವುದಾಗಿ ರಾಹುಲ್ ಗಾಂಧಿ ಅವರೇ ಟ್ವೀಟ್ ಮಾಡಿ ತಿಳಿಸಿದ್ದಾರೆ.

'ಸೌಮ್ಯ ರೋಗಲಕ್ಷಣಗಳನ್ನು ಅನುಭವಿಸಿದ ನಂತರ, ನಡೆಸಿದ ಪರೀಕ್ಷೆಯಲ್ಲಿ ನನಗೆ ಕೊರೊನಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಇತ್ತೀಚೆಗೆ ನನ್ನೊಂದಿಗೆ ಸಂಪರ್ಕಕ್ಕೆ ಬಂದ ಎಲ್ಲರೂ, ದಯವಿಟ್ಟು ಎಲ್ಲಾ ಸುರಕ್ಷತಾ ನಿಯಮಗಳನ್ನು ಅನುಸರಿಸಿ ಮತ್ತು ಸುರಕ್ಷಿತವಾಗಿರಿ' ಎಂದು 50 ವರ್ಷದ ರಾಹುಲ್ ಗಾಂಧಿ ಬರೆದಿದ್ದಾರೆ.

ತಮಗೆ ಕೋವಿಡ್–19 ದೃಢಪಟ್ಟಿದ್ದಾಗಿ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಸುಶೀಲ್‌ಚಂದ್ರ, ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಅವರಿಗೂ ಕೋವಿಡ್–19 ದೃಢಪಟ್ಟಿದೆ ಎಂದೂ ಮೂಲಗಳು ಹೇಳಿವೆ.

ಸುನಿತಾ

ಕೇಜ್ರಿವಾಲ್ ಪತ್ನಿಗೆ ಕೋವಿಡ್: ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪತ್ನಿಗೆ ಕೋವಿಡ್ ತಗುಲಿರುವುದು ಮಂಗಳವಾರ ದೃಢಪಟ್ಟಿದೆ.

ಉ. ಪ್ರ ನಗರಗಳಲ್ಲಿ ಲಾಕ್‌ಡೌನ್: ಆದೇಶಕ್ಕೆ ತಡೆ

ನವದೆಹಲಿ (ಪಿಟಿಐ): ಕೋವಿಡ್ ಹರಡುವಿಕೆ ತಡೆಯುವುದಕ್ಕಾಗಿ ಉತ್ತರ ಪ್ರದೇಶದ ಐದು ನಗರಗಳಲ್ಲಿ 'ಲಾಕ್ ಡೌನ್' ಹೇರಬೇಕು ಎಂದು ಅಲಹಾಬಾದ್ ಹೈಕೋರ್ಟ್ ಸೋಮವಾರ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಕೋವಿಡ್ ಹರಡುವಿಕೆ ತಡೆಯುವುದಕ್ಕಾಗಿ ಉತ್ತರ ಪ್ರದೇಶ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ನ್ಯಾಯಾಂಗವು ಆದೇಶ ನೀಡುವ ಮೂಲಕ ಐದು ನಗರಗಳಲ್ಲಿ ಲಾಕ್‌ಡೌನ್ ಹೇರುವುದು ಸರಿಯಾದ ಧೋರಣೆ ಅಲ್ಲ. ಹೈಕೋರ್ಟ್ ಆದೇಶವು ಆಡಳಿತಾತ್ಮಕವಾಗಿ ಅಪಾರ ಕಷ್ಟಗಳಿಗೆ ಕಾರಣವಾಗುತ್ತದೆ. ಕೋವಿಡ್ ಹರಡುವಿಕೆ ತಡೆಯಲು ರಾಜ್ಯ ಸರ್ಕಾರವು ಹಲವು ನಿರ್ದೇಶಗಳನ್ನು ನೀಡಿದೆ ಮತ್ತು ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಂಡಿದೆ ಎಂದು ಉತ್ತರ ಪ್ರದೇಶ ಸರ್ಕಾರದ ಪರವಾಗಿ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿದರು.

'ಇಂತಹ ಸನ್ನಿವೇಶದಲ್ಲಿ ಹೈಕೋರ್ಟ್ ಆದೇಶಕ್ಕೆ ಮಧ್ಯಂತರ ತಡೆ ನೀಡಬಹುದು' ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು ಹೇಳಿತು.

ಪ್ರಕರಣದಲ್ಲಿ ನ್ಯಾಯಾಲಯಕ್ಕೆ ನೆರವು ನೀಡಲು (ಅಮಿಕಸ್ ಕ್ಯೂರಿ) ಹಿರಿಯ ವಕೀಲ ಪಿ.ಎಸ್. ನರಸಿಂಹ ಅವರನ್ನು ನ್ಯಾಯಾಲಯವು ನೇಮಿಸಿದೆ. ಎರಡು ವಾರಗಳ ಬಳಿಕ ಮುಂದಿನ ವಿಚಾರಣೆ ನಡೆಯಲಿದೆ.

ಆಹಾರ ಭದ್ರತೆಗೆ ಕೋವಿಡ್ ಅಡ್ಡಿ: ಕೇಂದ್ರ ಸಚಿವ ಹರ್ಷವರ್ಧನ್

ವಿಶ್ವಸಂಸ್ಥೆ: 'ಕೋವಿಡ್ ಸಾಂಕ್ರಾಮಿಕವು ವಿಶ್ವದಾದ್ಯಂತ ಲಕ್ಷಾಂತರ ಜನರ ಆಹಾರ ಭದ್ರತೆ ಮತ್ತು ಪೌಷ್ಟಿಕತೆಗೆ ಅಡ್ಡಿಪಡಿಸಿದೆ. ಇದರಿಂದಾಗಿ 2030ರ ವೇಳೆಗೆ ಹಸಿವನ್ನು ನೀಗಿಸುವ ಗುರಿಗೂ ಹಿನ್ನಡೆಯಾಗುವ ಸಾಧ್ಯತೆ ಇದೆ' ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಅವರು ಸೋಮವಾರ ಹೇಳಿದರು.

'ಜನಸಂಖ್ಯೆ, ಆಹಾರ ಭದ್ರತೆ, ಪೌಷ್ಟಿಕತೆ ಮತ್ತು ಸುಸ್ಥಿರ ಅಭಿವೃದ್ಧಿ' ವಿಷಯದ ಕುರಿತಾಗಿ 54ನೇ ಜನಸಂಖ್ಯೆ ಮತ್ತು ಅಭಿವೃದ್ಧಿ ಆಯೋಗವನ್ನು ಉದ್ದೇಶಿಸಿ ಮಾತನಾಡಿದ ಅವರು,' ಭಾರತ ಸರ್ಕಾರವು ಆಹಾರ ಭದ್ರತೆ ಮತ್ತು ಪೌಷ್ಟಿಕತೆಗೆ ಆದ್ಯತೆ ನೀಡಿದೆ. ಇದಕ್ಕೆ ಕಳೆದ ಹಲವು ವರ್ಷಗಳಿಂದ ಸರ್ಕಾರ ಜಾರಿಗೆ ತಂದಿರುವ ಕಾನೂನು ಮತ್ತು ಯೋಜನೆಗಳು ಸಾಕ್ಷಿಯಾಗಿವೆ' ಎಂದರು.

'ಜನಸಂಖ್ಯೆ, ಆಹಾರ ಭದ್ರತೆ, ಪೌಷ್ಟಿಕತೆ, ಸುಸ್ಥಿರ ಅಭಿವೃದ್ಧಿ ಪ್ರಮುಖ ವಿಷಯಗಳಾಗಿವೆ. ಕೋವಿಡ್ ಬಿಕ್ಕಟ್ಟಿನ ವೇಳೆಯಲ್ಲಿ ಇದಕ್ಕೆ ಇನ್ನಷ್ಟು ಮಹತ್ವವನ್ನು ನೀಡಲಾಗಿದೆ. ಅಲ್ಲದೆ ಈ ಸಮಯದಲ್ಲಿ ಸೋಂಕು ನಿಯಂತ್ರಣದೊಂದಿಗೆ ರೈತರಿಗೆ, ಕಾರ್ಮಿಕರಿಗೆ, ಹಿಂದುಳಿದ ಜನರಿಗೆ, ಸ್ವ–ಸಹಾಯ ಸಂಘಗಳಿಗೆ, ಮಹಿಳೆಯರಿಗೆ, ಬಡ ಹಿರಿಯ ನಾಗರಿಕರಿಗೆ ಹೆಚ್ಚಿನ ನೆರವುಗಳನ್ನು ನೀಡಲಾಗುತ್ತಿದೆ' ಎಂದು ಅವರು ತಿಳಿಸಿದರು.

'ಭಾರತ ಸರ್ಕಾರವು ಅತಿ ಬಡವರಿಗೆ ಸಹಾಯ ಮಾಡಲು ಆಹಾರ ಭದ್ರತೆಗಾಗಿ 22.6 ಶತಕೋಟಿ ಡಾಲರ್ ಪರಿಹಾರ ಪ್ಯಾಕೆಜ್ ಅನ್ನು ಘೋಷಿಸಿದೆ. ಅಲ್ಲದೆ ಆರ್ಥಿಕತೆ ಮೇಲೆತ್ತಲು ಕೃಷಿ ಮತ್ತು ಆಹಾರ ಕ್ಷೇತ್ರಗಳಲ್ಲಿ ಸಣ್ಣ ಮತ್ತು ಮಧ್ಯಮ ವ್ಯವಹಾರಗಳಿಗಾಗಿ 13 ಶತಕೋಟಿ ಡಾಲರ್ ಯೋಜನೆಯನ್ನು ಘೋಷಿಸಿದೆ' ಎಂದು ಅವರು ಮಾಹಿತಿ ನೀಡಿದರು.

ಭಾರತದಲ್ಲಿನ ರೂಪಾಂತರಗೊಂಡ ವೈರಸ್: ಇಸ್ರೇಲ್‌ನಲ್ಲಿ ಪತ್ತೆ

ಜೆರುಸಲೇಮ್: ಭಾರತದಲ್ಲಿ ಕಂಡು ಬಂದಿರುವ ರೂಪಾಂತರಗೊಂಡ ಕೊರೊನಾ ವೈರಸ್ ತಳಿಯ ಸೋಂಕಿನ 8 ಪ್ರಕರಣಗಳು ಇಸ್ರೇಲ್‌ನಲ್ಲಿ ವರದಿಯಾಗಿವೆ.

ಈ ಸೋಂಕಿನ ವಿರುದ್ಧ ಫೈಜರ್ ಕಂಪನಿಯ ಲಸಿಕೆ ಭಾಗಶಃವಾದರೂ ಪರಿಣಾಮಕಾರಿ ಎಂಬ ವಿಶ್ವಾಸ ಇದೆ ಎಂದು ಆರೋಗ್ಯ ಸಚಿವಾಲಯದ ಮಹಾ ನಿರ್ದೇಶಕ ಹೆಜಿ ಲೆವಿ ಮಂಗಳವಾರ ತಿಳಿಸಿದರು.

ವಿದೇಶಗಳಿಂದ ಹಲವಾರು ಜನರು ಕಳೆದ ವಾರ ಇಲ್ಲಿಗೆ ಬಂದಿದ್ದಾರೆ. ಅವರ ಪೈಕಿ, ಮೊದಲು 7 ಜನರಲ್ಲಿ ಭಾರತದಲ್ಲಿ ಕಂಡು ಬಂದಿರುವ ವೈರಸ್‌ನ ತಳಿಯ ಸೋಂಕು ದೃಢಪಟ್ಟಿತ್ತು. ಈಗ ಅಂಥ ಪ್ರಕರಣಗಳ ಸಂಖ್ಯೆ 8ಕ್ಕೆ ಏರಿದೆ ಎಂದೂ ಸಚಿವಾಲಯ ತಿಳಿಸಿದೆ.

ಇಸ್ರೇಲ್‌ನ ಜನಸಂಖ್ಯೆ 90.3 ಲಕ್ಷದಷ್ಟಿದೆ. ಈ ಪೈಕಿ, 16 ವರ್ಷ ಮೇಲ್ಪಟ್ಟ ವಯೋಮಾನದ ಶೇ 81ರಷ್ಟು ಜನರಿಗೆ ಲಸಿಕೆ ನೀಡಲಾಗಿದೆ. ಈ ಕಾರಣದಿಂದ ಕೋವಿಡ್–19 ಪ್ರಕರಣಗಳು ಕಡಿಮೆಯಾಗಿದ್ದು, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯಲ್ಲೂ ಗಣನೀಯವಾಗಿ ಇಳಿಕೆಯಾಗಿದೆ ಎಂದು ಸಚಿವಾಲಯ ಮೂಲಗಳು ಹೇಳಿವೆ.

ಬ್ರಿಟಿಷ್ ರೂಪಾಂತರ ವೈರಾಣು ಪ್ರಸರಣ ಶೇ 45ರಷ್ಟು ಹೆಚ್ಚು

ಟೆಲ್ ಅವೀವ್: ಚೀನಾದ ವುಹಾನ್‌ನಿಂದ ಪ್ರಸರಣವಾದ ಮೂಲ ಕೊರೊನಾ ವೈರಸ್‌ಗಿಂತಲೂ (ಸಾರ್ಸ್ ಕೊವ್–2) ಬ್ರಿಟನ್‌ನಿಂದ ಪ್ರಸರಣವಾದ ರೂಪಾಂತರಿ ವೈರಾಣುವಿನ (ಬಿ.1.1.7) ಹರಡುವಿಕೆಯು ಶೇ 45ರಷ್ಟು ಹೆಚ್ಚು ಎಂದು ಅಧ್ಯಯನ ವರದಿ ತಿಳಿಸಿದೆ.

ಇಸ್ರೇಲ್‌ನ ಟೆಲ್‌ಅವೀವ್ ವಿಶ್ವವಿದ್ಯಾಲಯವು 3 ಲಕ್ಷ ಪಿಸಿಆರ್ ಪರೀಕ್ಷೆಗಳನ್ನು ಆಧರಿಸಿ ತಯಾರಿಸಿದ ಈ ಅಧ್ಯಯನ ವರದಿಯನ್ನು ಸೆಲ್ ರಿಪೋರ್ಟ್ಸ್ ಮೆಡಿಸಿನ್ ಪತ್ರಿಕೆಯಲ್ಲಿ ಪ್ರಕಟಿಸಿದೆ. ಪ್ರಾಧ್ಯಾಪಕರಾದ ಪ್ರೊ. ಅರಿಯಲ್ ಮುನಿಟ್ಸ್, ಡಾ. ಡಾನ್ ಯಮಿನ್, ಪ್ರೊ. ಮೋಟಿ ಗೆರ್ಲಿಟ್ಸ್ ಅವರು ಅಧ್ಯಯನ ತಂಡದ ನೇತೃತ್ವ ವಹಿಸಿದ್ದರು.

ಇಂಗ್ಲೆಂಡ್‌ನ ಸೌತಾಂಪ್ಟನ್‌ನಲ್ಲಿ ಜೂನ್ 18ರಂದು ಪಂದ್ಯ ಆರಂಭ

ನಿಗದಿಯಂತೆ ಡಬ್ಲ್ಯುಟಿಸಿ ಫೈನಲ್: ಐಸಿಸಿ

ದುಬೈ (ಪಿಟಿಐ): ಬ್ರಿಟನ್‌ಗೆ ಪ್ರಯಾಣ ನಿರ್ಬಂಧವಿದ್ದರೂ, ಭಾರತ ಮತ್ತು ನ್ಯೂಜಿಲೆಂಡ್ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯ ಪೂರ್ವನಿಗದಿಯಂತೆ ಸೌತಾಂಪ್ಟನ್‌ನಲ್ಲಿ ಜೂನ್ 18ರಿಂದ ನಡೆಯಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಆಶ್ವಾಸನೆ ನೀಡಿದೆ. ಭಾರತದಲ್ಲಿ ಕೋವಿಡ್ ಪ್ರಕರಣಗಳು ವಿಪರೀತ ಏರುಗತಿಯಲ್ಲಿರುವ ಕಾರಣ ಇಂಗ್ಲೆಂಡ್ ಕೆಲವು ದೇಶಗಳ ಮೇಲೆ ಪ್ರಯಾಣ ನಿರ್ಬಂಧ ಹೇರಿದೆ.

ಇಂಗ್ಲೆಂಡ್, ಭಾರತವನ್ನು ಪ್ರಯಾಣದ 'ಕೆಂಪುಪಟ್ಟಿ'ಗೆ ಸೇರಿಸಿರುವ ಕಾರಣ ಅಲ್ಲಿಗೆ ಭಾರತೀಯರು ಪ್ರಯಾಣಿಸುವಂತಿಲ್ಲ. ಅಲ್ಲಿಗೆ ಮರಳುವ ಬ್ರಿಟಿಷ್ ಪ್ರಜೆಗಳೂ ಸಹ ಹತ್ತು ದಿನಗಳ ಕಠಿಣ ಕ್ವಾರಂಟೈನ್‌ನಲ್ಲಿ ಕಳೆಯಬೇಕಾಗುತ್ತದೆ.

ಆದರೆ ಬಯೊಬಬಲ್ ಸುರಕ್ಷಾ ವ್ಯವಸ್ಥೆಯಲ್ಲಿ ಡಬ್ಲ್ಯುಟಿಸಿ ಫೈನಲ್ ಪಂದ್ಯವನ್ನು ನಡೆಸುವ ವಿಶ್ವಾಸವನ್ನು ಐಸಿಸಿ ಹೊಂದಿದೆ. 'ಸಾಂಕ್ರಾಮಿಕ ಪಿಡುಗು ಇರುವಾಗಲೇ ಅಂತರರಾಷ್ಟ್ರೀಯ ಪಂದ್ಯಗಳನ್ನು ಸುರಕ್ಷಿತವಾಗಿ ಹೇಗೆ ನಡೆಸಬಹುದು ಎಂಬುದನ್ನು ಇಂಗ್ಲಿಷ್ ಕೌಂಟಿ ಬೋರ್ಡ್ (ಇಸಿಬಿ) ಮತ್ತು ಇತರ ಸದಸ್ಯ ರಾಷ್ಟ್ರಗಳು ತೋರಿಸಿಕೊಟ್ಟಿವೆ. ಇದನ್ನು ನಾವು ಮುಂದುವರಿಸುತ್ತೇವೆ. ಜೂನ್‌ನಲ್ಲಿ ಲಂಡನ್‌ನ ಸೌತಾಂಪ್ಟನ್‌ನ ಪಂದ್ಯ ಕೂಡ ನಿಗದಿಯಂತೆಯೇ ನಡೆಯಲಿದೆ' ಎಂದು ಐಸಿಸಿ ಸೋಮವಾರ ರಾತ್ರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ.

'ಈ ಹಂತದಲ್ಲಿ ಏನೂ ಹೇಳುವುದು ಕಷ್ಟ. ಜೂನ್‌ನಲ್ಲಿ ಫೈನಲ್ ನಡೆಯುವ ವೇಳೆಗೆ ಭಾರತ ಪ್ರಯಾಣದ ಕೆಂಪುಪಟ್ಟಿಯಿಂದ ಹೊರಗಿರಬಹುದು ಎಂಬ ವಿಶ್ವಾಸವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಹೊಂದಿದೆ' ಎಂದು ಮಂಡಳಿಯ ಮೂಲವೊಂದು ಸುದ್ದಿಸಂಸ್ಥೆಗೆ ತಿಳಿಸಿದೆ.

'ಜೂನ್ ವೇಳೆಗೆ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಹೇಳಲಾಗದು. ಪ್ರಯಾಣ ಸಂಬಂಧಿ ಮಾರ್ಗಸೂಚಿಗಳು ಕೋವಿಡ್ ಸಂದರ್ಭಕ್ಕೆ ಅನುಗುಣವಾಗಿ ಚಾಲ್ತಿಯಲ್ಲಿರುತ್ತವೆ. ಜೂನ್ ಆರಂಭದಲ್ಲಿ ಭಾರತ, ಅಲ್ಲಿಗೆ ತೆರಳುವಾಗ ಭಾರತವು ಪ್ರಯಾಣ ನಿರ್ಬಂಧ ಪಟ್ಟಿಯಿಂದ ಹೊರಗಿರಬಹುದು' ಎಂದು ತಿಳಿಸಿದೆ.

ಅಗತ್ಯಬಿದ್ದರೆ ಸೌತಾಂಪ್ಟನ್‌ನ ರೋಸ್‌ಬೌಲ್ ಮತ್ತು ಹೋಟೆಲ್ ತಾಣಗಳನ್ನು 'ಪ್ರಯಾಣ ನಿರ್ಬಂಧ' ಪಟ್ಟಿಯಿಂದ ತೆಗೆದುಹಾಕಲು ಸಾಧ್ಯವಿದೆ. ಕಳೆದ ಋತುವಿನಲ್ಲಿ ಕೆಲವು ಅಂತರರಾಷ್ಟ್ರೀಯ ಪಂದ್ಯಗಳು ಇಲ್ಲಿ ಬಯೊಬಬಲ್ ಸುರಕ್ಷಾ ವ್ಯವಸ್ಥೆಯಡಿ ಯಶಸ್ವಿಯಾಗಿ ನಡೆದಿವೆ ಎಂದು ಇಂಗ್ಲೆಂಡ್‌ನ ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಭಾರತ ಮಹಿಳಾ ಕ್ರಿಕೆಟ್ ತಂಡವೂ, ಆಗಸ್ಟ್ 4ರಂದು ಆರಂಭವಾಗುವ ಐದು ಟೆಸ್ಟ್ ಪಂದ್ಯಗಳ ಸರಣಿಯನ್ನು ಆಡಲು ಇಂಗ್ಲೆಂಡ್‌ಗೆ ಹೋಗಬೇಕಾಗಿದೆ.

ಬ್ಯಾಡ್ಮಿಂಟನ್: ಸನೀತ್, ಕೃತಿಗೆ ಪ್ರಶಸ್ತಿ

ಬೆಂಗಳೂರು: ಅಗ್ರಶ್ರೇಯಾಂಕದ ಸನೀತ್ ಎಸ್. ದಯಾನಂದ್ ಹಾಗೂ ಕೃತಿ ಭಾರದ್ವಾಜ್ ಅವರು ಇಲ್ಲಿ ಕೊನೆಗೊಂಡ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಂಗಳವಾರ ಪ್ರಶಸ್ತಿ ಜಯಿಸಿದರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಸನೀತ್ 21-18, 21-14ರಿಂದ ನರೇನ್ ಎಸ್. ಅಯ್ಯರ್ ಅವರನ್ನು ಸೋಲಿಸಿದರೆ, ಬಾಲಕಿಯರ ವಿಭಾಗದ ಸಿಂಗಲ್ಸ್ ಫೈನಲ್‌ನಲ್ಲಿ ಕೃತಿ 17-21, 21-15, 21-16ರಿಂದ ಅಲ್ಫಿಯಾ ರಿಯಾಜ್ ಬಾಸರಿ ಅವರನ್ನು ಮಣಿಸಿದರು.

'ಒಲಿಂಪಿಕ್ಸ್: ಕೋವಿಡ್ ಲಸಿಕೆಗಾಗಿ ಅಥ್ಲೀಟ್‌ಗಳು ಮನವಿ ಸಲ್ಲಿಸಿಲ್ಲ'

ಟೋಕಿಯೊದ ಒಡ್ಡೈಬಾದಲ್ಲಿ ಮಂಗಳವಾರ ಒಲಿಂಪಿಕ್ಸ್ ರಿಂಗ್‌ಗಳ ಮಾದರಿಯ ದೀಪಗಳನ್ನು ಬೆಳಗಿಸಲಾಯಿತು– ಎಎಫ್‌ಪಿ ಚಿತ್ರ

ಟೋಕಿಯೊ (ಎಪಿ): ಒಲಿಂಪಿಕ್ಸ್ ಆರಂಭಕ್ಕೂ ಮೊದಲು ತಮಗೆ ಕೋವಿಡ್ ಲಸಿಕೆ ನೀಡಿ ಎಂದು ಅಥ್ಲೀಟ್‌ಗಳು ಮನವಿ ಮಾಡಿಲ್ಲ ಎಂದು ಒಲಿಂಪಿಕ್ಸ್ ಆಯೋಜನಾ ಸಮಿತಿ ಮಂಗಳವಾರ ಹೇಳಿದೆ.

ಇನ್ನೂ ಮೂರು ತಿಂಗಳಲ್ಲಿ (ಜುಲೈನಲ್ಲಿ) ಟೋಕಿಯೊ ಕೂಟ ಆರಂಭವಾಗಲಿದೆ. ಆದರೆ ಜಪಾನ್‌ನಲ್ಲಿ ಲಸಿಕೆ ನೀಡಿಕೆ ಪ್ರಕ್ರಿಯೆ ಬಹಳ (ಇದುವರೆಗೆ ಶೇಕಡ 1ರಷ್ಟು) ನಿಧಾನಗತಿಯಲ್ಲಿರುವುದು ಕಳವಳಕ್ಕೆ ಕಾರಣವಾಗಿದೆ.

'ಕ್ರೀಡಾಪಟುಗಳಿಗೆ ಕೋವಿಡ್ ಲಸಿಕೆಯ ಕುರಿತು ಪ್ರಶ್ನೆಗಳಿವೆ. ಆದರೆ ಲಸಿಕೆಯನ್ನು ಪಡೆಯಬೇಕೆ ಬೇಡವೇ ಎಂಬುದರ ಕುರಿತಾಗಿಲ್ಲ' ಎಂದು ಒಲಿಂಪಿಕ್ಸ್‌ನ ಅಥ್ಲೀಟಗಳ ಸಮಿತಿಯ ಅಧ್ಯಕ್ಷ ನವೊಕಾ ತಕಹಶಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

'ಒಂದು ವೇಳೆ ಒಲಿಂಪಿಕ್ಸ್ ನಡೆದರೂ ಅಲ್ಲಿ ಪ್ರೇಕ್ಷಕರಿರುವುದಿಲ್ಲ. ಏಕೆಂದರೆ ದೇಶದಲ್ಲಿ ಲಸಿಕೆ ನೀಡುವ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗಿದೆ' ಎಂದು ಲಸಿಕೆ ನೀಡಿಕೆಯ ಹೊಣೆ ಹೊತ್ತಿರುವ ಜಪಾನ್‌ನ ಸಚಿವ ತಾರೊ ಕೊನೊ ಅವರು ವಾರದ ಹಿಂದೆ ಹೇಳಿದ್ದರು.

ಏಷ್ಯನ್ ವೇಟ್‌ಲಿಫ್ಟಿಂಗ್: ಅಚಿಂತಗೆ ಎರಡನೇ ಸ್ಥಾನ

ತಾಷ್ಕೆಂಟ್ (ಪಿಟಿಐ): ಭಾರತದ ಅಚಿಂತ ಶೆವುಲಿ ಅವರು ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 73 ಕೆಜಿ ವಿಭಾಗದ ಬಿ ಗುಂಪಿನ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ.

ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತ ಅಚಿಂತ, ಮಂಗಳವಾರ 309 ಕೆಜಿ (ಸ್ನ್ಯಾಚ್ 139 ಮತ್ತು ಕ್ಲೀನ್ ಆ್ಯಂಡ್ ಜರ್ಕ್ 170) ಭಾರ ಎತ್ತಿದರು. ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 174 ಕೆಜಿ ಭಾರ ಎತ್ತಿದ್ದರೆ ಅವರು ಮೊದಲ ಸ್ಥಾನ ಪಡೆಯಬಹುದಿತ್ತು.

ಕಜಕಸ್ತಾನದ ಸೈರಾಮ್‌ಕೆಜ್ ಅಕ್ಮೊಲ್ಡಾ 310 ಕೆಜಿ (130+180) ಈ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದರು.

ಎ ಗುಂಪಿನ ಸ್ಪರ್ಧೆಗಳು ಮುಗಿದ ಬಳಿಕ ಸ್ಥಾನಗಳನ್ನು ಅಧಿಕೃತವಾಗಿ ನಿರ್ಧರಿಸಲಾಗುತ್ತದೆ.

ಭಾರತ ಈ ಚಾಂಪಿಯನ್‌ಷಿಪ್‌ನಲ್ಲಿ ಇದುವರೆಗೆ ಎರಡು ಪದಕಗಳನ್ನು ತನ್ನದಾಗಿಸಿಕೊಂಡಿದೆ.

ಮೀರಾಬಾಯಿ ಚಾನು (49 ಕೆಜಿ ವಿಭಾಗ) ಕಂಚು ಹಾಗೂ ಜಿಲ್ಲಿ ಡಲಾಬೆಹರಾ (45 ಕೆಜಿ) ಚಿನ್ನ ಗೆದ್ದುಕೊಂಡಿದ್ದಾರೆ.

'ತಾಂತ್ರಿಕ' ಬದಲಾವಣೆ ಪೃಥ್ವಿ ಯಶಸ್ಸಿನ ಗುಟ್ಟು

ಪೃಥ್ವಿ ಶಾ

ಮುಂಬೈ (ಪಿಟಿಐ): ಆಸ್ಟ್ರೇಲಿಯಾದಲ್ಲಿ ನಡೆದ ಟೆಸ್ಟ್ ಸರಣಿ ವೇಳೆ ತಂಡದಿಂದ ಕೈಬಿಟ್ಟ ಕಾರಣ ಗಾಭರಿಗೊಂಡು ತಂತ್ರಗಳಲ್ಲಿ ಮಾಡಿದ ಬದಲಾವಣೆ ಐಪಿಎಲ್‌ನಲ್ಲಿ ಯಶಸ್ಸು ಸಾಧಿಸಲು ಕಾರಣವಾಯಿತು ಎಂದು ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟ್ಸ್‌ಮನ್ ಪೃಥ್ವಿ ಶಾ ಅಭಿಪ್ರಾಯಪಟ್ಟರು.

ಡಿಸೆಂಬರ್‌ನಲ್ಲಿ ಅಡಿಲೇಡ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಕಂಡ ಕಾರಣ ಮುಂದಿನ ಪಂದ್ಯಗಳಿಂದ ಪೃಥ್ವಿ ಶಾ ಅವರನ್ನು ಕೈಬಿಡಲಾಗಿತ್ತು. ತಂಡದಿಂದ ಹೊರಬಿದ್ದಾಗ ತಾವು ಬಳಸುವ ತಂತ್ರಗಳ ಬಗ್ಗೆ ಆತಂಕ ಮೂಡಿತ್ತು. ಈಗ ಅವುಗಳನ್ನು ಸುಧಾರಿಸಿಕೊಂಡಿರುವುದಾಗಿ ಅವರು ಹೇಳಿದರು.

ಆಸ್ಟ್ರೇಲಿಯಾದಿಂದ ಮರಳಿದ ನಂತರ ಶಾ ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದರು. ಎಂಟು ಪಂದ್ಯಗಳಲ್ಲಿ 827 ರನ್ ಗಳಿಸಿ ದಾಖಲೆ ಸೃಷ್ಟಿಸಿದ್ದರು. ಐಪಿಎಲ್‌ನ ಈ ಬಾರಿಯ ಡೆಲ್ಲಿ ತಂಡದ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು 38 ಎಸೆತಗಳಲ್ಲಿ 72 ಮತ್ತು ಪಂಜಾಬ್ ಕಿಂಗ್ಸ್ ವಿರುದ್ಧ 17 ಎಸೆತಗಳಲ್ಲಿ 32 ರನ್ ಗಳಿಸಿದ್ದರು.

ವಿಶ್ವ ಯೂತ್ ಬಾಕ್ಸಿಂಗ್ ಟೂರ್ನಿ ಸೆಮಿಗೆ ಚಾನು, ಅರುಂಧತಿ

ನವದೆಹಲಿ (ಪಿಟಿಐ): ಭಾರತದ ಬೇಬಿರೋಜಿಸನಾ ಚಾನು ಅವರು ಹಾಲಿ ಯೂರೋಪಿಯನ್ ಚಾಂಪಿಯನ್ ಅಲೆಕ್ಸಾಸ್ ಕ್ಯುಬಿಕಾ ಅವರನ್ನು ಮಣಿಸಿ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಪೋಲೆಂಡ್‌ನ ಕಿಯೆಲ್ಸೆಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಭಾರತದ ಏಳು ಮಂದಿ ನಾಲ್ಕರ ಘಟ್ಟ ತಲುಪಿದರು.

ಬೇಬಿರೋಜಿಸನಾ (51 ಕೆಜಿ ವಿಭಾಗ) ಅವರೊಂದಿಗೆ ಅರುಂಧತಿ ಚೌಧರಿ (69 ಕೆಜಿ), ಸನಮಚಾ ಚಾನು (75 ಕೆಜಿ), ಅಂಕಿತ್ ನರ್ವಾಲ್ (64 ಕೆಜಿ), ವಿಶಾಲ್ ಗುಪ್ತಾ (91 ಕೆಜಿ), ವಿಶ್ವಾಮಿತ್ರ ಚೋಂಗ್ದಮ್ (49 ಕೆಜಿ) ಹಾಗೂ ಸಚಿನ್ (56 ಕೆಜಿ) ಸೆಮಿಫೈನಲ್ ತಲುಪಿದವರು.

ಸೋಮವಾರ ನಾಲ್ವರು ಬಾಕ್ಸರ್‌ಗಳು (ವಿಂಕಾ, ಅಲ್ಫಿಯಾ, ಗೀತಿಕಾ ಹಾಗೂ ಪೂನಂ) ನಾಲ್ಕರ ಘಟ್ಟ ಪ್ರವೇಶಿಸಿದ್ದರು.

ಬೇಬಿರೋಜಿಸನಾ ಅವರು ಪೋಲೆಂಡ್‌ನ ಕ್ಯೂಬಿಕಾ ಎದುರು 5–0 ಅಂತರದ ಜಯ ಸಂಪಾದಿಸಿದರು. ಕ್ವಾರ್ಟರ್‌ಫೈನಲ್‌ನ ಇನ್ನುಳಿದ ಹಣಾಹಣಿಗಳಲ್ಲಿ ಅರುಂಧತಿ 5–0ಯಿಂದ ಉಕ್ರೇನ್‌ನ ಆ್ಯನಾ ಸೆಜ್ಕೊ ಎದುರು, ಸನಾಮಚಾ ಅವರು ರಷ್ಯಾದ ಮಾರ್ಗರಿಟಾ ಜ್ವೆವಾ ವಿರುದ್ಧ ಗೆದ್ದು ಸಂಭ್ರಮಿಸಿದರು.

ಪುರುಷರ ವಿಭಾಗದಲ್ಲಿ ಏಷ್ಯನ್ ಜೂನಿಯರ್ ಚಾಂಪಿಯನ್ ವಿಶ್ವಾಮಿತ್ರ ಹಾಗೂ ನರ್ವಾಲ್ ಅವರು ಕ್ರಮವಾಗಿ ಸರ್ಬಿಯಾದ ಒಮರ್ ಅಮೆಟೊವಿಕ್ ಹಾಗೂ ಬ್ರೆಜಿಲ್‌ನ ಇಜೆಕ್ವಿಲ್ ಡ ಕ್ರೂಜ್ ಅವರನ್ನು ಸುಲಭವಾಗಿ ಪರಾಭವಗೊಳಿಸಿದರು.

ಮಾಂಟೆ ಕಾರ್ಲೊ ಓಪನ್ ಟೆನಿಸ್: ಸಿಟ್ಸಿಪಾಸ್‌ಗೆ ಪ್ರಶಸ್ತಿ

ಮೊನಾಕೊ (ಎಎಫ್‌ಪಿ): ಸ್ಟೆಫಾನೊಸ್ ಸಿಟ್ಸಿಪಾಸ್ ಅವರು ಆ್ಯಂಡ್ರೆ ರುಬ್ಲೆವ್ ಅವರನ್ನು ಮಣಿಸಿ ಮಾಂಟೆ ಕಾರ್ಲೊ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು. ಇದು ಅವರಿಗೆ ಅವರಿಗೆ ಒಲಿದ ಮೊದಲ ಮಾಸ್ಟರ್ಸ್ 1000 ಗರಿ.

ಗ್ರೀಸ್‌ನ 22 ವರ್ಷದ ಸಿಟ್ಸಿಪಾಸ್ 6–3, 6–3ರಿಂದ ರಷ್ಯಾ ಆಟಗಾರನನ್ನು ಸೋಲಿಸಿದರು. ಪಂದ್ಯದಲ್ಲಿ ಒಂದು ತಾಸು 11 ನಿಮಿಷಗಳವರೆಗೆ ಉಭಯ ಆಟಗಾರರು ಸೆಣಸಿದರು.

ಟೂರ್ನಿಯಲ್ಲಿ ಒಂದೂ ಸೆಟ್‌ಅನ್ನು ಸಿಟ್ಸಿಪಾಸ್ ಅವರು ಕೈಚೆಲ್ಲಲಿಲ್ಲ.

ರುಬ್ಲೆವ್ ವಿರುದ್ಧ ಆಡಿದ ಏಳು ಪಂದ್ಯಗಳಲ್ಲಿ ಸಿಟ್ಸಿಪಾಸ್ ನಾಲ್ಕು ಬಾರಿ ಜಯ ಸಾಧಿಸಿದ್ದಾರೆ.

ಪ್ರಶಸ್ತಿಯೊಂದಿಗೆ ಸ್ಟೆಫಾನೋಸ್ ಸಿಟ್ಸಿಪಾಸ್–ರಾಯಿಟರ್ಸ್ ಚಿತ್ರ